ಬುಧವಾರ, ಸೆಪ್ಟೆಂಬರ್ 22, 2021 | ₹ 6.00

www.prajavani.net

/prajavani.net @prajavani /prajavani http://bit.ly/Prajavani


ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ನೇಮಕ

ಭಾರತೀಯ ವಾಯುಪಡೆಯ ನೂತನ ಏರ್ ಚೀಫ್ ಮಾರ್ಷಲ್ ಆಗಿ ನೇಮಕಗೊಂಡಿರುವ ಏರ್ ಮಾರ್ಷಲ್ ವಿ.ಆರ್.ಚೌಧರಿ

10




ಬುಧವಾರ, ಸೆಪ್ಟೆಂಬರ್ 22, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 264 | ಪುಟ 18
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ

ರೈತರ ಡೇಟಾಗಳನ್ನು ವಿಶ್ಲೇಷಿಸಿ, ಹಲವು ಕಂಪನಿಗಳು ಅವರಿಗೆ ಅಗತ್ಯವಾದ ಮಾಹಿತಿಗಳನ್ನು ಕೊಡಲಿವೆ. ಹವಾಮಾನದ ಪರಿಸ್ಥಿತಿ ಮತ್ತಿತರ ಮಾಹಿತಿಗಳು ಸುಲಭವಾಗಿ ಸಿಗಲಿವೆ



ಸಂಖ್ಯೆ-ಸುದ್ದಿ

ಕೋವಿಡ್ ಲಸಿಕೆ: ಕೆಲವು ರಾಜ್ಯಗಳಲ್ಲಿ ಹೆಚ್ಚು ಪ್ರಗತಿ

ಲಸಿಕೆ ಉತ್ಪಾದನೆ: 'ಕ್ವಾಡ್' ಚರ್ಚೆ 7

ಕಲ್ಯಾಣ ಕರ್ನಾಟಕದ ಹಲವೆಡೆ ಭಾರಿ ಮಳೆ 4

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
59,005	17,562	₹48,100 (ಬೆಂಗಳೂರು)	₹62,100 (ಬೆಂಗಳೂರು)	73.61

ಬೆಂಗಳೂರಿನ ಫ್ಲ್ಯಾಟ್‌ನಲ್ಲಿ ಅನಾಹುತ, ತಾಯಿ–ಮಗಳು ಸಾವು

ಅಂಗಲಾಚುತ್ತಲೇ ಬೆಂಕಿಗಾಹುತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಕಿಯ ಕೆನ್ನಾಲಗೆಯಿಂದ ತಪ್ಪಿಸಿಕೊಳ್ಳಲು ಮಹಿಳೆಯೊಬ್ಬರು ಹೃದಯವಿದ್ರಾವಕವಾಗಿ ಅಂಗಲಾಚುತ್ತಲೇ, ಹೊರಗೆ ನಿಂತ ಜನ ನೋಡ ನೋಡುತ್ತಿದ್ದಂತೆ ಅಗ್ನಿಯಲ್ಲಿ ಸುಟ್ಟುಹೋದ ದಾರುಣ ಘಟನೆ ಮಂಗಳವಾರ ನಡೆದಿದೆ.

ಬೊಮ್ಮನಹಳ್ಳಿ ಕ್ಷೇತ್ರದ ದೇವರ ಚಿಕ್ಕನಹಳ್ಳಿಯ ಆಶ್ರಿತ್ ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿ ಸಂಜೆ ಸಂಭವಿಸಿದ ಬೆಂಕಿ ಅವಘಡದಲ್ಲಿ, ಫ್ಲ್ಯಾಟ್‌ನ ಬಾಲ್ಕನಿಗೆ ಅಳವಡಿಸಿದ್ದ ಕಬ್ಬಿಣದ ಗ್ರಿಲ್‌ನಿಂದ ಹೊರಬರಲಾರದೇ ತಾಯಿ – ಮಗಳು ಸಜೀವವಾಗಿ ದಹನವಾಗಿದ್ದಾರೆ.

ಲಕ್ಷ್ಮಿದೇವಿ (82) ಹಾಗೂ ಅವರ ಮಗಳು ಭಾಗ್ಯರೇಖಾ (59) ಮೃತರು. ಮೊನ್ನೆಯಷ್ಟೇ ಈ ಕುಟುಂಬದವರು ಅಮೆರಿಕದಿಂದ ಬೆಂಗಳೂರಿಗೆ ಬಂದಿದ್ದರು ಎಂದು ಗೊತ್ತಾಗಿದೆ. ಈ ಕುಟುಂಬವು ಫ್ಲ್ಯಾಟ್ ನಂಬರ್ 210ರಲ್ಲಿ ವಾಸವಿತ್ತು. ಬಾಲ್ಕನಿಯಲ್ಲಿ ರಕ್ಷಣೆಗಾಗಿ ಕಬ್ಬಿಣದ ಗ್ರಿಲ್ ಅಳವಡಿಸಲಾಗಿತ್ತು. ಬೆಂಕಿ ಅವಘಡ ಸಂಭವಿಸಿದಾಗ, ಗ್ರಿಲ್‌ನಿಂದಾಗಿ ಹೊರಗೆ ಬರಲು ಸಾಧ್ಯವಾಗಲಿಲ್ಲ. ಇದರಿಂದಾಗಿ ಅವರಿಬ್ಬರು ಬೆಂಕಿಯಲ್ಲಿ ಬೆಂದು ಮೃತಪಟ್ಟಿದ್ದಾರೆ.

'ಅಪಾರ್ಟ್‌ಮೆಂಟ್ ಸಮುಚ್ಚಯದ ಮಹಡಿಯಲ್ಲಿರುವ ಫ್ಲ್ಯಾಟ್‌ನ ಅಡುಗೆ ಮನೆಯಲ್ಲಿ ಸಂಜೆ 4.30ರ ಸುಮಾರಿಗೆ ಸ್ಫೋಟ ಸಂಭವಿಸಿ ಬೆಂಕಿ ಹೊತ್ತಿಕೊಂಡಿತ್ತು. ಕೆಲ ನಿಮಿಷಗಳಲ್ಲೇ ಬೆಂಕಿ ಕೆನ್ನಾಲಗೆ ಇಡೀ ಫ್ಲ್ಯಾಟ್ ಆವರಿಸಿ ಧಗ ಧಗ ಉರಿಯಲಾರಂಭಿಸಿತ್ತು. ಅಕ್ಕ-ಪಕ್ಕದ ಫ್ಲ್ಯಾಟ್‌ನವರಿಗೆ ಜೋರಾದ ಸದ್ದು ಕೇಳಿಸಿತ್ತು. ಅವರೆಲ್ಲ ಫ್ಲ್ಯಾಟ್‌ನಿಂದ ಹೊರಗೆ ಬಂದು ನೋಡಿದಾಗ, ಹೊಗೆ ಹೆಚ್ಚಾಗಿತ್ತು. ಗಾಬರಿಗೊಂಡ ಎಲ್ಲರೂ ಹೊರಗೆ ಓಡಿಬಂದು ರಸ್ತೆಯಲ್ಲಿ ನಿಂತುಕೊಂಡಿದ್ದರು' ಎಂದು ಅಗ್ನಿಶಾಮಕದ ದಳದ ಸಿಬ್ಬಂದಿ ಹೇಳಿದರು.

4ನೇ ಪುಟ ನೋಡಿ



ಬೆಂಕಿಯಿಂದ ತಪ್ಪಿಸಿಕೊಳ್ಳಲು ಹೆಣಗಾಡುತ್ತಿರುವ ಮಹಿಳೆ(ಚಿತ್ರ 1). ಅವರು ಧರಿಸಿದ್ದ ಬಟ್ಟೆಗೆ ಬೆಂಕಿ ಹೊತ್ತಿಕೊಂಡಿರುವುದು (ಚಿತ್ರ 2), ಬೆಂಕಿ ಆವರಿಸಿಕೊಂಡಿರುವುದು (ಚಿತ್ರ 3)

ಅಡುಗೆ ಅನಿಲ ಸೋರಿಕೆ ಶಂಕೆ

'ಅಡುಗೆ ಅನಿಲ ಸೋರಿಕೆಯಿಂದಾಗಿ ಬೆಂಕಿ ಹೊತ್ತಿಕೊಂಡು ಅನಾಹುತ ಸಂಭವಿಸಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಬೆಂಕಿ ಸಂಪೂರ್ಣವಾಗಿ ನಂದಿದ ನಂತರ, ಅವಶೇಷಗಳನ್ನು ಸಂಗ್ರಹಿಸಲಾಗುವುದು. ಅವುಗಳ ಪರಿಶೀಲನೆ ನಡೆಸಿದ ಬಳಿಕವೇ ನಿಖರ ಕಾರಣ ತಿಳಿಯಲಿದೆ' ಎಂದು ಅಗ್ನಿಶಾಮಕ ದಳದ ಅಧಿಕಾರಿಯೊಬ್ಬರು ಹೇಳಿದರು.

'210 ಸಂಖ್ಯೆ ಫ್ಲ್ಯಾಟ್‌ನಲ್ಲಿ ಹೆಚ್ಚು ಹಾನಿಯಾಗಿದ್ದು, ಅಲ್ಲಿಯೇ ಇಬ್ಬರು ಮೃತಪಟ್ಟಿದ್ದಾರೆ. ಅವರ ಮೃತದೇಹಗಳನ್ನು ಆಸ್ಪತ್ರೆಗೆ ಸಾಗಿಸಲಾಗಿದೆ. ಉಳಿದಂತೆ ಅಕ್ಕ-ಪಕ್ಕದ ಫ್ಲ್ಯಾಟ್‌ಗಳಲ್ಲಿ ಹೆಚ್ಚು ಹಾನಿ ಆಗಿಲ್ಲ. ಎಲ್ಲರೂ ಸುರಕ್ಷಿತವಾಗಿದ್ದಾರೆ' ಎಂದೂ ತಿಳಿಸಿದರು.

ಇನ್ನಷ್ಟು ಸುದ್ದಿಗಳು 3

ಆಸ್ಪತ್ರೆಯಲ್ಲಿ ಅಗ್ನಿ ಅವಘಡ

ಹಾವೇರಿ: ರಾಣೆಬೆನ್ನೂರಿನ ಬೆಂಕಿ ಅವಘಡ ಘಟನೆಯ ಬೆನ್ನಲ್ಲೇ, ಹಾವೇರಿ ನಗರದ ಜಿಲ್ಲಾಸ್ಪತ್ರೆ ಆವರಣದಲ್ಲಿರುವ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ ಯಲ್ಲಿ ಮಂಗಳವಾರ ಬೆಳಿಗ್ಗೆ 7 ಗಂಟೆಗೆ ಬೆಂಕಿ ಮತ್ತು ಹೊಗೆ ಕಾಣಿಸಿಕೊಂಡು, ಕೆಲಕಾಲ ಆತಂಕದ ವಾತಾವರಣ ಸೃಷ್ಟಿಯಾಯಿತು. 4

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

https://bit.ly/3nRivZZ

ಮತಾಂತರ ನಿಷೇಧಕ್ಕೆ ಕಾಯ್ದೆ

ವಿಧಾನಸಭೆಯಲ್ಲಿ ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಬಲವಂತದ ಹಾಗೂ ಆಮಿಷವೊಡ್ಡಿ ಮತಾಂತರ ನಡೆಸುತ್ತಿರುವ ಪ್ರಕರಣಗಳು ವರದಿಯಾಗುತ್ತಿರುವ ಕಾರಣ ಮತಾಂತರ ನಿಷೇಧಕ್ಕೆ ಕಾಯ್ದೆ ತರಲು ಚಿಂತನೆ ನಡೆಸಲಾಗಿದೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದರು.

ವಿಧಾನಸಭೆಯಲ್ಲಿ ಮಂಗಳವಾರ ಶೂನ್ಯವೇಳೆಯಲ್ಲಿ ಬಿಜೆಪಿಯ ಗೂಳಿಹಟ್ಟಿ ಶೇಖರ್ ಪ್ರಶ್ನೆಗೆ ಉತ್ತರಿಸಿದ ಅವರು, 'ರಾಜ್ಯದಲ್ಲಿ ಬಲವಂತದ ಮತಾಂತರಕ್ಕೆ ಅವಕಾಶವಿಲ್ಲ. ಆಮಿಷವೊಡ್ಡಿ ಮತಾಂತರ ಮಾಡುವುದು ಕಾನೂನಿಗೆ ವಿರುದ್ಧವಾಗಿದ್ದು, ಸೂಕ್ತ ಕ್ರಮ ಕೈಗೊಳ್ಳುವಂತೆ ಪೊಲೀಸರಿಗೆ ಈ ಕುರಿತು ಸ್ಪಷ್ಟ ನಿರ್ದೇಶನ ನೀಡಲಾಗಿದೆ' ಎಂದರು.

'ಜನರ ಮುಗ್ಧತೆ ಅಥವಾ ಇನ್ನಿತರ ಸನ್ನಿವೇಶಗಳನ್ನು ಉಪಯೋಗಿಸಿಕೊಂಡು ಯಾವುದೇ ಸಂಘಟನೆ ಅಥವಾ ಸಂಸ್ಥೆಗಳು ಮತಾಂತರ ಮಾಡುವುದರಿಂದ, ಸಮಾಜದಲ್ಲಿ ಶಾಂತಿ ಕದಡುವ ಸಂಭವವೂ ಇದೆ' ಎಂದರು. 'ಆಮಿಷ ಒಡ್ಡಿ ಜನರನ್ನು ಮತಾಂತರಗೊಳಿಸುವ ಪ್ರಕ್ರಿಯೆಯಲ್ಲಿ ಒಂದು ವ್ಯವಸ್ಥಿತ ಜಾಲವೇ ಇದ್ದು ಅದನ್ನು ಯಾವರೀತಿ ತಡೆಗಟ್ಟಲು ಸಾಧ್ಯ ಎಂಬುದರ ಬಗ್ಗೆ ಚರ್ಚೆ ಆಗುತ್ತಿದೆ. ಮುಂದಿನ ದಿನಗಳಲ್ಲಿ ಸೂಕ್ತ ಕಾನೂನನ್ನು ತರಲಾಗುವುದು' ಎಂದು ಸಚಿವರು ತಿಳಿಸಿದರು.

ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, 'ಮತಾಂತರದ ಪಿಡುಗು ರಾಜ್ಯ ಮಾತ್ರವಲ್ಲ ಇಡೀ ದೇಶದಲ್ಲಿ ವ್ಯಾಪಿಸಿದೆ. ಬೇರೆ ಬೇರೆ ರಾಜ್ಯಗಳು ಮತಾಂತರ ನಿಷೇಧಕ್ಕೆ ಕಠಿಣ ಕಾಯ್ದೆಗಳನ್ನು ತಂದಿವೆ. ನಮ್ಮಲ್ಲೂ ಅಂತಹ ಕಾಯ್ದೆಗಳನ್ನು ಜಾರಿಗೆ ತರಬೇಕು' ಎಂದು ಸಲಹೆ ನೀಡಿದರು.

ಗೂಳಿಹಟ್ಟಿ ಶೇಖರ್, 'ಚಿತ್ರದುರ್ಗ ಜಿಲ್ಲೆಯಲ್ಲಿ ಸುಮಾರು 20 ಸಾವಿರ ಮಂದಿ ಮತಾಂತರ ಆಗಿದ್ದಾರೆ. ನನ್ನ ತಾಯಿ ಸಹ ಮತಾಂತರಗೊಂಡಿದ್ದಾರೆ. ಕುಂಕುಮ ಇಡಬಾರದು ಹಾಗೂ ದೇವರ ಫೋಟೋ ಇಡಬಾರದು ಎಂದು ಅವರ ಬ್ರೈನ್ ವಾಶ್ ಮಾಡಲಾಗಿದೆ. ಇದು ಸರಿಯಲ್ಲ ಎಂದು ಕಿವಿಮಾತು ಹೇಳಿದರೆ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ತಾಯಿ ಬೆದರಿಕೆ ಹಾಕುತ್ತಿದ್ದಾರೆ. ಈ ಬೆಳವಣಿಗೆಯಿಂದ ಇಡೀ ಕುಟುಂಬ ಮುಜುಗರ ಅನುಭವಿಸುವಂತಾಗಿದೆ' ಎಂದು ಅಳಲು ತೋಡಿಕೊಂಡರು.

6ನೇ ಪುಟ ನೋಡಿ

220 ಸಲ ಸ್ಯಾಟಲೈಟ್ ಫೋನ್ ಬಳಕೆ ಪತ್ತೆ



'ರಾಜ್ಯದಲ್ಲಿ 2020ರಲ್ಲಿ 256 ಸಲ ಹಾಗೂ 2021ರಲ್ಲಿ ಈವರೆಗೆ 220 ಸಲ ಸ್ಯಾಟಲೈಟ್ ಫೋನ್ ಬಳಕೆ ಮಾಡಿರುವುದು ಪತ್ತೆಯಾಗಿದೆ' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದರು.

ಪ್ರಶ್ನೋತ್ತರ ಅವಧಿಯಲ್ಲಿ ಕಾಂಗ್ರೆಸ್‌ನ ಯು.ಟಿ.ಖಾದರ್ ಪ್ರಶ್ನೆಗೆ ಉತ್ತರಿಸಿದ ಅವರು, '2011ರ ಮುಂಬೈ ದಾಳಿ ನಡೆದ ಬಳಿಕ ಭಾರತದ ಒಳನಾಡಿನಲ್ಲಿ ಸ್ಯಾಟಲೈಟ್ ಫೋನ್ ಬಳಕೆಗೆ ನಿಷೇಧ ವಿಧಿಸಿ ನೌಕಾಯಾನದ ಡಿಜಿಪಿ ಅವರು ಅದೇ ವರ್ಷ ಆದೇಶ ಹೊರಡಿಸಿದ್ದಾರೆ. ಆದರೂ, ಕೆಲವರು ಸ್ಯಾಟಲೈಟ್ ಫೋನ್ ಬಳಕೆ ಮಾಡುತ್ತಿದ್ದಾರೆ. ದೇಶದ ಭದ್ರತೆಯ ವಿಚಾರವೂ ಇದರಲ್ಲಿ ಅಡಗಿದೆ. ಅಂತರರಾಷ್ಟ್ರೀಯ ಕರೆಗಳನ್ನು ಮಾಡುತ್ತಿರುವುದು ಗಮನಕ್ಕೆ ಬಂದಿದೆ. ಈ ಮಾಹಿತಿಯನ್ನು 'ರಾ' ಜತೆಗೆ ಹಂಚಿಕೊಳ್ಳಲಾಗಿದೆ' ಎಂದರು. ರಾಜ್ಯದ ಕರಾವಳಿ ಹಾಗೂ ಇನ್ನಿತರ ಅಕ್ರಮವಾಗಿ ಸ್ಯಾಟಲೈಟ್ ಫೋನ್ ಬಳಕೆಯಾಗುತ್ತಿರುವ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದ ಅವರು, 'ಈ ಕುರಿತು ಅಗತ್ಯ ಕ್ರಮ ತೆಗೆದುಕೊಳ್ಳುವಂತೆ ಪೊಲೀಸರಿಗೆ ಸ್ಪಷ್ಟ ನಿರ್ದೇಶನ ನೀಡಲಾಗಿದೆ' ಎಂದರು.



ಅಫ್ಗಾನಿಸ್ತಾನದಿಂದ ಮುಂದ್ರಾ ಬಂದರಿಗೆ ಕಳ್ಳಸಾಗಣೆ

₹21 ಸಾವಿರ ಕೋಟಿ ಮೌಲ್ಯದ ಹೆರಾಯಿನ್ ವಶ

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಗುಜರಾತ್‌ನ ಕಛ್ ಜಿಲ್ಲೆಯ ಮುಂದ್ರಾ ಬಂದರಿನಲ್ಲಿ ರೆವಿನ್ಯೂ ಗುಪ್ತಚರ ನಿರ್ದೇಶನಾಲಯವು (ಡಿಆರ್‌ಐ) 3,000 ಕೆ.ಜಿಯಷ್ಟು ಹೆರಾಯಿನ್ ಮಾದಕವಸ್ತುವನ್ನು ವಶಪಡಿಸಿಕೊಂಡಿದೆ. ದೇಶದಲ್ಲಿ ಈವರೆಗೆ ಇಷ್ಟು ದೊಡ್ಡ ಪ್ರಮಾಣದಲ್ಲಿ ಮಾದಕ ವಸ್ತು ವಶಕ್ಕೆ ಪಡೆದದ್ದು ಇದೇ ಮೊದಲು. ವಶಪಡಿಸಿಕೊಳ್ಳಲಾದ ಹೆರಾಯಿನ್‌ನ ಅಂತರರಾಷ್ಟ್ರೀಯ ಮಾರುಕಟ್ಟೆಯ ಮೌಲ್ಯ ₹21,000 ಕೋಟಿಯಷ್ಟು ಎಂದು ಡಿಆರ್‌ಐ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಸೆಪ್ಟೆಂಬರ್ 11ರಂದು ಮುಂದ್ರಾ ಬಂದರಿಗೆ 40 ಅಡಿಗಳ ಎರಡು ಕಂಟೇನರ್‌ಗಳಲ್ಲಿ ಹೆರಾಯಿನ್ ಅನ್ನು ತರಲಾಗಿದೆ. ಬಿಲ್‌ನಲ್ಲಿ ಇದನ್ನು ಟಾಲ್ಕ್ ಪೌಡರ್ ಎಂದು ನಮೂದು ಮಾಡಲಾಗಿದೆ. ಒಂದು ಕಂಟೇನರ್‌ನಲ್ಲಿ 1999.57 ಕೆ.ಜಿ ಹೆರಾಯಿನ್ ಪತ್ತೆಯಾಗಿದೆ. ಮತ್ತೊಂದು ಕಂಟೇನರ್‌ನಲ್ಲಿ 988.64 ಕೆ.ಜಿಯಷ್ಟು ಹೆರಾಯಿನ್ ತರಲಾಗಿತ್ತು.

10ನೇ ಪುಟ ನೋಡಿ

ಭದ್ರತಾ ಸಂಸ್ಥೆಗಳ ಕಳವಳ

ಭಾರತಕ್ಕೆ ಈಚಿನ ದಿನಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಮಾದಕವಸ್ತುಗಳನ್ನು ಕಳ್ಳಸಾಗಣೆ ಮಾಡಲಾಗುತ್ತಿದೆ. ಈಚಿನ ವರ್ಷಗಳಲ್ಲಿ ಹಡಗುಗಳ ಮೂಲಕ ಮಾದಕ ವಸ್ತು ಕಳ್ಳಸಾಗಣೆ ಮಾಡುವುದು ಹೆಚ್ಚಾಗುತ್ತಿದೆ. ಇದು ರಾಷ್ಟ್ರೀಯ ಭದ್ರತೆಗೆ ಧಕ್ಕೆ ತರುವಂತಹ ಬೆಳವಣಿಗೆ ಎಂದು ಭದ್ರತಾ ಸಂಸ್ಥೆಗಳು ಕಳವಳ ವ್ಯಕ್ತಪಡಿಸಿವೆ.

2019ರ ಮೇನಲ್ಲಿ ಮುಂದ್ರಾ ಬಂದರಿನಲ್ಲಿ ಡಿಆರ್‌ಐ ಸಿಬ್ಬಂದಿಯು, 217 ಕೆ.ಜಿ.ಯಷ್ಟು ಹೆರಾಯಿನ್ ವಶಕ್ಕೆ ಪಡೆದಿದ್ದರು. ಸಣ್ಣ ಹಡಗಿನಲ್ಲಿ ಅದನ್ನು ಸಾಗಿಸುತ್ತಿದ್ದ ಪಾಕಿಸ್ತಾನದ ಆರು ಜನರನ್ನು ಬಂಧಿಸಲಾಗಿತ್ತು. ನಂತರದ ದಿನಗಳಲ್ಲಿ ಅದೇ ಬಂದರಿನಲ್ಲಿ 650 ಕೆ.ಜಿ. ಹೆರಾಯಿನ್ ವಶಕ್ಕೆ ಪಡೆದುಕೊಳ್ಳಲಾಗಿತ್ತು. ಆಗ 16 ಜನ ಇರಾನಿಯನ್ನರು, ಪಾಕಿಸ್ತಾನದ ಎಂಟು ಮಂದಿ ಮತ್ತು ಅಫ್ಗಾನಿಸ್ತಾನದ ಇಬ್ಬರನ್ನು ಬಂಧಿಸಲಾಗಿತ್ತು.

ಕೋವಿಶೀಲ್ಡ್ ಅಮಾನ್ಯ: ಬ್ರಿಟನ್‌ಗೆ ಎಚ್ಚರಿಕೆ

ನವದೆಹಲಿ (ಪಿಟಿಐ): ಕೋವಿಶೀಲ್ಡ್ ಲಸಿಕೆ ಹಾಕಿಸಿಕೊಂಡ ಭಾರತೀಯರು ಬ್ರಿಟನ್‌ಗೆ ಹೋದಾಗ 10 ದಿನಗಳ ಕಡ್ಡಾಯ ಪ್ರತ್ಯೇಕವಾಸ ನಿಯಮ ಕೈಬಿಡದಿದ್ದರೆ ಅದಕ್ಕೆ ತಿರುಗೇಟು ನೀಡುವಂತಹ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ವಿದೇಶಾಂಗ ಕಾರ್ಯದರ್ಶಿ ಹರ್ಷವರ್ಧನ ಶೃಂಗ್ಲಾ ಮಂಗಳವಾರ ಹೇಳಿದ್ದಾರೆ. ಇದು ತಾರತಮ್ಯದಿಂದ ಕೂಡಿದ ನಿಯಮ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.



ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ಬ್ರಿಟಿಷ್ ವಿದೇಶಾಂಗ ಕಾರ್ಯದರ್ಶಿ ಎಲಿಜಬೆತ್ ಟ್ರಸ್ ಅವರ ಜತೆಗೂ ಈ ವಿಷಯ ಪ್ರಸ್ತಾಪಿಸಿದ್ದಾರೆ. ಇವರಿಬ್ಬರೂ ನ್ಯೂಯಾರ್ಕ್‌ನಲ್ಲಿ ಭೇಟಿಯಾಗಿದ್ದಾರೆ.

ಪುಣೆಯ ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ತಯಾರಿಸಿದ ಕೋವಿಶೀಲ್ಡ್‌ನ ಲಸಿಕೆಯ ಎರಡೂ ಡೋಸ್ ಪಡೆದುಕೊಂಡಿದ್ದರೂ ಅಂಥವರನ್ನು ಲಸಿಕೆ ಹಾಕಿಸಿಕೊಳ್ಳದವರು ಎಂದೇ ಪರಿಗಣಿಸುವ ನಿಯಮವನ್ನು ಬ್ರಿಟನ್ ರೂಪಿಸಿದೆ. ವಿದೇಶಿ ಪ್ರವಾಸಿಗರಿಗೆ ಸಂಬಂಧಿಸಿದ ಹೊಸ ನಿಯಮಗಳು ಅಕ್ಟೋಬರ್ 4ರಿಂದ ಜಾರಿಗೆ ಬರಲಿವೆ. ಲಸಿಕೆಯ ನಿಯಮವನ್ನು ಅದರೊಳಗೆ ಸರಿಪಡಿಸಬೇಕು ಎಂದು ಭಾರತ ಒತ್ತಾಯಿಸಿದೆ.

ಸಮಸ್ಯೆ ಪರಿಹರಿಸುವ ಭರವಸೆಯನ್ನು ಬ್ರಿಟನ್ ನೀಡಿದೆ ಎಂದು ಶೃಂಗ್ಲಾ ಅವರು ಹೇಳಿದ್ದಾರೆ. 'ಲಸಿಕೆ ಪ್ರಮಾಣಪತ್ರಗಳಿಗೆ ಪರಸ್ಪರ ಮಾನ್ಯತೆ ನೀಡಿಕೆಯ ಬಗ್ಗೆ ಕೆಲವು ದೇಶಗಳ ಜತೆ ಚರ್ಚಿಸಲಾಗುತ್ತಿದೆ. ಇದು ಹೇಗಾಗುತ್ತದೆ ಎಂಬುದನ್ನು ನೋಡಬೇಕಿದೆ. ಯಾವುದೇ ದೇಶದ ನಿಯಮವು ನಮಗೆ ತೃಪ್ತಿ ನೀಡಿಲ್ಲ ಎಂದಾದರೆ ಅದಕ್ಕೆ ತಿರುಗೇಟು ನೀಡುವಂತಹ ನಿಯಮ ರೂಪಿಸುವ ಹಕ್ಕು ಭಾರತಕ್ಕೆ ಇದೆ' ಎಂದು ಹೇಳಿದರು.

7ನೇ ಪುಟ ನೋಡಿ

24ರಂದು ಮೋದಿ–ಬೈಡನ್ ಮುಖಾಮುಖಿ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಮತ್ತು ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರು ಸೆ. 24ರಂದು ವಾಷಿಂಗ್ಟನ್‌ನಲ್ಲಿ ಮುಖಾಮುಖಿಯಾಗಲಿದ್ದು, ಉಭಯ ದೇಶಗಳ ನಡುವೆ ದ್ವಿಪಕ್ಷೀಯ ಬಾಂಧವ್ಯವೃದ್ಧಿ ಕುರಿತು ಚರ್ಚಿಸಲಿದ್ದಾರೆ. 7

'ಮರಳು ಗಣಿಗಾರಿಕೆಗೆ ಗ್ರಾ.ಪಂ. ಅನುಮತಿ'

ಬೆಂಗಳೂರು: 'ಹಳ್ಳ, ತೊರೆಗಳಲ್ಲಿ ಮರಳು ಗಣಿಗಾರಿಕೆ ನಡೆಸಲು ಗ್ರಾಮ ಪಂಚಾಯಿತಿ ಅನುಮತಿ ನೀಡಲು ಅನುಕೂಲವಾಗುವಂತೆ ಮರಳು ನೀತಿ ಸರಳೀಕರಿಸುವ ಕುರಿತಂತೆ ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಲಾಗುವುದು' ಎಂದು ಭೂ ವಿಜ್ಞಾನ ಮತ್ತು ಗಣಿ ಸಚಿವ ಹಾಲಪ್ಪ ಆಚಾರ್ ತಿಳಿಸಿದರು. 6

ಒಳ ಪುಟಗಳು



ವೈದ್ಯಕೀಯ ಸೀಟು ತಿರಸ್ಕರಿಸಿದ್ದವರಿಗೆ 'ಚಿನ್ನ' 4

ಆದಾಯ ಭದ್ರತೆಗೆ ಲಾಕ್‌ಡೌನ್ ಹೊಡೆತ 9

ಚಿನಕುರಳಿ

ಪ್ರಕಾಶ್ ಶೆಟ್ಟಿ



‘ಅಮೃತ’ ಗ್ರಾ.ಪಂ.ಯೋಜನೆಗೆ ಚಾಲನೆ ನಾಳೆ: ಸಚಿವ ಈಶ್ವರಪ್ಪ



ಬೆಂಗಳೂರು: 'ಸ್ವಾತಂತ್ರ್ಯೋತ್ಸವದ 75ನೇ ವರ್ಷದ ನೆನಪಿಗಾಗಿ ‘ಅಮೃತ’ ಗ್ರಾಮ ಪಂಚಾಯತಿ ಯೋಜನೆಯಲ್ಲಿ 750 ಗ್ರಾಮ ಪಂಚಾಯತಿಗಳ ಅಭಿವೃದ್ಧಿ ಕಾರ್ಯಗಳಿಗೆ ಕೇಂದ್ರ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಗಿರಿರಾಜ್ ಸಿಂಗ್ ಗುರುವಾರ ಚಾಲನೆ ನೀಡಲಿದ್ದಾರೆ’ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ’ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧ್ಯಕ್ಷತೆ ವಹಿಸಲಿದ್ದು, ಬ್ಯಾಂಕ್ವೆಟ್ ಹಾಲ್‌ನಲ್ಲಿ ಕಾರ್ಯಕ್ರಮ ನಡೆಯಲಿದೆ. ಗ್ರಾಮ ಪಂಚಾಯತಿಯಲ್ಲಿ ಕುಡಿಯುವ ನೀರು, ಸ್ವಚ್ಛತೆಗೆ ₹ 25 ಲಕ್ಷ ಹೆಚ್ಚುವರಿ ಅನುದಾನ ನೀಡಲಾಗುವುದು. ಮುಂದಿನ ಬಜೆಟ್ ಒಳಗೆ ಕಾಮಗಾರಿ ಮುಗಿಸಬೇಕಿದೆ‘ ಎಂದರು.

‘ಗ್ರಾಮ ಪಂಚಾಯತಿಯನ್ನು ಆಯ್ಕೆ ಮಾಡುವ ಹೊಣೆಯನ್ನು ಜಿಲ್ಲೆ ಉಸ್ತುವಾರಿ ಸಚಿವರಿಗೆ ನೀಡಲಾಗಿದೆ. ಈಗಾಗಲೇ ಬಹುತೇಕ ಸಚಿವರು ಗ್ರಾಮ ಪಂಚಾಯಿತಿಗಳ ಪಟ್ಟಿಯನ್ನು ನೀಡಿದ್ದಾರೆ’ ಎಂದರು.

'ನರೇಗಾ ಯೋಜನೆಯಲ್ಲಿ ಪ್ರಸಕ್ತ ವರ್ಷದ 13 ಕೋಟಿ ಮಾನವ ದಿನಗಳ ಗುರಿ ಈಗಾಗಲೇ ಸಾಧಿಸಲಾಗಿದೆ. 20 ಕೋಟಿ ಮಾನವ ದಿನ ಸೃಜಿಸಲು ಅವಕಾಶ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದೇವೆ' ಎಂದರು.

ವಿವಿಧೆಡೆ ವಿದ್ಯುತ್ ವ್ಯತ್ಯಯ

ಬೆಂಗಳೂರು: 11 ಕೆ.ವಿ ವಿದ್ಯುತ್ ಮಾರ್ಗವನ್ನು ಭೂಗತ ಕೇಬಲ್ ಆಗಿ ಬದಲಾಯಿಸುವ ಮತ್ತು ಹೊಸ ವಿದ್ಯುತ್ ಮಾರ್ಗದ ಕಾಮಗಾರಿ ಆರಂಭಿಸಿರುವುದರಿಂದ ನಗರದ ವಿವಿಧೆಡೆ ಸೆ.22ರಿಂದ 28ರವರೆಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

ಎಚ್‌ಎಸ್‌ಆರ್ ಲೇಔಟ್ 5ನೇ ಸೆಕ್ಟರ್, ಟೀಚರ್ಸ್ ಕಾಲೊನಿ, 19ನೇ ಮುಖ್ಯ ರಸ್ತೆ, 27ನೇ ಮುಖ್ಯ ರಸ್ತೆ, ಎಚ್‌ಎಸ್‌ಆರ್ 2ನೇ ಸೆಕ್ಟರ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸೆ.22ರಂದು, ಎಚ್‌ಎಸ್‌ಆರ್ 6ನೇ ಸೆಕ್ಟರ್, ಬಿ.ಕೆ.ಸರ್ಕಲ್, ನಾಯಕ್ ಲೇಔಟ್, ಸುರಭಿ ನಗರ, ಗೊಟ್ಟಿಗೆರೆ, ಐಡಿಬಿಐ ಲೇಔಟ್, ಸೌತ್ ಅವೆನ್ಯೂ, ಬಿ.ಜಿ.ರಸ್ತೆ, ಐಇಸಿಐಎಸ್ ಲೇಔಟ್ ಎ ಬ್ಲಾಕ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸೆ.23ರಂದು ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

ಎಚ್‌ಎಸ್‌ಆರ್ 4ನೇ ಸೆಕ್ಟರ್, ಕೆಎಸ್‌ಆರ್‌ಪಿ ಕ್ವಾಟ್ರಸ್, ವೆಂಕಟಾಪುರ ಪ್ರದೇಶದಲ್ಲಿ ಸೆ.24 ರಂದು, ಎಚ್‌ಎಸ್‌ಆರ್ 7ನೇ ಸೆಕ್ಟರ್‌ನಲ್ಲಿ ಸೆ.27ರಂದು, ಸನ್ ಸಿಟಿ ಲೇಔಟ್, ರಾಮಯ್ಯ ಸಿಟಿ, ಸಾಯಿ ಎನ್‌ಕ್ಲೇವ್, ಅರಾಧನ ಶಾಲೆ, ಎಸ್.ಜೆ.ಆರ್ ಬಿಲ್ಡರ್ಸ್, ಜಿ.ಆರ್.ಲ್ಯಾವೆಂಡರ್ಸ್, ರಾಘವೇಂದ್ರ ಲೇಔಟ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸೆ.28ರಂದು ವಿದ್ಯುತ್ ವ್ಯತ್ಯವಾಗಲಿದೆ ಎಂದು ಬೆಸ್ಕಾಂ ತಿಳಿಸಿದೆ.

ಸಾರ್ಕ್ ವಿದೇಶಾಂಗ ಸಚಿವರ ಸಭೆ ರದ್ದು

ನವದೆಹಲಿ: ಇದೇ 25ರಂದು ನಡೆಯಬೇಕಿದ್ದ ಸಾರ್ಕ್ ದೇಶಗಳ ವಿದೇಶಾಂಗ ಸಚಿವರ ಸಭೆ ರದ್ದಾಗಿದೆ. ಈ ಸಭೆಗೆ ಅಫ್ಗಾನಿಸ್ತಾನವನ್ನು ಪ್ರತಿನಿಧಿಸಲು ತಾಲಿಬಾನ್‌ಗೆ ಅವಕಾಶ ಕಲ್ಪಿಸಬೇಕು ಎಂದು ಪಾಕಿಸ್ತಾನ ಬೇಡಿಕೆ ಇಟ್ಟಿತ್ತು. ಆದರೆ ಭಾರತ ಸೇರಿದಂತೆ ಒಕ್ಕೂಟದ ಬಹುತೇಕ ರಾಷ್ಟ್ರಗಳು ಪಾಕ್ ಬೇಡಿಕೆಯನ್ನು ತಿರಸ್ಕರಿಸಿದ ಕಾರಣ ಸಭೆ ರದ್ದಾಗಿದೆ.

ನ್ಯೂಯಾರ್ಕ್‌ನಲ್ಲಿ ನಡೆಯಲಿರುವ ವಿಶ್ವಸಂಸ್ಥೆಯ ಸಾಮಾನ್ಯ ಸಭೆಗೂ ಮುನ್ನ ಸಾರ್ಕ್ ದೇಶಗಳ ವಿದೇಶಾಂಗ ಸಚಿವರ ಸಭೆ ನಡೆಯಬೇಕಿತ್ತು. ಆದರೆ ಸದಸ್ಯ ರಾಷ್ಟ್ರಗಳ ಒಮ್ಮತದ ಕೊರತೆಯ ಕಾರಣ ಸಭೆ ನಡೆಯುವುದಿಲ್ಲ ಎಂದು ಸಾರ್ಕ್‌ನ ಅಧ್ಯಕ್ಷತೆ ವಹಿಸಿರುವ ನೇಪಾಳ ತಿಳಿಸಿದೆ.

ನಗರದಲ್ಲಿ ಇಂದು

ಎಚ್.ಎನ್. ಅನಂತಕುಮಾರ್ ಅವರ 62ನೇ ಜನ್ಮದಿನಾಚರಣೆ: ಉಪಸ್ಥಿತಿ–ರಾಜ್ಯಪಾಲ ಥಾವರಚಂದ್ ಗೆಹಲೋತ್, ಕೇಂದ್ರ ಸಚಿವ ರಾಜನಾಥ ಸಿಂಗ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಆಯೋಜನೆ–ಅದಮ್ಯ ಚೇತನ ಮತ್ತು ಅನಂತಕುಮಾರ್ ಪ್ರತಿಷ್ಠಾನ, ಸ್ಥಳ–ಎನ್‌ಎಂಕೆಆರ್‌ವಿ ವಿದ್ಯಾ ಸಂಸ್ಥೆಯ ಮಂಗಳ ಮಂಟಪ, ಜಯನಗರ–ಸಂಜೆ 5.

ಎಂಜಿನಿಯರಿಂಗ್, ಎಂ.ಟೆಕ್ ಹಾಗೂ ಎಂಸಿಎ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ: ಮಾತನಾಡುವವರು–ಜರ್ಮನಿಯ ಪ್ರೊ. ಕ್ಯಾಟ್ರಿನ್ ಲೋರ್, ಅಧ್ಯಕ್ಷತೆ–ಎಂ.ಕೆ. ಪಾಂಡುರಂಗ ಶೆಟ್ಟಿ, ಆಯೋಜನೆ–ಆರ್.ವಿ.ಎಂಜಿನಿಯರಿಂಗ್ ಕಾಲೇಜು (ಆನ್‌ಲೈನ್ ಕಾರ್ಯಕ್ರಮ)–ಸಂಜೆ 4.

ಸುರೇಶ್ ಜಯರಾಮ್ ಅವರ ‘ಲಾಲ್‌ಬಾಗ್’ ಪುಸ್ತಕ ಬಿಡುಗಡೆ: ಮಾತನಾಡುವವರು–ಹರಿಣಿ ನಾಗೇಂದ್ರ, ಆಯೋಜನೆ–ಹೆರಿಟೇಜ್ ಬೇಕು (ಆನ್‌ಲೈನ್ ಕಾರ್ಯಕ್ರಮ)–ಸಂಜೆ 5.

‘ರಾಷ್ಟ್ರೀಯ ಶಿಕ್ಷಣ ನೀತಿ–2020’ ಕುರಿತ ಕಾರ್ಯಾಗಾರ: ಉದ್ಘಾಟನೆ–ಸಚಿವ ಬಿ.ಸಿ.ನಾಗೇಶ್, ಅಧ್ಯಕ್ಷತೆ–ಟಿ.ವಿ. ಮಾರುತಿ, ಆಯೋಜನೆ–ಆಚಾರ್ಯ ಪಾಠಶಾಲಾ ಶಿಕ್ಷಣ ಟ್ರಸ್ಟ್ ಮತ್ತು ಎಪಿಎಸ್ ಶಿಕ್ಷಣ ಸಮೂಹ, ಸ್ಥಳ–ಎಪಿಎಸ್‌ಇಟಿ ಆಡಿಟೋರಿಯಂ–ಬೆಳಿಗ್ಗೆ 9.

‘ವರ್ಕ್ ಫ್ರಮ್ ಹೋಮ್’ನಲ್ಲಿದ್ದ ಹಲವು ನಿವಾಸಿಗಳು • ಸ್ಫೋಟದ ಸದ್ದು ಕೇಳಿ ದಿಕ್ಕಾಪಾಲಾಗಿ ಓಡಿದರು

‘ಅಮೆರಿಕದಿಂದ ನಿನ್ನೆ ಬಂದಿದ್ದರು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಫೋಟದ ಸದ್ದು. ಧಗ ಧಗ ಉರಿವ ಬೆಂಕಿ. ದಾರಿಯೂ ಗೋಚರಿಸದಂತೆ ಆವರಿಸಿದ್ದ ಕಪ್ಪು ಹೊಗೆ. ಇದರ ನಡುವೆ ಪ್ರಾಣ ಉಳಿಸಿಕೊಳ್ಳಲು ಓಡಿದ ನಿವಾಸಿಗಳು. ಮಹಿಳೆ ಜೀವಂತವಾಗಿ ಬೆಂಕಿಗೆ ಆಹುತಿಯಾಗುತ್ತಿದ್ದ ದೃಶ್ಯ ನೋಡಿ ಬದುಕಿಸಲಾಗದೇ ಅಸಹಾಯಕತೆಯಿಂದ ಕಣ್ಣೀರಿಟ್ಟ ಜನ.. .

ಬೊಮ್ಮನಹಳ್ಳಿ ಬಳಿಯ ದೇವರಚಿಕ್ಕನಹಳ್ಳಿ ಆಶ್ರಿತ್ ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿ ಮಂಗಳವಾರ ಸಂಜೆ ಸಂಭವಿಸಿದ ಬೆಂಕಿ ಅವಘಡದಲ್ಲಿ ಕಂಡು ಬಂದ ಹೃದಯವಿದ್ರಾವಕ ದೃಶ್ಯಗಳಿವು.

ಮೂರು ಅಂತಸ್ತಿನ ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿ 70 ಫ್ಲ್ಯಾಟ್‌ಗಳಿವೆ. ಖಾಸಗಿ ಕಂಪನಿ ನೌಕರರು, ನಿವೃತ್ತ ಉದ್ಯೋಗಿಗಳ ಕುಟುಂಬದವರು ಎಂಟು ವರ್ಷದಿಂದ ಫ್ಲ್ಯಾಟ್‌ನಲ್ಲಿ ವಾಸವಿದ್ದರು. ಕೋವಿಡ್ ಬಂದ ನಂತರ ವಾತಾವರಣ ಬದಲಾಗಿತ್ತು. ಫ್ಲ್ಯಾಟ್‌ನಲ್ಲಿ ಇದ್ದುಕೊಂಡು ಬಹುತೇಕರು, ಕಚೇರಿ ಕೆಲಸವನ್ನು ಮನೆಯಿಂದಲೇ (ವರ್ಕ್ ಫ್ರಮ್ ಹೋಮ್) ನಿರ್ವಹಿಸುತ್ತಿದ್ದರು.

ಮಂಗಳವಾರ ಮಧ್ಯಾಹ್ನ ಬಹುತೇಕರು ಮನೆಯಿಂದಲೇ ಕಚೇರಿ ಕೆಲಸ ಆರಂಭಿಸಿದ್ದರು. ಕೆಲವರು ವಿಶ್ರಾಂತಿ ಪಡೆದಿದ್ದರು. ಇನ್ನು ಕೆಲವರು, ದಿನನಿತ್ಯದ ಕೆಲಸಗಳಲ್ಲಿ ತೊಡಗಿದ್ದರು. ಮಧ್ಯಾಹ್ನ 4.30ರ ಸುಮಾರಿಗೆ ಫ್ಲ್ಯಾಟ್ ನಂ. 210ರಲ್ಲಿ ಜೋರು ಸದ್ದು ಕೇಳಿಸಿತು. ಏನಾದರೂ ಇರಬಹುದೆಂದು ನಿವಾಸಿಗಳು ಸುಮ್ಮನಾಗಿದ್ದರು. ಅದಾದ ನಂತರ, ಪುನಃ ಮೂರ್ನಾಲ್ಕು ಬಾರಿ ಸದ್ದು ಕೇಳಿಸಿತು.

ಅನುಮಾನಗೊಂಡ ಕೆಲವರು, ಫ್ಲ್ಯಾಟ್‌ನಿಂದ ಹೊರಬಂದು ನೋಡಿದಾಗ ದಟ್ಟ ಹೊಗೆ ಕ್ರಮೇಣ ಹೆಚ್ಚಾಗುತ್ತಿತ್ತು. ಗಾಬರಿಗೊಂಡ ಅವರೆಲ್ಲ, ತಮ್ಮ ಕುಟುಂಬದವರನ್ನು ಕರೆದುಕೊಂಡು ಹೊರಗೆ ಓಡಿಬಂದು ರಸ್ತೆಯಲ್ಲಿ ನಿಂತುಕೊಂಡರು. ಬೆಂಕಿ ಕಾಣಿಸಿಕೊಂಡಿದ್ದ ಫ್ಲ್ಯಾಟ್–210 ಸಂಪೂರ್ಣ ಸುಟ್ಟಿತು. ಅಲ್ಲಿಯೇ ಲಕ್ಷ್ಮಿದೇವಿ ಹಾಗೂ ಅವರ ಮಗಳು ಭಾಗ್ಯರೇಖಾ ಮೃತಪಟ್ಟರು.

ಅಮೆರಿಕದಿಂದ ಬಂದಿದ್ದರು: ‘ಭಾಗ್ಯರೇಖಾ, ಪತಿ ಹಾಗೂ ಕುಟುಂಬದ ಜೊತೆಯಲ್ಲಿ ಅಮೆರಿಕದಲ್ಲಿರುವ ಮಗಳು ಸ್ವಾತಿ ಮನೆಗೆ 6 ತಿಂಗಳ ಹಿಂದಷ್ಟೇ ಹೋಗಿದ್ದರು. ಸೋಮವಾರ ವಾಪಸು ಬಂದು ಫ್ಲ್ಯಾಟ್‌ನಲ್ಲಿ ಉಳಿದುಕೊಂಡಿದ್ದರು’ ಎಂದು ಸ್ಥಳೀಯ ನಿವಾಸಿಯೊಬ್ಬರು ಹೇಳಿದರು.

‘ಅಕ್ಕ–ಪಕ್ಕದವರ ಜೊತೆ ಚೆನ್ನಾಗಿ ಮಾತನಾಡುತ್ತಿದ್ದ ಭಾಗ್ಯರೇಖಾ, ಮಂಗಳವಾರ ಬೆಳಿಗ್ಗೆಯೂ ಪಕ್ಕದ ಮನೆಯ ಮಹಿಳೆ ಜೊತೆ ಮಾತನಾಡಿದ್ದರು. ‘ಅಮೆರಿಕದಲ್ಲಿ ಮಗಳು –ಅಳಿಯ ಚೆನ್ನಾಗಿದ್ದಾರೆ. ನೋಡಿಕೊಂಡು ಬಂದು ಖುಷಿಯಾಗಿದೆ. ಅಲ್ಲಿಯ ನೆನಪುಗಳು ಇನ್ನು ಉಳಿದಿವೆ’ ಎಂದಿದ್ದರು. ಸದ್ಯದಲ್ಲೇ ಮಗಳು–ಅಳಿಯ ಭಾರತಕ್ಕೆ ಬರುತ್ತಾರೆಂದು ತಿಳಿಸಿ ಫ್ಲ್ಯಾಟ್‌ನೊಳಗೆ ಹೋಗಿದ್ದರು. ಇದಾದ ಕೆಲವೇ ಗಂಟೆಗಳಲ್ಲಿ ಮನೆಯಲ್ಲಿ ಸ್ಫೋಟ ಸಂಭವಿಸಿ, ಭಾಗ್ಯರೇಖಾ ಹಾಗೂ ಅವರ ತಾಯಿ ಲಕ್ಷ್ಮಿದೇವಿ ಪ್ರಾಣ ಕಳೆದುಕೊಂಡಿದ್ದಾರೆ’ ಎಂದೂ ತಿಳಿಸಿದರು.

ಪೊಲೀಸ್ ಅಧಿಕಾರಿಯೊಬ್ಬರು, ‘ಭಾಗ್ಯರೇಖಾ, ಭೀಮಸೇನ್ ಅವರ ಪತ್ನಿ. ಇದೇ ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿ ಭೀಮಸೇನ್ ಎರಡು ಫ್ಲ್ಯಾಟ್ ಖರೀದಿಸಿದ್ದರು. ಅವರಿಗೆ ಇಬ್ಬರು ಹೆಣ್ಣು ಮಕ್ಕಳು. ಒಬ್ಬ ಮಗಳು ಸ್ವಾತಿ, ಅಮೆರಿಕದಲ್ಲಿದ್ದಾರೆ. ಇನ್ನೊಬ್ಬ ಮಗಳು ಪ್ರೀತಿ’ ಎಂದರು.

‘ಪತ್ನಿ ಹಾಗೂ ಅತ್ತೆ ಜೊತೆಯಲ್ಲಿ ಒಂದು ಫ್ಲ್ಯಾಟ್‌ನಲ್ಲಿ ಭೀಮಸೇನ್ ಉಳಿದುಕೊಂಡಿದ್ದರು. ಇನ್ನೊಂದು ಫ್ಲ್ಯಾಟ್‌ನ್ನು ಮಗಳು ಪ್ರೀತಿಗೆ ಕೊಟ್ಟಿದ್ದರು’ ಎಂದೂ ಹೇಳಿದರು.

‘ಬೆಂಕಿ ಅವಘಡದ ವೇಳೆ ಪತ್ನಿ ಹಾಗೂ ಅತ್ತೆಯನ್ನು ಉಳಿಸಿಕೊಳ್ಳಲು ಭೀಮಸೇನ್ ಸಾಕಷ್ಟು ಯತ್ನಿಸಿದ್ದರು. ಕೊನೆಯಲ್ಲಿ ಅವರೇ ಅಪಾಯಕ್ಕೆ ಸಿಲುಕಿದ್ದರು. ಪಕ್ಕದ ಮನೆಯವರು ಅವರನ್ನು ಕರೆದುಕೊಂಡು ಹೊರಗೆ ಬಂದು ಪ್ರಾಣ ಉಳಿಸಿದ್ದಾರೆ. ಅವರ ತಲೆ, ಕೈ ಹಾಗೂ ಕಾಲಿಗೆ ಸುಟ್ಟ ಗಾಯಗಳಾಗಿವೆ’ ಎಂದೂ ತಿಳಿಸಿದರು.

ಪ್ರಾಣ ಉಳಿಸಿದ ವಾಟ್ಸ್‌ಆ್ಯಪ್ ಗ್ರೂಪ್: ‘ಬಹುತೇಕರು ಫ್ಲ್ಯಾಟ್‌ಗಳ ಒಳಗೆ ಇದ್ದರು. ಅವರಿಗೆ ಬೆಂಕಿ ತಗುಲಿದ್ದೇ ಗೊತ್ತಿರಲಿಲ್ಲ. ಹೊರಗೆ ಬಂದಿದ್ದ ಕೆಲವರು, ‘ಬೆಂಕಿ ಹೊತ್ತಿಕೊಂಡಿದೆ. ಹೊರಗೆ ಬನ್ನಿ’ ಎಂದು ಅಪಾರ್ಟ್‌ಮೆಂಟ್ ಸಮುಚ್ಚಯದ ನಿವಾಸಿಗಳ ವಾಟ್ಸ್‌ಆ್ಯಪ್ ಗ್ರೂಪ್‌ನಲ್ಲಿ ಸಂದೇಶ ಕಳುಹಿಸಿದ್ದರು’ ಎಂದು ನಿವಾಸಿಯೊಬ್ಬರು ಹೇಳಿದರು.

‘ಸಂದೇಶ ನೋಡಿದ ಬಹುತೇಕರು, ಫ್ಲ್ಯಾಟ್‌ನಿಂದ ಹೊರಗೆ ಓಡಿ ಬಂದು ಪ್ರಾಣ ಉಳಿಸಿಕೊಂಡರು’ ಎಂದೂ ತಿಳಿಸಿದರು.

ಮಹಿಳೆಯೊಬ್ಬರು, ‘ಮನೆಯಿಂದಲೇ ಕಚೇರಿ ಕೆಲಸ ಮಾಡುತ್ತಿದ್ದೆ. ಜೋರು ಶಬ್ದ ಕೇಳಿದೆ. ಕೆಲಸ ಹೆಚ್ಚಿದ್ದರಿಂದ ಹೆಚ್ಚು ಗಮನ ಹರಿಸಲಿಲ್ಲ. ಕೆಲ ನಿಮಿಷಗಳಲ್ಲೇ ಕೊಠಡಿಗೆ ತಂದೆ ಓಡಿಬಂದರು. ಬೆಂಕಿ ಬಿದ್ದಿರುವುದಾಗಿ ಹೇಳಿ ಮನೆಯಲ್ಲಿದ್ದವರನ್ನೆಲ್ಲ ಹೊರಗೆ ಕರೆದುಕೊಂಡು ಬಂದರು’ ಎಂದರು.

ನಿವಾಸಿ ಲಕ್ಷ್ಮಣ, ‘ಫ್ಲ್ಯಾಟ್–210ರ ಬಳಿಯೇ ನಮ್ಮ ಫ್ಲ್ಯಾಟ್ ಇದೆ. ಬೆಂಕಿ ಕಂಡೊಡನೆ ಹೊರಗೆ ಬಂದೆವು. ನಮ್ಮ ಫ್ಲ್ಯಾಟ್‌ಗೆ ಏನಾಗಿದೆ ಎಂಬುದು ಗೊತ್ತಾಗಿಲ್ಲ. ಬುಧವಾರ ಬೆಳಿಗ್ಗೆ ಫ್ಲ್ಯಾಟ್‌ಗೆ ಹೋಗಿ ನೋಡಿ ಎಂದು ಅಗ್ನಿಶಾಮಕದಳದ ಸಿಬ್ಬಂದಿ ಹೇಳಿದ್ದಾರೆ’ ಎಂದರು.



ಅಗ್ನಿ ಅನಾಹುತ ನಡೆದ ಬೊಮ್ಮನಹಳ್ಳಿ ಬಳಿಯ ದೇವರಚಿಕ್ಕನಹಳ್ಳಿಯ ಆಶ್ರಿತ್ ಅಪಾರ್ಟ್‌ಮೆಂಟ್ ಇರುವ ಪ್ರದೇಶದ ನೋಟ –ಪ್ರಜಾವಾಣಿ ಚಿತ್ರಗಳು

ವಾಹನ ಹೋಗಲು ಜಾಗವಿರಲಿಲ್ಲ

ಬೆಂಕಿ ನಂದಿಸಲು ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಬಂದಿದ್ದರು. ಆದರೆ, ಘಟನಾ ಸ್ಥಳದ ಬಳಿ ವಾಹನ ಹೋಗಲು ಜಾಗವಿರಲಿಲ್ಲ. ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳದೇ ಕಟ್ಟಡ ನಿರ್ಮಾಣ ಮಾಡಿದ್ದ ಆರೋಪವೂ ಕೇಳಿಬರುತ್ತಿದೆ.

ಒಳನುಗ್ಗಿದ ಅಗ್ನಿಶಾಮಕ ಸಿಬ್ಬಂದಿ, ಪೊಲೀಸರು

ಅಪಾರ್ಟ್‌ಮೆಂಟ್ ಸಮುಚ್ಚಯದ ಹಲವೆಡೆ ಹೊಗೆ ಆವರಿಸಿತ್ತು. ಬೆಂಕಿ ಧಗ ಧಗ ಉರಿಯುತ್ತಿತ್ತು. ಇಂಥ ಸ್ಥಿತಿಯಲ್ಲೂ ಅಗ್ನಿಶಾಮಕ ದಳದ ಸಿಬ್ಬಂದಿ ಹಾಗೂ ಪೊಲೀಸರು, ಮೆಟ್ಟಿಲು ಹಾಗೂ ಕಿಟಕಿ ಮೂಲಕ ಒಳ ನುಗ್ಗಿದರು. ಫ್ಲ್ಯಾಟ್‌ನಲ್ಲಿ ಯಾರಾದರೂ ಸಿಲುಕಿದ್ದಾರಾ? ಎಂಬುದನ್ನು ಹುಡುಕಾಡಿದರು. ಫ್ಲ್ಯಾಟ್ 210ರಲ್ಲಿ ಮಾತ್ರ ಮೃತದೇಹಗಳು ಪತ್ತೆಯಾದವು.



ಅಗ್ನಿಶಾಮಕ ದಳದ ಸಿಬ್ಬಂದಿ ಮಂಗಳವಾರ ಬೆಂಕಿ ನಂದಿಸುವ ಕಾರ್ಯಾಚರಣೆಯಲ್ಲಿ ತೊಡಗಿದ್ದರು



ಅಪಾರ್ಟ್‌ಮೆಂಟ್ ನಿವಾಸಿಗಳು ಸುರಕ್ಷಿತ ಸ್ಥಳದಲ್ಲಿದ್ದರೂ ಮುಗಿಯದ ಆತಂಕ

‘ಕಾರಣ ಪತ್ತೆಗಾಗಿ ತನಿಖೆ’

‘ಅಡುಗೆ ಅನಿಲ ಸೋರಿಕೆಯಿಂದ ಅಥವಾ ವಿದ್ಯುತ್ ಶಾರ್ಟ್ ಸರ್ಕೀಟ್‌ನಿಂದ ಬೆಂಕಿ ಅವಘಡ ಸಂಭವಿಸಿರುವ ಅನುಮಾನವಿದೆ. ನಿಖರ ಕಾರಣವೇನು ಎಂಬುದನ್ನು ಪತ್ತೆ ಮಾಡಲು ತನಿಖೆ ಆರಂಭಿಸಲಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಬೆಂಕಿ ನಿಯಂತ್ರಣಕ್ಕೆ ಬಂದ ನಂತರ, ಫ್ಲ್ಯಾಟ್‌ನಲ್ಲಿ ಪರಿಶೀಲನೆ ನಡೆಸಲಾಗುವುದು. ಅಲ್ಲಿ ಸಿಗುವ ಅವಶೇಷ ಮಾದರಿ ಸಂಗ್ರಹಿಸಿ, ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗುವುದು. ಅದರ ವರದಿಯಿಂದ ಮಾಹಿತಿ ಸಿಗಲಿದೆ’ ಎಂದೂ ತಿಳಿಸಿದರು.

ಆನ್‌ಲೈನ್ ಜೂಜು ನಿಷೇಧ ಮಸೂದೆಗೆ ಒಪ್ಪಿಗೆ

ಬೆಂಗಳೂರು: ರಾಜ್ಯದಲ್ಲಿ ಆನ್‌ಲೈನ್ ಜೂಜು ಮತ್ತು ಬೆಟ್ಟಿಂಗ್ ನಿಷೇಧಿಸುವ ಕರ್ನಾಟಕ ಪೊಲೀಸ್ ತಿದ್ದುಪಡಿ ಮಸೂದೆ 2021 ಕ್ಕೆ ವಿಧಾನಸಭೆ ಮಂಗಳವಾರ ಅಂಗೀಕಾರ ನೀಡಿತು.

ಇಂದಿನ ಸವಾಲುಗಳನ್ನು ಸಮರ್ಥವಾಗಿ ನಿಭಾಯಿಸಲು ಇಂತಹ ಕಠಿಣ ಕಾನೂನಿನ ಅಗತ್ಯವಿದೆ ಎಂದು ಮಸೂದೆ ಮಂಡಿಸಿದ ಗೃಹ ಸಚಿವ ಆರಗ ಜ್ಞಾನೇಂದ್ರ ಪ್ರತಿಪಾದಿಸಿದರು.

ಹಲವು ರಾಜ್ಯಗಳಲ್ಲಿ ಈಗಾಗಲೇ ಆನ್‌ಲೈನ್ ಜೂಜು ಮತ್ತು ಬೆಟ್ಟಿಂಗ್ ಮೇಲೆ ನಿಷೇಧ ವಿಧಿಸಲಾಗಿದೆ ಎಂದು ಅವರು ವಿವರಿಸಿದರು.

ಮಸೂದೆಯ ಮೇಲಿನ ಚರ್ಚೆಯಲ್ಲಿ ಭಾಗವಹಿಸಿದ ಕಾಂಗ್ರೆಸ್‌ನ ರಿಜ್ವಾನ್ ಅರ್ಷದ್ ಮಾತನಾಡಿ, ವಿದೇಶಗಳಲ್ಲಿ ಸರ್ವರ್‌ಗಳನ್ನು ಇಟ್ಟುಕೊಂಡು ಇಂತಹ ವ್ಯವಹಾರ ನಡೆಸುತ್ತಿದ್ದಾರೆ. ಇವುಗಳ ಮೇಲೆ ಕಡಿವಾಣ ಹಾಕಬೇಕಾಗಿದೆ, ಇದಕ್ಕೆ ಪೂರಕವಾದ ತಂತ್ರಜ್ಞಾನವನ್ನು ಹೊಂದಬೇಕಾಗಿದೆ ಎಂದು ಹೇಳಿದರು.

- ಈಗಾಗಲೇ ಸುಗ್ರೀವಾಜ್ಞೆ ರೂಪದಲ್ಲಿರುವ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ಮಸೂದೆ 2021 ಕ್ಕೂ ವಿಧಾನಸಭೆ ಅಂಗೀಕಾರ ನೀಡಿತು.

ವಾಯು ಮಾಲಿನ್ಯ ನಿಯಂತ್ರಣ 10ರೊಳಗೆ ವರದಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ವಾಯುಮಾಲಿನ್ಯವನ್ನು ನಿಯಂತ್ರಿಸಲು ರೂಪಿಸಿರುವ ಕ್ರಿಯಾ ಯೋಜನೆಯ ವಿವರಗಳನ್ನು ಅಕ್ಟೋಬರ್ 10ರೊಳಗೆ ಸಲ್ಲಿಸಬೇಕು ಎಂದು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಕರ್ನಾಟಕ ಸೇರಿದಂತೆ ವಿವಿಧ ರಾಜ್ಯಗಳ ಮಾಲಿನ್ಯ ನಿಯಂತ್ರಣ ಮಂಡಳಿಗಳಿಗೆ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) ಸೂಚಿಸಿದೆ.

ರಾಷ್ಟ್ರೀಯ ಸ್ವಚ್ಛ ವಾಯು ಕಾರ್ಯಕ್ರಮವು (ಎನ್‌ಸಿಎಪಿ) ಎಲ್ಲ ನಗರಗಳಿಗೂ ಅನ್ವಯವಾಗಲಿದೆ. ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗಳು, ವಾಯುಮಾಲಿನ್ಯ ಪ್ರಮಾಣ ಏರಿಕೆ ತಡೆಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದೂ ಸೂಚಿಸಿತು.

ವಾಯು ಗುಣಮಟ್ಟವನ್ನು ಪರಿಣಾಮಕಾರಿಯಾಗಿ ಕಾಯ್ದುಕೊಳ್ಳಲು ಕೇಂದ್ರ ಸರ್ಕಾರವು 2018ರಲ್ಲಿ ರಾಷ್ಟ್ರೀಯ ಸ್ವಚ್ಛ ವಾಯು ಕಾರ್ಯಕ್ರಮ (ಎನ್‌ಸಿಎಪಿ) ಅನ್ನು ಪ್ರಕಟಿಸಿತ್ತು. ಅದರ ಪ್ರಕಾರ, ಮಾಲಿನ್ಯ ಪ್ರಮಾಣ ಹೆಚ್ಚಿದೆ ಎಂದು ಗುರುತಿಸಲಾದ 132 ನಗರಗಳಲ್ಲಿ ಮಾಲಿನ್ಯ ನಿಯಂತ್ರಿಸಲು ಮಂಡಳಿಗಳು ಅಗತ್ಯ ಕ್ರಮವನ್ನು ವಹಿಸಬೇಕಾಗಿದೆ.



ಸ್ವಾತಂತ್ರ್ಯ ಉದ್ಯಾನವನದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದ ಗುತ್ತಿಗೆ ನೌಕರರು
ಪ್ರಜಾವಾಣಿ ಚಿತ್ರ

ನೇರ ವೇತನಕ್ಕೆ ಆಗ್ರಹಿಸಿ ಗುತ್ತಿಗೆ ನೌಕರರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗುತ್ತಿಗೆ ಪದ್ಧತಿ ಬದಲು ಪೌರ ಕಾರ್ಮಿಕರ ಮಾದರಿಯಲ್ಲಿ ನೇರ ವೇತನಕ್ಕೆ ಒಳಪಡಿಸುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ನಗರಪಾಲಿಕೆ, ನಗರ ಸಭೆ, ಪುರಸಭೆ, ಪಟ್ಟಣ ಪಂಚಾಯಿತಿ ಹೊರಗುತ್ತಿಗೆ ನೌಕರರು ನಗರದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

ರಾಜ್ಯದ ವಿವಿಧೆಡೆಯಿಂದ ಬಂದಿದ್ದ ನೌಕರರು, ಸ್ವಾತಂತ್ರ್ಯ ಉದ್ಯಾನದಲ್ಲಿ ಧರಣಿ ನಡೆಸಿ ಸರ್ಕಾರದ ವಿರುದ್ಧ ಘೋಷಣೆ ಮೊಳಗಿಸಿದರು.

ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ತ್ಯಾಜ್ಯ ಸಾಗಿಸುವ ವಾಹನ ಚಾಲಕರು, ನೀರಗಂಟಿ, ಡೆಟಾ ಎಂಟ್ರಿ ಆಪರೇಟರ್, ಯುಜಿಡಿ ಕಾರ್ಮಿಕರು ಮತ್ತು ಸಹಾಯಕರಿಗೆ ಸಕಾಲಕ್ಕೆ ಕನಿಷ್ಠ ವೇತನ ಸಿಗುತ್ತಿಲ್ಲ. ಹೊರ ಗುತ್ತಿಗೆ ಹೆಸರಿನಲ್ಲಿ ಸರ್ಕಾರಿ ಜೀತಕ್ಕೆ ಕಾರ್ಮಿಕರನ್ನು ಸಿಲುಕಿಸಲಾಗಿದೆ ಎಂದು ಪ್ರತಿಭಟನಕಾರರು ಆಕ್ರೋಶ ವ್ಯಕ್ತಪಡಿಸಿದರು.

‘ವಿಶೇಷ ನೇಮಕಾತಿ ಯೋಜನೆಯಡಿ 2017ರಲ್ಲಿ ಪೌರ ಕಾರ್ಮಿಕರನ್ನು ಕಾಯಂಗೊಳಿಸಲಾಯಿತು. ಆದರೆ, ಅವರೊಟ್ಟಿಗೆ ಕೆಲಸ ಮಾಡುವ ಈ ನೌಕರರನ್ನು ಗಮನಿಸಲಿಲ್ಲ. ಸಕಾಲಕ್ಕೆ ಕನಿಷ್ಠ ವೇತನ ಮತ್ತು ಭವಿಷ್ಯ ನಿಧಿ ನೀಡದೆ ಗುತ್ತಿಗೆ ಏಜೆನ್ಸಿಗಳು ವಂಚಿಸುವುದು ಸರ್ವೆ ಸಾಮಾನ್ಯವಾಗಿದೆ. ಈ ಬಗ್ಗೆ ಪ್ರಶ್ನಿಸುವ ನೌಕರರಿಗೆ ಇನ್ನಿಲ್ಲದ ಕಿರುಕುಳ ನೀಡಿ ಕೆಲಸದಿಂದ ಕೈಬಿಡಲಾಗುತ್ತಿದೆ’ ಎಂದು ದೂರಿದರು.


‘ಈ ನೌಕರರಿಗೆ ನ್ಯಾಯ ಸಿಗಬೇಕೆಂದರೆ ನೇರ ವೇತನ ಜಾರಿಗೊಳಿಸುವುದು ಅಗತ್ಯ. ತಲಾ 500 ಜನಸಂಖ್ಯೆಗೆ ಒಬ್ಬರಂತೆ ಪೌರ ಕಾರ್ಮಿಕರನ್ನು ನಿಯೋಜಿಸಿ ಬಾಕಿ ಉಳಿಯುವ ಪೌರ ಕಾರ್ಮಿಕರ ಹುದ್ದೆಗಳಿಗೆ ಎರಡನೇ ಹಂತದ ನೇರ ನೇಮಕಾತಿ ಮಾಡಿಕೊಳ್ಳಬೇಕು’ ಎಂದು ಹೊರ ಗುತ್ತಿಗೆ ನೌಕರರ ಸಂಘದ ಅಧ್ಯಕ್ಷ ಎಂ.ಬಿ. ನಾಗಣ್ಣಗೌಡ ಒತ್ತಾಯಿಸಿದರು.

‘ನಗರ ಸ್ಥಳೀಯ ಸಂಸ್ಥೆಗಳ ಹೊರ ಗುತ್ತಿಗೆ ನೌಕರರಿಗೂ ಗೃಹಭಾಗ್ಯ ಮಾದರಿಯ ವಸತಿ ಯೋಜನೆ ವಿಸ್ತರಿಸಬೇಕು’ ಎಂದು ಆಗ್ರಹಿಸಿದರು.

ಚಾರ್ಟರ್ಡ್ ಸಹಕಾರಿ ಬ್ಯಾಂಕ್‌ಗೆ ₹ 7.51 ಕೋಟಿ ಲಾಭ

ಬೆಂಗಳೂರು: ನಗರದ ಚಾರ್ಟರ್ಡ್ ಸಹಕಾರಿ ಬ್ಯಾಂಕ್ ಮಾರ್ಚ್ 31ಕ್ಕೆ ಕೊನೆಗೊಂಡ ಆರ್ಥಿಕ ವರ್ಷದಲ್ಲಿ ಒಟ್ಟು ₹ 7.51 ಕೋಟಿ ಲಾಭ ಗಳಿಸಿದೆ.

ಬ್ಯಾಂಕ್‌ನ ಠೇವಣಿ ಸಂಗ್ರಹವು ₹ 234 ಕೋಟಿ ಇದ್ದು, ಒಟ್ಟು ₹ 161 ಕೋಟಿಯನ್ನು ಸಾಲವಾಗಿ ನೀಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.





ವಾಣಿಜ್ಯ ಉತ್ಸವದಲ್ಲಿ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಸಲಹೆ

‘ಕೃಷಿ ಉತ್ಪನ್ನ ರಫ್ತಿಗೆ ಪ್ರತ್ಯೇಕ ಕೋಶ ಅಗತ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷಿ ಮತ್ತು ತೋಟಗಾರಿಕೆ ಉತ್ಪನ್ನಗಳ ರಫ್ತಿಗೆ ಕೈಗಾರಿಕೆ ಇಲಾಖೆಯಿಂದ ಪ್ರತ್ಯೇಕ ಕೋಶ ತೆರೆಯುವ ಅಗತ್ಯವಿದೆ ಎಂದು ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವೆ ಶೋಭಾ ಕರಂದ್ಲಾಜೆ ತಿಳಿಸಿದರು.

75ನೇ ಸ್ವಾತಂತ್ರ್ಯೋತ್ಸವದ ನೆನಪಿನ ಆಜಾದಿ ಕಾ ಅಮೃತ್ ಮಹೋತ್ಸವದ ಅಂಗವಾಗಿ ಆಯೋಜಿಸಿದ್ದ ವಾಣಿಜ್ಯ ಉತ್ಸವದಲ್ಲಿ ಅವರು ಮಾತನಾಡಿದರು.

‘ಐಟಿ, ಬಿಟಿ ವಲಯದ ಬಗ್ಗೆ ಕೈಗಾರಿಕಾ ಇಲಾಖೆ ಹೆಚ್ಚು ಗಮನ ಹರಿಸುತ್ತಿದೆ. ಕೃಷಿ ಮತ್ತು ತೋಟಗಾರಿಕಾ ಉತ್ಪನ್ನಗಳ ರಫ್ತಿಗೂ ಆದ್ಯತೆ ನೀಡಬೇಕು. ಆಹಾರ ಸಂಸ್ಕರಣೆ ಮತ್ತು ಮೌಲ್ಯವರ್ಧನೆ ಮಾಡಿದರೆ ದೇಶ ಮತ್ತು ಹೊರ ದೇಶಗಳ ಮಾರುಕಟ್ಟೆಗಳಲ್ಲಿ ರಾಜ್ಯದ ಕೃಷಿ ಉತ್ಪನ್ನಗಳಿಗೆ ಬೇಡಿಕೆ ಬರಲಿದೆ’ ಎಂದರು.



ಶೋಭಾ ಕರಂದ್ಲಾಜೆ

ಕೃಷಿ ಪ್ರಧಾನ ರಾಷ್ಟ್ರವಾದ ಭಾರತದಲ್ಲಿ 135 ಕೋಟಿ ಜನರಿಗೆ ಸಾಕಾಗುವಷ್ಟು ಮಾತ್ರವಲ್ಲ ರಫ್ತು ಮಾಡುವಷ್ಟು ಸಾಧ್ಯವಾಗುತ್ತಿದೆ. ಆಹಾರ ಉತ್ಪಾದನೆಯಾಗುತ್ತಿದೆ. ಆಹಾರ ಉತ್ಪಾದಿಸದ ದೇಶಗಳಿಗೆ ರಫ್ತು ಮಾಡಲು ಹೆಚ್ಚು ಅವಕಾಶ ಇದೆ. ಅದಕ್ಕೆ ಬೇಕಿರುವ ಸೌಲಭ್ಯಗಳನ್ನು ರೈತರು ಸಂಘಟಿತರಾಗಿ ಮಾಡಿಕೊಳ್ಳಬೇಕು ಎಂದರು.

‘ಜಾಗತಿಕವಾಗಿ ಉತ್ತಮ ವ್ಯಾಪಾರ ಸಂಬಂಧ ಕಾಯ್ದುಕೊಂಡಿರುವ ಕರ್ನಾಟಕವು ಕಾಫಿ, ಸಾಂಬಾರು ಪದಾರ್ಥಗಳು, ರೇಷ್ಮೆ, ಗಂಧದಎಣ್ಣೆ, ಕರಕುಶಲ ವಸ್ತುಗಳಿಗೆ ಹಿಂದಿನಿಂದಲೂ ಹೆಸರುವಾಸಿಯಾಗಿದೆ. ಇತ್ತೀಚಿನ ವರ್ಷಗಳಲ್ಲಿ ಎಂಜಿನಿಯರಿಂಗ್ ಸರಕುಗಳು, ಸಿದ್ಧ ಉಡುಪುಗಳು, ಚರ್ಮದ ಸರಕು, ರಾಸಾಯನಿಕಗಳು, ಖನಿಜ ಮತ್ತು ಅದಿರುಗಳ ರಫ್ತಿನಲ್ಲಿ ಪ್ರಮುಖ ಸ್ಥಾನ ಪಡೆದಿದೆ. ಇದರ ಜತೆಗೆ, ಕೃಷಿ ಉತ್ಪನ್ನಗಳ ರಫ್ತಿಗೆ ಉದ್ಯಮಿಗಳು ಹೆಚ್ಚಿನ ಆದ್ಯತೆ ನೀಡಬೇಕು’ ಎಂದು ಮನವಿ ಮಾಡಿದರು.

ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಜಂಟಿ ಕಾರ್ಯದರ್ಶಿ ದರ್ಶನ್ ಜೈನ್, ‘ರಫ್ತು ಹೆಚ್ಚಳಕ್ಕೆ ಇರುವ ಅವಕಾಶ ಮತ್ತು ಸವಾಲುಗಳ ಬಗ್ಗೆ ಚರ್ಚಿಸಲು ಮತ್ತು ಪರಿಹಾರ ಮಾರ್ಗಗಳನ್ನು ಕಂಡುಕೊಳ್ಳಲು ಈ ಉತ್ಸವ ಆಯೋಜಿಸಲಾಗಿದೆ. ಅಧಿಕಾರಿಗಳಷ್ಟೇ ಅಲ್ಲದೆ ಉದ್ಯಮಿಗಳೂ ಅಧಿವೇಶನಗಳನ್ನು ಮುನ್ನಡೆಸಲಿದ್ದಾರೆ. ಎರಡು ದಿನದ ಈ ಉತ್ಸವದಲ್ಲಿ ಬುಧವಾರ ಕೃಷಿ ಉತ್ಪನ್ನಗಳ ರಫ್ತಿನ ಕುರಿತು ಹೆಚ್ಚಿನ ಚರ್ಚೆ ನಡೆಯಲಿದೆ’ ಎಂದು ತಿಳಿಸಿದರು.

‘ರೈತರ ಜತೆ ಮಾತುಕತೆಗೆ ಸಿದ್ಧ’

‘ದೆಹಲಿಯಲ್ಲಿ ಚಳವಳಿ ನಡೆಸುತ್ತಿರುವ ರೈತರ ಜತೆ ಸರ್ಕಾರ ಈಗಾಗಲೇ 11 ಬಾರಿ ಮಾತುಕತೆ ನಡೆಸಿದ್ದು, ಮುಂದೆಯೂ ಮಾತುಕತೆಗೆ ಸಿದ್ಧವಿದೆ’ ಎಂದು ಸಚಿವೆ ಶೋಭಾ ಕರಂದ್ಲಾಜೆ ಹೇಳಿದರು.

‘ಯಾವುದೇ ಸಮಸ್ಯೆ ಇದ್ದರೂ ಪರಸ್ಪರ ಮಾತುಕತೆ ಮೂಲಕ ಬಗೆಹರಿಸಲು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಅವಕಾಶ ಇದೆ. ನಿಜವಾದ ರೈತರಾದರೆ, ಸಮಸ್ಯೆ ಬಗೆಹರಿಯಬೇಕು ಎಂಬ ಇಚ್ಛೆ ಇದ್ದರೆ ಸರ್ಕಾರದ ಜತೆ ಮಾತುಕತೆಗೆ ಬರಬಹುದು’ ಎಂದರು.

‘ಅವರು ನಿಜವಾದ ರೈತರೇ ಅಥವಾ ಬೇರೆ ಏನಾದರೂ ಇದೆಯೇ ಎಂಬುದರ ಬಗ್ಗೆ ನಾನು ಹೆಚ್ಚೇನೂ ಮಾತನಾಡುವುದಿಲ್ಲ’ ಎಂದು ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಥಲಸ್ಸೇಮಿಯಾ ರೋಗಕ್ಕೆ ಸಿಗದ ಔಷಧ: ಪಿಐಎಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಥಲಸ್ಸೇಮಿಯಾ ರೋಗಿಗಳಿಗೆ ಜೀವರಕ್ಷಕವಾಗಿರುವ ‘ಚೆಲೇಷನ್’ ಔಷಧವನ್ನು ಉಚಿತವಾಗಿ ಪೂರೈಸಲು ನಿರ್ದೇಶನ ನೀಡುವಂತೆ ಕೋರಿ ಸಲ್ಲಿಸಲಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಆಧರಿಸಿ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನೋಟಿಸ್ ನೀಡಿದೆ.

ಥಲಸ್ಸೇಮಿಯಾ ಎಂಬುದು ರಕ್ತ ಪರಿಚಲನೆ ಸಮಸ್ಯೆಯಿಂದ ಉಂಟಾಗುವ ಅಂಗವೈಕಲ್ಯವಾಗಿದ್ದು, ‘ಇದಕ್ಕೆ ಅಗತ್ಯವಾಗಿ ಬೇಕಾದ ‘ಚೆಲೇಷನ್’ ಎಂಬ ಔಷಧ ಸರ್ಕಾರಿ ಆಸ್ಪತ್ರೆಗಳಲ್ಲಿ ಲಭ್ಯ ಇಲ್ಲದೆ ರೋಗಿಗಳು ಪರದಾಡುತ್ತಿದ್ದಾರೆ.

‘ರೋಗಿಗಳಿಗೆ ಪದೇ ಪದೇ ರಕ್ತ ಬದಲಾವಣೆ ಮಾಡಬೇಕಾಗುತ್ತದೆ. ಪುನರಾವರ್ತಿತ ರಕ್ತ ಬದಲಾವಣೆಯಿಂದ ರಕ್ತದಲ್ಲಿ ಕಬ್ಬಿಣದ ಅಂಶ ಸಂಗ್ರಹವಾಗುತ್ತದೆ. ಆ ಹೆಚ್ಚುವರಿ ಕಬ್ಬಿಣದ ಅಂಶವನ್ನು ದೇಹದಿಂದ ಹೊರ ಹಾಕುವ ಕೆಲಸವನ್ನು ಈ ‘ಚೆಲೇಷನ್’ ಎಂಬ ದುಬಾರಿ ಔಷಧ ಮಾಡುತ್ತದೆ’ ಎಂದು ಅರ್ಜಿದಾರರು ತಿಳಿಸಿದ್ದಾರೆ.

‘ಈ ಔಷಧ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಲಭ್ಯವಿತ್ತು. ಈಗ ಪೂರೈಕೆ ನಿಲ್ಲಿಸಲಾಗಿದೆ. ಕೋವಿಡ್ ಆರಂಭವಾದ ನಂತರ ಈ ಔಷಧ ತರಿಸಲು ಅಧಿಕಾರಿಗಳು ಯಾವುದೇ ಕ್ರಮ ಕೈಗೊಂಡಿಲ್ಲ. ರಾಜ್ಯದಲ್ಲಿ ಸುಮಾರು 17 ಸಾವಿರ ರೋಗಿಗಳಿದ್ದಾರೆ. ಔಷಧ ಉಚಿತವಾಗಿ ಸಿಗದೆ ರೋಗಿಗಳು ತೊಂದರೆ ಅನುಭವಿಸುತ್ತಿದ್ದಾರೆ. ಮಾರುಕಟ್ಟೆಯಲ್ಲಿ ಈ ಔಷಧದ ಬೆಲೆ ₹1,000 ದಿಂದ ₹1,500 ಇದೆ’ ಎಂದು ವಿವರಿಸಿದ್ದಾರೆ.

‘ಎಲ್ಲ ರೋಗಿಗಳಿಗೂ ಉಚಿತವಾಗಿ ಔಷಧ ಪೂರೈಸಬೇಕು ಮತ್ತು ಅಂಗವಿಕಲ ಪ್ರಮಾಣ ಪತ್ರ ವಿತರಿಸಲು ನಿರ್ದೇಶನ ನೀಡಬೇಕು’ ಎಂದು ಮನವಿ ಮಾಡಿದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

ST SOPHIA'S International School ,Nagarabhavi, requires Experienced Female Marketing Manager,NurseryTeacher.Hindi,English and Science teachers for Primary&High School principal@stsophiaconvent.org Contact:9243031872

KNS INSTITUTE OF TECHNOLOGY
Hegde Nagar, Kogilu Road, Tirumenahalli, Yelahanka, B'lore - 64
APPLICATIONS INVITED FOR PROFESSORS / ASSOCIATE PROFESSORS / ASSISTANT PROFESSORS
- Electronics & Communication Engg
- Computer Science & Engg
- Information Science & Engg
- Civil Engineering, Mathematics
- Mechanical Engineering

Qualification, Experience & Salary As per AICTE norms.

Technical / Administrative Staff :
- Asst Administrative officer
- Placement Officer • Librarian
- Hostel Warden (Good experience in engineering college)
- Programmers & Instructors in the above Departments.

Please mail your CV within 7 days to: knsit.hr@gmail.com / career@knsit.com www.knsit.com Ph: 080-28567358

SIDDAGANGA SREE SHIVAKUMARA SWAMIJI VIDYA PEETHA TRUST, #1, 1st Stage, 2nd Phase,Chandra Layout, Bengaluru-560072. Ph:080-23397600 invites application for I.SSK PU College: 1) Part time Lecturer in Economics MA, B.Ed/M.Ed II.SSK PU & Degree College: 1) Physical Instructor– B.P.Ed/M.P.Ed 2) Librarian– B.Lib/M.Lib Science III.Siddaganga Public School, Chandra Layout/ Vijayanagara 1) Mathematics Teacher- M.Sc, B.Ed 2) Science Teacher- M.Sc, B.Ed 3) Social Science Teacher M.A, B.Ed 4) English Teacher- M.A, B.Ed 5) EVS Teacher- B.Sc, B.Ed 6) Hindi Teacher- M.A, B.Ed 7) Drawing Teacher- BFA/MFA 8) Kannada Teacher-BA/M.A, B.Ed 9) Computer Teacher- BCA/MCA/BE 10) Office Assistants- B.Com with Tally ERP 9, Kannada Typing. 11) Receptionist- Any degree with computer knowledge Interview through offline/online date will be intimated. Interested Candidates may send their resume, Service & Salary certificates & Testimonials to the Email: sskvptrust.2001@gmail.com personally submit the above details to Trust office on or before 25th September 2021 between 9.00am to 4.00pm.

WANTED ENGLISH MEDIUM TRAINED LADY TEACHERS B.A., B.Ed to teach English/ Social for Primary Section, B.Sc Computer Science- Full time/ Part time. Lady Graduates Interested in teaching can also apply. Contact in person (10.00 am-3.00 pm on all working days) - Secretary, Deccan Educational Society, No.95, 3rd Cross, Srirampuram, Bengaluru - 560021 (Near Sampige Theater, Malleswaram).

REQUIRED TEACHERS for Maths, Science, Kannada, English,Hindi and Computer from Nursery to 10th standard. Dedicated, fluent in English, Knowledge of Computers and Enthusiastic Teachers are Well-appreciated. GNANA GANGOTHRI VIDYALAYA, 7th Cross, 7th Main, Ittamadu, B.S.K-3rd Stage, Bengaluru-85.

GURUKULA INTERNATIONAL School requires English, Maths, Hindi Teachers for Primary and Maths Teacher for High School, Near Magadi Road, Metro Station, Bangalore-23. 7829338292 7676676629

WANTED TEACHERS high school, All subjects. Contact: Carmel School Garvebhavipalya, Hosur Road, Bangalore. Phone: 9900872744.

IMMEDIATELY REQUIRED Commerce Faculty for a Reputed PU College Near Yelahanka. Contact: 9738719365 or hrmvs1992@gmail.com

Janatha Education Society's
VIVEKANANDA EDUCATIONAL INSTITUTIONS
JOB OPPORTUNITIES

VIVEKANANDA INSTITUTE OF TECHNOLOGY
Kumbalagodu, Bengaluru-74
PROFESSOR: Civil | Mechanical | AI&ML
ASSOCIATE PROFESSOR: Civil | CSE | E&C | I&S | Mechanical | AI&ML
ASSISTANT PROFESSOR: Civil | CSE | E&C | I&S | Mech | AI&ML | English
Qualification – As per AICTE norms
PLACEMENT OFFICER: MBA in HRM with Min. 5 years exp. - 2 posts
LAB ASSISTANT: Civil | CSE - Qual: Diploma
OFFICE STAFF: Admin-Exam section|PA to Principal-Graduate|Secretarial Course

VIVEKANANDA COLLEGE OF PHARMACY
Rajajinagar, Bengaluru-55
ASSISTANT PROFESSOR: Pharmacology (2)- M.Pharm in Pharmacology /Pharmacy Practice/ Pharm-D with 1st Class

VIVEKANANDA DEGREE COLLEGE
ASSISTANT PROFESSOR: Economics | Commerce | Mathematics
Qualification: Masters with Min 55% & NET/Ph.D.
Physical Education Director: M.P.Ed with Min 55% - 2 posts
(1-Female candidate for Vivekananda Degree College for Women)

VIVEKANANDA PU COLLEGES
LECTURER: English | Economics | Computer Science | Mathematics | Biology
Qualification: Masters with B.Ed - Min. 2 Years Experience

VIVEKANANDA SCHOOLS Main Campus
ASSISTANT MISTRESS/MASTER – Mathematics|English|Social Science - Degree/Masters with B.Ed
ASSISTANT MISTRESS: KINDERGARTEN–SSLC/PUC/Degree with NTT Cert.
VKIT Campus, Kumbalagodu, Bengaluru-74
Hindi Teacher: Primary School- Hindi B.Ed Computer Teacher –BCA
ASSISTANT MISTRESS/MASTER – B.Sc/M.Sc with B.Ed (Mathematics)

Eligible candidates may send their BIODATA along with 2 passport size photos to the Hon. Secretary to reach him within 10 days by post
Dr.Rajkumar Road, Next to Orion Mall, 2nd stage, Rajajinagar, Bengaluru-55
Contact : 080-23371952 Mail: jobs@jes-edu.in
H.C. Balakrishna, Hon. President Dr. C.N. Manche Gowda, Hon. Secretary

R R EDUCATIONAL TRUST®
IMPERIAL GROUP OF INSTITUTIONS
(Recg by Govt of Karnataka, PU Board, Bangalore University & AICTE)
Salahunase, Udayapura P.O, Kanakapura Main Road, Bengaluru-560082
Invites Application for the posts as under

Colleges	Doctorates/ Professors/ Asst. Professors for Commerce Stream Pre-University College, Degree College, MBA
Schools	Experienced Qualified B.Ed.Teachers - All subjects for Primary School, High School. Trained Montessori Adults for Montessori School. B.P.Ed.-Phy.Education
Administration (WALK-IN Any Day)	Librarian- M.Lib.Sc./ B.Lib.sc; Library Assistants- D.Lib.Sc; System Administrator-MCA; Accountant- Tally, Ms-office

Interested Candidates may forward Resume to iiamblr.hr@gmail.com or Contact : 7843709714
Candidates Pursuing B.Ed, Ph.D, may also apply

KENNETH GEORGE SCHOOL, Require High School Teachers, R.T.Nagar Branch- Computer & Social, Kempapura Branch- English & Hindi, 9980671934/ 9663398209, kennethgeorgeschool@gmail.com

Drivers

OLDER DRIVER Wanted for Elderly Kerala couple on Kasturba Cross Road, very light work, must have very good references. Call: 9448365665.

Engg/ Production Technical

SHEET METAL FABRICATION INDUSTRY IN BENGALURU Requires following personnel: 1) DRAUGHTSMAN- Diploma/ BE (Mechanical) knowledge of Solidworks, 3/4 years experience. 2) SHEET METAL FABRICATION ENGINEER- ITI/ Diploma/ BE (Mechanical) 4/5 years experience in Metal fabrication for machines. 3) MILLING M/C OPERATOR -3/4 year experience. 4) ADMIN: PUC/ Degree with Tally knowledge, 2/3 years experience. Contact: 8970070088/ 9844520035/ 55

SUPERVISOR PRODUCTION QUALIFICATION: BE/ DME Experience: 5- 6 Years in similar capacity. Hands-on experience in conventional M/c's, knowledge in CNC, lathe & VMC Programming, Setting, Engineering drawing, CAD, leadership qualities, Computer & Documentation. (2) JUNIOR ELECTRICAL ENGINEER: Qualification: B.E. EEE. Practical Experience in Electrical Assembly Techniques. (3) QUALITY CONTROL. Qualification: B.E/ DME Experience: 5 years in Quality (PPAP/NCI processes for Automotive or Comparable Industries) Contact: 'dC Auto Parts Pvt Ltd'., A-267, 6th main, Peenya 2nd stage, Bangalore-58 Phone: 080-68162401, 7676413182 Email: autoparts@dcprecise.com

WANTED EXPERIENCED SITE ENGINEER, SITE SUPERVISOR work at GOA (Food, Accommodation Provided) KGN BUILDERS- 7338226554

General

WANTED SALES Executive Petroleum Products Salary Rs 35000/- on Target + Incentive & Apartment Maintenance Supervisor Diploma In Civil Salary 20000/- + Incentive Call:7338084555 6366028889 Mail glprojects7889@gmail.com

"WANTED OFFICE-EXECUTIVE with-good communication/ computer-skills for-a manufacturing company-at Bommanahalli, Bangalore-68. Any-Graduate min-2yrs-exp, Age-limit: within-35yrs. Salary-Rs.25,000p.m. Send-CV-to: uppbangalore@gmail.com/ Contact: 9449817703"

FULFILL YOUR dreams/ desires with a Corporate which looks for NRIs,Ex-Bankers, State/Central VRS,Unemployed Teachers Educated Housewives with flexible timings.Benefits: Fixed salary,flexible timings, PF+ESI, Unlimited Incentives.Call:8660526113.

WANTED FOR Reputed Company, Graduates Age- 30-70, Bangalore only, Earn: 30,000- 50,000. Contact: 9008305194/ 9880441530.

FREE TRAINING for Interior Decoration in House and Office SSLC for details Contact: 8660514834, 9342410224

OPPORTUNITY FOR Retd Officials, Bankers, VRS, NRI, Teachers, Professionals, CAs. Earn Salary + Incentives. CT: 8095301555

Marketing & Sales

44 YEAR old Bangalore ENGINEERING SALES COMPANY, Fraser Town dealing with multiple imported products like Fuel. Oil Transfer and Adblue Dispensers and Meters. Propellor Shafts, Railway Brake Cables, Slewing Rings and Spare Parts needs TECHNICAL SALES OFFICER, 40 to 45 years. To be technically and commercially experienced with ability to meet Senior OEM officials and Dealers, make presentations, close business, generate new business, prepare targets. Know Word, Excel, Power Point. Report to Sales Manager. Job involves travelling across India. Salary Rs.19,000 to 25,000 plus 2-wheeler allowance. Apply with details to: officestaffblr@gmail.com

WANTED MARKETING Executives For Private Limited Company Bangalore, Age Below 40 Years with Good Communication Skill Fluent In English, Kannada, Hindi Contact: 9108458798/ 23384085

Multiple Vacancy

REQUIRED IMMEDIATELY HR, Administration, Manager, Accounts, Supervisor, technical Mechanical, Electronics, Electrical, Computer Engineers -7676760299/ 7676760399

Part-Time Jobs

LIMITED MNC COMPANY Lost Job, Provide Work From Home Earn 30K to35K: 7019215243/ 9886641282

Wanted

WANTED
An Indo American Collaboration Private Ltd Company engaged in Manufactures of Tools and Moulded Parts located in Peenya 2nd Stage, near bus stop, Bengaluru looking for the following Job Vacancies.

MACHINE OPERATOR TRAINEE (20 Members)
QUALIFICATION: ITI Passed Puc Passed Diploma Passed

ACCOUNTS EXECUTIVE (1 Vacancy)
QUALIFICATION: B.Com Pass with 3 Yrs Experience with GST Compliance.

Contact: 9972568563 9972021293
Email: accounts@srpblr.in
Post Box No. 5821

WANTED FEMALE DTP Operators, Kannada (Shree Lipi) and English with Documentation Skills Contact: 9740357694/ 9731945880

JOBS FOR-WOMEN (Reliance)Age above 30yrs (Degree) Fixed Salary 18k to 23k, PF+ESI Malleswaram: 9343349670

PUBLIC NOTICE

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾಮಾನ್ಯ ಸಾರ್ವಜನಿಕರಿಗೆ ತಿಳಿಸುವುದು ಏನೆಂದರೆ, ನನ್ನ ಕಕ್ಷಿದಾರರು ಇಲ್ಲಿ ಕೆಳಗೆ ನಮೂದಿಸಲಾಗಿರುವ ಷೆಡ್ಯೂಲ್ ಸ್ವತ್ತನ್ನು ಅದರ ಮಾಲಿಕರಾಗಿರುವ ಚಿತ್ರದುರ್ಗ ಜಿಲ್ಲೆಯ ನಿವಾಸಿಗಳಾದ 1) ಶ್ರೀ. ಡಿ.ಹೆಚ್.ಅನಂತರೆಡ್ಡಿ ಬಿನ್ ದೊಡ್ಡಮನೆ ಹನುಮಪ್ಪ 2) ಶ್ರೀಮತಿ. ಎಂ. ಟಿ. ಲಲಿತಮ್ಮ ಕೋಂ. ಡಿ. ಹೆಚ್.ಅನಂತರೆಡ್ಡಿ 3 ಶ್ರೀ. ಹೆಚ್. ಎ. ರವಿ ಬಿನ್ ಡಿ. ಹೆಚ್. ಅನಂತರೆಡ್ಡಿ, ಶ್ರೀ ಲಕ್ಷ್ಮೀ ನರಸಿಂಹಸ್ವಾಮಿ ನಿಲಯ, ವೇಮನ ನಗರ, ಚಳ್ಳಕೆರೆ ಟೋಲ್ ಗೇಟ್, ಚಿತ್ರದುರ್ಗ– 577501, ಇವರುಗಳಿಂದ ಖರೀದಿಸಲು ಉದ್ದೇಶಿಸಿರುತ್ತಾರೆ. ಹೀಗೆ ಖರೀದಿಸಲು ಉದ್ದೇಶಿಸಲಾಗಿರುವ ಷೆಡ್ಯೂಲ್ ಸ್ವತ್ತಿಗೆ ಅಥವಾ ಷೆಡ್ಯೂಲ್ ಸ್ವತ್ತಿನ ಭಾಗಕ್ಕೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಗಾಗಲಿ, ವಿಭಜಿತ ಅಥವಾ ಅವಿಭಜಿತ ಕುಟುಂಬಕ್ಕಾಗಲಿ, ಕಂಪನಿ, ಬ್ಯಾಂಕ್, ಹಣಕಾಸು ಸಂಸ್ಥೆ, ಬ್ಯಾಂಕಿಂಗೇತರ ಹಣಕಾಸು ಸಂಸ್ಥೆ ಗಳಿಗಾಗಲಿ, ಅನುಸ್ಥಾಪಿತ ಅಥವಾ ಅನುಸ್ಥಾಪಿತವಲ್ಲದ ವ್ಯಕ್ತಿಗಳ ಸಂಘಕ್ಕಾಗಲಿ ಅಥವಾ ವ್ಯಕ್ತಿಗಳ ಅಂಗ ಸಂಸ್ಥೆಗಾಗಲಿ, ಲೇವಾ ದೇವಿದಾರರಿಗಾಗಲಿ ಮತ್ತು/ಅಥವಾ ಸಾಲಗಾರರಿಗಾಗಲಿ, ಮಾರಾಟ, ಮೆಮೊರ್‍ಯಾಂಡಮ್ ಆಫ್ ಅಂಡರ್‌ಸ್ಟಾಂಡಿಂಗ್, ವಿನಿಮಯ, ಅಡಮಾನ, ಚಾರ್ಜ್, ಉಡುಗೊರೆ, ಟ್ರಸ್ಟ್, ಅನುವಂಶಿಕ, ಸಕ್ಸೆಶನ್, ಸ್ವಾಧೀನ, ಭೋಗ್ಯ, ಚೆನನ್ನಿ, ಮೈಂಟೇನನ್ಸ್ ಈಸ್‌ಮೆಂಟ್, ಲೈಸನ್ಸ್, ಬಿಕ್ವೆಥ್, ಪಾಲು, ಅಸೈನ್‌ಮೆಂಟ್, ಲೀನ್, ಅಟ್ಯಾಚ್ ಮೆಂಟ್, ಅಭಿವೃದ್ಧಿ ಹಕ್ಕುಗಳು, ಲಿಸ್ಪೆಂಡೆನ್ಸ್ ಹಕ್ಕು, ಮೀಸಲಾತಿ, ಒಡಂಬಡಿಕೆ, ಎಫ್‌ಎಸ್‌ಐ ಕನ್ಸೂಪ್ಶನ್, ಹೊಣೆಗಾರಿಕೆ ಅಥವಾ ಬದ್ಧತೆ ಅಥವಾ ಡಿಮಾಂಡ್ ಮಾದರಿಯಲ್ಲಿ, ಸದರಿ ಷೆಡ್ಯೂಲ್ ಸ್ವತ್ತಿಗೆ ಅಥವಾ ಷೆಡ್ಯೂಲ್ ಸ್ವತ್ತಿನ ಭಾಗಕ್ಕೆ ಸಂಬಂಧಿಸಿದಂತೆ ಯಾವುದೇ ಸ್ವರೂಪದ ಆಕ್ಷೇಪಣೆ, ಕ್ಲೇಮ್, ಹಕ್ಕು, ಬಾಧ್ಯತೆ ಮತ್ತು/ ಅಥವಾ ಹಿತಾಸಕ್ತಿ ಹೊಂದಿದ್ದಲ್ಲಿ, ಅಂಥವರು ಈ ಪ್ರಕಟಣೆಯು ಪ್ರಕಟಗೊಂಡ ದಿನಾಂಕದಿಂದ 14 (ಹದಿನಾಲ್ಕು) ದಿನಗಳೊಳಗೆ ತಮ್ಮ ವಿಚಾರಗಳನ್ನು ಲಿಖಿತ ರೂಪದಲ್ಲಿ, ಪೂರಕ ದಾಖಲಾತಿಗಳ ಸಮೇತ ಇಲ್ಲಿ ಕೆಳಗೆ ಸಹಿ ಹಾಕಿರುವವರಿಗೆ ಸಲ್ಲಿಸಬೇಕೆಂದು ಕೋರಲಾಗಿದೆ, ಇದಕ್ಕೆ ತಪ್ಪಿದಲ್ಲಿ ನಿಗದಿತ ಕಾಲಾವಧಿಯ ಬಳಿಕ ಸಂದಾಯವಾಗುವ ಯಾವುದೇ ಕ್ಲೇಮ್‌ಗಳನ್ನು ಪರಿಗಣಿಸಲಾಗುವುದಿಲ್ಲ ಮತ್ತು/ಅಥವಾ ತಿರಸ್ಕರಿಸಲಾಗುತ್ತದೆ.

ಷೆಡ್ಯೂಲ್ ಪ್ರಾಪರ್ಟಿ

ಗುಡ್ಡದರಂಗವ್ವನಹಳ್ಳಿ ಗ್ರಾಮ, ಕಸಬಾ ಹೋಬಳಿ, ಚಿತ್ರದುರ್ಗ ತಾಲ್ಲೂಕು, ಚಿತ್ರದುರ್ಗ ವಿಳಾಸದ ಸರ್ವೆ ನಂ.57 ರಲ್ಲಿ ಸ್ಥಿತಗೊಂಡಿರುವ 03 ಎಕರೆ 30 ಗುಂಟಾ ವಿಸ್ತೀರ್ಣವುಳ್ಳ ಕೃಷಿ ಜಮೀನಿನ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಸದರಿ ಸ್ವತ್ತಿನ ಚಕ್ಕುಬಂದಿ: ಪೂರ್ವಕ್ಕೆ: ಸರ್ವೆ ನಂ. 56/3 ಮತ್ತು 55/2; ಪಶ್ಚಿಮಕ್ಕೆ: ಸರ್ವೆ ನಂ. 58/4 ಮತ್ತು 58/5; ಉತ್ತರಕ್ಕೆ: ಸರ್ವೆ ನಂ. 65/2; ದಕ್ಷಿಣಕ್ಕೆ: ಸರ್ವೆ ನಂ. 47/5.

ಮಂಜುನಾಥ ರೆಡ್ಡಿ. ಆರ್
ವನ್ಯ & ಅಸೋಸಿಯೇಟ್ಸ್
ವಕೀಲರು ಮತ್ತು ಕನ್ಸಲ್ಟಂಟ್ಸ್
ನಂ. 1932, 15ನೇ ಎ ಅಡ್ಡರಸ್ತೆ,
9ನೇ ಮುಖ್ಯರಸ್ತೆ, ಜುಡಿಷಿಯಲ್ ಲೇಔಟ್,
ಜಿಕೆವಿಕೆ ಅಂಚೆ, ಬೆಂಗಳೂರು–560 065
ಇ–ಮೇಲ್: vanyaassociates@gmail.com
ಬೆಂಗಳೂರು
ದಿನಾಂಕ: 22–09–2021

ಕ್ಲಾಸಿಫೈಡ್ಸ್

ADMISSION CORNER

INDIRA GANDHI NATIONAL OPEN UNIVERSITY
ignou THE PEOPLE'S UNIVERSITY
(A Central University, under MOE, Govt. of India)
NAAC Accredited A++
IGNOU Regional Centre, #70-46-30/11,Ward No. 117, BMTC Old Divisional Office (South), Shanthinagar, Bangalore–560 027
080-29607272 / www.ignou.ac.in / www.ignourcblr.in

FINAL OPPORTUNITY DURING COVID PANDEMIC
IGNOU ADMISSION FOR TEACHERS, STUDENTS, CORPORATES & HOUSEWIVES

The Admission for July 2021 session commenced. Join Mega & World's largest Open University for Higher Education programmes @ Masters, Bachelors, Diplomas & Certificate levels. Corporate, Working Professionals & Students can enrol to enhance their skills & knowledge. Great opportunity to Housewives, College dropouts & Regular Students for a blended learning during the present COVID-19 Pandemic. Visit www.ignou.ac.in for immediate online registration/admission-ignou.samarth.edu.in or download the form & submit the filled-in application along with relevant documents and fee in person or by post. For free Prospectus & for Last Date of online submission refer IGNOU website www.ignou.ac.in. Contact through e-mail: rcbangalore@ignou.ac.in/ Whatsapp to 9449337272 OR Regional Director, (G.H. Imrapur-9482351935) for further counselling, guidance & free online (internet) service.

Regional Director

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾಮಾನ್ಯ ಸಾರ್ವಜನಿಕರಿಗೆ ತಿಳಿಸುವುದು ಏನೆಂದರೆ, ನನ್ನ ಕಕ್ಷಿದಾರರು ಇಲ್ಲಿ ಕೆಳಗೆ ನಮೂದಿಸಲಾಗಿರುವ ಷೆಡ್ಯೂಲ್ ಸ್ವತ್ತನ್ನು ಅದರ ಮಾಲಿಕರಾಗಿರುವ ಚಿತ್ರದುರ್ಗ ಜಿಲ್ಲೆಯ ನಿವಾಸಿಯಾದ 1) ಶ್ರೀಮತಿ. ತನ್ವೀರ್ ಇಕ್ಬಾಲ್ @ ರಿದು ಕೋಂ. ಟಿ.ಆರ್. ತಬೀಬುರ್ ರಹಮಾನ್, ಅಲ್–ರೆಯಾನ್ ಬಿಲ್ಡಿಂಗ್, 4ನೇ ಅಡ್ಡರಸ್ತೆ, 2ನೇ ಲೇನ್, ಜೋಗಿಮಟ್ಟಿ ರಸ್ತೆ, ಚಿತ್ರದುರ್ಗ–577501, ಚಿತ್ರದುರ್ಗ ಜಿಲ್ಲೆ ಇವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ. ಹೀಗೆ ಖರೀದಿಸಲು ಉದ್ದೇಶಿಸಲಾಗಿರುವ ಷೆಡ್ಯೂಲ್ ಸ್ವತ್ತಿಗೆ ಅಥವಾ ಷೆಡ್ಯೂಲ್ ಸ್ವತ್ತಿನ ಭಾಗಕ್ಕೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಗಾಗಲಿ, ವಿಭಜಿತ ಅಥವಾ ಅವಿಭಜಿತ ಕುಟುಂಬಕ್ಕಾಗಲಿ, ಕಂಪನಿ, ಬ್ಯಾಂಕ್, ಹಣಕಾಸು ಸಂಸ್ಥೆ, ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಗಳಿಗಾಗಲಿ, ಅನುಸ್ಥಾಪಿತ ಅಥವಾ ಅನುಸ್ಥಾಪಿತವಲ್ಲದ ವ್ಯಕ್ತಿಗಳ ಸಂಘಕ್ಕಾಗಲಿ ಅಥವಾ ವ್ಯಕ್ತಿಗಳ ಅಂಗ ಸಂಸ್ಥೆಗಾಗಲಿ, ಲೇವಾದೇವಿದಾರರಿಗಾಗಲಿ ಮತ್ತು/ಅಥವಾ ಸಾಲಗಾರರಿಗಾಗಲಿ, ಮಾರಾಟ, ಮೆಮೊರ್‍ಯಾಂಡಮ್ ಆಫ್ ಅಂಡರ್‌ಸ್ಟಾಂಡಿಂಗ್, ವಿನಿಮಯ, ಅಡಮಾನ, ಚಾರ್ಜ್, ಉಡುಗೊರೆ, ಟ್ರಸ್ಟ್, ಅನುವಂಶಿಕ, ಸಕ್ಸೆಶನ್, ಸ್ವಾಧೀನ, ಭೋಗ್ಯ, ಚೆನನ್ನಿ, ಮೈಂಟೇನನ್ಸ್ ಈಸ್‌ಮೆಂಟ್, ಲೈಸನ್ಸ್, ಬಿಕ್ವೆಥ್, ಪಾಲು, ಅಸೈನ್‌ಮೆಂಟ್, ಲೀನ್, ಅಟ್ಯಾಚ್‌ಮೆಂಟ್, ಅಭಿವೃದ್ಧಿ ಹಕ್ಕುಗಳು, ಲಿಸ್ಪೆಂಡೆನ್ಸ್ ಹಕ್ಕು, ಮೀಸಲಾತಿ, ಒಡಂಬಡಿಕೆ, ಎಫ್‌ಎಸ್‌ಐ ಕನ್ಸೂಪ್ಶನ್, ಹೊಣೆಗಾರಿಕೆ ಅಥವಾ ಬದ್ಧತೆ ಅಥವಾ ಡಿಮಾಂಡ್ ಮಾದರಿಯಲ್ಲಿ, ಸದರಿ ಷೆಡ್ಯೂಲ್ ಸ್ವತ್ತಿಗೆ ಅಥವಾ ಷೆಡ್ಯೂಲ್ ಸ್ವತ್ತಿನ ಭಾಗಕ್ಕೆ ಸಂಬಂಧಿಸಿದಂತೆ ಯಾವುದೇ ಸ್ವರೂಪದ ಆಕ್ಷೇಪಣೆ, ಕ್ಲೇಮ್, ಹಕ್ಕು, ಬಾಧ್ಯತೆ ಮತ್ತು/ಅಥವಾ ಹಿತಾಸಕ್ತಿ ಹೊಂದಿದ್ದಲ್ಲಿ, ಅಂಥವರು ಈ ಪ್ರಕಟಣೆಯು ಪ್ರಕಟಗೊಂಡ ದಿನಾಂಕದಿಂದ 14 (ಹದಿನಾಲ್ಕು) ದಿನಗಳೊಳಗೆ ತಮ್ಮ ವಿಚಾರಗಳನ್ನು ಲಿಖಿತ ರೂಪದಲ್ಲಿ, ಪೂರಕ ದಾಖಲಾತಿಗಳ ಸಮೇತ ಇಲ್ಲಿ ಕೆಳಗೆ ಸಹಿ ಹಾಕಿರುವವರಿಗೆ ಸಲ್ಲಿಸಬೇಕೆಂದು ಕೋರಲಾಗಿದೆ, ಇದಕ್ಕೆ ತಪ್ಪಿದಲ್ಲಿ ನಿಗದಿತ ಕಾಲಾವಧಿಯ ಬಳಿಕ ಸಂದಾಯವಾಗುವ ಯಾವುದೇ ಕ್ಲೇಮ್‌ಗಳನ್ನು ಪರಿಗಣಿಸಲಾಗುವುದಿಲ್ಲ ಮತ್ತು/ಅಥವಾ ತಿರಸ್ಕರಿಸಲಾಗುತ್ತದೆ.

ಷೆಡ್ಯೂಲ್ ಪ್ರಾಪರ್ಟಿ

ಐಟಂ ನಂ. 1: ಗುಡ್ಡದರಂಗವ್ವನಹಳ್ಳಿ ಗ್ರಾಮ, ಕಸಬಾ ಹೋಬಳಿ, ಚಿತ್ರದುರ್ಗ ತಾಲ್ಲೂಕು, ಚಿತ್ರದುರ್ಗ ವಿಳಾಸದ ಸರ್ವೆ ನಂ.56/2 ರಲ್ಲಿ ಸ್ಥಿತಗೊಂಡಿರುವ 1 ಎಕರೆ 23.58 ಗುಂಟಾ ವಿಸ್ತೀರ್ಣವುಳ್ಳ ಪರಿವರ್ತಿತ (ಪರಿವರ್ತನೆ ಆದೇಶ ಸಂ. ಎಎಲ್‌ಎನ್:ಸಿಆರ್:232/2011–12 ದಿನಾಂಕ: 31.03.2012 ಮುಖೇನ ಪೆಟ್ರೋಲ್ ಬಂಕ್ ಹಾಗೂ ಹೋಟೆಲ್ ಉದ್ದೇಶಕ್ಕೆ ಪರಿವರ್ತಿತ) ಜಮೀನಿನ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಸದರಿ ಸ್ವತ್ತಿನ ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ; ಪಶ್ಚಿಮಕ್ಕೆ: ಸರ್ವೆ ನಂ. 56/3; ಉತ್ತರಕ್ಕೆ: ಸರ್ವೆ ನಂ.65/2; ದಕ್ಷಿಣಕ್ಕೆ: ಅದೇ ಸರ್ವೆ ನಂಬರ್‌ನಲ್ಲಿರುವ ಉಳಿಕೆ ಭಾಗ ಮತ್ತು ಸರ್ವೆ ನಂ. 55/1.

ಐಟಂ ನಂ. 2: ಗುಡ್ಡದರಂಗವ್ವನಹಳ್ಳಿ ಗ್ರಾಮ, ಕಸಬಾ ಹೋಬಳಿ, ಚಿತ್ರದುರ್ಗ ತಾಲ್ಲೂಕು, ಚಿತ್ರದುರ್ಗ ವಿಳಾಸದ ಸರ್ವೆ ನಂ. 56/3 ರಲ್ಲಿ ಸ್ಥಿತಗೊಂಡಿರುವ, 5 ಎಕರೆ 18 ಗುಂಟೆ ವಿಸ್ತೀರ್ಣವುಳ್ಳ ಕೃಷಿ ಜಮೀನಿನ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಸದರಿ ಸ್ವತ್ತಿನ ಚಕ್ಕುಬಂದಿ: ಪೂರ್ವಕ್ಕೆ: ಸರ್ವೆ ನಂ. 56/2; ಪಶ್ಚಿಮಕ್ಕೆ: ಸರ್ವೆ ನಂ. 57 ಮತ್ತು 65/2, ಉತ್ತರಕ್ಕೆ: ಸರ್ವೆ ನಂ. 65/2; ದಕ್ಷಿಣಕ್ಕೆ: ಸರ್ವೆ ನಂ. 55/1 ಮತ್ತು 55/2.

ಮಂಜುನಾಥ ರೆಡ್ಡಿ. ಆರ್
ವನ್ಯ & ಅಸೋಸಿಯೇಟ್ಸ್
ವಕೀಲರು ಮತ್ತು ಕನ್ಸಲ್ಟಂಟ್ಸ್
ನಂ.1932, 15ನೇ ಎ ಅಡ್ಡರಸ್ತೆ,
9ನೇ ಮುಖ್ಯರಸ್ತೆ, ಜುಡಿಷಿಯಲ್ ಲೇಔಟ್,
ಜಿಕೆವಿಕೆ ಅಂಚೆ, ಬೆಂಗಳೂರು–560 065
ಇ–ಮೇಲ್: vanyaassociates@gmail.com
ಬೆಂಗಳೂರು
ದಿನಾಂಕ: 22–09–2021

DISTRICT AND SESSIONS COURT PUNE MAHARASTRA IN THE COURT OF SHRI N. P. NANDEDKAR COURT, DISTRICT JUDGE-2 AND ADDL. SESSIONS JUDGE PUNE

Summons to appear in person
(0.5,R,3) Commercial Civil Suit
No.08/2020
Exhibit No: 29

Suzlon Energy Ltd. ...Plaintiff

-Vs-

Mr.V Thyagaraja Reddy ...Defendants

To.
Defendant: Mr. V Thygaraja Reddy, R/at 11-1, 2nd Main, Cresent Road, Bengaluru, Karnataka-560001

Whereas Suzlon Energy Ltd, has instituted a suit against you for recovery.

You are hereby summoned to appear in this Court in person on the 08/10/2021 at 11.00 O' clock in the noon, to answer the claim and your are directed to produce on that day all the documents upon which you intend to rely in support of your defense.

Take notice that, in default of your appearance on the day mentioned, the suit will be heard and determined in your absence.

Given under my hand and seal of the court this 6/9/2021.

Next Date 8/10/2021

By order Superintendent, District Court, Pune.

PUBLIC NOTICE
To Place your Classified Ads Contact:
9880856233

AUTOMOTIVE

Four Wheelers Selling

Maruti

REQUIRED QUOTATIONS for Accident Vehicle KA-05 MK-3061, Maruti Alto K10 BVXI 2011 Model without RC. 9738470062/ 9845251518.

REAL ESTATE SELLING

Flat

Frazer Town

✓ **SALE: EXCELLENT** 2 BHK Flat, 1205 sft, fully furnished 1 ccp. Ahmed Sait Road, GN Properties: 9845044179.

Ulsoor

✓ **SALE: BEAUTIFUL** Penthouse 3 BHK, 2250 sft + 1050 sft pvt terrace, vastu compliant, car parks, servant room. 'A' Khata. GN Properties: 9845044179.

Industrial & Factory

Tumkur Road

SALE 30 Acres Zone- 1 land near Dobespet- Koratagere main road facing. Single Owner. 9141326819

RENTAL PROPERTIES

Accommodation Available

Commercial

80,000-SQUARE FEET of Office Space For Software Companies. Available for Rent.Near Bommasandra Metro Station,Bangalore. Contact:- 9844016139.

Flats

BRIGADE PANORAMA Mysore Road Near R.V.Engineering College 3& Half BHK Rent Rs.21900/- Lease-22 Lakhs Contact:9986033339

REAL ESTATE BUYING

Sites

Hebbal

WANTED PLOTS/ houses/ Flats Arkavathy Layout, R.T.Nagar, Thanisandra, Hebbal Jakkur, HBR, Hennur, Yelahanka. "Spacelinks" 9845129934.

BUSINESS

Business to Business

Finance

WE ARRANGE Housing, Purchase, Mortgage Loan for Commercial, Residential, Industrial Building & Sites for A Khata, B Khata, Gram Panchayat & 9/11 Khatas from Schedule Banks. Contact Jyothi 7019117364.

Business Offers

Distributors

EARN UPTO Rs.40,000 to Rs. 60,000 Manufacturing of Paper plate, Areca plates with minimum investment. With Buy Back agreement for finished goods with best price. Contact:- 7829033399, 9741021222. Our Factory/office: Bangalore

Finance

FINANCE AGAINST Land & Building Properties Industries Schools Hospitals Projects & NRI Funds.7358729820

NRI'S INVESTMENT And Finance AvailableOn LowInterest AgainstProperties, Land& Building,Sites,Flats, Converted& AgricultureLandsCall: 7411265189

PERSONAL

Change of Name

I, JAYANTKUMAR. N.G. Residing at Hema-Nilaya, subhashnagar, Nelamangala, Bangalore Rural, have changed my name as JAYANTH KUMAR. N.G., vide affidavit dated 21/9/2021 before Notary V.Anjanappa, Bangalore

RAM MURTHY, Mother/o 14816917Y, HAV/MT, BOBINDRA SINGH, Vill-BUDHANA, BULANDSHAHR, UTTAR PRADESH, changed my name from RAM MURTHY to RAMMURTI, 20/09/2021, Notary K.V. Mani, Bangalore

I, JAYASHREE JAYANTKUMAR Residing at Hema-Nilaya, subhashnagar, Nelamangala, Bangalore Rural, have changed my name as JAYASHREE. G.N., vide affidavit dated 21/9/2021 before Notary V.Anjanappa, Bangalore

RUBY, W/O 14816917Y, HAV/MT, BOBINDRA SINGH, Vill - BUDHANA, BULANDSHAHR, UTTAR PRADESH, changed my name from RUBY to ROOBY DEVI, 20/09/2021, Notary K.V. Mani, Bangalore

BOBINDRA SINGH, 14816917Y, HAV/MT, Vill-BUDHANA, BULANDSHAHR, UTTAR PRADESH, have changed my Son's name from VEBHAV to VAIBHAV DAGUR, 20/09/2021, Notary K.V. Mani, Bangalore

NEETU W/O 14816193M- Hav/MT- RAJINDER KUMAR R/a Fatehpur, Sariana, Mukerian, Hoshiarpur, Punjab changed name from NEETU to NEETU SHARMA notary KV Mani, Bangalore.

I, VAIBHAV SUDARSHAN PATTANSHETTI aged about 24 years, S/o Sri. SUDARSHAN. A. PATTANSHETTI residing No. 95, 14th Cross, 2nd Stage, 2nd Phase, WOC Road, Mahalaksmipura, Bangalore-560086 have changed my father's name from ALLAPPA PATTANSHETTI SUDARSHAN to SUDARSHAN. A. PATTANSHETTI Sudarshan, Sudarshan allappa Pattanshetti, Sudarshan A Pattanshetti, Allappa Pattanshetti Sudarshan All are the same name Vide Affidavit dated 16-09-2021 before M. Devaraja Notary

BOBINDRA SINGH, 14816917Y, HAV/MT, Vill - BUDHANA, BULANDSHAHR,UTTAR PRADESH, have changed my Daughter's name from TANISHA to TANISHA DAGUR, 20/09/2021, Notary K.V. Mani, Bangalore


ಕೆಪಿಸಿಸಿ ವಕ್ತಾರ ಪ್ರೊ.ಬಿ.ಕೆ. ಚಂದ್ರಶೇಖರ್ ವ್ಯಂಗ್ಯ

ಕೋವಿಡ್‌ಗೆ ಬೆನ್ನು ತೋರಿಸಿದ ಪ್ರಧಾನಿ, ಪ.ಬಂಗಾಳ, ಅಸ್ಸಾಂ, ತಮಿಳುನಾಡಿನ ಚುನಾವಣಾ ಪ್ರಚಾರದಲ್ಲಿ ಮುಳುಗಿದ್ದರಿಂದ ಜನರ ಕೋಪಕ್ಕೆ ಗುರಿಯಾಗಿದ್ದಾರೆ ಎಂದರು.

‘ಮೋದಿ ಹಾಕಿದ ಬರೆಗೆ ಬಿಎಸ್‌ವೈ ಮುಲಾಮು’

ಬೆಂಗಳೂರು: ‘ಲೋಕಸಭೆ ಚುನಾವಣೆಯನ್ನು ಮೋದಿ ವರ್ಚಸ್ಸಿನಿಂದ ಗೆಲ್ಲಬಹುದು ಎಂಬ ಯಡಿಯೂರಪ್ಪನವರ ಮಾತು, ಅವರು ಹಾಕಿದ ಬರೆಗೆ ಮುಲಾಮು ಹಚ್ಚುವಂಥ ಜಾಣತನದ ಮಾತಿನಂತಿದೆ’ ಎಂದು ಕೆಪಿಸಿಸಿ ವಕ್ತಾರ ಪ್ರೊ.ಬಿ.ಕೆ. ಚಂದ್ರಶೇಖರ್ ವ್ಯಂಗ್ಯವಾಡಿದ್ದಾರೆ.

‘ಮೋದಿಯವರ ವರ್ಚಸ್ಸಿನಿಂದ ಮಾತ್ರ ರಾಜ್ಯಮಟ್ಟದ ಚುನಾವಣೆಗಳಲ್ಲಿ ಗೆಲ್ಲುವುದು ಸಾಧ್ಯವಿಲ್ಲವೆಂದು ಈವರೆಗೂ ಬಿಜೆಪಿಯಲ್ಲಿ, ಅದರಲ್ಲೂ ರಾಜ್ಯಮಟ್ಟದ ನಾಯಕರೊಬ್ಬರು ಹೇಳುವ ಧೈರ್ಯ ಮಾಡಿಲ್ಲ. ಹೀಗಾಗಿ, ಯಡಿಯೂರಪ್ಪ ಅವರ ಹೇಳಿಕೆ ದೊಡ್ಡ ಸದ್ದು-ಸುದ್ದಿ ಮಾಡಿದೆ’ ಎಂದೂ ಹೇಳಿದ್ದಾರೆ.



‘ಯಡಿಯೂರಪ್ಪ ಅವರ ಹೇಳಿಕೆಗೆ ಆಧಾರಗಳೂ ಇವೆ. ಮುಖ್ಯವಾಗಿ, ಕೇಂದ್ರ ಸರ್ಕಾರದ ಎಲ್ಲ ಸೌಲಭ್ಯಗಳು ಮತ್ತು ಚುನಾವಣಾ ಆಯೋಗ ಎಂಟು ಹಂತಗಳಲ್ಲಿ ಚುನಾವಣೆ ನಡೆಸಿದರೂ ಪಶ್ಚಿಮ ಬಂಗಾಳದಲ್ಲಿ ಮಮತಾ ಬ್ಯಾನರ್ಜಿ ಗೆಲುವು ಸಾಧಿಸಿದ್ದಾರೆ. ತಮಿಳುನಾಡಿನಲ್ಲಿ ಡಿಎಂಕೆ ವಿರುದ್ಧ ಬಿಜೆಪಿಗೆ ಸೋಲು ಉಂಟಾಗಿದೆ. ಕೇರಳದಲ್ಲಿ ಮುಖಭಂಗ ಆಗಿದೆ. ಮೋದಿಯವರ ಪ್ರಭಾವ ತೀಕ್ಷ್ಣವಾಗಿ ಇಳಿಮುಖ ಆಗಿರುವುದನ್ನು ಈ ರಾಜ್ಯಗಳ ಚುನಾವಣೆ ಸಾಬೀತುಪಡಿಸಿದೆ’ ಎಂದೂ ಅಭಿಪ್ರಾಯಪಟ್ಟಿದ್ದಾರೆ.

‘ಮೋದಿಯವರ ಸ್ವಂತ ರಾಜ್ಯ ಗುಜರಾತಿನಲ್ಲಿ ಮುಖ್ಯಮಂತ್ರಿ ಸೇರಿ ಇಡೀ ಸಂಪುಟವನ್ನು ಬಿಜೆಪಿ ಪುನರ್‌ರಚಿಸಿದೆ. ಉತ್ತರಾಖಂಡದ ಇಬ್ಬರು ಮುಖ್ಯಮಂತ್ರಿಗಳ ಕ್ಷಿಪ್ರ ಬದಲಾವಣೆ ಮೋದಿ ಪ್ರಭಾವದ ವಿರುದ್ಧ ಜನಾಭಿಪ್ರಾಯ ಬದಲಾದಂತಿದೆ’ ಎಂದಿದ್ದಾರೆ.

34 ಬಿಎಸ್‌ಎಫ್ ಯೋಧರಿಗೆ ಕೋವಿಡ್ -19 ದೃಢ

ಪ್ರಜಾವಾಣಿ ವಾರ್ತೆ



ದೇವನಹಳ್ಳಿ: ಮೇಘಾಲಯದಿಂದ ಕಾರಹಳ್ಳಿ ಬಿ.ಎಸ್.ಎಫ್ ತರಬೇತಿ ಶಿಬಿರಕ್ಕೆ ಬಂದಿದ್ದ 20 ಮಂದಿ ಹಾಗೂ ಯಲಹಂಕ ಶಿಬಿರದಲ್ಲಿ ಪಾಲ್ಗೊಂಡಿದ್ದ14 ಮಂದಿ ಯೋಧರಿಗೆ ಕೋವಿಡ್ ದೃಢಪಟ್ಟಿದೆ.

ಸೋಂಕಿತರನ್ನು ದೇವನಹಳ್ಳಿ ಸಾರ್ವಜನಿಕ ಆಸ್ಪತ್ರೆ ಹಾಗೂ ಯಲಹಂಕ ಆಸ್ಪತ್ರೆಗೆ ದಾಖಲು ಮಾಡಲಾಗಿದೆ ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ. ತಿಪ್ಪೇಸ್ವಾಮಿ ತಿಳಿಸಿದ್ದಾರೆ.

ತರಬೇತಿಗಾಗಿ ಮೇಘಾಲಯದಿಂದ 15 ದಿನಗಳ ಹಿಂದೆ ಈ ಯೋಧರು ಬಂದಿದ್ದರು. ದೇವನಹಳ್ಳಿ ಸರ್ಕಾರಿ ಆಸ್ಪತ್ರೆಯಲ್ಲಿ 20 ಜನ ಯೋಧರನ್ನು ಐಸೋಲೇಷನ್ ಮಾಡಲಾಗಿದೆ. ಹಾಗೆಯೇ 14 ಮಂದಿ ಸೋಂಕಿತ ಯೋಧರನ್ನು ಯಲಹಂಕ ಸರ್ಕಾರಿ ಆಸ್ಪತ್ರೆಯಲ್ಲಿ ಐಸೋಲೇಷನ್ ಮಾಡಿ ಚಿಕಿತ್ಸೆ ನೀಡಲಾಗುತ್ತಿದೆ. ಶಿಬಿರದ ತರಬೇತಿಯಲ್ಲಿದ್ದ 726 ಮಂದಿಯನ್ನು ಕ್ವಾರಂಟೈನ್ ಮಾಡಲಾಗಿದ್ದು, ಅವರ ಮೇಲೆ ತೀವ್ರ ನಿಗಾವಹಿಸಲಾಗಿದೆ ಎಂದು ಅವರು ಹೇಳಿದ್ದಾರೆ.





ಗೊರಗುಂಟೆಪಾಳ್ಯ ಮೆಟ್ರೊ ನಿಲ್ದಾಣದ ಬಳಿ ಹದಗೆಟ್ಟ ರಸ್ತೆಯಲ್ಲಿ ದ್ವಿಚಕ್ರ ವಾಹನ ಸವಾರರು ಪಡಿಪಾಟಲು ಎದುರಿಸುತ್ತಿರುವುದು ಮಂಗಳವಾರ ಕಂಡುಬಂತು (ಎಡ ಚಿತ್ರ) ಮಲ್ಲೇಶ್ವರದ ಹೂವಿನ ಮಾರುಕಟ್ಟೆ ಬಳಿ ಸಂಪಿಗೆ ರಸ್ತೆಯ ಡಾಂಬರು ಕಿತ್ತು ಹೋಗಿರುವುದು – ಪ್ರಜಾವಾಣಿ ಚಿತ್ರಗಳು/ ಎಂ.ಎಸ್.ಮಂಜುನಾಥ್

85 ರಸ್ತೆಗಳ ದುರಸ್ತಿ ಕಾರ್ಯ ಪ್ರಗತಿಯಲ್ಲಿ: ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ

385 ರಸ್ತೆ: ಗುಂಡಿ ಮುಚ್ಚುವ ಕಾರ್ಯ ಪೂರ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಮುಖ್ಯ ಹಾಗೂ ಉಪಮುಖ್ಯ ರಸ್ತೆಗಳು ಸೇರಿ ಒಟ್ಟು 470 ರಸ್ತೆಗಳಿದ್ದು, ಅವುಗಳಲ್ಲಿ 385 ರಸ್ತೆಗಳಲ್ಲಿ ಗುಂಡಿಗಳನ್ನು ಮುಚ್ಚುವ ಕಾರ್ಯ ಪೂರ್ಣಗೊಂಡಿದೆ. ವೈಟ್ ಟಾಪಿಂಗ್, ಟೆಂಡರ್ ಶ್ಯೂರ್, ಸ್ಮಾರ್ಟ್ ಸಿಟಿ ಕಾಮಗಾರಿಗಳು ಪ್ರಗತಿಯಲ್ಲಿರುವ ರಸ್ತೆಗಳು ಸೇರಿದಂತೆ ಒಟ್ಟು 85 ರಸ್ತೆಗಳಲ್ಲಿ ಗುಂಡಿಗಳನ್ನು ಮುಚ್ಚುವ ಕಾರ್ಯ ಪ್ರಗತಿಯಲ್ಲಿದೆ ಎಂದು ಮುಖ್ಯ ಆಯುಕ್ತ ಗೌರವ್ ಗುಪ್ತ ತಿಳಿಸಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, ‘ರಸ್ತೆಗುಂಡಿಗಳನ್ನು ಮುಚ್ಚುವ ಸಲುವಾಗಿ ಸೋಮವಾರ ರಾತ್ರಿ ಪರಿಶೀಲನಾ ಸಭೆ ನಡೆಸಲಾಯಿತು. ಮುಖ್ಯ ಹಾಗೂ ಉಪಮುಖ್ಯ ರಸ್ತೆಗಳಲ್ಲಿ ಕೆಲವು ಕಡೆ ವೈಟ್ ಟಾಪಿಂಗ್, ಟೆಂಡರ್ ಶ್ಯೂರ್, ಸ್ಮಾರ್ಟ್ ಸಿಟಿ, ಮೆಟ್ರೊ ಕಾಮಗಾರಿ ನಡೆಯುತ್ತಿವೆ. ಈ ಕಾಮಗಾರಿಗಳು ಪೂರ್ಣಗೊಂಡಿರುವ ರಸ್ತೆಗಳ ದೋಷ ಮುಕ್ತಗೊಳಿಸುವ ಹೊಣೆಗಾರಿಕೆ ಅವಧಿ ಚಾಲ್ತಿಯಲ್ಲಿದೆಯೇ ಎಂದು ಪರಿಶೀಲಿಸುತ್ತಿದ್ದೇವೆ. ಅವಧಿ ಚಾಲ್ತಿಯಲ್ಲಿರುವ ರಸ್ತೆಗಳನ್ನು ಗುತ್ತಿಗೆದಾರರಿಂದಲೇ ದುರಸ್ತಿ ಮಾಡಿಸಲಿದ್ದೇವೆ’ ಎಂದರು.



ಯಶವಂತಪುರದ ‘ನಮ್ಮ ಮೆಟ್ರೊ’ ನಿಲ್ದಾಣದ ಬಳಿ ಹದಗೆಟ್ಟಿರುವ ತುಮಕೂರು ಮುಖ್ಯರಸ್ತೆ – ಪ್ರಜಾವಾಣಿ ಚಿತ್ರ

‘ಜಲಮಂಡಳಿ, ಬೆಸ್ಕಾಂ ವತಿಯಿಂದಲೂ ಕೆಲವು ರಸ್ತೆಗಳಲ್ಲಿ ಕಾಮಗಾರಿಗಳು ನಡೆಯುತ್ತಿವೆ. ಬಿಬಿಎಂಪಿ ಹೊರವಲಯದ 110 ಹಳ್ಳಿಗಳಿಗೆ ನೀರಿನ ಸಂಪರ್ಕ ಹಾಗೂ ಒಳಚರಂಡಿ ವ್ಯವಸ್ಥೆ ಕಲ್ಪಿಸಲು ರಸ್ತೆಗಳನ್ನು ಕತ್ತರಿಸಲಾಗಿದೆ. ಇವುಗಳ ದುರಸ್ತಿ ಕಾಮಗಾರಿಗಳನ್ನು ಶೀಘ್ರವೇ ಕೈಗೆತ್ತಿಕೊಳ್ಳಲಾಗುವುದು’ ಎಂದು ಭರವಸೆ ನೀಡಿದರು.

‘ಜಲಮಂಡಳಿಯವರು ಕೊಳವೆ ಅಳವಡಿಕೆಗಾಗಿ ಕತ್ತರಿಸಿರುವ ರಸ್ತೆಗಳ ದುರಸ್ತಿಗೆ ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ. ಶೀಘ್ರವೇ ಈ ಕಾಮಗಾರಿಗಳನ್ನೂ ಕೈಗೆತ್ತಿಕೊಳ್ಳಲಾಗುವುದು’ ಎಂದರು.

1,344 ಕಿ.ಮೀ — ನಗರದಲ್ಲಿರುವ ಮುಖ್ಯ ಹಾಗೂ ಉಪಮುಖ್ಯ ರಸ್ತೆಗಳ ಒಟ್ಟು ಉದ್ದ



1,120 ಕಿ.ಮೀ — ರಸ್ತೆಗುಂಡಿಗಳನ್ನು ಮುಚ್ಚುವ ಕಾಮಗಾರಿ ಪೂರ್ಣಗೊಂಡ ರಸ್ತೆಗಳ ಒಟ್ಟು ಉದ್ದ

224 ಕಿ.ಮೀ — ಗುಂಡಿ ಮುಚ್ಚುವ ಕಾಮಗಾರಿ ಬಾಕಿ ಇರುವ ರಸ್ತೆಗಳ ಉದ್ದ

ರಸ್ತೆ ದುರಸ್ತಿ– ಬಿಬಿಎಂಪಿಯ ತೀರ್ಮಾನಗಳು

ನಗರದಲ್ಲಿರುವ ಕೆಲವು ಪ್ರಮುಖ ರಸ್ತೆಗಳನ್ನು ಹಲವಾರು ವರ್ಷದಿಂದ ಬೇರೆ ಬೇರೆ ಕಾರಣಗಳಿಂದ ನಿರ್ವಹಣೆ ಮಾಡಿಲ್ಲ. ಹಾಗಾಗಿ ಅವುಗಳು ಹದಗೆಟ್ಟಿವೆ. ಈ ಪೈಕಿ ಹೆಚ್ಚು ಸಂಚಾರ ದಟ್ಟಣೆಯಿರುವ ರಸ್ತೆಗಳನ್ನು ಗುರುತಿಸಿ ಆದ್ಯತೆ ಮೇರೆಗೆ ದುರಸ್ತಿ ಕಾಮಗಾರಿ ಕೈಗೆತ್ತಿಕೊಳ್ಳಲು ಸೋಮವಾರ ರಾತ್ರಿ ನಡೆದ ಅಧಿಕಾರಿಗಳ ಸಭೆಯಲ್ಲಿ ನಿರ್ಧರಿಸಲಾಗಿದೆ. ಸಭೆಯ ಪ್ರಮುಖ ನಿರ್ಧಾರಗಳು ಇಂತಿವೆ.

- ನಗರದ ಜಯಮಹಲ್ ರಸ್ತೆಯನ್ನು ತಕ್ಷಣವೇ ಡಾಂಬರೀಕರಣ ನಡೆಸುವುದು.
- ಬಸಪ್ಪ ವೃತ್ತದಿಂದ ಡೇರಿ ವೃತ್ತದವರೆಗಿನ ಮರಿಗೌಡ ರಸ್ತೆಯನ್ನು ಅಭಿವೃದ್ಧಿಪಡಿಸಿ ಡಾಂಬರೀಕರಣ ನಡೆಸುವುದು.
- ಕೆಂಗಲ್ ಹನುಮಂತಯ್ಯ ರಸ್ತೆ ರಿಚ್‌ಮಂಡ್ ವೃತ್ತದಿಂದ ಲಾಲ್‌ಬಾಗ್ ಗೇಟ್‌ವರೆಗೆ ಡಾಂಬರೀಕರಣ ನಡೆಸುವುದು.
- 110 ಹಳ್ಳಿಗಳ ವ್ಯಾಪ್ತಿಯ ರಸ್ತೆಗಳಲ್ಲಿ ರಸ್ತೆ ಕತ್ತರಿಸಿದ ಭಾಗಗಳ ದುರಸ್ತಿಗೆ ಶೀಘ್ರವೇ ಟೆಂಡರ್ ಕರೆಯುವುದು.
- ಹೊರವರ್ತುಲ ರಸ್ತೆಯಲ್ಲಿ ಗೊರಗುಂಟೆಪಾಳ್ಯದಿಂದ ರಾಜಕುಮಾರ್ ಸಮಾಧಿಯವರೆಗೆ ಯೋಜನೆ-ಕೇಂದ್ರ ವಿಭಾಗದಿಂದ ಶೀಘ್ರವೇ ಡಾಂಬರೀಕರಣ ಕಾಮಗಾರಿ ಕೈಗೊಳ್ಳುವುದು.
- ತುಮಕೂರು ರಸ್ತೆ, ಯಶವಂತಪುರದಿಂದ ಗೊರಗುಂಟೆಪಾಳ್ಯ ಜಂಕ್ಷನ್‌ವರೆಗೆ ಡಾಂಬರೀಕರಣ ನಡೆಸುವುದು.

ಕೆಎಸ್‌ಆರ್‌ಟಿಸಿಗೆ ಐದು ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ಸಾರ್ವಜನಿಕ ಸಂಪರ್ಕ ಮಂಡಳಿ ನೀಡುವ ‘ಪಿಆರ್‌ಸಿಐ ಎಕ್ಸಲೆನ್ಸ್’ ಪ್ರಶಸ್ತಿ ಕೆಎಸ್‌ಆರ್‌ಟಿಸಿಗೆ ಐದು ವರ್ಗಗಳಲ್ಲಿ ಲಭಿಸಿದೆ.

ಸಾರ್ವಜನಿಕ ವಲಯದಲ್ಲಿ ಕೋವಿಡ್ ನಿರ್ವಹಣೆಗೆ ಬೆಳ್ಳಿ ಪದಕ, ಅತ್ಯುತ್ತಮ ಸಾರ್ವಜನಿಕ ಉದ್ದಿಮೆ ಸಾಮಾಜಿಕ ಹೊಣೆಗಾರಿಕೆ ಅಡಿಯಲ್ಲಿನ ಉಪಕ್ರಮಗಳ ಅನುಷ್ಠಾನಕ್ಕೆ ಕಂಚಿನ ಪದಕ, ಆರೋಗ್ಯ ರಕ್ಷಣೆ ಸಂವಹನ ಸಾಕ್ಷ್ಯಚಿತ್ರಗಳಿಗೆ ಕಂಚಿನ ಪದಕ, ಆಂತರಿಕ ನಿಯತಕಾಲಿಕೆ(ಪ್ರಾದೇಶಿಕ) ‘ಸಾರಿಗೆ ಸಂಪದ’ಕ್ಕೆ ಚಿನ್ನದ ಪದಕ, ಕೋವಿಡ್ ಸಮಯದಲ್ಲಿ ಗ್ರಾಹಕ ಸ್ನೇಹಿ ಉಪಕ್ರಮಕ್ಕೆ ಚಿನ್ನದ ಪದಕ ಲಭಿಸಿದೆ.

ಗೋವಾದಲ್ಲಿ ಇದೇ 18ರಂದು ನಡೆದ 15ನೇ ವಿಶ್ವ ಸಾರ್ವಜನಿಕ ಸಂಪರ್ಕ ಮಂಡಳಿಯ ಸಮ್ಮೇಳನದಲ್ಲಿ ಗೋವಾದ ನಾಗರಿಕ ಪೂರೈಕೆ ಮತ್ತು ಬೆಲೆ ನಿಯಂತ್ರಣ ಸಚಿವ ಗೋವಿಂದಗೌಡೆ ಅವರು ಪ್ರಶಸ್ತಿ ಪ್ರದಾನ ಮಾಡಿದರು.

‘ಶೌಚಾಲಯ’ಕ್ಕಾಗಿ ಹಕ್ಕುಚ್ಯುತಿ ಪ್ರಸ್ತಾವ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸೌಧದ ಮೊದಲ ಮಹಡಿಯಲ್ಲಿ ವಿಧಾನ ಪರಿಷತ್ ಸಭಾಂಗಣದ ಪಕ್ಕದ ಕೊಠಡಿಯನ್ನು ಮತ್ತೆ ಶೌಚಾಲಯವಾಗಿ ಮಾಡುವುದಾಗಿ ಭರವಸೆ ನೀಡಿದ್ದ ಸಭಾನಾಯಕ ಕೋಟ ಶ್ರೀನಿವಾಸ ಪೂಜಾರಿ ಮಾತು ತಪ್ಪಿದ್ದಾರೆ. ಹೀಗಾಗಿ, ಹಕ್ಕುಚ್ಯುತಿಯಡಿ ಚರ್ಚೆಗೆ ಅವಕಾಶ ನೀಡಬೇಕೆಂಬ ಕಾಂಗ್ರೆಸ್ ಸದಸ್ಯರ ಬೇಡಿಕೆ ವಿಧಾನಪರಿಷತ್‌ನಲ್ಲಿ ಮಂಗಳವಾರ ಕಾವೇರಿದ ಚರ್ಚೆಗೆ ವಸ್ತುವಾಯಿತು.

ವಿಷಯ ಪ್ರಸ್ತಾಪಿಸಿದ ಕಾಂಗ್ರೆಸ್‌ನ ಪ್ರತಾಪಚಂದ್ರ ಶೆಟ್ಟಿ, ‘ಶೌಚಾಲಯವಾಗಿದ್ದ ಕೊಠಡಿಯನ್ನು ಉಪಾಹಾರ ಗೃಹವಾಗಿ ಪರಿವರ್ತಿಸಲಾಗಿದೆ. ಇದರಿಂದ ಶಾಸಕರು, ಶಾಸಕರ ಆಪ್ತ ಸಿಬ್ಬಂದಿ, ಸಚಿವಾಲಯ ಸಿಬ್ಬಂದಿಗೆ ಸಮಸ್ಯೆಯಾಗಿದೆ. ಅದನ್ನು ಮತ್ತೆ ಶೌಚಾಲಯ ಮಾಡುವ ಬಗ್ಗೆ ಸಭಾನಾಯಕರು ನೀಡಿದ್ದ ಭರವಸೆ ಈಡೇರಿಸಿಲ್ಲ’ ಎಂದರು. ಅದಕ್ಕೆ ಕಾಂಗ್ರೆಸ್‌ನ ಎ. ನಾರಾಯಣ ಸ್ವಾಮಿ, ಬಿ.ಕೆ. ಹರಿಪ್ರಸಾದ್ ಧ್ವನಿಗೂಡಿಸಿದರು.

ಹಕ್ಕುಚ್ಯುತಿಯಡಿ ಚರ್ಚೆಗೆ ಅವಕಾಶ ನಿರಾಕರಿಸಿದ ಸಭಾಪತಿ ಬಸವರಾಜ ಹೊರಟ್ಟಿ, ‘ವಿಧಾನ ಪರಿಷತ್‌ನ ಸಚಿವಾಲಯದ ಅಧೀನದ ಜಾಗದಲ್ಲಿ ನಿರ್ಮಾಣ ಕೆಲಸಗಳ ಕುರಿತು ನಿರ್ಣಯ ಕೈಗೊಳ್ಳುವ ಅಧಿಕಾರ ಸಭಾಪತಿ ಅವರಿಗಿದೆ. ಸಭಾನಾಯಕರಿಗೆ ಇದು ಅನ್ವಯವಾಗುವುದಿಲ್ಲ. ಈ ವಿಷಯದ ಚರ್ಚೆ ಬೇಡ’ ಎಂದರು.

ಆದರೆ, ಕಾಂಗ್ರೆಸ್ ಸದಸ್ಯರು ಪಟ್ಟು ಸಡಿಲಿಸಲಿಲ್ಲ. ಸಭಾಪತಿ ವಿರುದ್ಧವೇ ಏರುಧ್ವನಿಯಲ್ಲಿ ಮಾತನಾಡಿದ ಶೆಟ್ಟಿ, ‘ಇದು ಅತಿರೇಕದ ತೀರ್ಮಾನ. ಸದಸ್ಯರಿಗೆ ತೋರಿದ ಅಗೌರವ’ ಎಂದರು.

ಸಭಾನಾಯಕ ಕೋಟಾ ಶ್ರೀನಿವಾಸ ಪೂಜಾರಿ, ‘ಪ್ರತಾಪಚಂದ್ರ ಶೆಟ್ಟಿ ಸಭಾಪತಿ ಆಗಿದ್ದಾಗ ಉಪಾಹಾರ ಗೃಹ ಬದಲಿಸಿ ಶೌಚಾಲಯ ಮರು ನಿರ್ಮಾಣ ಮಾಡುವಂತೆ ಸೂಚಿಸಿದ್ದರು. ಆಗ ಸರ್ಕಾರದ ಪರವಾಗಿ ಉತ್ತರಿಸಿದ್ದ ನಾನು, ಮುಂದಿನ ಅಧಿವೇಶನ ವೇಳೆಗೆ ಕ್ರಮಕೈಗೊಳ್ಳುವುದಾಗಿ ಹೇಳಿದ್ದೆ. ನಾನು ಉತ್ತರ ಕೊಟ್ಟಿದ್ದರೂ, ಸದನದ ಆವರಣದ ಬಗ್ಗೆ ನಿರ್ಣಯ ತೆಗೆದುಕೊಳ್ಳುವ ಪರಮಾಧಿಕಾರ ಸಭಾಪತಿ ವ್ಯಾಪ್ತಿಗೆ ಬರಲಿದೆ. ಪ್ರತಾಪಚಂದ್ರ ಶೆಟ್ಟಿಯವರು ನನ್ನನ್ನು ಕಂಡಿದ್ದಾರೆ. ಆದರೆ, ತಪ್ಪು ಮಾಹಿತಿ ಮೇಲೆ ಸಣ್ಣ ವಿಷಯಕ್ಕೆ ಆರೋಪಿ ಸ್ಥಾನದಲ್ಲಿ ನಿಲ್ಲಿಸಿರುವುದು ನೋವು ತಂದಿದೆ’ ಎಂದರು.

ಆಗ ಮಾತನಾಡಿದ ಪ್ರತಾಪಚಂದ್ರ ಶೆಟ್ಟಿ, ‘ಆರೋಪ ನಿಮ್ಮ ಮೇಲಲ್ಲ. ಸಭಾನಾಯಕ ಸ್ಥಾನದ ಮೇಲೆ’ ಎಂದು ಸ್ಪಷ್ಟನೆ ನೀಡಿದರು. ‘ಇದು ಸೂಕ್ಷ್ಮ ವಿಷಯ. ಅಧಿವೇಶನದ ನಂತರ ಎಲ್ಲರೊಂದಿಗೆ ಚರ್ಚಿಸಿ ನಿರ್ಣಯ ಕೈಗೊಳ್ಳಲಾಗುವುದು’ ಎಂದು ಸಭಾಪತಿ ಸಮಾಧಾನಪಡಿಸಿದರು.

ಕ್ವಾರಿ ಉದ್ಯಮ: ಪಾರದರ್ಶಕ ನಿಯಮಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲ್ಲು ಕ್ವಾರಿ ಮತ್ತು ಕ್ರಷರ್ ಉದ್ಯಮದ ಮೇಲೆ ಅನಗತ್ಯ ದಂಡ ವಿಧಿಸುವ ಮೂಲಕ ರಾಜ್ಯ ಸರ್ಕಾರ ಗದಾ ಪ್ರಹಾರ ನಡೆಸುತ್ತಿದ್ದು, ಪಾರದರ್ಶಕ ನಿಯಮಗಳನ್ನು ಜಾರಿಗೆ ತರಬೇಕು ಎಂದು ಫೆಡರೇಷನ್ ಆಫ್ ಕರ್ನಾಟಕ ಕ್ವಾರಿ ಆ್ಯಂಡ್ ಸ್ಟೋನ್ ಕ್ರಷರ್ ಓನರ್ಸ್ ಅಸೋಸಿಯೇಷನ್ಸ್ ಒತ್ತಾಯಿಸಿದೆ.

‘ಸರ್ಕಾರದ ಎಲ್ಲ ನಿಯಮಗಳನ್ನು ಪಾಲನೆ ಮಾಡಿಕೊಂಡು ಕಾನೂನು ಬದ್ಧವಾಗಿ ಬಂಡವಾಳ ಹೂಡಿ ಉದ್ಯಮ ನಡೆಸಲಾಗುತ್ತಿದೆ. ಅದಕ್ಕೂ ಸರ್ಕಾರ ತೊಡಕು ಉಂಟು ಮಾಡುತ್ತಿದೆ’ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಪುರುಷೋತ್ತಮ ಅವರು ಸುದ್ದಿಗೋಷ್ಠಿಯಲ್ಲಿ ದೂರಿದರು.

‘ಕಲ್ಲು ಕ್ವಾರಿ ಮತ್ತು ಕ್ರಷರ್ ಉದ್ಯಮದ ವಿಷಯದಲ್ಲಿ ಸರ್ಕಾರದ ನಿರ್ಧಾರಗಳು ಅರಾಜಕತೆ ಸೃಷ್ಟಿಸಿವೆ. ಏಳು ವರ್ಷಗಳಿಂದ ಅಸಮರ್ಪಕ ಲೆಕ್ಕಪರಿಶೋಧನೆ ನಡೆಸಲಾಗುತ್ತಿದೆ’ ಎಂದು ಸಂಘದ ಅಧ್ಯಕ್ಷ ರವೀಂದ್ರ ಶೆಟ್ಟಿ ಹೇಳಿದರು.

‘ಕಾನೂನಿನ ತೊಡಕಿನಿಂದಾಗಿ ಕೆಲ ಗಣಿ ಪ್ರದೇಶಗಳ ಮಂಜೂರಾತಿ ವಿಳಂಬವಾಗಿದ್ದು, ಕೂಡಲೇ ಮಂಜೂರಾತಿ ನೀಡಬೇಕು. ನಿಯಮಗಳಿಗೆ ಸಮಗ್ರ ತಿದ್ದುಪಡಿ ತರಬೇಕು. ಇಲ್ಲದಿದ್ದರೆ ಹೋರಾಟ ನಡೆಸಲಾಗುವುದು’ ಎಂದು ಎಚ್ಚರಿಸಿದರು.

ಸಂಘದ ಗೌರವಾಧ್ಯಕ್ಷ ಡಿ.ಸಿದ್ಧರಾಜು, ಉಪಾಧ್ಯಕ್ಷ ಬಿ.ಎನ್ ಕಿರಣ್ ಜೈನ್ ಇದ್ದರು.

ಸೋಂಕಿತರ ಸಂಖ್ಯೆ ಮತ್ತೆ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೊರೊನಾ ಸೋಂಕಿತರ ಸಂಖ್ಯೆ ಮತ್ತೆ ಏರುಮುಖವಾಗಿದೆ. ಸೋಮವಾರ ಹೊಸದಾಗಿ 818 ಮಂದಿಯಲ್ಲಿ ಸೋಂಕು ದೃಢಪಟ್ಟಿದ್ದು ಈವರೆಗೆ 29.69 ಲಕ್ಷ ಜನ ಸೋಂಕಿಗೊಳಪಟ್ಟಂತಾಗಿದೆ. ಸೋಂಕು ದೃಢ ಪ್ರಮಾಣವೂ ಶೇ 0.80ಕ್ಕೆ ಹೆಚ್ಚಿದೆ.

ಒಂದು ದಿನದಲ್ಲಿ 21 ಮಂದಿ ಸಾವಿಗೀಡಾಗಿದ್ದಾರೆ. ಮರಣ ಪ್ರಮಾಣ ದರವು ಶೇ 2.56ಕ್ಕೆ ತಗ್ಗಿದೆ. ರಾಜ್ಯದಲ್ಲಿ ಕೋವಿಡ್ ಕಾಣಿಸಿಕೊಂಡ ದಿನದಿಂದ ಈವರೆಗೆ ಒಟ್ಟು 37,648 ಜನ ಅಸುನೀಗಿದ್ದಾರೆ.

1,414 ಜನರಿಗೆ ಕಾಯಿಲೆ ವಾಸಿಯಾಗಿದ್ದು, ಚೇತರಿಸಿಕೊಂಡವರ ಸಂಖ್ಯೆ 29.17 ಲಕ್ಷಕ್ಕೆ ಏರಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ ಮತ್ತಷ್ಟು ಇಳಿಕೆಯಾಗಿದೆ. ಸದ್ಯ 13,741 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆಯುತ್ತಿದ್ದಾರೆ.

ಬೆಂಗಳೂರಿನಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಏರಿದೆ. ಹಿಂದಿನ 24 ಗಂಟೆಗಳಲ್ಲಿ 359 ಮಂದಿಯಲ್ಲಿ ಸೋಂಕು ಕಾಣಿಸಿಕೊಂಡಿದೆ. ಕೇರಳದ ಗಡಿ ಜಿಲ್ಲೆಗಳ ಪೈಕಿ ದಕ್ಷಿಣ ಕನ್ನಡ (114) ಮತ್ತು ಮೈಸೂರಿನಲ್ಲೂ (71) ಹೊಸ ಪ್ರಕರಣಗಳು ಹೆಚ್ಚಿವೆ. ಕೊಡಗು ಹಾಗೂ ಉಡುಪಿಯಲ್ಲಿ ಕ್ರಮವಾಗಿ 25 ಹಾಗೂ 73 ಪ್ರಕರಣಗಳು ವರದಿಯಾಗಿವೆ. ಬಾಗಲಕೋಟೆ, ಬೀದರ್, ಹಾವೇರಿ, ಕೊಪ್ಪಳ, ರಾಯಚೂರು, ರಾಮನಗರ ಮತ್ತು ಯಾದಗಿರಿಯಲ್ಲಿ ಹೊಸ ಪ್ರಕರಣಗಳು ದಾಖಲಾಗಿಲ್ಲ. ಉಳಿದ ಜಿಲ್ಲೆಗಳಲ್ಲಿ ಇದು 30ಕ್ಕಿಂತ ಕಡಿಮೆ ಇದೆ.

ಕೋವಿಡ್ ಪೀಡಿತರ ಪೈಕಿ ಬೆಂಗಳೂರಿನಲ್ಲಿ 8 ಮಂದಿ ಅಸುನೀಗಿದ್ದಾರೆ. ಬೆಳಗಾವಿಯಲ್ಲಿ 3, ದಕ್ಷಿಣ ಕನ್ನಡ ಮತ್ತು ಮೈಸೂರಿನಲ್ಲಿ ತಲಾ 2, ಬೆಂಗಳೂರು ಗ್ರಾಮಾಂತರ, ಕೋಲಾರ, ಕೊಪ್ಪಳ, ರಾಮನಗರ, ಶಿವಮೊಗ್ಗ ಮತ್ತು ಉಡುಪಿಯಲ್ಲಿ ತಲಾ ಒಬ್ಬರು ಸಾವಿಗೀಡಾಗಿದ್ದಾರೆ.

ಕೋವಿಡ್ ಪರೀಕ್ಷೆಗಳ ಸಂಖ್ಯೆ ಮತ್ತಷ್ಟು ಇಳಿಕೆಯಾಗಿದೆ. ಸೋಮವಾರ 1.01 ಲಕ್ಷ ಮಾದರಿಗಳನ್ನಷ್ಟೇ ಪರೀಕ್ಷಿಸಲಾಗಿದೆ.

ನಗರದ ಕೋವಿಡ್ ಅಂಕಿ–ಅಂಶ

ಒಟ್ಟು ಪ್ರಕರಣಗಳು	12,44,052 ▲
ಸಕ್ರಿಯ ಪ್ರಕರಣಗಳು	7,288 ▼
ಗುಣಮುಖರಾದವರು	12,20,659 ▲
ಒಟ್ಟು ಸಾವು	16,104 ▲
ದಿನದ ಏರಿಕೆ	
ಹೊಸ ಪ್ರಕರಣ	359 ▲
ಗುಣಮುಖ	381 ▲
ಸಾವು	08 ▲

ಆಧಾರ: ರಾಜ್ಯ ಆರೋಗ್ಯ ಇಲಾಖೆ ಪ್ರಜಾವಾಣಿ ಗ್ರಾಫಿಕ್ಸ್

ರಾಜ್ಯ ಕೋವಿಡ್ ಅಂಕಿ–ಅಂಶ

ಒಟ್ಟು ಸೋಂಕಿತರು	29,69,361 ▲ (29,68,543 ನಿನ್ನೆಯ ವಿವರ)
ಸಕ್ರಿಯ ಪ್ರಕರಣಗಳು	13,741 ▼
ಗುಣಮುಖರಾದವರು	29,17,944 ▲
ಒಟ್ಟು ಸಾವು	37,648 ▲
ದಿನದ ಏರಿಕೆ	
ಹೊಸ ಪ್ರಕರಣ	818 ▲
ಗುಣಮುಖ	1,414 ▼
ಸಾವು	21 ▼

ಆಧಾರ: ರಾಜ್ಯ ಆರೋಗ್ಯ ಇಲಾಖೆ ಪ್ರಜಾವಾಣಿ ಗ್ರಾಫಿಕ್ಸ್

‘ಲಸಿಕೆ ಕಡ್ಡಾಯ: ಸಾಧ್ಯವಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಾಗರಿಕರು ಲಸಿಕೆ ಪಡೆಯಲೇಬೇಕು ಎಂದು ಕಡ್ಡಾಯಗೊಳಿಸಲು ಸಾಧ್ಯವಿಲ್ಲ. ಲಸಿಕೆ ಕುರಿತ ಸಂಶಯಗಳನ್ನು ಹೋಗಲಾಡಿಸಿ, ಈ ಬಗ್ಗೆ ಜನರ ಮನವೊಲಿಸಲು ಕ್ರಮ ವಹಿಸಲಾಗುವುದು’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಸ್ಪಷ್ಟಪಡಿಸಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, ‘ಬಿಬಿಎಂಪಿ ವ್ಯಾಪ್ತಿಯಲ್ಲಿ ಕೋವಿಡ್ ನಿಯಂತ್ರಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ. ಹಾಗಾಗಿ ನಗರದಲ್ಲಿ ಸರಾಸರಿ 350 ರಿಂದ 400 ಕೋವಿಡ್ ಪ್ರಕರಣಗಳು ಮಾತ್ರ ಪತ್ತೆಯಾಗುತ್ತಿವೆ’ ಎಂದರು.

‘ನಗರದಲ್ಲಿ ಕೋವಿಡ್‌ನಿಂದ ಬಳಲುತ್ತಿರುವ 368 ಮಂದಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಇವುಗಳಲ್ಲಿ ಸರ್ಕಾರಿ ಕೋಟಾದಡಿ 93 ಮಂದಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ 275 ಮಂದಿ ದಾಖಲಾಗಿದ್ದಾರೆ. ಅವರಲ್ಲಿ 260 ಮಂದಿಗೆ ಗಂಭೀರ ಸಮಸ್ಯೆಗಳಿಲ್ಲ. ಅವರಿಗೆ ಸಾಮಾನ್ಯ ಹಾಸಿಗೆಗಳನ್ನು ಒದಗಿಸಲಾಗಿದೆ’ ಎಂದರು.

‘ಶಾಲಾ-ಕಾಲೇಜುಗಳಲ್ಲಿ ತರಗತಿಗಳು ನಡೆಯುತ್ತಿವೆ. ಬೇರೆ ಬೇರೆ ವಾಣಿಜ್ಯ ಚಟುವಟಿಕೆ ಪೂರ್ಣಪ್ರಮಾಣದಲ್ಲಿ ಆರಂಭಗೊಂಡಿದೆ. ಇವುಗಳ ನಡುವೆಯೂ ಕೋವಿಡ್ ಸೋಂಕು ನಿಯಂತ್ರಣದಲ್ಲಿದೆ. ನಾಗರಿಕರೆಲ್ಲರೂ ಲಸಿಕೆ ಪಡೆಯುವುದರ ಜೊತೆಗೆ ಕೋವಿಡ್ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವ ಮೂಲಕ ಸೋಂಕನ್ನು ನಿಯಂತ್ರಣದಲ್ಲಿಡಲು ನೆರವಾಗಬೇಕು’ ಎಂದು ಕೋರಿದರು.

‘ಕೋವಿಡ್‌ನಿಂದ ಸಂಭವಿಸಿದ ಸಾವುಗಳ ಲೆಕ್ಕಪರಿಶೋಧನಾ ವರದಿಯನ್ನು ತಜ್ಞರ ತಂಡವು ಸಿದ್ಧಪಡಿಸುತ್ತಿದೆ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	23.00 ಕೋಟಿ ▲	3.35 ಕೋಟಿ
ಸಕ್ರಿಯ ಪ್ರಕರಣ	1.85 ಕೋಟಿ	2.95 ಲಕ್ಷ ▼
ಗುಣಮುಖ	20.68 ಕೋಟಿ ▲	3.27 ಕೋಟಿ
ಸಾವು	47.18 ಲಕ್ಷ ▲	4.45 ಲಕ್ಷ
ದಿನದ ಮಾಹಿತಿ		
ಹೊಸ ಪ್ರಕರಣ	4.02 ಲಕ್ಷ ▲	27,323 ▲
ಗುಣಮುಖ	5.10 ಲಕ್ಷ ▲	34,145 ▲
ಸಾವು	5,795 ▼	385 ▲

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ): ಅಮೆರಿಕ 86,072 ▲; ಟರ್ಕಿ 27,688 ▲; ಬ್ರಿಟನ್ 35,943 ▲

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ): ಅಮೆರಿಕ 97.37 ▲; ಇರಾನ್ 5.32 ▼; ಬ್ರಿಟನ್ 13.18 ▲

(*ರಾತ್ರಿ 12 ಗಂಟೆಯ ವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು (ಒಟ್ಟು): ಮಹಾರಾಷ್ಟ್ರ 1.38 ಲಕ್ಷ; ತಮಿಳುನಾಡು 35,379 ▲; ದೆಹಲಿ 25,085 ▼

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ): ಮಹಾರಾಷ್ಟ್ರ 65.27 ▲; ಕೇರಳ 45.39 ▲; ತಮಿಳುನಾಡು 26.48 ▲

ಪ್ರಜಾವಾಣಿ ಗ್ರಾಫಿಕ್ಸ್

ಬೆಂಗಳೂರು ಕೃಷಿ ವಿ.ವಿ. ಘಟಿಕೋತ್ಸವ: ಪದಕ ವಿಜೇತರ ಸಂಭ್ರಮ

‘ಕೃಷಿ ಕೋರ್ಸ್ ತಾತ್ಸಾರ ಮನೋಭಾವ ಬೇಡ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಎಲ್ಲರೂ ವೈದ್ಯಕೀಯ ಹಾಗೂ ಎಂಜಿನಿಯರಿಂಗ್ ಕೋರ್ಸ್‌ಗಳ ಬಗ್ಗೆ ಆಸಕ್ತಿ ತೋರುತ್ತಾರೆ. ಕೃಷಿ ಕೋರ್ಸ್ ಅನ್ನು ತಾತ್ಸಾರದಿಂದ ನೋಡುತ್ತಾರೆ. ಈ ಮನೋಭಾವ ಬದಲಿಸಬೇಕು. ಈ ಕ್ಷೇತ್ರದಲ್ಲೂ ಸಾಧನೆ ಸಾಧ್ಯ ಎಂಬುದನ್ನು ಸಾಬೀತು ಪಡಿಸಬೇಕು. ಹೀಗಾಗಿ ಪಿ.ಎಚ್‌ಡಿ ಮಾಡಿದೆ’ ಎಂದು ದಿಶಾಂತ್ ಜೋಜಿತ್ ಜೇಮ್ಸ್ ತಿಳಿಸಿದರು.

ಕೇರಳದ ಎರ್ನಾಕುಲಂನ ಜೋಜಿತ್, ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಹಮ್ಮಿಕೊಂಡಿದ್ದ 55ನೇ ಘಟಿಕೋತ್ಸವ ಸಮಾರಂಭದಲ್ಲಿ ಮಂಗಳವಾರ ಡಾಕ್ಟರ್ ಆಫ್ ಫಿಲಾಸಫಿಯಲ್ಲಿ (ಕೃಷಿ ವಿಸ್ತರಣೆ) 3 ಚಿನ್ನ ಹಾಗೂ 1 ದಾನಿಗಳ ಚಿನ್ನದ ಪದಕದ ಪ್ರಮಾಣಪತ್ರ ಪಡೆದಿದ್ದಾರೆ.

‘ನಿರಂತರ ಅಧ್ಯಯನ ಯಶಸ್ಸಿನ ಮಂತ್ರ. ಈಗ ಸಾಮಾಜಿಕ ಜಾಲತಾಣಗಳ ಬಳಕೆ ಹೆಚ್ಚಿದೆ. ಈ ಮಾಧ್ಯಮವನ್ನು ಕೃಷಿಗೆ ಪೂರಕವಾಗಿ ಬಳಸಿಕೊಳ್ಳುವತ್ತ ಎಲ್ಲರೂ ಗಮನಹರಿಸಬೇಕು’ ಎಂದು ಸಲಹೆ ನೀಡಿದರು.

ಅನುವಂಶೀಯ ಮತ್ತು ಸಸ್ಯ ತಳಿ ಅಭಿವೃದ್ಧಿ ವಿಜ್ಞಾನದಲ್ಲಿ (ಸ್ನಾತಕೋತ್ತರ) 4 ಚಿನ್ನ ಜಯಿಸಿರುವ ಡಿ.ಎಸ್.ಸುಪ್ರಿತ ರಾಜ್, ‘ಪ್ರಾಧ್ಯಾಪಕರ ಮಾರ್ಗದರ್ಶನದಿಂದ ಸಾಧನೆ ಸಾಧ್ಯವಾಗಿದೆ. ಲಾಕ್‌ಡೌನ್ ಅವಧಿಯಲ್ಲಿ ಅವರು ಸಂಶೋಧನಾ ಗ್ರಂಥ ಸಿದ್ಧಪಡಿಸುವುದಕ್ಕೆ ತುಂಬಾ ಸಹಕಾರ ನೀಡಿದರು. ನಾನು ಕೃಷಿ ಪದವಿ ಪಡೆಯಬೇಕೆಂಬುದು ಅಪ್ಪ ಬಿ.ಎಸ್.ದೇವರಾಜು ಹಾಗೂ ಅಮ್ಮ ಸುನಿತಾ ಅವರ ಆಸೆಯೂ ಆಗಿತ್ತು. ಮುಂದಿನ ದಿನಗಳಲ್ಲಿ ಹಲವು ಸಂಶೋಧನೆಗಳನ್ನು ಕೈಗೊಂಡು ರೈತರಿಗೆ ಅನುಕೂಲ ಮಾಡಿಕೊಡಬೇಕೆಂಬ ಆಸೆ ಇದೆ’ ಎಂದರು.



ಡಾಕ್ಟರ್ ಆಫ್ ಫಿಲಾಸಫಿಯಲ್ಲಿ ಚಿನ್ನ ಗೆದ್ದ ದಿಶಾಂತ್ ಜೋಜಿತ್ ಜೇಮ್ಸ್ (ಕೃಷಿ ವಿಸ್ತರಣೆ; 3 ಚಿನ್ನ, 1 ದಾನಿಗಳ ಚಿನ್ನದ ಪದಕದ ಪ್ರಮಾಣ ಪತ್ರ), ಎಸ್.ಕೆ.ಕಿರಣ್ (ಮಣ್ಣು ವಿಜ್ಞಾನ ಮತ್ತು ಕೃಷಿ ರಸಾಯನಶಾಸ್ತ್ರ; 3 ಚಿನ್ನ)

‘ಎಳವೆಯಿಂದಲೂ ಕಷ್ಟ ನೋಡಿಕೊಂಡು ಬಂದಿದ್ದೇನೆ. ಜೀವನದಲ್ಲಿ ಏನಾದರೂ ಸಾಧಿಸಬೇಕೆಂಬ ಛಲ ಇತ್ತು. ಹೀಗಾಗಿ ಶ್ರಮಪಟ್ಟು ಓದಿದ್ದೆ. ಅದಕ್ಕೆ ಪ್ರತಿಫಲ ಸಿಕ್ಕಿದೆ. ಕನಕಪುರದ ಚಿಕ್ಕೇನಹಳ್ಳಿಯಲ್ಲಿ ಇರುವ 1 ಎಕರೆ ಜಮೀನಿನಲ್ಲಿ ಅಪ್ಪ ಸೊಪ್ಪು, ತರಕಾರಿ ಬೆಳೆಯುತ್ತಾರೆ. ಅದೇ ನಮಗೆ ಜೀವನಾಧಾರ. ಕೃಷಿಕರ ಕಷ್ಟಗಳ ಅನುಭವ ಇದೆ. ಈ ಕ್ಷೇತ್ರದಲ್ಲಿ ಏನಾದರೂ ಸುಧಾರಣೆ ತರಬೇಕು ಎಂಬ ಉದ್ದೇಶದಿಂದ ಕೃಷಿ ಪದವಿಗೆ ಸೇರಿದ್ದೆ’ ಎಂದು ಬಿ.ಎಸ್ಸಿಯಲ್ಲಿ (ಕೃಷಿ ಮಾರುಕಟ್ಟೆ ಮತ್ತು ಸಹಕಾರ) 6 ಚಿನ್ನದ ಪದಕ ಪಡೆದಿರುವ ಎಂ.ಎಸ್.ಮಾನಸ ಹೇಳಿದರು.



ಚಿನ್ನದ ಪದಕಗಳನ್ನು ಪಡೆದ ವಿದ್ಯಾರ್ಥಿಗಳ ಸಂಭ್ರಮ (ಎಡದಿಂದ) ಡಿ.ಎಂ.ಮೇಘನಾ (ಬಿ.ಎಸ್ಸಿ. ರೇಷ್ಮೆ ಕೃಷಿ; 4 ಚಿನ್ನ) ಎಂ.ಎಸ್‌.ರಾಮು (ಕೃಷಿ ಅರ್ಥಶಾಸ್ತ್ರ; 6 ಚಿನ್ನ), ಎಂ.ವಿನಯ್ ಕುಮಾರ್ (ಬೇಸಾಯ ವಿಜ್ಞಾನ; 4 ಚಿನ್ನ, 1 ದಾನಿಗಳ ಚಿನ್ನದ ಪದಕದ ಪ್ರಮಾಣ ಪತ್ರ), ಆಶಾ ಕಿರಣ್ (ಬಿಎಸ್ಸಿ, ಕೃಷಿ; 7 ಚಿನ್ನ, 6 ದಾನಿಗಳ ಚಿನ್ನದ ಪದಕದ ಪ್ರಮಾಣಪತ್ರ), ಜೆ.ಮೋನಿಕಾ (ಬಿ.ಎಸ್ಸಿ ಕೃಷಿ; 10 ಚಿನ್ನ), ಟಿ.ಸಿ.ಸ್ಮಿತಾ (ಬಿ.ಟೆಕ್, ಕೃಷಿ ಎಂಜಿನಿಯರಿಂಗ್; 3 ಚಿನ್ನ), ಎಂ.ಎಸ್‌.ಮಾನಸ (ಬಿ.ಎಸ್ಸಿ, ಕೃಷಿ ಮಾರುಕಟ್ಟೆ ಮತ್ತು ಸಹಕಾರ; 6 ಚಿನ್ನ) – ಪ್ರಜಾವಾಣಿ ಚಿತ್ರ

‘ಮಹಿಳೆಯರನ್ನು ಉದ್ಯಮಿಗಳನ್ನಾಗಿಸಬೇಕು’

‘ಕೃಷಿ ವಿಶ್ವವಿದ್ಯಾಲಯಗಳು ಸ್ನಾತಕ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಉದ್ದಿಮೆದಾರರ ನೇರ ಸಂಪರ್ಕ ಕಲ್ಪಿಸಬೇಕು. ಮಹಿಳೆಯರನ್ನು ಉದ್ದಿಮೆದಾರರನ್ನಾಗಿ ರೂಪಿಸುವತ್ತ ಚಿತ್ತ ಹರಿಸಬೇಕು’ ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ ಹೇಳಿದರು.

‘ಸಿರಿಧಾನ್ಯಗಳ ಉತ್ಪಾದನೆ ಹಾಗೂ ಬಳಕೆಗೆ ಆದ್ಯತೆ ನೀಡಬೇಕಿದೆ. ಸಂಶೋಧನೆ, ಬೋಧನೆ ಮತ್ತು ವಿಸ್ತರಣಾ ವಿಭಾಗಗಳಿಗೆ ಅಧಿಕ ಅನುದಾನ ಒದಗಿಸಲು ಕ್ರಮ ಕೈಗೊಳ್ಳಲಾಗುತ್ತದೆ’ ಎಂದರು.

ಇನ್ನೊಂದು ಸುದ್ದಿ 04

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ 55ನೇ ಘಟಿಕೋತ್ಸವ; ಮೋನಿಕಾ, ಆಶಾ ಕಿರಣ್ ಸಾಧನೆ

ವೈದ್ಯಕೀಯ ಸೀಟು ತಿರಸ್ಕರಿಸಿದ್ದವರಿಗೆ ‘ಚಿನ್ನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷಿ ಕ್ಷೇತ್ರದಲ್ಲೇ ಏನಾದರ ಸಾಧನೆ ಮಾಡಬೇಕೆಂಬ ಹಂಬಲದಿಂದ ವೈದ್ಯಕೀಯ ಸೀಟು ತ್ಯಜಿಸಿದ್ದ ಇಬ್ಬರು ವಿದ್ಯಾರ್ಥಿನಿಯರು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ 55ನೇ ಘಟಿಕೋತ್ಸವದಲ್ಲಿ ಅತಿ ಹೆಚ್ಚು ಚಿನ್ನದ ಪದಕ ಪಡೆದ ಹಿರಿಮೆಗೆ ಪಾತ್ರರಾಗಿದ್ದಾರೆ.

ಮಂಡ್ಯ ಕೃಷಿ ಮಹಾವಿದ್ಯಾಲಯದಲ್ಲಿ ವ್ಯಾಸಂಗ ಮಾಡಿದ್ದ ಜಿ.ಮೋನಿಕ, ಬಿಎಸ್ಸಿ ಕೃಷಿ ವಿಭಾಗದಲ್ಲಿ 10 ಚಿನ್ನದ ಪದಕಗಳನ್ನು ತಮ್ಮದಾಗಿಸಿಕೊಂಡಿದ್ದಾರೆ. ಬೆಂಗಳೂರು ಕೃಷಿ ಮಹಾವಿದ್ಯಾಲಯದ (ಜಿಕೆವಿಕೆ) ವಿದ್ಯಾರ್ಥಿನಿ ಆಶಾ ಕಿರಣ್‌ಗೆ 7 ಚಿನ್ನದ ಪದಕಗಳು ಒಲಿದಿವೆ. ದಾನಿಗಳ ಹೆಸರಿನ 6 ಚಿನ್ನದ ಪದಕದ ಪ್ರಮಾಣ ಪತ್ರವೂ ಅವರಿಗೆ ಲಭಿಸಿದೆ.

ಮಧುಗಿರಿಯ ಶಿಕ್ಷಕ ಗೋವಿಂದ ರಾಜು ಹಾಗೂ ಅಶ್ವತ್ಥಮ್ಮ ಅವರ ಪುತ್ರಿ ಮೋನಿಕ. ಅವರು 2014ರಲ್ಲಿ ನಡೆದಿದ್ದ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಗಳಿಸಿ ತುಮಕೂರು ಜಿಲ್ಲೆಗೆ ಮೊದಲಿಗರಾಗಿದ್ದರು.


‘ಕೃಷಿ ಕ್ಷೇತ್ರದಲ್ಲಿ ಸಂಶೋಧನೆಗಳು ನಡೆಯುತ್ತಲೇ ಇದ್ದರೂ ರೈತರ ಸಮಸ್ಯೆ ಕೊನೆಯಾಗಿಲ್ಲ. ಸರ್ಕಾರದ ಯೋಜನೆಗಳು ಅವರಿಗೆ ಮುಟ್ಟುತ್ತಲೇ ಇಲ್ಲ. ಹಲವು ನೀತಿಗಳ ಬಗ್ಗೆ ಅರಿವಿಲ್ಲ. ಈ ಕುರಿತು ಕೃಷಿಕರನ್ನು ಜಾಗೃತಗೊಳಿಸುವುದು ನನ್ನ ಆದ್ಯತೆ’ ಎಂದು ಮೋನಿಕ ಹೇಳಿದರು.

‘ಕೃಷಿ ಕ್ಷೇತ್ರವನ್ನು ಎಲ್ಲರೂ ತಾತ್ಸಾರದಿಂದ ಕಾಣುತ್ತಾರೆ. ಜನರ ಈ ಮನೋಭಾವ ಬದಲಿಸಬೇಕೆಂದು ಮೆಡಿಕಲ್ ಸೀಟು ಬಿಟ್ಟು ಕೃಷಿಯಲ್ಲೇ ಬಿಎಸ್ಸಿ ಮಾಡಲು ನಿರ್ಧರಿಸಿದ್ದೆ. ಆಗ ಹಲವರು ಹೀಯಾಳಿಸಿದ್ದರು. ಅವರ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳಲಿಲ್ಲ. ಬೇರೆಡೆ ಇರುವ ಕೋರ್ಸ್‌ನಲ್ಲಿ ಓದುವ ಬದಲು, ನಾವು ಓದುವ ಕೋರ್ಸ್‌ ಬೇರೆಡೆ ಬಳುವಂತೆ ಮಾಡಬೇಕು. ಅದು ನನ್ನ ಮಂತ್ರ’ ಎಂದರು.

ಕನಸು ನನಸಾಗಿದೆ: ‘ಹಿರಿಯ ವಿದ್ಯಾರ್ಥಿಗಳು ಘಟಿಕೋತ್ಸವದಲ್ಲಿ ಪದಕ ಪಡೆಯುವುದನ್ನು ನೋಡಿದಾಗ ತುಂಬಾ ಖುಷಿಯಾಗುತ್ತಿತ್ತು. ಅವರಂತೆ ನಾನು ಕೂಡ ಸಾಧನೆ ಮಾಡಬೇಕೆಂಬ ಕನಸು ಚಿಗುರೊಡೆದಿತ್ತು. ಆ ಕನಸು ಈಗ ನನಸಾಗಿದೆ’ ಎಂದು ಆಶಾ ಕಿರಣ್ ಸಂತಸ ವ್ಯಕ್ತಪಡಿಸಿದರು.

ಬೆಂಗಳೂರಿನ ಆರ್.ಟಿ.ನಗರದ ನಿವಾಸಿಯಾಗಿರುವ ಪತ್ರಕರ್ತ ಕೃಷ್ಣಪ್ಪ ಅವರ ಪುತ್ರಿ ಆಶಾ.

‘ಚಾಮರಾಜನಗರದಲ್ಲಿ ಮೆಡಿಕಲ್ ಸೀಟು ಸಿಕ್ಕಿತ್ತು. ಅದನ್ನು ಬಿಟ್ಟು ಕೃಷಿಯಲ್ಲೇ ಪದವಿ ಪಡೆಯಲು ನಿರ್ಧರಿಸಿದೆ. ಇದಕ್ಕೆ ಅಪ್ಪ, ಅಮ್ಮ ಕೂಡ ಬೆಂಬಲವಾಗಿ ನಿಂತರು. ರೈತರು ರೈತ ಸಂಪರ್ಕ ಕೇಂದ್ರಗಳತ್ತ ಸುಳಿಯುವುದೇ ಇಲ್ಲ. ಈ ಕುರಿತು ಅವರಲ್ಲಿ ಅರಿವು ಮೂಡಿಸಬೇಕು’ ಎಂದರು.



ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ 55ನೇ ಘಟಿಕೋತ್ಸವ ಸಮಾರಂಭದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅವರು ಜಿ.ಮೋನಿಕ (ಬಿ.ಎಸ್ಸಿ ಕೃಷಿ; 10 ಚಿನ್ನ) ಅವರಿಗೆ ಪದಕ ಪ್ರದಾನ ಮಾಡಿದರು. ಕೃಷಿ ಸಚಿವ ಬಿ.ಸಿ.ಪಾಟೀಲ, ವಿ.ವಿ ಕುಲಪತಿ ಡಾ.ಎಸ್.ರಾಜೇಂದ್ರ ಪ್ರಸಾದ್ ಇದ್ದರು– ಪ್ರಜಾವಾಣಿ ಚಿತ್ರ

ನೇಕಾರನ ಮಗನಿಗೆ ಚಿನ್ನದ ಗರಿ

‘ಅಪ್ಪ ಎಂ.ಆರ್.ಶ್ರೀನಿವಾಸ್, ಅಮ್ಮ ತನುಜಾ. ಇಬ್ಬರೂ ನೇಕಾರರು. ಬರುವ ಆದಾಯದಲ್ಲಿ ಜೀವನ ನಿರ್ವಹಣೆಯೇ ಕಷ್ಟ. ಅದರಲ್ಲೇ ಹಣ ಉಳಿತಾಯ ಮಾಡಿ ನನ್ನ ವಿದ್ಯಾಭ್ಯಾಸಕ್ಕೆಂದು ನೀಡುತ್ತಿದ್ದರು. ಅವರಿಗೆ ಹೊರೆಯಾಗಬಾರದೆಂದು ವಿಶ್ವವಿದ್ಯಾಲಯದಲ್ಲಿರುವ ಪೂರ್ಣ ಸಮಯದಲ್ಲಿ ಸಂಶೋಧನಾ ಪೀಠದಲ್ಲಿ ಕೆಲಸಕ್ಕೆ ಸೇರಿದ್ದೆ. ಅಲ್ಲಿ ಸಿಗುತ್ತಿದ್ದ ಫೆಲೋಶಿಪ್‌ನಿಂದ ಎಂ.ಎಸ್ಸಿ ವ್ಯಾಸಂಗ ಮುಂದುವರಿಸಿದೆ’ ಎಂದು ಎಂ.ಎಸ್.ರಾಮು ಹೇಳಿದರು.

ದೊಡ್ಡಬಳ್ಳಾಪುರದ ಶಾಂತಿನಗರ ನಿವಾಸಿಯಾಗಿರುವ ರಾಮು, ಕೃಷಿ ಅರ್ಥಶಾಸ್ತ್ರದಲ್ಲಿ (ಸ್ನಾತಕೋತ್ತರ) 6 ಚಿನ್ನದ ಪದಕ ಜಯಿಸಿದ್ದಾರೆ.

‘ಮಾರ್ಗದರ್ಶಕರಾದ ಕೆ.ಬಿ.ಉಮೇಶ್ ಎಲ್ಲ ಬಗೆಯ ಸಹಕಾರ ನೀಡಿದರು. ಸಂಶೋಧನಾ ಪ್ರಬಂಧ ರಚಿಸಲು ಅವರೇ ಲ್ಯಾಪ್‌ಟಾಪ್ ಕೊಡಿಸಿದ್ದರು. ಅವರ ಸಹಕಾರ ಮರೆಯುವಂತೆಯೇ ಇಲ್ಲ’ ಎಂದರು.

> ಐಎಎಸ್ ಅಧಿಕಾರಿ ಆಗಬೇಕೆಂಬ ಆಸೆ ಇದೆ. ಅದಕ್ಕಾಗಿ ಸಿದ್ಧತೆ ಆರಂಭಿಸಿದ್ದೇನೆ. ನಮಗೆ ಆಸಕ್ತಿ ಇರುವ ವಿಷಯದತ್ತ ಚಿತ್ತ ಹರಿಸಿದಾಗ ಯಶಸ್ಸು ಸಾಧ್ಯ
>
> **ಜಿ.ಮೋನಿಕ,** ಕೃಷಿ ಮಹಾವಿದ್ಯಾಲಯ, ಮಂಡ್ಯ

ಅಗ್ನಿ ಅವಘಡ: ತಾಯಂದಿರು, ಶಿಶುಗಳು ಪಾರು

ಹಾವೇರಿ: ರಾಣೆಬೆನ್ನೂರಿನ ಬೆಂಕಿ ಅವಘಡ ಘಟನೆಯ ಬೆನ್ನಲ್ಲೇ, ಹಾವೇರಿ ನಗರದ ಜಿಲ್ಲಾಸ್ಪತ್ರೆ ಆವರಣದಲ್ಲಿರುವ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಮಂಗಳವಾರ ಬೆಳಿಗ್ಗೆ 7 ಗಂಟೆಗೆ ಬೆಂಕಿ ಮತ್ತು ಹೊಗೆ ಕಾಣಿಸಿಕೊಂಡು, ಕೆಲಕಾಲ ಆತಂಕದ ವಾತಾವರಣ ಸೃಷ್ಟಿಯಾಯಿತು.

ಆಸ್ಪತ್ರೆಯಲ್ಲಿ ಹೊಗೆ ಆವರಿಸಿದ ತಕ್ಷಣ, ಬಾಣಂತಿಯರು ತಮ್ಮ ಪುಟ್ಟ ಕಂದಮ್ಮಗಳನ್ನು ಎದೆಗವಚಿ ಆತಂಕದಿಂದ ಹೊರಗೆ ಓಡಿ ಬಂದರು. ಎಲೆಕ್ಟ್ರಿಕಲ್ ಎಂಸಿಬಿ ಬೋರ್ಡ್‌ನಲ್ಲಿ ಲೋಡ್ ಜಾಸ್ತಿಯಾಗಿ, ವಿದ್ಯುತ್ ಉಪಕರಣ ಸುಟ್ಟು ಹೋಯಿತು. ಇದರ ಪರಿಣಾಮ ಬೆಂಕಿ ಮತ್ತು ಹೊಗೆ ಕಾಣಿಸಿಕೊಂಡಿತು. ಸ್ಥಳಕ್ಕೆ ಬಂದ ಅಗ್ನಿಶಾಮಕ ಸಿಬ್ಬಂದಿ ಬೆಂಕಿಯನ್ನು ನಂದಿಸಿದರು.

‘ಗರ್ಭಿಣಿ, ಬಾಣಂತಿಯರು ಹಾಗೂ ನವಜಾತ ಶಿಶುಗಳು ಸೇರಿದಂತೆ ಒಟ್ಟು 50 ಮಂದಿಯನ್ನು ಮತ್ತೊಂದು ಕಟ್ಟಡಕ್ಕೆ ಸ್ಥಳಾಂತರ ಮಾಡಿದ್ದೇವೆ. ಆಸ್ಪತ್ರೆ ಸಿಬ್ಬಂದಿಯ ಸಮಯಪ್ರಜ್ಞೆಯಿಂದ ಎಲ್ಲರೂ ಅಪಾಯದಿಂದ ಪಾರಾಗಿದ್ದಾರೆ’ ಎಂದು ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಪಿ.ಆರ್. ಹಾವನೂರ ‘ಪ್ರಜಾವಾಣಿ’ಗೆ ತಿಳಿಸಿದರು.



ಹಾವೇರಿಯ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಮಂಗಳವಾರ ಬೆಂಕಿ ಕಾಣಿಸಿಕೊಂಡ ಪರಿಣಾಮ, ಆಸ್ಪತ್ರೆಯ ಹೊರಗಡೆ ಕುಳಿತಿದ್ದ ಬಾಣಂತಿ

ಕಲ್ಯಾಣ ಕರ್ನಾಟಕದ ಹಲವೆಡೆ ಭಾರಿ ಮಳೆ

ಪ್ರವಾಹ: 3 ಗಂಟೆ ಆಂಬುಲೆನ್ಸ್‌ನಲ್ಲೇ ಕಾದ ಗರ್ಭಿಣಿ

ಕಲಬುರ್ಗಿ: ಕಲ್ಯಾಣ ಕರ್ನಾಟಕದ ಕಲಬುರ್ಗಿ, ಯಾದಗಿರಿ, ರಾಯಚೂರು ಹಾಗೂ ಕೊಪ್ಪಳ ಜಿಲ್ಲೆಯ ಹಲವೆಡೆ ಮಂಗಳವಾರ ಭಾರಿ ಮಳೆ ಸುರಿದಿದೆ.

ಕಲಬುರ್ಗಿ ತಾಲ್ಲೂಕಿನ ‘ಪಟ್ಟಣ’ ಗ್ರಾಮದಿಂದ ನಗರಕ್ಕೆ ಬರುವ ರಸ್ತೆ ಮಧ್ಯದ ಕಿರು ಸೇತುವೆಯು ಪ್ರವಾಹದ ನೀರಲ್ಲಿ ಮುಳುಗಿ ರಸ್ತೆ ಸಂಪರ್ಕ ಬಂದ್ ಆಗಿದ್ದರಿಂದ ಗ್ರಾಮದ ಗರ್ಭಿಣಿ ಸುಮಾರು ಮೂರು ಗಂಟೆ ಸೇತುವೆ ಆಚೆ ಆಂಬುಲೆನ್ಸ್‌ನಲ್ಲಿ ಕಾಯಬೇಕಾಯಿತು. ಅಂತಿಮವಾಗಿ 108 ಆರೋಗ್ಯ ಕವಚ ಆಂಬುಲೆನ್ಸ್ ಚಾಲಕ ಧೈರ್ಯ ಮಾಡಿ ಸೇತುವೆ ದಾಟಿ ಆಸ್ಪತ್ರೆಗೆ ಕರೆದುಕೊಂಡು ಹೋದರು.

ಮಂಗಳವಾರ ಬೆಳಗಿನ ಜಾವ 2.30ಕ್ಕೆ ಆರಂಭವಾದ ಮಳೆ ತಾಲ್ಲೂಕಿನ ಪಟ್ಟಣ, ಗೋಳಾ, ಆಳಂದ ತಾಲ್ಲೂಕಿನ ಕಡಗಂಚಿ ಗ್ರಾಮದಿಂದ ಪ್ರವಾಹವಾಗಿ ಪಟ್ಟಣ ಗ್ರಾಮದ ಬಳಿಯ ರಸ್ತೆಯನ್ನು ಬಂದ್ ಮಾಡಿತ್ತು. ಬೆಳಿಗ್ಗೆ ಗ್ರಾಮದ ರಸಿಕಾ ಪಾಟೀಲ ಎಂಬುವವರಿಗೆ ಹೆರಿಗೆ ನೋವು ಕಾಣಿಸಿಕೊಂಡಿತ್ತು. ಅವರ ಕುಟುಂಬ ಸದಸ್ಯರು 108 ಆಂಬುಲೆನ್ಸ್‌ಗೆ ಕರೆ ಮಾಡಿದ್ದರು. ಆಂಬುಲೆನ್ಸ್ ಗ್ರಾಮಕ್ಕೆ ತೆರಳಿ ಗರ್ಭಿಣಿಯನ್ನು ಕರೆದುಕೊಂಡು ಸಮೀಪದ ಸಾವಳಗಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕರೆದುಕೊಂಡು ಹೋಗಬೇಕಿತ್ತು. ಕಿರು ಸೇತುವೆ ಮೇಲೆ ರಭಸದಿಂದ ನೀರು ಹರಿಯುತ್ತಿತ್ತು. ಹೀಗಾಗಿ ಗ್ರಾಮಸ್ಥರ ಸಲಹೆ ಮೇರೆಗೆ 3 ಗಂಟೆಗಳವರೆಗೆ ಕಾಯಬೇಕಾಯಿತು.

ಬೆಳಗಾವಿ, ಹೊಸಪೇಟೆಯಲ್ಲಿ ಭಾರಿ ಮಳೆ (ಹುಬ್ಬಳ್ಳಿ ವರದಿ): ಹೊಸಪೇಟೆ ನಗರದಲ್ಲಿ ಮಂಗಳವಾರ ಭಾರಿ ಮಳೆಯಾಗಿದ್ದು, ಮಳೆಯ ತೀವ್ರತೆಗೆ ನಗರದ ಹಂಪಿ ರಸ್ತೆ, ಟಿ.ಬಿ. ಡ್ಯಾಂ ರಸ್ತೆಗಳಲ್ಲಿ ಹಳ್ಳದಂತೆ ನೀರು ಹರಿದು ವಾಹನ ಸಂಚಾರಕ್ಕೆ ತೊಡಕಾಯಿತು.

ಬೆಳಗಾವಿ ನಗರ, ಹಿರೇಬಾಗೇವಾಡಿ, ಬೈಲಹೊಂಗಲ, ಸವದತ್ತಿ, ಯರಗಟ್ಟಿ, ಹಾರೂಗೇರಿ ಸೇರಿದಂತೆ ವಿವಿಧೆಡೆ ಆಗಾಗ ಜೋರು ಮಳೆಯಾಗಿದೆ. ಅಥಣಿ ತಾಲ್ಲೂಕಿನ ಐಗಳಿ ಭಾಗದಲ್ಲಿ ಅಲ್ಲಲ್ಲಿ ಕಬ್ಬಿನ ಬೆಳೆ ನೆಲಕ್ಕುರುಳಿದೆ.



ಕಲಬುರ್ಗಿಯ ‘ಪಟ್ಟಣ’ ಗ್ರಾಮದ ಬಳಿಯ ಸೇತುವೆ ತುಂಬಿ ಹರಿಯುತ್ತಿದ್ದರೂ ಬೈಕ್ ಸವಾರರೊಬ್ಬರು ಗ್ರಾಮಸ್ಥರ ಸಹಾಯದಿಂದ ಸೇತುವೆ ದಾಟಿದರು. ಗರ್ಭಿಣಿಯನ್ನು ಕರೆದೊಯ್ಯುತ್ತಿದ್ದ ಆಂಬುಲೆನ್ಸ್ ಸೇತುವೆಯಾಚೆಯೇ ನಿಂತಿತ್ತು –ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ದೇಗುಲ ಪ್ರವೇಶ ನಿರಾಕರಣೆ: ಆರೋಪ

ಪ್ರಜಾವಾಣಿ ವಾರ್ತೆ

ಗುಬ್ಬಿ: ಮುಜರಾಯಿ ಇಲಾಖೆಗೆ ಸೇರಿದ ದೇವಸ್ಥಾನಕ್ಕೆ ಪರಿಶಿಷ್ಟ ಜಾತಿಯವರಿಗೆ ಪ್ರವೇಶ ನಿರಾಕರಿಸಿರುವ ಘಟನೆ ತಾಲ್ಲೂಕಿನ ಕಡಬ ಹೋಬಳಿಯ ದಾಸರಕಲ್ಲಹಳ್ಳಿ ಗ್ರಾಮದಲ್ಲಿ ಮಂಗಳವಾರ ನಡೆದಿದೆ.

ಗ್ರಾಮದಲ್ಲಿರುವ ರಂಗನಾಥ ಸ್ವಾಮಿ ದೇಗುಲಕ್ಕೆ ಪರಿಶಿಷ್ಟ ಜಾತಿಯವರು ಪ್ರವೇಶಿಸಬಾರದು ಎಂದು ಮೇಲ್ಜಾತಿಯವರು ತಾಕೀತು ಮಾಡಿದ್ದಾರೆ ಎಂದು ದಾಸರಕಲ್ಲಹಳ್ಳಿಯ ಪರಿಶಿಷ್ಟ ಸಮುದಾಯದವರು ಆರೋಪಿಸಿದ್ದಾರೆ.

ಮುಜರಾಯಿ ಇಲಾಖೆಯಿಂದ ದೇವಸ್ಥಾನದ ಗೋಡೆಯ ಮೇಲೆ ಬರೆಸಿದ್ದ ನಾಮಫಲಕವನ್ನು ಮೇಲ್ಜಾತಿಯವರು ಅಳಿಸಿ ಹಾಕಿದ್ದಾರೆ. ಪರಿಶಿಷ್ಟರು ಒಳಗೆ ಪ್ರವೇಶಿಸದಂತೆ ನಿಯಂತ್ರಿಸುತ್ತಿದ್ದಾರೆ. ಅಧಿಕಾರಿಗಳು ಸೂಕ್ತ ರಕ್ಷಣೆ ನೀಡಿ, ದೇವಸ್ಥಾನದ ಗೋಡೆಯ ಮೇಲೆ ಮತ್ತೆ ಸೂಚನೆ ಬರೆಸಿ ದೇವಸ್ಥಾನ ಪ್ರವೇಶಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಗ್ರಾ.ಪಂ. ಸದಸ್ಯ ಧನಂಜಯ್ ಆಗ್ರಹಿಸಿದ್ದಾರೆ.

ತಹಶೀಲ್ದಾರ್ ಸ್ಪಷ್ಟನೆ: ಘಟನೆ ಕುರಿತು ಪ್ರತಿಕ್ರಿಯಿಸಿದ ತಹಶೀಲ್ದಾರ್ ಆರತಿ, ದಾಸರಕಲ್ಲಹಳ್ಳಿಯಲ್ಲಿ ನಡೆದಿರುವ ಘಟನೆ ಬಗ್ಗೆ ಕಂದಾಯ ಇಲಾಖೆಯ ಅಧಿಕಾರಿಗಳು ಗ್ರಾಮಕ್ಕೆ ತೆರಳಿ ಪರಿಶೀಲಿಸಿದ್ದಾರೆ ಎಂದು ತಿಳಿಸಿದರು.

‘ದೇವಸ್ಥಾನದ ಗೋಡೆ ಮೇಲೆ ಅಳಿಸಿ ಹಾಕಿದ್ದ ನಾಮಫಲಕವನ್ನು ಮತ್ತೆ ಬರೆಸಲಾಗಿದೆ. ದೇವಸ್ಥಾನಕ್ಕೆ ಪ್ರವೇಶ ಮಾಡದಂತೆ ಯಾರನ್ನೂ ತಡೆದಿಲ್ಲ ಎಂದು ಗ್ರಾಮದ ಮೇಲ್ಜಾತಿಯವರು ತಿಳಿಸಿದ್ದಾರೆ. ಎಲ್ಲರಿಗೂ ಮುಕ್ತ ಅವಕಾಶ ಮಾಡಿಕೊಟ್ಟಿದ್ದಾರೆ ಎಂಬ ಮಾಹಿತಿ ಇದೆ. ಪೊಲೀಸರೊಂದಿಗೆ ಗ್ರಾಮಕ್ಕೆ ಭೇಟಿ ನೀಡಿ ಮತ್ತೊಮ್ಮೆ ಪರಿಶೀಲನೆ ನಡೆಸಲಾಗುವುದು. ಎಲ್ಲರಿಗೂ ಮುಕ್ತ ಪ್ರವೇಶಕ್ಕೆ ಅವಕಾಶ ನೀಡಲಾಗುವುದು’ ಎಂದರು.

ಮಗು ದೇಗುಲ ಪ್ರವೇಶಿಸಿದ್ದಕ್ಕೆ ದಂಡ: ಶಾಂತಿ ಸಭೆ ಬಳಿಕ ಪ್ರಕರಣ ಸುಖಾಂತ್ಯ

ಕೊಪ್ಪಳ: ಕುಷ್ಟಗಿ ತಾಲ್ಲೂಕಿನ ಹನಮಸಾಗರ ಸಮೀಪದ ಮಿಯಾಪುರದಲ್ಲಿ ಚನ್ನದಾಸರ ಸಮುದಾಯಕ್ಕೆ ಸೇರಿದ ಎರಡು ವರ್ಷದ ಮಗು ಆಟವಾಡುತ್ತಾ ಆಂಜನೇಯ ದೇವಾಲಯ ಪ್ರವೇಶಿಸಿದ ಘಟನೆಗೆ ಸಂಬಂಧಿಸಿದಂತೆ ಪಾಲಕರಿಗೆ ದಂಡ ವಿಧಿಸಿದ್ದ ಘಟನೆ ಸೆ. 4ರಂದು ನಡೆದಿದ್ದು, ಶನಿವಾರ ಶಾಂತಿ ಸಭೆ ಮೂಲಕ ಪ್ರಕರಣ ಸುಖಾಂತ್ಯ ಕಂಡಿದೆ.

ಗ್ರಾಮಕ್ಕೆ ಡಿವೈಎಸ್‌ಪಿ ರುದ್ರೇಶ ಉಜ್ಜನಕೊಪ್ಪ ತೆರಳಿ ಶಾಂತಿ ಸಭೆ ನಡೆಸಿ ಅಸ್ಪೃಶ್ಯತೆ ಆಚರಣೆ ಕುರಿತು ಗ್ರಾಮಸ್ಥರಿಗೆ ಕಠಿಣ ಎಚ್ಚರಿಕೆ ನೀಡಿ, ಮುಂದೆ ಈ ರೀತಿ ಆಗದಂತೆ ಎಚ್ಚರಿಕೆ ವಹಿಸಬೇಕು ಎಂದು ತಿಳಿ ಹೇಳಿ ತಪ್ಪೊಪ್ಪಿಗೆ ಪತ್ರ ಬರೆಸಿಕೊಂಡು ಸುಖಾಂತ್ಯ ಹಾಡಿದ್ದಾರೆ.

ಏನಿದು ಪ್ರಕರಣ?: ಗ್ರಾಮದಲ್ಲಿ ಚನ್ನದಾಸರ ಸಮುದಾಯದ ಎರಡು ವರ್ಷದ ಮಗು ಆಕಸ್ಮಿಕವಾಗಿ ದೇವಸ್ಥಾನದ ಒಳಗೆ ಹೋಗಿತ್ತು. ಮಗುವಿನ ತಂದೆ ದೇವಸ್ಥಾನ ಪ್ರವೇಶಿಸಿ ಮಗುವನ್ನು ಹೊರಗೆ ಕರೆದುಕೊಂಡು ಬಂದಿದ್ದರು. ಇದನ್ನು ಗಮನಿಸಿದ್ದ ಗ್ರಾಮದ ಕೆಲವರು ಹಾಗೂ ಅರ್ಚಕರು ಸೇರಿ ಸೆ. 12ರಂದು ಸಭೆ ನಡೆಸಿ, ದೇವಸ್ಥಾನ ಮೈಲಿಗೆಯಾಗಿದೆ. ಹೋಮ–ಹವನ ಮಾಡಿಸಿ ಸರಿ ಮಾಡಬೇಕು. ಅದಕ್ಕಾಗಿ ₹ 25 ಸಾವಿರ ದಂಡ ಹಾಗೂ ಧಾರ್ಮಿಕ ಕಾರ್ಯಗಳಿಗೆ ಖರ್ಚಾಗುವ ಹಣ ನೀಡುವಂತೆ ಷರತ್ತು ವಿಧಿಸಿದ್ದರು. ಇದನ್ನು ಖಂಡಿಸಿದ ಚನ್ನದಾಸರ ಸಮುದಾಯದವರು ತಮಗೆ ಆಗುತ್ತಿರುವ ಅನ್ಯಾಯ ತಡೆಯುವಂತೆ ಪೊಲೀಸರ ಮೊರೆ ಹೋಗಿದ್ದರು.

ಅಂಗಲಾಚುತ್ತಲೇ ಬೆಂಕಿಗಾಹುತಿ

ಒಂದನೇ ಪುಟದಿಂದ

‘ಲಕ್ಷ್ಮಿದೇವಿ ಹಾಗೂ ಭಾಗ್ಯರೇಖಾ ಅವರು ಫ್ಲ್ಯಾಟ್‌ನಲ್ಲಿ ಸಿಲುಕಿಕೊಂಡಿದ್ದರು. ಬೆಂಕಿ ಹೆಚ್ಚಾಗಿದ್ದರಿಂದ ಅವರು ಹೊರಗೆ ಬರಲು ಸಾಧ್ಯವಾಗಲಿಲ್ಲ. ಬೆಂಕಿ ಕೆನ್ನಾಲಗೆ ಹೆಚ್ಚಿತ್ತು. ಅದೇ ಮನೆಯ ಕೊಠಡಿಯಲ್ಲಿದ್ದ ಲಕ್ಷ್ಮಿದೇವಿ ಅವರ ಪತಿ ಭೀಮಸೇನ್, ಇಬ್ಬರನ್ನೂ ರಕ್ಷಿಸಲು ಯತ್ನಿಸಿ ವಿಫಲರಾದರು. ನಂತರ, ಅವರೊಬ್ಬರೇ ಹೊರಗೆ ಬಂದು ಪ್ರಾಣ ಉಳಿಸಿಕೊಂಡರು. ಅವರಿಗೆ ಗಾಯವಾಗಿದ್ದು, ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ’ ಎಂದೂ ಅವರು ತಿಳಿಸಿದರು.

ಗ್ರಿಲ್‌ನೊಳಗೆ ‘ಬಂಧಿ’ಯಾಗಿ ದಹನ; ‘ಲಕ್ಷ್ಮಿದೇವಿ ಮನೆಯ ಕೊಠಡಿಯಲ್ಲಿ ಸುಟ್ಟು ಹೋಗಿದ್ದಾರೆ. ಬೆಂಕಿಯಿಂದ ತಪ್ಪಿಸಿಕೊಳ್ಳಲು ಯತ್ನಿಸಿದ್ದ ಭಾಗ್ಯರೇಖಾ, ಮನೆಯೊಳಗಿಂದ ಹೊರಬಂದು ಬಾಲ್ಕನಿಯಲ್ಲಿ ನಿಂತಿದ್ದರು’ ಎಂದು ಪ್ರತ್ಯಕ್ಷದರ್ಶಿಯೊಬ್ಬರು ಹೇಳಿದರು.

‘ಬಾಲ್ಕನಿಯ ಒಂದು ಭಾಗದಲ್ಲಿ ಬೆಂಕಿ ಹೊತ್ತಿ ಉರಿಯುತ್ತಿತ್ತು. ಇನ್ನೊಂದು ಭಾಗದಲ್ಲಿ ನಿಂತಿದ್ದ ಭಾಗ್ಯರೇಖಾ, ತಮ್ಮನ್ನು ಬದುಕಿಸುವಂತೆ ಅಂಗಲಾಚುತ್ತಿದ್ದರು. ಗ್ರಿಲ್ ಇರದಿದ್ದರೆ ಹೊರಗೆ ಜಿಗಿದಾದರೂ ಪ್ರಾಣ ಉಳಿಸಿಕೊಳ್ಳಲು ಸಾಧ್ಯವಿತ್ತು. ರಸ್ತೆಯಲ್ಲಿ ನಿಂತಿದ್ದ ಸ್ಥಳೀಯರೂ ಅಸಹಾಯಕರಾಗಿದ್ದರು’ ಎಂದು ನೋವಿನಿಂದ ಹೇಳಿದರು.

ತಡ ರಾತ್ರಿವರೆಗೂ ಕಾರ್ಯಾಚರಣೆ: ಸಂಜೆ 4.50ಕ್ಕೆ ಸ್ಥಳಕ್ಕೆ ಬಂದ ಅಗ್ನಿಶಾಮಕ ದಳದ ಸಿಬ್ಬಂದಿ ತಡರಾತ್ರಿಯವರೆಗೂ ಕಾರ್ಯಾಚರಣೆ ನಡೆಸಿದರು.

ಅಷ್ಟರಲ್ಲಿ ಹಲವು ನಿವಾಸಿಗಳು, ಫ್ಲ್ಯಾಟ್ ನಿಂದ ಹೊರಗೆ ಓಡಿಬಂದು ಪ್ರಾಣ ಉಳಿಸಿಕೊಂಡಿದ್ದರು.

ಫ್ಲ್ಯಾಟ್‌ನಲ್ಲಿ ಉರಿಯುತ್ತಿದ್ದ ಬೆಂಕಿಯನ್ನು ಸಿಬ್ಬಂದಿ ನಂದಿಸಿದರು. ಅದೇ ಫ್ಲ್ಯಾಟ್‌ನಲ್ಲಿ ಮೃತದೇಹಗಳು ಸಿಕ್ಕವು.

ಎಂಟು ವರ್ಷಗಳ ಹಿಂದೆ ‘ಆಶ್ರಿತ್’ ಅಪಾರ್ಟ್‌ಮೆಂಟ್ ಸಮುಚ್ಚಯ ನಿರ್ಮಿಸಲಾಗಿತ್ತು. ಅದೇ ಅವಧಿಯಲ್ಲಿ ಹಲವರು ಫ್ಲ್ಯಾಟ್ ಖರೀದಿಸಿದ್ದರು. ಅವಘಡ ಸಂಬಂಧ ಬೇಗೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸ್ಥಳಕ್ಕೆ ಶಾಸಕ ಸತೀಶ್ ರೆಡ್ಡಿ, ಬಿಬಿಎಂಪಿ ಜಂಟಿ ಆಯುಕ್ತ ರಾಮಕೃಷ್ಣ, ಆಗ್ನೇಯ ವಿಭಾಗದ ಡಿಸಿಪಿ ಶ್ರೀನಾಥ್ ಜೋಷಿ ಭೇಟಿ ನೀಡಿ ಕಾರ್ಯಾಚರಣೆ ಮಾಹಿತಿ ಪಡೆದರು.

ಸ್ಥಳೀಯರ ವಾಸಕ್ಕೆ ಪ್ರತ್ಯೇಕ ವ್ಯವಸ್ಥೆ ಮಾಡಿದರು.

ಸ್ಮಾರ್ಟ್ ಎಲ್ಇಡಿ ಬೀದಿ ದೀಪ ಯೋಜನೆ–ಬೆಳಕು ಸಾಲದು, ಸುರಕ್ಷತೆಗೂ ಸವಾಲು: ಸ್ಥಳೀಯರ ಅಳಲು

ಹಳೇ ಕಂಬಕ್ಕೆ ಹೊಸ ಕೊಂಬು: ಸ್ಮಾರ್ಟ್ ದೀಪ!

• ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ಹಳೇ ವಿದ್ಯುತ್ ಕಂಬ. ಅದಕ್ಕೆ ಹೊಸತೊಂದು ಕೊಂಬು. ಆ ಕೊಂಬಿನಲ್ಲಿ ಅಳವಡಿಸಿರುವ ಬೀದಿದೀಪ ರಾತ್ರಿ ವೇಳೆ ಬೆಳಕನ್ನೇನೋ ನೀಡುತ್ತದೆ. ಆದರೆ, ಅದರ ಪ್ರಖರತೆ ಬಹಳ ಕಡಿಮೆ ಇದೆ.

ಟೆಂಡರ್ ಅನುಮೋದನೆಗೊಂಡು ಬರೋಬ್ಬರಿ ಮೂರು ವರ್ಷಗಳ ಬಳಿಕ ಅನುಷ್ಠಾನಗೊಳ್ಳುತ್ತಿರುವ ಸ್ಮಾರ್ಟ್ ಎಲ್ಇಡಿ ಬೀದಿ ದೀಪ ಯೋಜನೆಯಡಿ (ಸ್ಮಾರ್ಟ್ ಎಲ್ಇಡಿ ಸ್ಟ್ರೀಟ್ ಲೈಟಿಂಗ್) ವಸಂತನಗರ ವಾರ್ಡ್‌ನಲ್ಲಿ ಅಳವಡಿಸಿರುವ 'ಸ್ಮಾರ್ಟ್ ಬೀದಿ ದೀಪಗಳ' ವಸ್ತುಸ್ಥಿತಿ ಇದು.

'ಬೀದಿ ದೀಪದ ಜೊತೆ ವಿದ್ಯುತ್ ಕಂಬದಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾ, ಮಾಲಿನ್ಯ ಸಂವೇದಕ ಅಳವಡಿಕೆಗೆ ಅವಕಾಶ ಕಲ್ಪಿಸಲಾಗುತ್ತದೆ. ಪ್ರತಿ ದೀಪಕ್ಕೂ ನಿಸ್ತಂತು ಸಂವೇದಕ ಅಳವಡಿಸಲಾಗುತ್ತದೆ. ಕೇಂದ್ರೀಕೃತ ನಿಯಂತ್ರಣ ವ್ಯವಸ್ಥೆ ಮೂಲಕ ಬೀದಿದೀಪಗಳ ಮೇಲೆ ನಿಗಾ ಸಾಧ್ಯ. ಬೀದಿದೀಪಗಳ ವಿದ್ಯುತ್ ಬಳಕೆಯಲ್ಲಿ ಶೇ 85.50ರಷ್ಟು ಉಳಿತಾಯವಾಗುವುದರ ಜೊತೆಗೆ ಹೆಚ್ಚಿನ ಸುರಕ್ಷತೆಗೂ ಇದು ನೆರವಾಗಲಿದೆ' ಎಂದು ಬಿಬಿಎಂಪಿ ಪ್ರತಿಪಾದಿಸಿತ್ತು.

'ಈ ಬೀದಿದೀಪಗಳು ಬಿಬಿಎಂಪಿ ಈ ಹಿಂದೆ ಬಣ್ಣಿಸಿದಂತೆ 'ಸ್ಮಾರ್ಟ್' ಆಗಿಯೂ ಇಲ್ಲ. ಇವುಗಳಿಂದ ಹೆಚ್ಚಿನ ಸುರಕ್ಷತೆಯನ್ನೂ ನಿರೀಕ್ಷಿಸುವಂತಿಲ್ಲ' ಎಂದು ದೂರುತ್ತಾರೆ ವಸಂತನಗರ ನಿವಾಸಿಗಳು.

'ನಮ್ಮ ವಾರ್ಡ್‌ನಲ್ಲಿ ಎಲ್ಇಡಿ ಬೀದಿದೀಪಗಳನ್ನು ಅಳವಡಿಸುವ ಕಾರ್ಯ ಎರಡು ತಿಂಗಳಿನಿಂದ ನಡೆಯುತ್ತಿದೆ. ನಮ್ಮ ವಾರ್ಡ್‌ನಲ್ಲಿದ್ದ ಸೋಡಿಯಂ ದೀಪಗಳ ಬದಲು ಎಲ್ಇಡಿ ಬೀದಿದೀಪಗಳನ್ನು ಅಳವಡಿಸಿದ್ದಾರೆ. ವಿದ್ಯುತ್ ಉಳಿತಾಯ ಮಾಡುವ ಬಿಬಿಎಂಪಿಯ ಉದ್ದೇಶ ಒಳ್ಳೆಯದೇ ಇರಬಹುದು. ಆದರೆ, ನಮ್ಮ ಮನೆ ಬಳಿ ಅಳವಡಿಸಿರುವ ಬೀದಿ ದೀಪಗಳ ಬೆಳಕು ಏನೇನೂ ಸಾಲದು' ಎಂದು ಸಿಟಿಜನ್ಸ್ ಫಾರ್ ಸಿಟಿಜನ್ಸ್‌ನ ಸಂಸ್ಥಾಪಕ ಹಾಗೂ ವಸಂತನಗರ ನಿವಾಸಿಯಾಗಿರುವ ರಾಜ್‌ಕುಮಾರ್ ದುಗಾರ್ 'ಪ್ರಜಾವಾಣಿ'ಗೆ ತಿಳಿಸಿದರು.

' ಈ ಎಲ್ಇಡಿ ಬೀದಿದೀಪಗಳು ಕೇಂದ್ರೀಕೃತ ನಿಯಂತ್ರಣ ವ್ಯವಸ್ಥೆಯನ್ನು ಒಳಗೊಂಡಿವೆ. ಹೆಚ್ಚು ವಿದ್ಯುತ್ ಉಳಿಸಬೇಕು ಎಂಬ ಕಾರಣಕ್ಕೆ ರಾತ್ರಿ 1 ಗಂಟೆ ಬಳಿಕ ಈ ದೀಪಗಳ ಬೆಳಕಿನ ತೀವ್ರತೆಯನ್ನು ಮತ್ತಷ್ಟು ಕಡಿಮೆ ಮಾಡುತ್ತಿದ್ದಾರೆ. ಈ ಅವಧಿಯಲ್ಲಿ ರಸ್ತೆಗಳಲ್ಲಿ ಕತ್ತಲು ಆವರಿಸಿರುತ್ತದೆ. ಆಗ ಅಪರಾಧ ಕೃತ್ಯಗಳು ನಡೆದರೆ ಅದಕ್ಕೆ ಯಾರು ಹೊಣೆ. ಬೀದಿ ದೀಪಗಳನ್ನು ಅಳವಡಿಸುವ ಉದ್ದೇಶವೇ ಸುರಕ್ಷತೆ. ಅಪರಾಧ ಕೃತ್ಯಗಳನ್ನು ತಡೆಯಲು ಇವು ನೆರವಾಗಬೇಕು. ಬೀದಿದೀಪದ ಬೆಳಕು ಕತ್ತಲನ್ನು ಹೋಗಲಾಡಿಸದಿದ್ದರೆ, ಅದರಿಂದ ಪ್ರಯೋಜನ ಏನು' ಎಂದು ಅವರು ಪ್ರಶ್ನಿಸಿದರು.

ಎಲ್ಇಡಿ ಬೀದಿದೀಪ ಅಳವಡಿಸುವ ಯೋಜನೆಗೆ ಬಿಬಿಎಂಪಿ 2018ರ ಜ.11ರಂದು ಟೆಂಡರ್ ಆಹ್ವಾನಿಸಿತ್ತು. ಈ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಶಾಪೂರ್ಜಿ ಪಲ್ಲೋಂಜಿ, ಎಸ್ಎಂಎಸ್ ಇನ್‌ಫ್ರಾಸ್ಟ್ರಕ್ಚರ್ ಮತ್ತು ಸಮುದ್ರ ಎಲೆಕ್ಟ್ರಾನಿಕ್ ಸಿಸ್ಟಮ್ ಪ್ರೈವೇಟ್ ಲಿಮಿಟೆಡ್‌ಗಳ ಒಕ್ಕೂಟಕ್ಕೆ (ಎಸ್ಕೊ) ಗುತ್ತಿಗೆ ನೀಡಲಾಗಿದೆ. 2018ರ ಆಗಸ್ಟ್‌ನಲ್ಲಿ ಬಿಬಿಎಂಪಿ ಕೌನ್ಸಿಲ್ ಸಭೆಯಲ್ಲಿ ಟೆಂಡರ್‌ಗೆ ಅನುಮೋದನೆಯೂ ಸಿಕ್ಕಿತ್ತು. ವರ್ಷ ಕಳೆದರೂ ಈ ಯೋಜನೆ ಅನುಷ್ಠಾನವಾಗದ ಬಗ್ಗೆ ಹಾಗೂ ಅದರಿಂದ ಎದುರಾಗಿದ್ದ ತೊಂದರೆಗಳ ಪಾಲಿಕೆಯ ಕೆಲವು ಸದಸ್ಯರು ಕೌನ್ಸಿಲ್ ಸಭೆಯಲ್ಲಿ ಧ್ವನಿ ಎತ್ತಿದ್ದರು.

ಈ ಯೋಜನೆಯನ್ನು ವಿನ್ಯಾಸ ರಚನೆ, ಹಣಕಾಸು ವ್ಯವಸ್ಥೆ, ನಿರ್ಮಾಣ, ನಿರ್ವಹಣೆ ಮತ್ತು ವರ್ಗಾವಣೆ (ಡಿಎಫ್‌ಬಿಒಟಿ) ಮಾದರಿಯಲ್ಲಿ ಜಾರಿಗೆ ತರಲಾಗುತ್ತಿದೆ. ಹೊಸ ಬೀದಿದೀಪಗಳನ್ನು ಐದು ಹಂತಗಳಲ್ಲಿ ಅಳವಡಿಸಲು ಗುತ್ತಿಗೆ ಸಂಸ್ಥೆಗೆ 30 ತಿಂಗಳ ಕಾಲಾವಕಾಶ ನೀಡಲಾಗಿದೆ. ದಾಸರಹಳ್ಳಿ, ಆರ್.ಆರ್.ನಗರ ಹಾಗೂ ಶಿವಾಜಿನಗರ ವಿಧಾನಸಭಾ ಕ್ಷೇತ್ರಗಳ ಆಯ್ದ ವಾರ್ಡ್‌ಗಳಲ್ಲಿ ಹತ್ತು ವರ್ಷಗಳ ಅವಧಿಗೆ ಬೀದಿ ದೀಪಗಳ ಕಾರ್ಯಾಚರಣೆ ಮತ್ತು ನಿರ್ವಹಣೆಯ ಹೊಣೆಯನ್ನೂ ಗುತ್ತಿಗೆ ಸಂಸ್ಥೆಯೇ ನಿರ್ವಹಿಸಬೇಕಿದೆ. ನಗರದಲ್ಲಿ 4.85 ಲಕ್ಷ ಸಾಂಪ್ರದಾಯಿಕ ಬೀದಿದೀಪಗಳನ್ನು ಬದಲಿಸಿ ಎಲ್ಇಡಿ ಬೀದಿದೀಪಗಳನ್ನು ಈ ಒಕ್ಕೂಟವೇ ಅಳವಡಿಸಬೇಕು. ಅವುಗಳನ್ನು 10 ವರ್ಷ ನಿರ್ವಹಣೆ ಮಾಡಬೇಕಿದೆ.

'ಸ್ಮಾರ್ಟ್ ಬೆಳಕು– ನೋಟ ಕೊಳಕು'

'ಹಳೆಯ ವಿದ್ಯುತ್ ಕಂಬಗಳಿಗೆ ಕಬ್ಬಿಣದ ಕೊಳವೆ ಮೂಲಕ ಎಲ್ಇಡಿ ದೀಪಗಳನ್ನು ಅಳವಡಿಸಲಾಗಿದೆ. ಓರೆ ಕೋರೆಯಾಗಿ ಅಳವಡಿಸಿರುವ ಬೀದಿ ದೀಪಗಳು ನೋಡುವುದಕ್ಕೂ ಕೆಟ್ಟದಾಗಿ ಕಾಣಿಸುತ್ತಿವೆ' ಎಂಬ ಬಗ್ಗೆಯೂ ಸಾರ್ವಜನಿಕರಿಂದ ಆಕ್ಷೇಪ ವ್ಯಕ್ತವಾಗಿದೆ. 'ಸ್ಮಾರ್ಟ್ ಬೀದಿ ದೀಪ ಎಂದು ಹೆಸರಿಟ್ಟರೆ ಸಾಕೇ, ಅವು ನೋಡುವುದಕ್ಕೂ ಚೆಂದವಾಗಿರಬೇಕಲ್ಲವೇ. ಸ್ಮಾರ್ಟ್ ಬೆಳಕು– ನೋಟ ಕೊಳಕು ಎಂಬಂತೆ ಆಗಬಾರದಲ್ಲವೇ' ಎಂದು ವಸಂತ ನಗರದ ನಿವಾಸಿಗಳು ಪ್ರಶ್ನಿಸಿದರು.

'ವಿದ್ಯುತ್ ಉಳಿತಾಯಕ್ಕಾಗಿ ಈ ಯೋಜನೆ ಜಾರಿಗೊಳಿಸಲಾಗುತ್ತಿದೆ. ಗುತ್ತಿಗೆ ಕರಾರಿನ ಪ್ರಕಾರ ಗುತ್ತಿಗೆ ಸಂಸ್ಥೆಯು ಹಳೆಯ ವಿದ್ಯುತ್ ಕಂಬಗಳಿಗೆ ಎಲ್ಇಡಿ ದೀಪ ಅಳವಡಿಸುವುದಕ್ಕೆ ಅವಕಾಶ ಇದೆ' ಎಂದು ಬಿಬಿಎಂಪಿ ವಿಶೇಷ ಆಯುಕ್ತ (ಯೋಜನೆ) ಮನೋಜ್ ಜೈನ್ ತಿಳಿಸಿದರು.



ಪ್ರಜಾವಾಣಿ ವಿಶೇಷ ವರದಿ ಗಾಗಿ: ವಸಂತನಗರದಲ್ಲಿ ಹಳೆಯ ವಿದ್ಯುತ್ ಕಂಬಗಳಿಗೆ ಎಲ್‌ಇ. ಡಿ ದೀಪಗಳನ್ನು ಅಳವಡಿಸಿರುವ ದೃಶ್ಯ ಪ್ರಜಾವಾಣಿ ಚಿತ್ರ

ಐಪಿಎಲ್ ಕ್ರಿಕೆಟ್ ಬೆಟ್ಟಿಂಗ್; ₹ 5 ಲಕ್ಷ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐಪಿಎಲ್ ಕ್ರಿಕೆಟ್ ಪಂದ್ಯಗಳ ಮೇಲೆ ಬೆಟ್ಟಿಂಗ್ ನಡೆಸುತ್ತಿದ್ದ ಆರೋಪಿಯನ್ನು ಸಿಸಿಬಿ ಪೊಲೀಸರು ಬಂಧಿಸಿದ್ದು, ಆತನಿಂದ ₹ 5 ಲಕ್ಷ ನಗದು ಜಪ್ತಿ ಮಾಡಲಾಗಿದೆ.

'ಸಂಪಿಗೆಹಳ್ಳಿ ಠಾಣೆ ವ್ಯಾಪ್ತಿಯ ರಾಚೇನಹಳ್ಳಿ ಮುಖ್ಯರಸ್ತೆಯಲ್ಲಿ ಆರೋಪಿ ಸಾರ್ವಜನಿಕರಿಂದ ಹಣವನ್ನು ಬೆಟ್ಟಿಂಗ್‌ಗಾಗಿ ಕಟ್ಟಿಸಿಕೊಳ್ಳುತ್ತಿದ್ದ. ದಾಳಿ ಮಾಡಿ ಆತನನ್ನು ಬಂಧಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಚೆನ್ನೈ ಸೂಪರ್ ಕಿಂಗ್ಸ್ ಹಾಗೂ ಮುಂಬೈ ಇಂಡಿಯನ್ಸ್ ತಂಡಗಳ ನಡುವೆ ಸೋಮವಾರ ಕ್ರಿಕೆಟ್ ಪಂದ್ಯ ನಡೆದಿತ್ತು. ಇದೇ ಪಂದ್ಯದ ಮೇಲೆ ಆರೋಪಿ ಬೆಟ್ಟಿಂಗ್ ಕಟ್ಟಿಸಿಕೊಳ್ಳುತ್ತಿದ್ದ. ಮೊಬೈಲ್ ಮೂಲಕವೂ ಜನರನ್ನು ಸಂಪರ್ಕಿಸಿ ಹಣ ಪಡೆಯುತ್ತಿದ್ದ. ಈ ಬಗ್ಗೆ ಮಾಹಿತಿ ಸಿಗುತ್ತಿದ್ದಂತೆ ದಾಳಿ ಮಾಡಲಾಗಿತ್ತು' ಎಂದೂ ಮೂಲಗಳು ತಿಳಿಸಿವೆ.

ನಿವೃತ್ತ ನೌಕರನಿಂದ ₹19 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

ಹಾವೇರಿ: ಶಿಕ್ಷಣ ಇಲಾಖೆ ನಿವೃತ್ತ ನೌಕರನೊಬ್ಬ ಸತತ 12 ವರ್ಷ ಎರಡು ಬ್ಯಾಂಕ್ ಶಾಖೆಗಳಲ್ಲಿ ಪಿಂಚಣಿ ಪಡೆದು ₹19 ಲಕ್ಷ ವಂಚಿಸಿರುವ ಪ್ರಕರಣ ಮಂಗಳವಾರ ಬೆಳಕಿಗೆ ಬಂದಿದೆ.

ಹಾವೇರಿ ನಗರದ ಶಿವಬಸವನಗರ ಬಡಾವಣೆಯ ನಿವಾಸಿ ಎಸ್.ಎಂ. ಮಲ್ಲಿಕಾರ್ಜುನಸ್ವಾಮಿ ವಂಚಿಸಿರುವ ಆರೋಪಿ.

ಹಾವೇರಿ ನಗರದ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಶಾಖೆಯಲ್ಲಿ ಉಳಿತಾಯ ಖಾತೆಯನ್ನು ಹೊಂದಿದ್ದಾರೆ. ಈ ಶಾಖೆಯಿಂದ 2008ರಿಂದ ಪಿಂಚಣಿ ಪಡೆಯುತ್ತಿದ್ದ ಇವರು, 2009ರಲ್ಲಿ 'ಪೆನ್ಶನ್ ಪೇಮೆಂಟ್ ಆರ್ಡರ್' ಅನ್ನು ದಾವಣಗೆರೆಯ ಎಸ್‌ಬಿಐ ಬ್ಯಾಂಕ್ ಶಾಖೆಗೆ ವರ್ಗಾವಣೆ ಮಾಡಿಸಿಕೊಂಡಿದ್ದಾರೆ. ಆದರೆ, ಎರಡೂ ಬ್ಯಾಂಕ್ ಶಾಖೆಗಳಲ್ಲಿ 2020ರ ಜನವರಿವರೆಗೆ ಪಿಂಚಣಿ ಪಡೆದಿದ್ದಾರೆ.

ಒವೈಸಿ ಮನೆ ಮೇಲೆ ದಾಳಿ:5 ಮಂದಿ ಸೆರೆ

ನವದೆಹಲಿ (ಪಿಟಿಐ): ಎಐಎಂಐಎಂ ಪಕ್ಷದ ಅಧ್ಯಕ್ಷ ಅಸಾದುದ್ದೀನ್ ಒವೈಸಿ ಅವರ ಇಲ್ಲಿನ ನಿವಾಸದ ಮೇಲೆ ದಾಳಿ ನಡೆಸಿದ ಆರೋಪದ ಮೇರೆಗೆ ಹಿಂದೂ ಸೇನಾದ ಐವರನ್ನು ಬಂಧಿಸಲಾಗಿದೆ.

ಇಲ್ಲಿನ ಅಶೋಕ ರಸ್ತೆಯಲ್ಲಿರುವ ಒವೈಸಿ ನಿವಾಸದ ಮೇಲೆ ಮಂಗಳವಾರ ಸಂಜೆ ಈ ದಾಳಿ ನಡೆದಿದೆ ಎಂದು ಡಿಸಿಪಿ ದೀಪಕ್ ಯಾದವ್ ತಿಳಿಸಿದ್ದಾರೆ.

ನಮ್ಮ ಮೆಟ್ರೊ ಎರಡನೇ ಹಂತದ ವಿಸ್ತರಣೆ • 14 ತಿಂಗಳ ಕಾಮಗಾರಿ

ಸುರಂಗದಿಂದ ಹೊರ ಬರಲಿದೆ ಊರ್ಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ಮೆಟ್ರೊ' ಎರಡನೇ ಹಂತದ ವಿಸ್ತರಣೆಯಲ್ಲಿ ಕಂಟೋನ್ಮೆಂಟ್- ಶಿವಾಜಿನಗರ ಮಧ್ಯೆ ಸುರಂಗ ನಿರ್ಮಿಸುತ್ತಿರುವ ಊರ್ಜಾ ಯಂತ್ರವು ಬುಧವಾರ (ಸೆ 21) ಕಾಮಗಾರಿ ಪೂರ್ಣಗೊಳಿಸಿ ಸುರಂಗದಿಂದ ಹೊರಬರಲಿದೆ. ಯಂತ್ರವು ಸುರಂಗದಿಂದ ಹೊರಬರುವ ಕ್ಷಣಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸಾಕ್ಷಿಯಾಗಲಿದ್ದಾರೆ.

ಊರ್ಜಾ ಯಂತ್ರವು ರೀಚ್- 6 ಮಾರ್ಗದಲ್ಲಿ 2020ರ ಜುಲೈ 30ರಂದು ಸುರಂಗ ಕೊರೆಯುವ ಕಾಮಗಾರಿಯನ್ನು ಆರಂಭಿಸಿತ್ತು. ಚೀನಾದಿಂದ ಆಮದು ಮಾಡಿಕೊಂಡ ಈ ಯಂತ್ರವು ನಿತ್ಯ ಸರಾಸರಿ 2.5 ಮೀ ಉದ್ದದ ಸುರಂಗ ಕೊರೆಯುತ್ತಿತ್ತು. ಇದುವರೆಗೆ ಒಟ್ಟು 855 ಮೀಟರ್ ಉದ್ದದ ಸುರಂಗವನ್ನು ಕೊರೆದಿದೆ. ಈ ಸುರಂಗ ಮಾರ್ಗವು ಒಟ್ಟು 864 ಮೀ. ಉದ್ದವಿದೆ. ಎರಡನೇ ಹಂತದ ವಿಸ್ತರಣೆ ಕಾಮಗಾರಿಯಲ್ಲಿ ಪೂರ್ಣಗೊಳ್ಳುತ್ತಿರುವ ಮೊದಲ ಸುರಂಗ ಮಾರ್ಗವಿದು.

ಗೊಟ್ಟಿಗೆರೆ- ನಾಗವಾರ ನಡುವೆ ನಿರ್ಮಾಣವಾಗುತ್ತಿರುವ ರೀಚ್-6 ಮಾರ್ಗದಲ್ಲಿ (ಒಟ್ಟು ಉದ್ದ 21.25 ಕಿ.ಮೀ) ಡೇರಿ ವೃತ್ತದಿಂದ ನಾಗವಾರ ನಡುವೆ 13.9 ಕಿ.ಮೀ ಉದ್ದದ ಸುರಂಗ ಮಾರ್ಗ ನಿರ್ಮಾಣಗೊಳ್ಳುತ್ತಿದೆ. ಡೇರಿ ವೃತ್ತದಿಂದ ಟ್ಯಾನರಿ ರಸ್ತೆ ನಡುವಿನ 9.28 ಕಿ.ಮೀ. ಮಾರ್ಗದಲ್ಲಿ ಸುರಂಗ ಕಾಮಗಾರಿ ವಿವಿಧ ಹಂತಗಳಲ್ಲಿ ನಡೆಯುತ್ತಿದೆ. ಒಟ್ಟು ಎಂಟು ಒಂಬತ್ತು ಯಂತ್ರಗಳು ಸುರಂಗ ಕೊರೆಯುವ ಕಾರ್ಯದಲ್ಲಿ ತೊಡಗಿವೆ. ಊರ್ಜಾ ತನ್ನ ಹೊಣೆಯನ್ನು ಮುಗಿಸುವ ಹಂತದಲ್ಲಿದ್ದರೆ, ಇದೇ ಮಾರ್ಗದಲ್ಲಿ ಕಾರ್ಯಾಚರಣೆಗಿಳಿದಿರುವ ವಿಂಧ್ಯ ಯಂತ್ರವು ಊರ್ಜಾ ಯಂತ್ರಕ್ಕಿಂತ ಸುಮಾರು 50 ಮೀಟರ್‌ಗಳಷ್ಟು ಹಿಂದಿದೆ. ವಿಂಧ್ಯ ಯಂತ್ರವು ಮುಂದಿನ ತಿಂಗಳು ಕಾರ್ಯಾಚರಣೆ ಮುಗಿಸುವ ನಿರೀಕ್ಷೆ ಇದೆ.

ಅವನಿ ಹಾಗೂ 'ಲವಿ' ಯಂತ್ರಗಳು ಶಿವಾಜಿನಗರದಿಂದ ಎಂ.ಜಿ. ರಸ್ತೆ ಕಡೆಗೆ ಸುರಂಗ ನಿರ್ಮಿಸುತ್ತಿವೆ. ಆರ್‌ಟಿ01 ಯಂತ್ರವು ವೆಲ್ಲಾರ ಜಂಕ್ಷನ್‌ನಿಂದ ಲ್ಯಾಂಗ್‌ಫೋರ್ಡ್ ರಸ್ತೆ ಮಧ್ಯೆ ಮಾರ್ಚ್‌ನಿಂದ ಸುರಂಗ ಕೊರೆಯುತ್ತಿದೆ. ಎಂಟನೇಯ 'ಭದ್ರಾ' ಯಂತ್ರವನ್ನು ಇತ್ತೀಚೆಗಷ್ಟೇ ನೆಲದಡಿಗೆ ಇಳಿಸಲಾಗಿದೆ. ಟ್ಯಾನರಿ ರಸ್ತೆಯಿಂದ ನಾಗವಾರ ನಡುವಿನ ವೆಂಕಟೇಶಪುರದ ನೆಲದಡಿಯ ನಿಲ್ದಾಣದಲ್ಲಿ ಈ ಟಿಬಿಎಂ ಕಾರ್ಯಾರಂಭ ಮಾಡಲಿದೆ ಎಂದು ಬೆಂಗಳೂರು ಮೆಟ್ರೊ ರೈಲು ನಿಗಮ (ಬಿಎಂಆರ್‌ಸಿಎಲ್) ಹೇಳಿದೆ.

ಪರಿಷ್ಕೃತ ಗಡುವಿನ ಪ್ರಕಾರ ರೀಚ್-6 ಮಾರ್ಗದ ಕಾಮಗಾರಿಯು 2024ರ ಜೂನ್ ಒಳಗೆ ಪೂರ್ಣಗೊಳ್ಳಬೇಕಿದೆ.



ಊರ್ಜಾ ಸುರಂಗ ಕೊರೆಯುವ ಯಂತ್ರ

ಫಲಿತಾಂಶ ತಿರಸ್ಕರಿಸಿ ಪರೀಕ್ಷೆ ಬರೆದ 36 ವಿದ್ಯಾರ್ಥಿಗಳು ಅನುತ್ತೀರ್ಣ

ಹಳೆ ಫಲಿತಾಂಶ ಕೊಡಿ; ಪೋಷಕರ ಮೊರೆ

ಬೆಂಗಳೂರು: ಕೋವಿಡ್ ಕಾರಣಕ್ಕೆ ದ್ವಿತೀಯ ಪಿಯುಸಿಯಲ್ಲಿ ಪರೀಕ್ಷೆ ನಡೆಸದೆ ನೀಡಿದ್ದ ಫಲಿತಾಂಶದಲ್ಲಿ ಉತ್ತೀರ್ಣರಾಗಿದ್ದ ವಿದ್ಯಾರ್ಥಿಗಳ ಪೈಕಿ, ಈ ಫಲಿತಾಂಶ ತಿರಸ್ಕರಿಸಿ ಆಗಸ್ಟ್– ಸೆಪ್ಟೆಂಬರ್‌ನಲ್ಲಿ ಪರೀಕ್ಷೆ ಬರೆದ 36 ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದಾರೆ.

ಈ ಅನುತ್ತೀರ್ಣ ವಿದ್ಯಾರ್ಥಿಗಳ ಪೋಷಕರು ಇದೀಗ ತಮ್ಮ ಮಕ್ಕಳ ಹಳೆ ಫಲಿತಾಂಶವನ್ನೇ ನೀಡುವಂತೆ ಪದವಿಪೂರ್ವ ಶಿಕ್ಷಣ ಇಲಾಖೆಗೆ ಬೇಡಿಕೆ ಇಟ್ಟಿದ್ದಾರೆ. ಆದರೆ, ತಿರಸ್ಕರಿಸಿದ ಫಲಿತಾಂಶವನ್ನು ಮತ್ತೆ ನೀಡಲು ಅವಕಾಶ ಇಲ್ಲ ಸ್ಪಷ್ಟಪಡಿಸಿರುವ ಇಲಾಖೆ, ಪೋಷಕರ ಬೇಡಿಕೆಯನ್ನು ತಿರಸ್ಕರಿಸಿದೆ.

ಹೆಚ್ಚಿನ ಅಂಕ ಗಳಿಸುವ ಆಸೆಯಿಂದ 'ಅದೃಷ್ಟ' ಪರೀಕ್ಷೆಗೆ ಮುಂದಾಗಿ ನೋಂದಾಯಿಸಿದ್ದ 120ಕ್ಕೂ ಹೆಚ್ಚು ವಿದ್ಯಾರ್ಥಿಗಳು, ಪರೀಕ್ಷೆಗೆ ಹಾಜರಾಗುವ ಮೊದಲು ಇಲಾಖೆಯನ್ನು ಸಂಪರ್ಕಿಸಿ ತಮ್ಮ ಹಳೆ ಫಲಿತಾಂಶವನ್ನೇ ಉಳಿಸಿಕೊಳ್ಳುವಂತೆ ಮನವಿ ಮಾಡಿದ್ದರು ಎಂದೂ ಗೊತ್ತಾಗಿದೆ. 592 ವಿದ್ಯಾರ್ಥಿಗಳು ಫಲಿತಾಂಶ ತಿರಸ್ಕರಿಸಿ ಹೊಸ ಅಭ್ಯರ್ಥಿಗಳಾಗಿ ಪರೀಕ್ಷೆಗೆ ಹಾಜರಾಗಿದ್ದರು.

'ಕೋವಿಡ್ ಕಾರಣದಿಂದ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯನ್ನು ನಡೆಸಲು ಸಾಧ್ಯ ಆಗಿಲ್ಲ. ಹೀಗಾಗಿ, ಎಸ್ಸೆಸ್ಸೆಲ್ಸಿ, ಪ್ರಥಮ ಪಿಯುಸಿ ಮತ್ತು ಶೈಕ್ಷಣಿಕ ಚಟುವಟಿಕೆಯಲ್ಲಿ ವಿದ್ಯಾರ್ಥಿಗಳು ಗಳಿಸಿದ ಅಂಕಗಳ ಆಧಾರದಲ್ಲಿ ಫಲಿತಾಂಶ ನೀಡಲಾಗಿತ್ತು. ಈ ಫಲಿತಾಂಶದಿಂದ ತೃಪ್ತಿ ಇಲ್ಲದವರು ತಿರಸ್ಕರಿಸಿ, ಹೊಸ ವಿದ್ಯಾರ್ಥಿಗಳಾಗಿ ಪರೀಕ್ಷೆ ಬರೆಯಲು ಅವಕಾಶ ನೀಡಲಾಗಿತ್ತು. ಫಲಿತಾಂಶ ತಿರಸ್ಕರಿಸಿದ ಬಳಿಕ ಹೊಸತಾಗಿ ಪರೀಕ್ಷೆ ಬರೆಯಬೇಕು. ಹಿಂದಿನ ಫಲಿತಾಂಶ ಉಳಿಸಿಕೊಳ್ಳಲು ಅವಕಾಶ ಇಲ್ಲ ಎಂದು ಅಧಿಸೂಚನೆಯಲ್ಲೇ ತಿಳಿಸಲಾಗಿತ್ತು' ಎಂದು ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

'ಪೋಷಕರ ಒತ್ತಡದ ಕಾರಣಕ್ಕೆ ಕೆಲವು ವಿದ್ಯಾರ್ಥಿಗಳು ಫಲಿತಾಂಶವನ್ನು ತಿರಸ್ಕರಿಸಿದ್ದರು. ಈಗ ಮಕ್ಕಳ–ಪೋಷಕರು ಕಚೇರಿಗೆ ಬಂದು ಹಿಂದಿನ ಫಲಿತಾಂಶವನ್ನೇ ನೀಡುವಂತೆ ಮನವಿ ಮಾಡುತ್ತಿದ್ದಾರೆ. ಇದು ಅಸಾಧ್ಯ' ಎಂದರು.

ಇಲಾಖೆಯಿಂದ ಲಭ್ಯ ಮಾಹಿತಿಯ ಪ್ರಕಾರ, 'ಈ ಹಿಂದಿನ ಫಲಿತಾಂಶದಲ್ಲಿ 500ಕ್ಕೂ ಹೆಚ್ಚು ಅಂಕ ಪಡೆದ ಕೆಲವು ವಿದ್ಯಾರ್ಥಿಗಳ ಅಂಕ ಆಗಸ್ಟ್–ಸೆಪ್ಟೆಂಬರ್‌ನ ಪರೀಕ್ಷೆಯಲ್ಲಿ 'ಶೂನ್ಯ' ಎಂದು ನಮೂದಾಗಿದೆ. ಈ ವಿದ್ಯಾರ್ಥಿಗಳು ಪರೀಕ್ಷೆಗೆ ಗೈರಾಗಿರುವ ಸಾಧ್ಯತೆ ಇದೆ. ಅಂಥ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ವರ್ಷವೊಂದು ನಷ್ಟ ಆದಂತಾಗಿದೆ. ಅವರು ಮಾರ್ಚ್–ಏಪ್ರಿಲ್ 2022ರಲ್ಲಿ ನಡೆಯುವ ಪರೀಕ್ಷೆ ಬರೆಯಬೇಕಾಗಿದೆ.

ಯುವತಿ ಫೋಟೊ ಅಶ್ಲೀಲವಾಗಿ ಸೃಷ್ಟಿಸಿದ್ದವನ ಬಂಧನ

ಬೆಂಗಳೂರು: ಯುವತಿಯೊಬ್ಬರ ಫೋಟೊವನ್ನು ಅಶ್ಲೀಲವಾಗಿ ಸೃಷ್ಟಿಸಿ ಇನ್‌ಸ್ಟಾಗ್ರಾಂ ಆ್ಯಪ್‌ನಲ್ಲಿ ಅಪ್‌ಲೋಡ್ ಮಾಡಿದ್ದ ಆರೋಪದಡಿ ಅವಿನಾಶ್ ಎಂಬಾತನನ್ನು ಆಗ್ನೇಯ ವಿಭಾಗದ ಸೈಬರ್ ಕ್ರೈಂ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಕಲಬುರ್ಗಿಯ ಅವಿನಾಶ್, ನಗರದ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದ. ಯುವತಿಯೊಬ್ಬರನ್ನು ಇಷ್ಟಪಟ್ಟು ಮದುವೆಯಾಗಲು ಯೋಚಿಸಿದ್ದ. ಆದರೆ, ಯುವತಿ ಪೋಷಕರು ಒಪ್ಪಿರಲಿಲ್ಲ. ಅದೇ ಸಿಟ್ಟಿನಲ್ಲಿ, ಯುವತಿ ಫೋಟೊ ಹಾಗೂ ವಿಡಿಯೊಗಳನ್ನು ಅಶ್ಲೀಲವಾಗಿ ಸೃಷ್ಟಿಸಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ನೊಂದ ಯುವತಿ ಹಾಗೂ ಪೋಷಕರು ದೂರು ನೀಡಿದ್ದರು. ತನಿಖೆ ಕೈಗೊಂಡಾಗ ಆರೋಪಿ ಸಿಕ್ಕಿಬಿದ್ದ' ಎಂದೂ ತಿಳಿಸಿವೆ.

ಬಾಲಕಿಯನ್ನು ವಿವಾಹವಾಗಿ ಅತ್ಯಾಚಾರ: ಆರು ಮಂದಿಗೆ ಜೈಲು ಶಿಕ್ಷೆ

ಕೆಜಿಎಫ್: ಬಾಲಕಿಯನ್ನು ವಿವಾಹವಾಗಿ ಅತ್ಯಾಚಾರ ಎಸಗಿದ ಆರೋಪದ ಮೇರೆಗೆ ಆಂಧ್ರಪ್ರದೇಶದ ಕುಪ್ಪಂ ತಾಲ್ಲೂಕಿನ ಚಿನ್ನೂರು ಗ್ರಾಮದ ನರಸಿಂಹರಾಜು ಎಂಬುವರಿಗೆ ಪೋಕ್ಸೊ ನ್ಯಾಯಾಲಯ 15ವರ್ಷ ಜೈಲು ಶಿಕ್ಷೆ ಮತ್ತು ₹50ಸಾವಿರ ರೂಪಾಯಿ ದಂಡ ವಿಧಿಸಿದೆ.

2015ರಲ್ಲಿ ನರಸಿಂಹರಾಜು ಇತರ ಐದು ಮಂದಿ ಸಹಾಯದಿಂದ ಕೆಜಿಎಫ್ ತಾಲ್ಲೂಕಿನ ಗ್ರಾಮವೊಂದರ ಬಾಲಕಿಯನ್ನು ಬಲವಂತವಾಗಿ ಕರೆದೊಯ್ದು ವಿವಾಹವಾಗಿದ್ದ. ನಂತರ ಬಾಲಕಿ ಮೇಲೆ ಅತ್ಯಾಚಾರ ಎಸಗಿದ್ದ. ಬೇತಮಂಗಲ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಪ್ರಕರಣದ ವಿಚಾರಣೆ ನಡೆಸಿದ ಪೋಕ್ಸೊ ನ್ಯಾಯಾಧೀಶ ಬಸವರಾಜ ದೇವಮನಿ ಪುಲಕೇಶಿ, ನರಸಿಂಹರಾಜುವಿಗೆ 15ವರ್ಷ ಜೈಲು ಶಿಕ್ಷೆ ಮತ್ತು ₹50ಸಾವಿರ ದಂಡ, ಈ ಕೃತ್ಯಕ್ಕೆ ಸಹಕಾರ ನೀಡಿದ ಕೃಷ್ಣಮೂರ್ತಿ, ನಲ್ಲೂರು ನಾರಾಯಣಸ್ವಾಮಿ, ವೆಂಕಟರಾಮ, ಸಂದಮುನಿಸ್ವಾಮಿ ಮತ್ತು ರಘುಪತಿ ಅವರಿಗೆ ತಲಾ 2ವರ್ಷ ಜೈಲು ಶಿಕ್ಷೆ ಮತ್ತು ₹25ಸಾವಿರ ದಂಡ ವಿಧಿಸಿ ತೀರ್ಪು ನೀಡಿದ್ದಾರೆ.

ಅಪರಾಧ ಸುದ್ದಿ

ಡಿ.ಜೆ. ಹಳ್ಳಿ ಗಲಭೆ; ಮತ್ತೊಬ್ಬನ ಬಂಧನ

ಬೆಂಗಳೂರು: ದೇವರ ಜೀವನಹಳ್ಳಿ (ಡಿ.ಜೆ.ಹಳ್ಳಿ) ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಗಲಭೆ ಪ್ರಕರಣದ ಮತ್ತೊಬ್ಬ ಆರೋಪಿ ತಬ್ರೇಜ್‌ನನ್ನು (35) ರಾಷ್ಟ್ರೀಯ ತನಿಖಾ ದಳದ (ಎನ್ಐಎ) ಅಧಿಕಾರಿಗಳು ಬಂಧಿಸಿದ್ದಾರೆ.

2020ರ ಆಗಸ್ಟ್ 12ರಂದು ರಾತ್ರಿ ಗಲಭೆ ನಡೆದಿತ್ತು. ಡಿ.ಜೆ. ಹಳ್ಳಿ ಠಾಣೆ ಕಟ್ಟಡ, ಪೊಲೀಸ್ ವಾಹನಗಳಿಗೆ ಆರೋಪಿಗಳು ಬೆಂಕಿ ಹಚ್ಚಿದ್ದರು. ಪ್ರಕರಣದಲ್ಲಿ ಭಾಗಿಯಾಗಿದ್ದ ಆರೋಪಿ ತಬ್ರೇಜ್, ಕೃತ್ಯದ ನಂತರ ಪರಾರಿಯಾಗಿದ್ದ. ತಲೆಮರೆಸಿಕೊಂಡು ಓಡಾಡುತ್ತಿದ್ದ. ಪ್ರಕರಣದ ತನಿಖೆ ನಡೆಸುತ್ತಿದ್ದ ಎನ್ಐಎ, 109 ಆರೋಪಿಗಳ ವಿರುದ್ಧ ಈಗಾಗಲೇ ದೋಷಾರೋಪ ಪಟ್ಟಿ ಸಲ್ಲಿಸಿತ್ತು.

ಬ್ಯಾಂಕ್ ಗ್ರಾಹಕರನ್ನು ವಂಚಿಸುತ್ತಿದ್ದ ಆರೋಪಿ ಬಂಧನ

ಬೆಂಗಳೂರು: ಎಟಿಎಂ ಘಟಕಕ್ಕೆ ಹಣ ಡ್ರಾ ಮಾಡಿಕೊಳ್ಳಲು ಬರುತ್ತಿದ್ದ ಬ್ಯಾಂಕ್ ಗ್ರಾಹಕರಿಂದ ಹಣ ಪಡೆದು ವಂಚಿಸುತ್ತಿದ್ದ ಆರೋಪದಡಿ ನವೀನ್‌ಕುಮಾರ್ ಎಂಬಾತನನ್ನು ರಾಜರಾಜೇಶ್ವರಿನಗರ ಪೊಲೀಸರು ಬಂಧಿಸಿದ್ದಾರೆ.

'ನಿಮಿಷಾಂಭ ವೃತ್ತ ಬಳಿಯ ಎಸ್‌ಬಿಐ ಬ್ಯಾಂಕ್ ಎಟಿಎಂ ಬಳಿ ಬಂದಿದ್ದ ನಿವಾಸಿಯೊಬ್ಬರನ್ನು ಪರಿಚಯ ಮಾಡಿಕೊಂಡಿದ್ದ ಆರೋಪಿ, ಅವರಿಂದ ಹಣ ಪಡೆದು ವಂಚಿಸಿದ್ದ. ತನಿಖೆ ಕೈಗೊಂಡಾಗ ಆರೋಪಿ ಸಿಕ್ಕಿಬಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ. 'ಎಟಿಎಂ ಘಟಕದ ಎದುರು ನಿಲ್ಲುತ್ತಿದ್ದ ಆರೋಪಿ, ಅಲ್ಲಿಗೆ ಬಂದು ಹೋಗುತ್ತಿದ್ದ ಗ್ರಾಹಕರ ಬಳಿ 'ನನ್ನ ಹಣದ ಡ್ರಾ ಮಿತಿ ಮುಗಿದಿದೆ. ಖಾತೆಯಿಂದ ಹಣ ಬರುತ್ತಿಲ್ಲ. ತುರ್ತಾಗಿ ಹಣ ಬೇಕಿದೆ. ನೀವು ಕೊಟ್ಟರೆ, ಆನ್‌ಲೈನ್ ಮೂಲಕ ನಿಮ್ಮ ಖಾತೆಗೆ ವರ್ಗಾವಣೆ ಮಾಡುತ್ತೇನೆ' ಎಂದು ಹಣಪಡೆದು ವಂಚಿಸುತ್ತಿದ್ದ ಎಂದೂ ಮೂಲಗಳು ತಿಳಿಸಿವೆ.

ಎನ್‌ಟಿಎಂ ಶಾಲೆ ವರ್ಗಾವಣೆ: ಅರ್ಜಿ ವಜಾ

ಬೆಂಗಳೂರು: ಮೈಸೂರು ನಗರದ ಮಹಾರಾಣಿ ಮಾದರಿ ಶಾಲೆ (ಎನ್‌ಟಿಎಂ) ಜಾಗವನ್ನು ರಾಮಕೃಷ್ಣ ಆಶ್ರಮಕ್ಕೆ ವರ್ಗಾವಣೆ ಮಾಡುವುದನ್ನು ಪ್ರಶ್ನಿಸಿ ವಿದ್ಯಾರ್ಥಿಗಳು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಅನುಷಾ ಸೇರಿ ಶಾಲೆಯ 22 ವಿದ್ಯಾರ್ಥಿಗಳು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ತೀರ್ಪನ್ನು ನ್ಯಾಯಮೂರ್ತಿ ಸಚಿನ್ ಶಂಕರ್ ಮೊಗದಂ ಅವರಿದ್ದ ಪೀಠ ಮಂಗಳವಾರ ಪ್ರಕಟಿಸಿತು.

ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಯುವ ಜನ ಕೇಂದ್ರ ಸ್ಥಾಪಿಸಲು ಎನ್‌ಟಿಎಂ ಶಾಲೆಯ ಜಾಗವನ್ನು ರಾಮಕೃಷ್ಣ ಆಶ್ರಮಕ್ಕೆ ಹಸ್ತಾಂತರಿಸಲು 2013ರ ಜ.9ರಲ್ಲಿ ಹೊರಡಿಸಿರುವ ಆದೇಶ ಜಾರಿಗೆ ತರುವಂತೆ ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರು 2020ರ ನ.19ರಂದು ಮೈಸೂರು ಜಿಲ್ಲಾಧಿಕಾರಿಗೆ ಪತ್ರ ಬರೆದಿದ್ದರು. ಇದನ್ನು ಪ್ರಶ್ನಿಸಿದ್ದ ವಿದ್ಯಾರ್ಥಿಗಳು, 'ಶಾಲೆಯನ್ನು ವರ್ಗಾವಣೆ ಮಾಡುವುದರಿಂದ ಶಿಕ್ಷಣ ಪಡೆಯುವ ನಮ್ಮ ಮೂಲಭೂತ ಹಕ್ಕಿಗೆ ಚ್ಯುತಿಯಾಗಲಿದೆ' ಎಂದು ಆಕ್ಷೇಪಿಸಿದ್ದರು.

'ಶಾಲೆಯನ್ನು ವರ್ಗಾವಣೆ ಮಾಡುವುದರಿಂದ ಮೂಲಭೂತ ಹಕ್ಕು ಉಲ್ಲಂಘನೆಯಾಗುತ್ತದೆ ಎಂಬ ಅರ್ಜಿದಾರರ ವಾದ ಒಪ್ಪಲಾಗದು' ಎಂದು ಅಭಿಪ್ರಾಯಿಸಿದ ಪೀಠ, ಅರ್ಜಿ ವಜಾಗೊಳಿಸಿತು.

1892ರಲ್ಲಿ ಮೊದಲ ಬಾರಿಗೆ ಮೈಸೂರಿಗೆ ಭೇಟಿ ನೀಡಿದ್ದ ಸ್ವಾಮಿ ವಿವೇಕಾನಂದರು ನಿರಂಜನಮಠದಲ್ಲಿ ತಂಗಿದ್ದರು. ಆ ಜಾಗವನ್ನು ಮೈಸೂರು ಮಹಾನಗರ ಪಾಲಿಕೆಯು ರಾಮಕೃಷ್ಣ ಆಶ್ರಮಕ್ಕೆ ಹಸ್ತಾಂತರ ಮಾಡಿತ್ತು. ₹25 ಕೋಟಿ ವೆಚ್ಚದಲ್ಲಿ ವಿವೇಕಾನಂದ ಸ್ಮಾರಕ ಯುವ ಸಾಂಸ್ಕೃತಿಕ ಕೇಂದ್ರ ಸ್ಥಾಪಿಸಲು ಉದ್ದೇಶಿಸಲಾಗಿತ್ತು. ಎನ್‌ಟಿಎಂ ಶಾಲೆಯನ್ನು ದೇವರಾಜ ಅರಸು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯೊಂದಿಗೆ ವಿಲೀನ ಮಾಡುವಂತೆ ಆದೇಶಿಸಲಾಗಿತ್ತು.

2013ರ ಈ ಆದೇಶವನ್ನು ಏಳು ವರ್ಷಗಳ ಬಳಿಕ ಜಾರಿಗೊಳಿಸುವಂತೆ ಜಿಲ್ಲಾಧಿಕಾರಿಗೆ ಶಿಕ್ಷಣ ಇಲಾಖೆ ಆಯುಕ್ತರು ಪತ್ರ ಬರೆದಿದ್ದರು. ಈ ಪತ್ರವನ್ನು ವಿದ್ಯಾರ್ಥಿಗಳು ಪ್ರಶ್ನಿಸಿದ್ದರು.

ಆನೆಗೆ ತುರ್ತು ಚಿಕಿತ್ಸೆ ಕೋರಿ ಪಿಐಎಲ್

ಬೆಂಗಳೂರು: ತುಮಕೂರಿನಲ್ಲಿ ಖಾಸಗಿ ಒಡೆತನದಲ್ಲಿರುವ ಲಕ್ಷ್ಮಿ ಎಂಬ ಆನೆಗೆ ತುರ್ತು ವೈದ್ಯಕೀಯ ಚಿಕಿತ್ಸೆ ಕೊಡಿಸಿ ಪುನರ್ವಸತಿ ಕಲ್ಪಿಸುವ ಅಗತ್ಯವಿದೆ ಎಂದು ಹೈಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಕೆಯಾಗಿದೆ. ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಉಗ್ರಾದಿ ಗವಿಮಠ ಮಹಾಸಂಸ್ಥಾನ ಉರ್ವಕೊಂಡಕ್ಕೆ ಸೇರಿದ ಆನೆ ಇದಾಗಿದೆ.

1992ರಲ್ಲಿ ಕರ್ನಾಟಕ ಅರಣ್ಯ ಕ್ಯಾಂಪ್‌ನಲ್ಲಿ ಜನಿಸಿದ ಆನೆಮರಿಯನ್ನು 18 ತಿಂಗಳ ಬಳಿಕ 1994ರ ಮಾರ್ಚ್ 28ರಂದು ಮಠಕ್ಕೆ ಉಪ ಅರಣ್ಯ ಸಂರಕ್ಷಣಾಧಿಕಾರಿ ಹಸ್ತಾಂತರಿಸಿದ್ದರು. ಗವಿಮಠದ ಶಾಖಾ ಮಠವಾದ ತುಮಕೂರು ಜಿಲ್ಲೆಯ ನೊಣವಿನಕೆರೆ ಕಾಡಸಿದ್ದೇಶ್ವರ ಮಠದ ಸ್ವಾಧೀನದಲ್ಲಿ ಆನೆ ಇತ್ತು ಎಂದು ಪೀಪಲ್ ಫಾರ್ ಅನಿಮಲ್ ಮೈಸೂರು ಸಂಘಟನೆ ಸಲ್ಲಿಸಿರುವ ಅರ್ಜಿಯಲ್ಲಿ ತಿಳಿಸಿದೆ.

ಮೂತ್ರನಾಳ ಸೋಂಕಿನಿಂದ ಬಳಲುತ್ತಿದ್ದ ಆನೆ ಲಕ್ಷ್ಮಿಯನ್ನು 2008ರಲ್ಲಿ ಬನ್ನೇರುಘಟ್ಟ ಜೈವಿಕ ಉದ್ಯಾನಕ್ಕೆ ಸ್ಥಳಾಂತರ ಮಾಡಿ ಚಿಕಿತ್ಸೆ ನಿಡಲಾಗಿತ್ತು. ಬಳಿಕ ಮತ್ತೆ ಮಠಕ್ಕೆ ಹಸ್ತಾಂತರಿಸಲಾಗಿದೆ.

'ಆನೆಗೆ ಹೊಡೆದು ಭಿಕ್ಷಾಟನೆಗೆ ಬಳಸಿಕೊಳ್ಳುತ್ತಿರುವ ವಿಡಿಯೊ ಮತ್ತು ಚಿತ್ರಗಳನ್ನು ಗಮನಿಸಿದರೆ ಆನೆಗೆ ತುರ್ತು ಚಿಕಿತ್ಸೆಯ ಅಗತ್ಯವಿದೆ. ಈ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆದ ಬಳಿಕ ಆಂಧ್ರ ಪ್ರದೇಶಕ್ಕೆ ನಡೆಸಿಕೊಂಡೇ ಕರೆದೊಯ್ಯಲಾಗಿದೆ' ಎಂದು ಅರ್ಜಿದಾರರು ಆರೋಪಿಸಿದ್ದಾರೆ.

ಅರ್ಜಿ ವಿಚಾರಣೆ ನಡೆಸಿದ ಹಂಗಾಮಿ ಮುಖ್ಯ ನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮಾ ನೇತೃತ್ವದ ವಿಭಾಗೀಯ ಪೀಠ, ಪ್ರತಿವಾದಿಗಳಿಗೆ ನೋಟಿಸ್ ನೀಡಿ ವಿಚಾರಣೆಯನ್ನು ನ.24ಕ್ಕೆ ಮುಂದೂಡಿತು.

ಹೈಕೋರ್ಟ್ ಸುದ್ದಿ

ತಿರುಮಲ: ಅಕ್ಟೋಬರ್ 7 ರಿಂದ ತಿರುಪತಿ ವಾರ್ಷಿಕ ಬ್ರಹ್ಮೋತ್ಸವ

ಹೈದರಾಬಾದ್: ತಿರುಮಲದಲ್ಲಿ ಅ. 7ರಿಂದ ವೆಂಕಟೇಶ್ವರ ಸ್ವಾಮಿಯ ವಾರ್ಷಿಕ ಬ್ರಹ್ಮೋತ್ಸವಗಳು ಆರಂಭವಾಗಲಿವೆ.

9 ದಿನಗಳ ಆರಂಭವನ್ನು ಸೂಚಿಸುವ ಧ್ವಜಾರೋಹಣವು ಅಕ್ಟೋಬರ್ 7, ಗರುಡ ಸೇವೆ ಅಕ್ಟೋಬರ್ 11, ಚಿನ್ನದ ರಥ ಸೇವೆ ಅಕ್ಟೋಬರ್ 12, ರಥೋತ್ಸವ ಅಕ್ಟೋಬರ್ 14 ಮತ್ತು ಅಂತಿಮವಾಗಿ ಚಕ್ರಸ್ನಾನ ಹಾಗೂ ಧ್ವಜಾರೋಹಣ ಅ.15 ರಂದು ನೆರವೇರಲಿದೆ ಎಂದು ಟಿಟಿಡಿ ಅಧಿಕಾರಿಗಳು ಹೇಳಿದ್ದಾರೆ.

ಆಂಧ್ರಪ್ರದೇಶದ ವಿವಿಧ ಸ್ಥಳಗಳಿಂದ ದುರ್ಬಲ ವರ್ಗಗಳಿಗೆ ಸೇರಿದ ಭಕ್ತರಿಗೆ ವಾರ್ಷಿಕ ಬ್ರಹ್ಮೋತ್ಸವದ ಸಮಯದಲ್ಲಿ ದರ್ಶನಕ್ಕೆ ಅವಕಾಶ ನೀಡಲಾಗುವುದು. ದಿನಕ್ಕೆ 1000 ಜನರ ಮಿತಿ ನಿಗದಿಪಡಿಸಲಾಗಿದೆ ಎಂದು ಟಿಟಿಡಿ ಕಾರ್ಯನಿರ್ವಾಹಕ ಅಧಿಕಾರಿ ಜವಾಹರ್ ರೆಡ್ಡಿ ಮಂಗಳವಾರ ಹೇಳಿದರು.

ಕೋವಿಡ್ ಹಿನ್ನೆಲೆ ಈ ವರ್ಷವೂ ಸ್ವರ್ಗೀಯ ಕಾರ್ಯಕ್ರಮವನ್ನು ಏಕಾಂತದಲ್ಲಿ ನಡೆಸಲಾಗುವುದು ಎಂದು ತಿರುಮಲ ತಿರುಪತಿ ದೇವಸ್ಥಾನಗಳ (ಟಿಟಿಡಿ) ಅಧ್ಯಕ್ಷ ವೈ.ವಿ. ಸುಬ್ಬಾರೆಡ್ಡಿ ಕಳೆದ ವಾರ ಹೇಳಿದ್ದರು.

'ನ್ಯಾಯಾಂಗದಲ್ಲಿ ಕನ್ನಡದ ಬಳಕೆ ಹೆಚ್ಚುತ್ತಿದೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲ್ಲ ಕಾನೂನುಗಳನ್ನು ಕನ್ನಡಕ್ಕೆ ಅನುವಾದಿಸುವ ರಾಜ್ಯ ಸರ್ಕಾರದ ಪ್ರಯತ್ನದಿಂದಾಗಿ ನ್ಯಾಯಾಂಗದಲ್ಲಿ ಕನ್ನಡದ ಬಳಕೆ ಹೆಚ್ಚುತ್ತಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.


ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ ಹಾಗೂ ಭಾಷಾಂತರ ನಿರ್ದೇಶನಾಲಯದ ವತಿಯಿಂದ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಮಂಗಳವಾರ ನಡೆದ ಕಾನೂನು ಪದಕೋಶ ಮತ್ತು ಕೇಂದ್ರದ 15 ಕಾಯ್ದೆಗಳ ಕನ್ನಡ ಅನುವಾದದ ಪುಸ್ತಕಗಳನ್ನು ಬಿಜೆಪಿ ಶಾಸಕ ಬಿ.ಎಸ್. ಯಡಿಯೂರಪ್ಪ ಬಿಡುಗಡೆ ಮಾಡಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಮುಖ್ಯಮಂತ್ರಿ ಬೊಮ್ಮಾಯಿ, 2003ರಿಂದಲೂ ರಾಜ್ಯ ಸರ್ಕಾರವು ಹಲವು ಕಾನೂನುಗಳನ್ನು ಕನ್ನಡಕ್ಕೆ ಅನುವಾದಿಸಿದೆ. ಇದರಿಂದ ಕಾನೂನುಗಳ ಕುರಿತು ಸಾಮಾನ್ಯ ಜನರು ಅರಿಯಲು ಸಾಧ್ಯವಾಗಿದೆ. ಕಾನೂನುಗಳನ್ನು ಜನರು ಅರ್ಥ ಮಾಡಿಕೊಳ್ಳುವುದೂ ಸುಲಭವಾಯಿತು. ಈ ಬೆಳವಣಿಗೆಯನ್ನು ಗುರುತಿಸಿದ ನ್ಯಾಯಾಲಯಗಳು ನ್ಯಾಯಾಂಗದಲ್ಲೂ ಕನ್ನಡದ ಬಳಕೆಯನ್ನು ಹೆಚ್ಚಿಸಿವೆ ಎಂದರು.

ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಮಾತನಾಡಿ, 'ಎಲ್ಲ ಹೊಸ ಕಾನೂನುಗಳನ್ನು ಕನ್ನಡದಲ್ಲಿ ಪ್ರಕಟಿಸಲಾಗುವುದು. ಕೇಂದ್ರ ಮತ್ತು ರಾಜ್ಯದ ಎಲ್ಲ ಹೊಸ ಕಾಯ್ದೆಗಳನ್ನು ಕನ್ನಡಕ್ಕೆ ಅನುವಾದಿಸಿ ಬಿಡುಗಡೆ ಮಾಡಲು ಇಲಾಖೆ ಉದ್ದೇಶಿಸಿದೆ' ಎಂದರು.

ವಿಧಾನಸಭೆಯ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅಧ್ಯಕ್ಷತೆ ವಹಿಸಿದ್ದರು. ಸಚಿವರಾದ ಕೆ.ಎಸ್. ಈಶ್ವರಪ್ಪ, ಗೋವಿಂದ ಎಂ. ಕಾರಜೋಳ, ಆರಗ ಜ್ಞಾನೇಂದ್ರ, ಶಶಿಕಲಾ ಜೊಲ್ಲೆ, ಕೆ.ಸಿ. ನಾರಾಯಣ ಗೌಡ, ಎಸ್. ಅಂಗಾರ, ಕಾನೂನು ಇಲಾಖೆ ಕಾರ್ಯದರ್ಶಿ ಬಿ. ಶ್ರೀಧರ್, ಭಾಷಾಂತರ ನಿರ್ದೇಶನಾಲಯದ ನಿರ್ದೇಶಕ ಎಚ್. ವೆಂಕಟೇಶ್ ಉಪಸ್ಥಿತರಿದ್ದರು.

₹ 480 ದರ: ಭಾಷಾಂತರ ನಿರ್ದೇಶನಾಲಯವು ಪ್ರಕಟಿಸಿರುವ ಕನ್ನಡ ಕಾನೂನು ಪದಕೋಶ ಮತ್ತು ಕೇಂದ್ರದ 15 ಕಾಯ್ದೆಗಳ ಕನ್ನಡ ಅನುದಾದದ ಪ್ರತಿಗಳ ಒಟ್ಟು ದರ ₹ 480. ಸರ್ಕಾರಿ ಮುದ್ರಣಾಲಯದಲ್ಲಿ ಈ ಕೃತಿಗಳನ್ನು ಪಡೆಯಬಹುದು ಎಂದು ಭಾಷಾಂತರ ನಿರ್ದೇಶನಾಲಯದ ಅಧಿಕಾರಿಗಳು ತಿಳಿಸಿದರು.



ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆಯು ಪ್ರಕಟಿಸಿರುವ ಕನ್ನಡ ಕಾನೂನು ಪದಕೋಶ ಮತ್ತು ಕೇಂದ್ರದ 15 ಕಾಯ್ದೆಗಳ ಕನ್ನಡ ಅನುವಾದ ಕೃತಿಗಳನ್ನು ಬಿಜೆಪಿ ಶಾಸಕ ಬಿ.ಎಸ್. ಯಡಿಯೂರಪ್ಪ ಬಿಡುಗಡೆ ಮಾಡಿದರು. ವಿಧಾನಸಭೆ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ, ಇಸ್ಕಾನ್‌ನ ಭಾನು ಸ್ವಾಮಿ, ಸಚಿವರಾದ ಕೆ.ಎಸ್. ಈಶ್ವರಪ್ಪ ಮತ್ತು ಎಸ್. ಅಂಗಾರ ಇದ್ದರು– ಪ್ರಜಾವಾಣಿ ಚಿತ್ರ

ನಾಣ್ಯ ವಿತರಿಸಿ ಗೌರವ ಸಮರ್ಪಣೆ

ಇಸ್ಕಾನ್ ಸಂಸ್ಥಾಪಕ ಎ.ಸಿ. ಭಕ್ತಿವೇದಾಂತ ಸ್ವಾಮಿ ಪ್ರಭುಪಾದ ಅವರ 125ನೇ ಜನ್ಮದಿನಾಚರಣೆಯ ಪ್ರಯುಕ್ತ ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುವ ₹ 125 ಮೌಲ್ಯದ ನಾಣ್ಯವನ್ನು ಇಸ್ಕಾನ್ ಪ್ರತಿನಿಧಿಗಳು, ಮುಖ್ಯಮಂತ್ರಿ ಮತ್ತು ಸಚಿವರಿಗೆ ವಿತರಿಸಿ ಗೌರವ ಸಲ್ಲಿಸಿದರು.

ಇಸ್ಕಾನ್‌ನ ಭಾನು ಸ್ವಾಮೀಜಿ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಸಚಿವರಿಗೆ ಭಕ್ತಿವೇದಾಂತ ಸ್ವಾಮಿ ಪ್ರಭುಪಾದ ಅವರ ಚಿತ್ರವುಳ್ಳ ₹ 125ರ ನಾಣ್ಯವನ್ನು ನೀಡಿದರು.

ಪಂಚಮಸಾಲಿ ಪ್ರತಿಜ್ಞಾ ಪಂಚಾಯತ್ ಅಭಿಯಾನ; ಕೂಡಲಸಂಗಮ ಶ್ರೀ ಹೇಳಿಕೆ

ಮೀಸಲಾತಿ ನೀಡದಿದ್ದರೆ ಹೋರಾಟ ನಿರಂತರ

ಪ್ರಜಾವಾಣಿ ವಾರ್ತೆ

ಸಿಂದಗಿ (ವಿಜಯಪುರ ಜಿಲ್ಲೆ): 'ಲಿಂಗಾಯತ ಪಂಚಮಸಾಲಿ ಸಮುದಾಯಕ್ಕೆ 2 ಎ ಮೀಸಲಾತಿ ನೀಡುವಂತೆ ಆಗ್ರಹಿಸಿ ಸೆ.15 ಗಡುವು ನೀಡಲಾಗಿತ್ತು. ಆದಾಗ್ಯೂ ಸರ್ಕಾರ ಬೇಡಿಕೆ ಈಡೇರಿಸಿಲ್ಲ. ಅಕ್ಟೋಬರ್ 1ರವರೆಗೆ 4ನೇ ಹಂತದ ಚಳವಳಿಯಾಗಿ ಪಂಚಮಸಾಲಿ ಪ್ರತಿಜ್ಞಾ ಪಂಚಾಯತ್ ರಾಜ್ಯ ಅಭಿಯಾನ ಮುಂದುವರಿಸಲಾಗುವುದು' ಎಂದು ಕೂಡಲಸಂಗಮ ಲಿಂಗಾಯತ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದರು.

ಜಿಲ್ಲಾ ಮಟ್ಟದ ಪಂಚಮಸಾಲಿ ಪ್ರತಿಜ್ಞಾ ಪಂಚಾಯತ್ ರಾಜ್ಯ ಅಭಿಯಾನದ ಅಂಗವಾಗಿ ಮಂಗಳವಾರ ತಾಲ್ಲೂಕು ಲಿಂಗಾಯತ ಪಂಚಮಸಾಲಿ ಸಮಾಜದ ವತಿಯಿಂದ ಇಲ್ಲಿ ಹಮ್ಮಿಕೊಂಡಿದ್ದ 2ಎ ಮೀಸಲಾತಿ ಹಕ್ಕೊತ್ತಾಯದ 4ನೇ ಹಂತದ ಚಳವಳಿ ಸಮಾರಂಭದಲ್ಲಿ ಅವರು ಮಾತನಾಡಿದರು.

'ಅ.1ರೊಳಗೆ ಬೇಡಿಕೆ ಈಡೇರಿಸದಿದ್ದರೆ ಬೆಂಗಳೂರಿನಲ್ಲಿ ಮತ್ತೆ ಹೋರಾಟ ಪ್ರಾರಂಭಗೊಳ್ಳುವುದು' ಎಂದು ಎಚ್ಚರಿಸಿದರು.

ಕರ್ನಾಟಕ ಬೀಜ ಮತ್ತು ಸಾವಯವ ಪ್ರಮಾಣ ಸಂಸ್ಥೆ ಅಧ್ಯಕ್ಷ ವಿಜುಗೌಡ ಪಾಟೀಲ, ಪಂಚಮಸಾಲಿ ಸಮಾಜದ ರಾಷ್ಟ್ರೀಯ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ, ಕೋಲಗೇರಿಯ ಮುನೀಂದ್ರದೇವ ಶಿವಾಚಾರ್ಯ ಸ್ವಾಮೀಜಿ ಪಾಲ್ಗೊಂಡಿದ್ದರು.



ಸಿಂದಗಿಯಯಲ್ಲಿ ಮಂಗಳವಾರ ನಡೆದ ಜಿಲ್ಲಾ ಮಟ್ಟದ ಪಂಚಮಸಾಲಿ ಪ್ರತಿಜ್ಞಾ ಪಂಚಾಯತ್ ರಾಜ್ಯ ಅಭಿಯಾನ ಸಮಾರಂಭದಲ್ಲಿ ಕೂಡಲಸಂಗಮ ಲಿಂಗಾಯತ ಪಂಚಮಸಾಲಿ ಪೀಠದ ಬಸವಜಯಮೃತ್ಯುಂಜಯ ಸ್ವಾಮೀಜಿ ಸಾಮೂಹಿಕ ಪ್ರತಿಜ್ಞಾವಿಧಿ ಬೋಧಿಸಿದರು. ವಿಜಯಾನಂದ ಕಾಶಪ್ಪನವರ ಹಾಗೂ ಕೋಲಗೇರಿಯ ಮುನೀಂದ್ರದೇವ ಶಿವಾಚಾರ್ಯ ಸ್ವಾಮೀಜಿ ಇದ್ದಾರೆ.

ಪಾರಂಪರಿಕ ಕಟ್ಟಡ ಕಳೆದುಕೊಳ್ಳುವುದು ಸರಿಯಲ್ಲ: ನಗರ ತಜ್ಞರ ಅಭಿಮತ

‘ಕಾನ್‌ಸ್ಟಿಟ್ಯೂಷನ್ ಕ್ಲಬ್’ಗೆ ಬಾಲಬ್ರೂಯಿ ಏಕೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಲಬ್ರೂಯಿ ಪಾರಂಪರಿಕ ಕಟ್ಟಡದ ಜಾಗದಲ್ಲಿ ಕಾನ್‌ಸ್ಟಿಟ್ಯೂಷನ್ ಕ್ಲಬ್ (ಶಾಸಕರ ಮತ್ತು ಮಾಜಿ ಶಾಸಕರ ಮನರಂಜನಾ ಕ್ಲಬ್) ಹೊಂದುವ ಪ್ರಸ್ತಾವಕ್ಕೆ ನಗರದ ಪಾರಂಪರಿಕ ತಾಣಗಳ ರಕ್ಷಣೆ ಬಗ್ಗೆ ಕಾಳಜಿ ವಹಿಸುತ್ತಿರುವ ಸಂಘಟನೆಗಳಿಂದ ಹಾಗೂ ನಗರ ತಜ್ಞರಿಂದ ವಿರೋಧ ವ್ಯಕ್ತವಾಗಿದೆ.

ನಗರದ ಪರಂಪರೆಯ ಕುರುಹುಗಳನ್ನು ಸಾರುವ ಇಂತಹ ತಾಣಗಳನ್ನು ಯಥಾಸ್ಥಿತಿಯಲ್ಲಿ ಉಳಿಸಿಕೊಳ್ಳಬೇಕು. ಇಂತಹ ಕಟ್ಟಡಗಳ ಮೂಲಸ್ವರೂಪವನ್ನು ಕಳೆದುಕೊಂಡರೆ ಮತ್ತೆ ಅವುಗಳ ಮರುರೂಪಿಸುವುದು ಅಸಾಧ್ಯ ಎಂಬುದು ತಜ್ಞರ ಅಭಿಪ್ರಾಯ.

ಸಿದ್ದರಾಮಯ್ಯ ನೇತೃತ್ವದ ಸರ್ಕಾರದ ಅವಧಿಯಲ್ಲೂ ಕಾನ್‌ಸ್ಟಿಟ್ಯೂಷನ್ ಕ್ಲಬ್‌ಗೆ ಬಾಲಬ್ರೂಯಿ ಕಟ್ಟಡ ಬಳಸಿಕೊಳ್ಳುವ ಪ್ರಸ್ತಾವವಿತ್ತು. ಇದಕ್ಕೆ ಸಾರ್ವಜನಿಕರಿಂದ ವಿರೋಧ ವ್ಯಕ್ತವಾಗಿದ್ದರಿಂದ ಆಗಿನ ಸರ್ಕಾರ ಇದರಿಂದ ಹಿಂದೆ ಸರಿದಿತ್ತು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ವಿಧಾನ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಭಾಗವಹಿಸಿದ್ದ, ವಿಧಾನಮಂಡಲ ಸಂಸ್ಥೆಗಳ ಸಭೆಯಲ್ಲಿ ಸೋಮವಾರ (ಸೆ. 20) ಮತ್ತೆ ಈ ವಿಚಾರ ಚರ್ಚೆಯಾಗಿದೆ. ಬಾಲಬ್ರೂಯಿ ಕಟ್ಟಡದ ಜಾಗದಲ್ಲಿ ‘ಕಾನ್‌ಸ್ಟಿಟ್ಯೂಷನ್ ಕ್ಲಬ್’ ಆರಂಭಿಸುವ ಕುರಿತು ವಿಧಾನ ಪರಿಷತ್ ಸದಸ್ಯರೊಬ್ಬರು ಇತ್ತೀಚೆಗೆ ಮತ್ತೆ ಪ್ರಸ್ತಾವ ಸಲ್ಲಿಸಿದ್ದು, ಈ ಬಗ್ಗೆ ಸಭೆಯಲ್ಲಿ ಸಹಮತ ವ್ಯಕ್ತವಾಗಿದೆ ಎಂದು ಸರ್ಕಾರದ ಉನ್ನತ ಮೂಲಗಳು ತಿಳಿಸಿವೆ.



ಬಾಲಬ್ರೂಯಿ ಕಟ್ಟಡ

‘ಗಣ್ಯರ ಓಡಾಟ–ಹೆಚ್ಚಲಿದೆ ದಟ್ಟಣೆ’

‘ಬಾಲಬ್ರೂಯಿ ಕಟ್ಟಡದ ಆಸುಪಾಸಿನ ರಸ್ತೆಗಳಲ್ಲಿ ಸದಾ ಸಂಚಾರ ದಟ್ಟಣೆ ಇರುತ್ತದೆ. ಈ ಕಟ್ಟಡವನ್ನು ಕಾನ್‌ಸ್ಟಿಟ್ಯೂಷನ್ ಕ್ಲಬ್‌ಗೆ ಬಳಸಿಕೊಂಡರೆ, ಗಣ್ಯರ ಓಡಾಟ ಮತ್ತಷ್ಟು ಹೆಚ್ಚಲಿದೆ. ಇದರಿಂದ ಈ ಪ್ರದೇಶದಲ್ಲಿ ಸಂಚಾರ ದಟ್ಟನೆ ಮತ್ತಷ್ಟು ಜಾಸ್ತಿಯಾಗಿ ಸಾರ್ವಜನಿಕರಿಗೆ ಕಿರಿಕಿರಿ ಉಂಟಾಗುವ ಸಾಧ್ಯತೆ ಇದೆ’ ಎಂದು ನಗರ ತಜ್ಞರೊಬ್ಬರು ಆತಂಕ ವ್ಯಕ್ತಪಡಿಸಿದರು.

‘ಮಹಾತ್ಮ ಗಾಂಧೀಜಿ, ರವೀಂದ್ರನಾಥ ಟ್ಯಾಗೋರ್ ಅವರಂತಹ ಮಹಾನೀಯರ ಆತಿಥ್ಯಕ್ಕೆ ಬಳಕೆಯಾಗಿದ್ದ ಬಾಲಬ್ರೂಯಿ ಕಟ್ಟಡ ಈ ನಗರದ ಪಾರಂಪರಿಕ ಕುರುಹು. ಇಂತಹ ಕಟ್ಟಡವನ್ನು ಹಾಗೂ ಅಲ್ಲಿರುವ ಪ್ರಾಕೃತಿಕ ಸೌಂದರ್ಯವನ್ನು ಮರು ಸೃಷ್ಟಿಸಲು ಸಾಧ್ಯವಿಲ್ಲ. ಈ ಕಟ್ಟಡವನ್ನು ನಗರದ ಪರಂಪರೆಯ ಕತೆಯನ್ನು ಮುಂದಿನ ಪೀಳಿಗೆಗೆ ತಿಳಿಸುವ ಮ್ಯೂಸಿಯಂ ಆಗಿ ರೂಪಿಸಬೇಕು. ಕಾನ್‌ಸ್ಟಿಟ್ಯೂಷನ್ ಕ್ಲಬ್ ನಿರ್ಮಾಣಕ್ಕೆ ಪರ್ಯಾಯ ಜಾಗವನ್ನು ಹುಡುಕುವುದು ಒಳ್ಳೆಯದು’ ಎಂದು ಬಿ–ಪ್ಯಾಕ್ ಸಂಸ್ಥೆಯ ಶರತ್ ಅಭಿಪ್ರಾಯಪಟ್ಟರು.

‘ನಗರವು ಪರಿಪೂರ್ಣವಾಗಬೇಕಾದರೆ ಹಳೆ ಪರಂಪರೆಯಿಂದ ಬಂದ ಸೌಂದರ್ಯ ಹಾಗೂ ಹೊಸತನಗಳೆರಡನ್ನೂ ಜೋಡಿಸುವ ಅಗತ್ಯವಿದೆ.

‘ಕ್ಲಬ್‌ನಿಂದ ಕಟ್ಟಡಕ್ಕೆ ಹಾನಿಯಾಗದು’

‘ಬಾಲಬ್ರೂಯಿ ಕಟ್ಟಡವನ್ನು ಕಾನ್‌ಸ್ಟಿಟ್ಯೂಷನ್ ಕ್ಲಬ್‌ಗೆ ಬಳಸಿಕೊಳ್ಳಲಾಗುತ್ತದೆ ಎಂದ ಮಾತ್ರಕ್ಕೆ ಅಲ್ಲಿನ ಕಟ್ಟಡವನ್ನು ಕೆಡವಲಾಗುತ್ತದೆ ಎಂದು ಅರ್ಥವಲ್ಲ. ಈಗಿರುವ ಕಟ್ಟಡವನ್ನು ಕಾನ್‌ಸ್ಟಿಟ್ಯೂಷನ್ ಕ್ಲಬ್‌ನ ಚಟುವಟಿಕೆಗೆ ಬಳಸಿಕೊಳ್ಳಲಾಗುತ್ತದೆ ಅಷ್ಟೇ. ಕ್ಲಬ್ ಸದನ ಸಮಿತಿ ಅಧ್ಯಕ್ಷನಾಗಿದ್ದಾಗ ನಾನೂ ಇದನ್ನು ಶಿಫಾರಸು ಮಾಡಿದ್ದೆ’ ಎಂದು ಶಾಸಕ ಎನ್.ಎ.ಹ್ಯಾರಿಸ್ ತಿಳಿಸಿದರು.

‘ಬೇರೆಲ್ಲ ಕ್ಲಬ್‌ಗಳಂತೆ ಕಾನ್‌ಸ್ಟಿಟ್ಯೂಷನ್ ಕ್ಲಬ್ ಕೂಡಾ ಕಾರ್ಯನಿರ್ವಹಿಸಲಿದೆ. ಇದರಿಂದ ಯಾರಿಗೂ ಸಮಸ್ಯೆ ಇಲ್ಲ. ಬಾಲಬ್ರೂಯಿ ಕಟ್ಟಡವು ವಿಧಾನಸೌಧಕ್ಕೆ ಹತ್ತಿರದಲ್ಲಿದೆ. ಇಲ್ಲಿ ಕ್ಲಬ್ ನಿರ್ಮಿಸಿದರೆ ಶಾಸಕರು ಹಾಗೂ ಮಾಜಿ ಶಾಸಕರು ಬಂದು ಹೋಗುವುದಕ್ಕೆ ಅನುಕೂಲವಾಗುತ್ತದೆ ಎಂಬ ಕಾರಣಕ್ಕೆ ಈ ಕಟ್ಟಡವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ’ ಎಂದು ಸಮರ್ಥಿಸಿಕೊಂಡರು.

‘ಕ್ಲಬ್ ಎಂದ ಬಳಿಕ ಅಲ್ಲಿ ಗ್ರಂಥಾಲಯ, ಸಣ್ಣ ಪುಟ್ಟ ಸಭೆಗಳನ್ನು ನಡೆಸಲು ಸ್ಥಳಾವಕಾಶ ಇರಲೇ ಬೇಕು. ಕ್ರಮೇಣ ಟೆನ್ನಿಸ್ ಬ್ಯಾಡ್ಮಿಂಟನ್‌ನಂತಹ ಕ್ರೀಡೆಗೆಗಳಿಗೆ ಅವಕಾಶ ಕಲ್ಪಿಸುವ ಒತ್ತಾಯವೂ ಶಾಸಕರಿಂದ ವ್ಯಕ್ತವಾಗಬಹುದು. ಆದರೆ, ಬಾಲಬ್ರೂಯಿ ಕಟ್ಟಡದಲ್ಲಿ ಈಗ ಉಳಿದುಕೊಂಡಿರುವ ಜಾಗದಲ್ಲಿ ಇವೆಲ್ಲ ಸೌಕರ್ಯಗಳನ್ನು ಕಲ್ಪಿಸುವಷ್ಟು ಸ್ಥಳಾವಕಾಶ ಇಲ್ಲ’ ಎಂದು ನಗರ ತಜ್ಞರೊಬ್ಬರು ಅಭಿಪ್ರಾಯಪಟ್ಟರು.

‘ಕಾವೇರಿ ನಿವಾಸದ ಬಳಿ ಸುಮಾರು ಎರಡು ಎಕರೆಗಳಷ್ಟು ವಿಶಾಲವಾದ ಸರ್ಕಾರಿ ಜಾಗ ಲಭ್ಯವಿದೆ. ಸುರಕ್ಷತೆ ದೃಷ್ಟಿಯಿಂದಲೂ ಆ ಜಾಗ ಕಾನ್‌ಸ್ಟಿಟ್ಯೂಷನ್ ಕ್ಲಬ್‌ಗೆ ಪ್ರಶಸ್ತವಾಗಿದೆ. ಆ ಜಾಗದಲ್ಲಿ ಕ್ಲಬ್ ನಿರ್ಮಿಸಿದರೆ ಭವಿಷ್ಯದಲ್ಲಿ ಹೆಚ್ಚಿನ ಮೂಲಸೌಕರ್ಯಗಳನ್ನು ಹೊಂದುವುದಕ್ಕೂ ಅವಕಾಶವಿದೆ. ಈ ಪ್ರಸ್ತಾವ ಹಿಂದಿನ ಸರ್ಕಾರಕ್ಕೂ ಒಪ್ಪಿಗೆಯಾಗಿತ್ತು. ಶಾಸಕರೂ ಪಕ್ಷಭೇದ ಮರೆತು ಒಪ್ಪಿದ್ದರು. ಈಗ ಮತ್ತೆ ಬಾಲಬ್ರೂಯಿಯನ್ನೇ ಕ್ಲಬ್ ನಿರ್ಮಾಣಕ್ಕೆ ಬಳಸುವ ಚರ್ಚೆ ಏಕೆ ಮುನ್ನೆಲೆಗೆ ಬಂದಿದೆಯೋ ತಿಳಿಯದು’ ಎಂದರು.

> **ಈಗ ಉಳಿದಿರುವ ಕೆಲವೇ ಕೆಲವು ಪಾರಂಪರಿಕ ಕಟ್ಟಡಗಳನ್ನು ಮುಂದಿನ ಪೀಳಿಗೆ ಸಲುವಾಗಿ ಉಳಿಸಿಕೊಳ್ಳುವ ಅಗತ್ಯವಿದೆ**
> **ನರೇಶ್ ನರಸಿಂಹನ್,** ವಾಸ್ತುಶಿಲ್ಪಿ

ಹಳೆತನದ ಸೊಬಗು ಹಾಗೂ ಹೊಸತರ ಸಮಪಾಕವನ್ನು ಅಹಮದಾಬಾದ್‌ನಂತಹ ನಗರದಲ್ಲಿ ಕಾಣಬಹುದು. ಇಂತಹದ್ದೇ ಮಾದರಿಯನ್ನು ಬೆಂಗಳೂರು ಕೂಡಾ ರೂಪಿಸಿಕೊಳ್ಳಬೇಕು. ಈಗಲೂ ಬೆಂಗಳೂರು ಎಂದ ತಕ್ಷಣ ಲಾಲ್‌ಬಾಗ್, ಕಬ್ಬನ್ ಉದ್ಯಾನ, ಅರಮನೆಗಳು ನೆನಪಿಗೆ ಬರುವುದು, ಅವುಗಳಿಗೆ ಇರುವ ಐತಿಹಾಸಿಕ ಮಹತ್ವದಿಂದ. ಹೊರಗಿನಿಂದ ಬರುವ ಪ್ರವಾಸಿಗರೂ ಇಂತಹ ತಾಣಗಳನ್ನು ಹುಡುಕುತ್ತಾ ಹೋಗುವುದೂ ಇದೇ ಕಾರಣಕ್ಕೆ. ಬಾಲಬ್ರೂಯಿಯಲ್ಲಿ ಕಾನ್‌ಸ್ಟಿಟ್ಯೂಷನ್ ಕ್ಲಬ್ ನಿರ್ಮಾಣ ಮಾಡಿದರೆ ಅದರಿಂದಾಗುವ ಸಾಧಕ–ಬಾಧಕಗಳ ಬಗ್ಗೆ ಚರ್ಚಿಸಿ ಸರ್ಕಾರ ಈ ವಿಚಾರದಲ್ಲಿ ಮುಂದಡಿ ಇಡಬೇಕು’ ಎಂದು ಅವರು ಒತ್ತಾಯಿಸಿದರು.

‘ಶಾಸಕರಿಗೆ ಕಾನ್‌ಸ್ಟಿಟ್ಯೂಷನ್ ಕ್ಲಬ್ ನಿರ್ಮಿಸುವುದು ತಪ್ಪಲ್ಲ. ಸರ್ಕಾರ ಕಲಾಪಗಳಿಗೆ ಸಂಬಂಧಿಸಿದ ವಿವರಗಳು ಒಂದೇ ಕಡೆ ಸಿಗುವಂತೆ ಮಾಡಲು ಹಾಗೂ ಅವುಗಳ ಅಧ್ಯಯನಕ್ಕೆ ಜನಜಂಗುಳಿಗೆ ಅವಕಾಶ ಇಲ್ಲದ ಪ್ರಶಾಂತವಾದ ಜಾಗದ ಅಗತ್ಯವಿದೆ. ಬಾಲಬ್ರೂಯಿ ಕಟ್ಟಡವನ್ನೇ ಈ ಉದ್ದೇಶಕ್ಕೆ ಬಳಸುವುದು ಅನಿವಾರ್ಯವಾದರೆ ಅಲ್ಲಿನ ಮರಗಿಡಗಳಿಗೆ ಹಾನಿ ಆಗದಂತೆ ನೋಡಿಕೊಳ್ಳಲಿ. ಕಟ್ಟಡದ ಮೂಲಸ್ವರೂಪಕ್ಕೆ ಧಕ್ಕೆ ಉಂಟುಮಾಡುವುದು ಬೇಡ. ಈ ಕಟ್ಟಡದೊಂದಿಗೆ ಬೆಸೆದಿರುವ ನೆನಪುಗಳು ಹಸಿರಾಗಿಯೇ ಉಳಿಯಬೇಕು’ ಎಂದು ರಂಗಕರ್ಮಿ ಶ್ರೀನಿವಾಸ ಜಿ.ಕಪ್ಪಣ್ಣ ಸಲಹೆ ನೀಡಿದರು.

ಸುದ್ದಿ 2 ನಿಮಿಷ

ಚಿತ್ರಮಂದಿರಗಳ ನಿರ್ಬಂಧ ತೆರವಿಗೆ ಚಿಂತನೆ: ಸಚಿವ ಸುಧಾಕರ್

ಬೆಂಗಳೂರು: ಕೋವಿಡ್ ಪ್ರಕರಣಗಳ ಸಂಖ್ಯೆ ಇಳಿಮುಖವಾಗಿರುವುದರಿಂದ ಚಿತ್ರಮಂದಿರಗಳ ಮೇಲಿನ ನಿರ್ಬಂಧ ತೆರವುಗೊಳಿಸಿ, ಶೇಕಡ 100ರಷ್ಟು ಆಸನಗಳ ಭರ್ತಿಗೆ ಅವಕಾಶ ಕಲ್ಪಿಸುವ ಚಿಂತನೆ ನಡೆದಿದೆ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ಚಿತ್ರರಂಗದ ಪ್ರಮುಖರು ಮಂಗಳವಾರ ವಿಧಾನಸೌಧದಲ್ಲಿ ಸಚಿವರನ್ನು ಭೇಟಿಮಾಡಿ, ಚಿತ್ರಮಂದಿರಗಳ ಮೇಲಿನ ನಿರ್ಬಂಧ ತೆರವುಗೊಳಿಸುವಂತೆ ಒತ್ತಾಯಿಸಿದರು. ಶೇ 50ರಷ್ಟು ಆಸನಗಳ ಬದಲಿಗೆ ಎಲ್ಲ ಆಸನಗಳನ್ನೂ ಭರ್ತಿ ಮಾಡಲು ಅವಕಾಶ ನೀಡುವಂತೆ ಆಗ್ರಹಿಸಿದರು.

‘ಕೋವಿಡ್‌ನಿಂದಾಗಿ ಚಿತ್ರೋದ್ಯಮ ಹೆಚ್ಚು ನಷ್ಟ ಅನುಭವಿಸಿದೆ. ಚಿತ್ರರಂಗಕ್ಕೆ ಪೂರ್ಣ ಬೆಂಬಲ ನೀಡಲು ಸರ್ಕಾರ ಸಿದ್ಧವಾಗಿದೆ. ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಎರಡರಿಂದ ಮೂರು ದಿನಗಳಲ್ಲಿ ಸಭೆ ಸೇರಲಿದೆ. ಸಮಿತಿಯ ಸಲಹೆ ಆಧರಿಸಿ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು’ ಎಂದು ಸಚಿವರು ಹೇಳಿದರು.



ಈಗ ಪತ್ತೆಯಾಗುತ್ತಿರುವ ಕೋವಿಡ್ ಹೊಸ ಪ್ರಕರಣಗಳು, ಇತರ ರಾಜ್ಯಗಳು ಕೈಗೊಂಡಿರುವ ನಿರ್ಧಾರಗಳು ಮತ್ತು ಸಂಭವನೀಯ ಪರಿಸ್ಥಿತಿ ಕುರಿತ ಮುನ್ನೆಚ್ಚರಿಕೆಗಳನ್ನು ಆಧರಿಸಿ ನಿರ್ಧಾರಕ್ಕೆ ಬರಲಾಗುವುದು ಎಂದರು.

‘ಈಗ ರಾಜ್ಯದಲ್ಲಿ ನಿತ್ಯವೂ 600ರಿಂದ 800 ಹೊಸ ಪ್ರಕರಣಗಳು ಪತ್ತೆಯಾಗುತ್ತಿವೆ. ಕೋವಿಡ್ ಪ್ರಕರಣಗಳ ದೃಢಪ್ರಮಾಣ ದರ ಶೇಕಡ 1ಕ್ಕಿಂತ ಕಡಿಮೆ ಇದೆ. ಸಾವಿನ ಸಂಖ್ಯೆಯೂ ಗಣನೀಯವಾಗಿ ಕಡಿಮೆಯಾಗಿದೆ. ಸದ್ಯ, ಚಿತ್ರಮಂದಿರಗಳಲ್ಲಿ ಪೂರ್ಣ ಆಸನ ಭರ್ತಿಗೆ ಅವಕಾಶ ನೀಡಲು ಪೂರಕವಾದ ಸನ್ನಿವೇಶವಿದೆ’ ಎಂದು ಹೇಳಿದರು.

ಸರ್ಕಾರ ಅತ್ಯಂತ ಎಚ್ಚರಿಕೆಯಿಂದ ನಿರ್ಧಾರ ಕೈಗೊಳ್ಳಲಿದೆ. ಯಾವುದೇ ಒಂದು ತೀರ್ಮಾನವೂ ಕೋವಿಡ್ ಪ್ರಕರಣಗಳ ಸಂಖ್ಯೆ ಏರಿಕೆಯಾಗಲು ಕಾರಣವಾಗಬಾರದು ಎಂಬುದು ಸರ್ಕಾರದ ಕಾಳಜಿ ಎಂದರು.

‘ಸಿ.ಎಂ ಆಕ್ಷೇಪಾರ್ಹ ಹೇಳಿಕೆ’

ಮೈಸೂರು: ‘ಸಂವೇದನಾಶೀಲ ಮುಖ್ಯಮಂತ್ರಿ ಎನಿಸಿಕೊಂಡಿರುವ ಬಸವರಾಜ ಬೊಮ್ಮಾಯಿ ಅವರು ನವದೆಹಲಿಯ ರೈತರ ಪ್ರತಿಭಟನೆ ಕಾಂಗ್ರೆಸ್ ಪ್ರಾಯೋಜಿತ ಎಂದು ಹೇಳಿದ್ದು ಆಕ್ಷೇಪಾರ್ಹ’ ಎಂದು ಕೆಪಿಸಿಸಿ ಮಾಧ್ಯಮ ಮತ್ತು ಸಂವಹನ ವಿಭಾಗದ ಸಹ ಅಧ್ಯಕ್ಷ ವಿ.ಆರ್.ಸುದರ್ಶನ್ ತಿಳಿಸಿದರು.

‘ರೈತರ ಪರ ಹೋರಾಟ ನಡೆಸಿರುವ ಬಿ.ಎಸ್.ಯಡಿಯೂರಪ್ಪನವರ ಆಶೀರ್ವಾದ ಪಡೆದು ಮುಖ್ಯಮಂತ್ರಿಯಾದ ಬೊಮ್ಮಾಯಿ, ರೈತರ ಹೋರಾಟ ಕುರಿತು ನೀಡಿದ ಹೇಳಿಕೆ ಗೌರವ ತರುವಂತದ್ದಲ್ಲ. ಅವರು ರೈತರ ಪರವಾಗಿ ಹೋರಾಟ ಮಾಡಿಲ್ಲವೇ’ ಎಂದು ಇಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಪ್ರಶ್ನಿಸಿದರು.

‘ರೈತರ ಎಲ್ಲ ಬೇಡಿಕೆಗಳನ್ನೂ ಒಪ್ಪುವುದು ಯಾವುದೇ ಸರ್ಕಾರಕ್ಕೂ ಸಾಧ್ಯವಿಲ್ಲ. ಆದರೆ, ಅವರ ಮಾತನ್ನು ಕೇಳಿ, ಗೊಂದಲ ಪರಿಹರಿಸಿ, ಕೆಲವು ಬೇಡಿಕೆಗಳನ್ನಾದರೂ ಈಡೇರಿಸಿ ಪ್ರತಿಭಟನಕಾರರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ಕೆಲಸವನ್ನು ಕೇಂದ್ರ ಸರ್ಕಾರ ಮಾಡಬೇಕಿತ್ತು’ ಎಂದು ಪ್ರತಿಪಾದಿಸಿದರು.

‘ಬಿಜೆಪಿಯಲ್ಲಿ ನಡೆಯುತ್ತಿರುವ ಬೆಳವಣಿಗೆಗಳನ್ನು ನೋಡಿದರೆ ಅವಧಿಪೂರ್ವ ಚುನಾವಣೆ ಬರುವ ಸಾಧ್ಯತೆ ಇದೆ. ಉತ್ತರಪ್ರದೇಶದ ಚುನಾವಣೆ ಸಮಯದಲ್ಲೆ ರಾಜ್ಯದಲ್ಲೂ ಚುನಾವಣೆ ನಡೆಯಲಿದೆ ಎಂಬ ಮಾತು ಬಿಜೆಪಿಯಲ್ಲೇ ಕೇಳಿ ಬರುತ್ತಿದೆ’ ಎಂದರು.

ಡೆಂಗಿ: ಬಾಲಕಿ ಸಾವು

ಚನ್ನಗಿರಿ (ದಾವಣಗೆರೆ ಜಿ.): ತಾಲ್ಲೂಕಿನ ಕೆರೆಬಿಳಚಿ ಗ್ರಾಮದಲ್ಲಿ ಡೆಂಗಿಯಿಂದ ಬಳಲುತ್ತಿದ್ದ ಸರ್ಕಾರಿ ಉರ್ದು ಮತ್ತು ಆಂಗ್ಲ ಮಾಧ್ಯಮ ಶಾಲೆಯ 8ನೇ ತರಗತಿ ವಿದ್ಯಾರ್ಥಿನಿ ಸುಮಯಾ ಕೌಸರ್ (13) ಮಂಗಳವಾರ ದಾವಣಗೆರೆಯ ಬಾಪೂಜಿ ಆಸ್ಪತ್ರೆಯಲ್ಲಿ ಸಾವನ್ನಪ್ಪಿದ್ದಾಳೆ.

‘ಮಗಳು ಸುಮಯಾ ಕೌಸರ್‌ಗೆ ಹದಿನೈದು ದಿನಗಳ ಹಿಂದೆ ಜ್ವರ ಬಂದಿದ್ದು, ಕೆರೆಬಿಳಚಿ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದ್ದೆವು. ಆದರೂ ಜ್ವರ ಕಡಿಮೆಯಾಗದ ಕಾರಣ ಚನ್ನಗಿರಿಯ ಸರ್ಕಾರಿ ಆರೋಗ್ಯ ಕೇಂದ್ರದಲ್ಲಿ ಮೂರು ದಿನ ಇರಿಸಿದ್ದೆವು. ನಂತರ ದಾವಣಗೆರೆಯ ಬಾಪೂಜಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಚಿಕಿತ್ಸೆಗೆ ಸ್ಪಂದಿಸದೆ ಮಂಗಳವಾರ ಬೆಳಿಗ್ಗೆ ಮೃತಪಟ್ಟಿದ್ದಾಳೆ’ ಎಂದು ತಂದೆ ಮುಜಾಹಿದ್ ತಿಳಿಸಿದ್ದಾರೆ.

ಕೆರೆಬಿಳಚಿ ಗ್ರಾಮದಲ್ಲಿ ಸ್ವಚ್ಛತೆ ಇಲ್ಲದಿರುವುದೇ ಮಗಳ ಸಾವಿಗೆ ಕಾರಣ. ಚರಂಡಿಗಳೆಲ್ಲಾ ಕಸ–ಕಡ್ಡಿಗಳಿಂದ ತುಂಬಿಕೊಂಡು ಸೊಳ್ಳೆಗಳ ವಾಸಸ್ಥಾನವಾಗಿವೆ. ಸೊಳ್ಳೆಗಳು ಕಡಿದು ಗ್ರಾಮದಲ್ಲಿ ಅನೇಕ ಮಕ್ಕಳು ಜ್ವರದಿಂದ ಬಳಲುತ್ತಿದ್ದಾರೆ. ಗ್ರಾಮ ಪಂಚಾಯಿತಿಯವರು ಸ್ವಚ್ಛತೆಯ ಬಗ್ಗೆ ಕೂಡಲೇ ಗಮನಹರಿಸಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ಕಾಂಗ್ರೆಸ್ ವಿರೋಧದ ಮಧ್ಯೆ ‘ಚಾಣಕ್ಯ ವಿ.ವಿ’ ಮಸೂದೆಗೆ ಒಪ್ಪಿಗೆ

‘ಖಾಸಗಿ ವಿ.ವಿ ಭೂ ಹಂಚಿಕೆಯಲ್ಲಿ ಭಾರೀ ಹಗರಣ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದ್ದೇಶಿತ ‘ಚಾಣಕ್ಯ’ ಖಾಸಗಿ ವಿಶ್ವವಿದ್ಯಾಲಯಕ್ಕೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ(ಕೆಐಎಡಿಬಿ) ಅಭಿವೃದ್ಧಿಪಡಿಸಿದ ₹300 ಕೋಟಿ ಬೆಲೆ ಬಾಳುವ 116.16 ಎಕರೆ ಭೂಮಿಯನ್ನು ಕೇವಲ ₹50 ಕೋಟಿಗೆ ನೀಡಿದ್ದು, ಇದೊಂದು ದೊಡ್ಡ ಹಗರಣ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆರೋಪಿಸಿದರು.

ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಮಂಗಳವಾರ ರಾತ್ರಿ ಮಂಡಿಸಿದ ‘ಚಾಣಕ್ಯ ವಿಶ್ವವಿದ್ಯಾಲಯ ಮಸೂದೆ 2021’ ಕ್ಕೆ ಕಾಂಗ್ರೆಸ್ ಸದಸ್ಯರು ತೀವ್ರ ಆಕ್ರೋಶ ವ್ಯಕ್ತಪಡಿಸಿ ಸಭಾತ್ಯಾಗ ನಡೆಸಿದರು. ‘ಇಲ್ಲಿ ಕೇವಲ ಖಾಸಗಿ ವಿಶ್ವವಿದ್ಯಾಲಯ ಸ್ಥಾಪನೆ ಸಂಬಂಧ ಮಸೂದೆ ಮಂಡಿಸಲಾಗಿದ್ದು, ಮಸೂದೆಯಲ್ಲಿ ಭೂಮಿ ಹಂಚಿಕೆ ವಿಚಾರ ಇಲ್ಲ’ ಎಂದು ಅಶ್ವತ್ಥನಾರಾಯಣ ಹೇಳಿದರು.

ಅಶ್ವತ್ಥನಾರಾಯಣ ಮಸೂದೆಯನ್ನು ಮಂಡಿಸುತ್ತಿದ್ದಂತೆ ಸಿದ್ದರಾಮಯ್ಯ ಅವರು ತಕರಾರು ಎತ್ತಿದ್ದರು. ‘ಖಾಸಗಿ ವಿಶ್ವವಿದ್ಯಾಲಯಕ್ಕೆ ಕೆಐಎಡಿಬಿ ಭೂಮಿಯನ್ನು ಅತಿ ಕಡಿಮೆ ದರಕ್ಕೆ ನೀಡಿದ್ದೀರಿ. ಏರೋಸ್ಪೇಸ್ ಪಾರ್ಕ್‌ನಲ್ಲಿ ಅಭಿವೃದ್ಧಿಪಡಿಸಿರುವ ಭೂಮಿ ಕೇವಲ ಉದ್ಯಮದ ಉದ್ದೇಶಕ್ಕಾಗಿ ಮಾತ್ರ ಹಂಚಿಕೆ ಮಾಡಬೇಕು. ಆದರೆ, ಅಲ್ಲಿ ವಿಶ್ವವಿದ್ಯಾಲಯ ಸ್ಥಾಪನೆಗೆ ಅವಕಾಶ ನೀಡುತ್ತಿದ್ದೀರಿ. ಇದು ಕೆಐಎಡಿಬಿ ಉದ್ದೇಶಕ್ಕೆ ವಿರುದ್ಧವಾಗಿದೆ’ ಎಂದು ಹರಿಹಾಯ್ದರು.



ವಿಧಾನ ಮಂಡಲ

‘ಅಲ್ಲಿ ಒಂದು ಎಕರೆಗೆ ₹1.50 ಕೋಟಿ ಇದೆ. 116 ಎಕರೆ 16 ಗುಂಟೆಗೆ ಸುಮಾರು ₹300 ಕೋಟಿ ಆಗಬಹುದು. ಕೈಗಾರಿಕಾ ಪ್ರದೇಶದಲ್ಲಿ ಖಾಸಗಿ ವಿಶ್ವವಿದ್ಯಾಲಯಕ್ಕೆ ಕೊಡಲು ಬರುವುದಿಲ್ಲ. ಯಾವ ಆಧಾರದಲ್ಲಿ ಭೂಮಿ ಕೊಟ್ಟಿದ್ದೀರಿ? ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಕ್ಕೆ ಹಣ ಇಲ್ಲ ಎನ್ನುತ್ತೀರಿ. ಆದರೆ, ಸರ್ಕಾರದ ಬೊಕ್ಕಸಕ್ಕೆ ನಷ್ಟ ಮಾಡಿಕೊಂಡು ಹೇಗೆ ಕೊಟ್ಟಿದ್ದೀರಿ’ ಎಂದು ಗುಡುಗಿದರು.

> **ಉನ್ನತ ಉದ್ದೇಶದಿಂದ ಸ್ಥಾಪಿಸಲಾಗುವ ಶಿಕ್ಷಣ ಸಂಸ್ಥೆಗಳಿಗೆ ಸರ್ಕಾರ ಭೂಮಿಯೂ ಸೇರಿದಂತೆ ಎಲ್ಲ ರೀತಿಯ ಪ್ರೋತ್ಸಾಹ ನೀಡಬೇಕು**
> **ವಿಶ್ವೇಶ್ವರ ಹೆಗಡೆ ಕಾಗೇರಿ,** ಸಭಾಧ್ಯಕ್ಷ

ಇದಕ್ಕೆ ಧ್ವನಿಗೂಡಿಸಿದ ಕಾಂಗ್ರೆಸ್‌ನ ಕೆ.ಆರ್.ರಮೇಶ್‌ಕುಮಾರ್, ‘ಈ ಚಾಣಕ್ಯ ವಿಶ್ವವಿದ್ಯಾಲಯದ ಹಿಂದೆ ಚಾಣಕ್ಯರು ಇದ್ದಾರೆ’ ಎಂದು ವಂಗ್ಯವಾಡಿದರು.

ಇದು ಖಾಸಗಿ ವಿಶ್ವವಿದ್ಯಾಲಯ ಸ್ಥಾಪನೆಗೆ ಸಂಬಂಧಿಸಿದ ಮಸೂದೆಯಾಗಿದ್ದು, ಇಲ್ಲಿ ಜಮೀನಿನ ಬಗ್ಗೆ ಪ್ರಸ್ತಾಪ ಇಲ್ಲ. ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ವಿಷಯ ಇದ್ದರೆ ಪ್ರಸ್ತಾಪಿಸಿ ಎಂದು ಡಾ.ಅಶ್ವತ್ಥನಾರಾಯಣ ಹೇಳಿದರು.

> **ನಮ್ಮ ಹಳ್ಳಿ ವಿದ್ಯಾರ್ಥಿಗಳು ವಿಶ್ವ ಮಟ್ಟದಲ್ಲಿ ಸ್ಪರ್ಧಿಸಲು ಇಂತಹ ವಿಶ್ವವಿದ್ಯಾಲಯಗಳ ಅವಶ್ಯಕತೆ ಇದೆ. ಅವುಗಳಿಗೆ ಎಲ್ಲ ರೀತಿ ರಿಯಾಯ್ತಿ ನೀಡುತ್ತೇವೆ**
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

‘ಹಾಗಿದ್ದರೆ, ಆ ವಿಶ್ವವಿದ್ಯಾಲಯಕ್ಕೆ ಕೊಟ್ಟಿರುವ ಭೂಮಿ ಯಾವುದು? ಅದು ಕೆಐಎಡಿಬಿ ಜಮೀನು ಅಲ್ವಾ’ ಎಂದು ಸಿದ್ದರಾಮಯ್ಯ ತಿರುಗೇಟು ನೀಡಿದರು.

ಮಧ್ಯ ಪ್ರವೇಶಿಸಿ ಮಾತನಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ‘ಭಾರತೀಯ ಜ್ಞಾನ ಮತ್ತು ಸಂಸ್ಕೃತಿಗೆ ಒತ್ತು ನೀಡುವ ಅಂತರ ರಾಷ್ಟ್ರೀಯ ಮಟ್ಟದ ಚಾಣಕ್ಯ ವಿಶ್ವವಿದ್ಯಾಲಯಕ್ಕೆ ಸರ್ಕಾರ ಎಲ್ಲ ರೀತಿಯ ರಿಯಾಯಿತಿಗಳನ್ನು ನೀಡಲು ಸಿದ್ಧವಿದೆ. ಯಾವುದೇ ಲಾಭಪೇಕ್ಷೆ ಇಲ್ಲದ ಇಂತಹ ವಿಶ್ವವಿದ್ಯಾಲಯಗಳಿಗೆ ಸರ್ಕಾರ ಇನ್ನಷ್ಟು ಪ್ರೋತ್ಸಾಹ ನೀಡಲು ಸಿದ್ಧವಿದೆ’ ಎಂದು ಸಮರ್ಥಿಸಿಕೊಂಡರು.

‘ಈ ಹಿಂದೆ ಹಲವು ಸರ್ಕಾರಗಳು ಸಮಾಜ ಉತ್ತಮ ಕಾರ್ಯಗಳಿಗಾಗಿ ಹಲವು ರಿಯಾಯ್ತಿಗಳನ್ನು ನೀಡಿ ಭೂಮಿಯನ್ನು ನೀಡಿವೆ. ಚಾಣಕ್ಯ ವಿಶ್ವವಿದ್ಯಾಲಯದ ಉದ್ದೇಶ ಆದರ್ಶಪ್ರಾಯವಾಗಿದೆ. ಜ್ಞಾನದ ಪ್ರಸರಣಕ್ಕಾಗಿ ಇರುವ ವಿಶ್ವವಿದ್ಯಾಲಯ, ವಿಶ್ವದ ಗುಣಮಟ್ಟಕ್ಕೆ ಸರಿಸಮಾನ ಎನಿಸುವ ಶಿಕ್ಷಣ ನೀಡಲಾಗುತ್ತದೆ. ಹಿಂದೆ ಟೊಯೋಟ ಕಂಪನಿಗೆ ಅತ್ಯಂತ ಕನಿಷ್ಠ ದರದಲ್ಲಿ ನೀಡಲು ವಿಶೇಷ ಕಾನೂನು ಮಾಡಲಾಗಿತ್ತು. ಕೆಲವು ಬಗೆಯ ತೆರಿಗೆ ರಿಯಾಯ್ತಿ ನೀಡಲಾಗಿತ್ತು’ ಎಂದರು.

ಒಂದು ಹಂತದಲ್ಲಿ ಸಿದ್ದರಾಮಯ್ಯ, ರಮೇಶ್ ಕುಮಾರ್ ಮತ್ತು ಆಡಳಿತ ಪಕ್ಷದ ಸದಸ್ಯರ ಮಧ್ಯೆ ಕಾವೇರಿದ ಚರ್ಚೆ ನಡೆಯಿತು. ಸಭಾಧ್ಯಕ್ಷರು ಮಸೂದೆಯನ್ನು ಅಂಗೀಕಾರಕ್ಕೆ ಮಂಡಿಸಿದಾಗ, ‘ಇದೊಂದು ದೊಡ್ಡ ಹಗರಣ, ಸರ್ಕಾರವೇ ಇದರಲ್ಲಿ ಭಾಗಿಯಾಗಿದೆ. ರಾಜ್ಯದ ಸಂಪತ್ತು ಲೂಟಿ ಹೊಡೆಯಲು ಹೊರಟಿದ್ದಾರೆ’ ಎಂದು ಕಾಂಗ್ರೆಸ್ ಸದಸ್ಯರು ದೂರಿದರು. ಬಿಜೆಪಿ ಸದಸ್ಯರೂ ತಿರುಗೇಟು ನೀಡಿದರು.

ಅನುದಾನ ಬಿಡುಗಡೆ: ಜೆಡಿಎಸ್‌ಗೆ ಸಿ.ಎಂ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆಡಿಎಸ್– ಕಾಂಗ್ರೆಸ್ ಸಮ್ಮಿಶ್ರ ಸರ್ಕಾರ ಅವಧಿಯಲ್ಲಿ ಆಡಳಿತಾತ್ಮಕ ಮಂಜೂರಾತಿ ಪಡೆದ ಎಲ್ಲ ಯೋಜನೆಗಳನ್ನು ಹಂತ ಹಂತವಾಗಿ ಜಾರಿ ಮಾಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಧಾನಸಭೆಯಲ್ಲಿ ಭರವಸೆ ನೀಡಿದರು.

ನಿಯಮ 69 ರಡಿ ಜೆಡಿಎಸ್‌ನ ಎಚ್.ಡಿ.ರೇವಣ್ಣ ಮತ್ತು ಇತರ ಸದಸ್ಯರ ಪ್ರಸ್ತಾವಕ್ಕೆ ಉತ್ತರ ನೀಡಿದ ಅವರು, ಯಾವುದೇ ಕಾಮಗಾರಿಗಳನ್ನು ತಡೆ ಹಿಡಿದಿಲ್ಲ. ಪ್ರವಾಹ, ಕೋವಿಡ್ ಸಂಕಷ್ಟದಿಂದಾಗಿ ಕಾಮಗಾರಿಗಳು ಕುಂಠಿತ ಆಗಿದೆ. ಇಂತಹ ಸೂಕ್ಷ್ಮ ಸಂದರ್ಭದಲ್ಲಿ ಹಣಕಾಸು ನಿರ್ವಹಣೆ ಅತಿ ಮುಖ್ಯ ಎಂದು ಹೇಳಿದರು.

ಈಗಾಗಲೇ ಆಡಳಿತಾತ್ಮಕ ಒಪ್ಪಿಗೆ ಪಡೆದು ಕಾರ್ಯದೇಶ ಆಗಿರುವುದಕ್ಕೆ ಮೊದಲ ಆದ್ಯತೆ ನೀಡಲಾಗುವುದು. ಟೆಂಡರ್ ಹಂತದಲ್ಲಿ ಸ್ಥಗಿತವಾಗಿರುವ ಮತ್ತು ಟೆಂಡರ್ ಆಗಬೇಕಾಗಿರುವ ಕಾಮಗಾರಿಗಳು ನಂತರದ ಹಂತದಲ್ಲಿ ಕೈಗೆತ್ತಿಕೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಈ ಪೈಕಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ₹940 ಕೋಟಿ, ನಗರಾಭಿವೃದ್ಧಿ ಇಲಾಖೆಯ ₹232 ಕೋಟಿ ಮತ್ತು ಲೋಕೋಪಯೋಗಿ ಇಲಾಖೆ ₹4,007 ಕೋಟಿ ಮೊತ್ತದ ಕಾಮಗಾರಿಗಳಿವೆ. ಕೇವಲ ಜೆಡಿಎಸ್ ಶಾಸಕರ ಕ್ಷೇತ್ರ ಮಾತ್ರವಲ್ಲ ಬಿಜೆಪಿ ಶಾಸಕ ಕ್ಷೇತ್ರಗಳಲ್ಲೂ ಇದೇ ಕಾರಣಗಳಿಗೆ ಅನುದಾನ ತಡೆ ಹಿಡಿಯಲಾಗಿದೆ ಎಂದು ಹೇಳಿದರು.

ವಿಷಯ ಪ್ರಸ್ತಾಪಿಸಿದ ಎಚ್.ಡಿ.ರೇವಣ್ಣ, ರಾಜಕೀಯ ಕಾರಣಗಳಿಗಾಗಿ ಎಚ್.ಡಿ.ಕುಮಾರಸ್ವಾಮಿ ಅವರ ಅವಧಿಯಲ್ಲಿ ಮಂಜೂರಾಗಿದ್ದ ಕಾಮಗಾರಿಗಳಿಗೆ ತಡೆ ನೀಡಲಾಗಿದೆ. ಕಳೆದ ಅಧಿವೇಶನದಲ್ಲಿ ಯಡಿಯೂರಪ್ಪ ಮತ್ತು ಬಸವರಾಜ ಬೊಮ್ಮಾಯಿ ಅವರು ನೀಡಿದ ಭರವಸೆಯನ್ನು ಈಡೇರಿಸಿ ಎಂದು ಒತ್ತಾಯಿಸಿದರು. ಇದಕ್ಕೆ ಜೆಡಿಎಸ್‌ನ ರಾಜಾ ವೆಂಕಟಪ್ಪ ನಾಯಕ, ರವೀಂದ್ರ ಶ್ರೀಕಂಠಯ್ಯ, ಡಾ.ಕೆ. ಅನ್ನದಾನಿ, ಮಾಗಡಿ ಮಂಜುನಾಥ್, ಸಿ.ಎನ್. ಬಾಲಕೃಷ್ಣ, ಡಿ.ಸಿ. ತಮ್ಮಣ್ಣ, ಲಿಂಗೇಶ್, ಸುರೇಶ್ ಗೌಡ ಮತ್ತು ದಾಸರಹಳ್ಳಿ ಮಂಜುನಾಥ್ ಧ್ವನಿಗೂಡಿಸಿದರು.

> **ದೊಡ್ಡವರು, ಶ್ರೀಮಂತರು, ಸಾಹಿತಿಗಳ ಮಕ್ಕಳು ಖಾಸಗಿ ಇಂಗ್ಲೀಷ್ ಮಾಧ್ಯಮದಲ್ಲಿ ಓದಬೇಕೆ ? ಬಡವರು ಮತ್ತು ಹಳ್ಳಿ ಮಕ್ಕಳಿಗೆ ಇಂಗ್ಲಿಷ್ ಶಿಕ್ಷಣ ಬೇಡವೆ ?**
> **ಎಚ್.ಡಿ.ರೇವಣ್ಣ,** ಜೆಡಿಎಸ್ ಶಾಸಕ

ಇದಕ್ಕೆ ಪ್ರತಿಕ್ರಿಯಿಸಿದ ಕಾನೂನು ಮತ್ತು ಸಂಸದೀಯ ಸಚಿವ ಜೆ.ಸಿ. ಮಾಧುಸ್ವಾಮಿ, ಯೋಜನೆ ಮತ್ತು ಆದ್ಯತೆಗೆ ಅನುಗುಣವಾಗಿ ರಾಜ್ಯದ ಸಮಗ್ರ ಅಭಿವೃದ್ಧಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಅನುದಾನ ಹಂಚಿಕೆ ಮಾಡಬೇಕು. ಆದರೆ ಆ ಸಂಪ್ರದಾಯವನ್ನು ಮುರಿದವರು ಯಾರು ಎಂದು ರೇವಣ್ಣ ಅವರನ್ನು ಪ್ರಶ್ನಿಸಿದರು.

ಆಯವ್ಯಯದಲ್ಲಿ ತೆಗೆದಿರಿಸಿದ್ದಕ್ಕಿಂತ ಹೆಚ್ಚುವರಿ ಅನುದಾನ ಹಂಚಿಕೆ ಮಾಡಲಾಯಿತು. ಸಮ್ಮಿಶ್ರ ಸರ್ಕಾರದ ಪತನದ ಸುಳಿವು ಸಿಗುತ್ತಿದ್ದಂತೆ ಯದ್ವಾತದ್ವಾ ಅನುದಾನ ಹಂಚಿಕೆ ಮಾಡಿದ್ದೇ ಈ ಎಲ್ಲ ಸಮಸ್ಯೆಗೆ ಮೂಲಕ ಕಾರಣ ಎಂದರು.

‘ನಿಮ್ಮ ಸರ್ಕಾರ ಇದ್ದಾಗ 2018–19 ರ ಸಾಲಿನಲ್ಲಿ 105 ಶಾಸಕರಿದ್ದ ಬಿಜೆಪಿ ಸದಸ್ಯರಿಗೆ ತಲಾ ₹28 ಕೋಟಿಯಂತೆ ಒಟ್ಟು ₹2,986 ಕೋಟಿ ಅನುದಾನ ನೀಡಿದರೆ, 37 ಶಾಸಕರನ್ನು ಹೊಂದಿದ್ದ ಜೆಡಿಎಸ್‌ಗೆ ತಲಾ ₹80 ಕೋಟಿಯಂತೆ ₹2,974 ಕೋಟಿ ಮಂಜೂರು ಮಾಡಿದ್ದಿರಿ. ಇದು ತಾರತಮ್ಯ ಅಲ್ಲವೇ ಎಂದು ಮಾಧುಸ್ವಾಮಿ ಪ್ರಶ್ನಿಸಿದರು.

ಬನ್ನೇರುಘಟ್ಟ, ಸರ್ಜಾಪುರ, ಬೇಗೂರು ರಸ್ತೆ ಭೂಮಾಲೀಕರಿಗೆ ಟಿಡಿಆರ್

ಟಿಡಿಆರ್ ನಿಯಮ ಸರಳೀಕರಣ: ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಬಿಬಿಎಂಪಿ ಹಾಗೂ ಬಿಡಿಎ ಪ್ರತ್ಯೇಕವಾಗಿ ಟಿಡಿಆರ್ (ಅಭಿವೃದ್ಧಿ ಹಕ್ಕು ಹಸ್ತಾಂತರ) ನೀಡುತ್ತಿರುವುದರಿಂದ ಗೊಂದಲ ಉಂಟಾಗುತ್ತಿದೆ. ಇದನ್ನು ಸರಿಪಡಿಸಲು ಟಿಡಿಆರ್ ನಿಯಮ ಸರಳೀಕರಣ ಮಾಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ವಿಧಾನಸಭೆಯಲ್ಲಿ ಮಂಗಳವಾರ ಪ್ರಶ್ನೋತ್ತರ ಅವಧಿಯಲ್ಲಿ ಬಿಜೆಪಿಯ ಎಂ.ಸತೀಶ ರೆಡ್ಡಿ ಪ್ರಶ್ನೆಗೆ ಉತ್ತರಿಸಿದ ಅವರು, ‘ಬನ್ನೇರುಘಟ್ಟ ರಸ್ತೆ, ಬೇಗೂರು ರಸ್ತೆ ಹಾಗೂ ಸರ್ಜಾಪುರ ರಸ್ತೆ ವಿಸ್ತರಣೆ ವೇಳೆ ಭೂಮಿ ಬಿಟ್ಟುಕೊಡುವ ಭೂಮಾಲೀಕರಿಗೆ ಟಿಡಿಆರ್ ನೀಡಲಾಗುವುದು’ ಎಂದರು.

ಭೂಸ್ವಾಧೀನ ಸಮಸ್ಯೆಯಿಂದಾಗಿ ಈ ಮೂರು ರಸ್ತೆಗಳ ವಿಸ್ತರಣೆ ವಿಳಂಬವಾಗುತ್ತಿದೆ. ಇಲ್ಲಿನ ಭೂಮಾಲೀಕರು ಟಿಡಿಆರ್ ಬದಲು ನಗದು ಪರಿಹಾರ ನೀಡುವಂತೆ ಪಟ್ಟು ಹಿಡಿದಿದ್ದಾರೆ.

‘ಬನ್ನೇರುಘಟ್ಟ ರಸ್ತೆಯಲ್ಲಿ ಮೆಟ್ರೊ ಮಾರ್ಗ ನಿರ್ಮಾಣವಾಗುತ್ತಿದೆ. ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಲು ಬೆಂಗಳೂರು ಮೆಟ್ರೊ ರೈಲು ನಿಗಮದವರು ಉತ್ತಮ ಪರಿಹಾರ ನೀಡಿದ್ದಾರೆ. ಮೆಟ್ರೊ ನಿಗಮದವರು ನೀಡಿದಷ್ಟೇ ಪರಿಹಾರವನ್ನು ಬಿಬಿಎಂಪಿಯವರು ನೀಡಬೇಕು ಎಂದು ಭೂಮಾಲೀಕರು ಒತ್ತಾಯಿಸಿದ್ದಾರೆ. ಇದರಿಂದಾಗಿ ಸಮಸ್ಯೆಯಾಗಿದೆ’ ಎಂದು ಮುಖ್ಯಮಂತ್ರಿ ತಿಳಿಸಿದರು.

‘ಭೂಮಾಲೀಕರು ಟಿಡಿಆರ್‌ಗೆ ಆಸಕ್ತಿ ತೋರಿಸದೆ ಇರುವುದರಿಂದ ಹಾಗೂ ಕೆಲವೊಂದು ಭೂಮಾಲೀಕರು ನ್ಯಾಯಾಲಯದಲ್ಲಿ ದಾವೆ ಹೂಡಿರುವುದರಿಂದ ಕಾಮಗಾರಿ ವಿಳಂಬವಾಗಿದೆ. ಮತ್ತೊಮ್ಮೆ ಭೂಮಾಲೀಕರ ಮನವೊಲಿಸಿ ಟಿಡಿಆರ್ ಮೂಲಕ ಭೂಸ್ವಾಧೀನಕ್ಕೆ ಪ್ರಯತ್ನಿಸಲಾಗುವುದು’ ಎಂದರು.

ಬನ್ನೇರುಘಟ್ಟ ರಸ್ತೆಯನ್ನು 2019ರ ಫೆಬ್ರುವರಿ ಅಂತ್ಯದೊಳಗೆ ಪೂರ್ಣಗೊಳಿಸಲು ಗಡುವು ನಿಗದಿಪಡಿಸಲಾಗಿತ್ತು. ಭೂಸ್ವಾಧೀನ ಸಮಸ್ಯೆಯಿಂದಾಗಿ ವಿಳಂಬವಾಗಿದೆ. 2022ರ ಮಾರ್ಚ್ ಒಳಗೆ ಕಾಮಗಾರಿ ಪೂರ್ಣಗೊಳಿಸಲಾಗುವುದು. ಸರ್ಜಾಪುರ ರಸ್ತೆ ಕಾಮಗಾರಿಯನ್ನು ಆರು ತಿಂಗಳಲ್ಲಿ ಮುಗಿಸಲಾಗುತ್ತದೆ’ ಎಂದು ಅವರು ಹೇಳಿದರು.

ಸತೀಶ್ ರೆಡ್ಡಿ, ‘ಬನ್ನೇರುಘಟ್ಟ ರಸ್ತೆ ವಿಸ್ತರಣೆ ವೇಳೆ ಮೆಟ್ರೊ ನಿಗಮದವರು ಚದರ ಅಡಿಗೆ ₹17 ಸಾವಿರ ಪರಿಹಾರ ನೀಡಿದ್ದಾರೆ. ಬಿಬಿಎಂಪಿಯವರು ₹8 ಸಾವಿರ ನೀಡಲು ಮುಂದೆ ಬಂದಿದ್ದಾರೆ. ಈ ಮೊತ್ತದ ಪರಿಹಾರವನ್ನು ಭೂಮಾಲೀಕರು ಒಪ್ಪುತ್ತಿಲ್ಲ. ಟಿಡಿಆರ್ ಬ್ಯಾಂಕ್ ಮಾಡಿದರೆ ಇಂತಹ ಸಮಸ್ಯೆ ಉದ್ಭವವಾಗುವುದಿಲ್ಲ’ ಎಂದರು.

ನಗರ ರೂಪದಲ್ಲಿ ಪರಿಹಾರ ನೀಡಿದರೆ ಭೂಸ್ವಾಧೀನಕ್ಕೆ ಬೇಕಾಗುವ ಮೊತ್ತ (₹ಕೋಟಿಗಳಲ್ಲಿ)

ಬನ್ನೇರುಘಟ್ಟ	2,320
ಸರ್ಜಾಪುರ	1,580
ಬೇಗೂರು	575
ಒಟ್ಟು	₹4,475

137 ಕೋಟಿ ಲೀಟರ್ ಕೊಳಚೆ ನೀರು ಶುದ್ಧೀಕರಣ

‘ಬಿಬಿಎಂಪಿ ವ್ಯಾಪ್ತಿಯಲ್ಲಿ 144 ಕೋಟಿ ಲೀಟರ್ ಕೊಳಚೆ ನೀರು ಉತ್ಪತ್ತಿಯಾಗುತ್ತಿದೆ. 32 ಘಟಕಗಳ ಮೂಲಕ 137 ಕೋಟಿ ಲೀಟರ್ ಕೊಳಚೆ ನೀರನ್ನು ಶುದ್ಧೀಕರಿಸಲಾಗುತ್ತಿದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ವಿಧಾನಸಭೆಯಲ್ಲಿ ಮಂಗಳವಾರ ಪ್ರಶ್ನೋತ್ತರ ಅವಧಿಯಲ್ಲಿ ಕಾಂಗ್ರೆಸ್‌ನ ಕೆ.ಜೆ.ಜಾರ್ಜ್ ಪ್ರಶ್ನೆಗೆ ಉತ್ತರಿಸಿದ ಅವರು, ಆರು ತಿಂಗಳಲ್ಲಿ 29 ಕೋಟಿ ಲೀಟರ್ ಸಾಮರ್ಥ್ಯದ ನೂತನ ಘಟಕಗಳು ಕಾರ್ಯಾರಂಭ ಮಾಡಲಿವೆ’ ಎಂದರು.

ಮರಿತಿಬ್ಬೇಗೌಡ ಧರಣಿ: ಪರಿಷತ್ ಕಲಾಪ ಮುಂದೂಡಿಕೆ

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ಅನಧಿಕೃತವಾಗಿ ಬಳಸಿಕೊಂಡಿರುವ ಜಮೀನುಗಳ ಮಾಲೀಕರಿಗೆ ಪರಿಹಾರ ವಿತರಣೆಗೆ ಕಾಲಮಿತಿ ನಿಗದಿಪಡಿಸುವಂತೆ ಆಗ್ರಹಿಸಿ ಜೆಡಿಎಸ್ ಸದಸ್ಯ ಮರಿತಿಬ್ಬೇಗೌಡ ಧರಣಿ ನಡೆಸಿದ್ದರಿಂದ ವಿಧಾನ ಪರಿಷತ್‌ನಲ್ಲಿ ಮಂಗಳವಾರ ಕೋಲಾಹಲ ಸೃಷ್ಟಿಯಾಯಿತು.

ಗದ್ದಲ ನಿಯಂತ್ರಣಕ್ಕೆ ಬಾರದೇ ಇದ್ದುದರಿಂದ ಸಭಾಪತಿ, ಸಂಜೆ ನಾಲ್ಕು ಗಂಟೆಯ ಬಳಿಕದ ಕಲಾಪವನ್ನೇ ಮುಂದೂಡಿದರು.

ಭೋಜನ ವಿರಾಮದ ಬಳಿಕ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಪ್ರಕರಣ ಕುರಿತು ಗಮನ ಸೆಳೆಯುವ ಸೂಚನೆ ಮಂಡಿಸಿದ ಮರಿತಿಬ್ಬೇಗೌಡ, ‘ಅಧಿಕೃತವಾಗಿ ಭೂಸ್ವಾಧೀನ ಪ್ರಕ್ರಿಯೆ ನಡೆಸದೇ ಪ್ರಾಧಿಕಾರವು ಖಾಸಗಿ ಜಮೀನುಗಳನ್ನು ಬಳಸಿಕೊಂಡು ಬಡಾವಣೆಗಳಲ್ಲಿ ರಸ್ತೆ ಮತ್ತು ಇತರ ಸೌಕರ್ಯಗಳನ್ನು ನಿರ್ಮಿಸಿದೆ. 15–20 ವರ್ಷಗಳಾದರೂ ಪರಿಹಾರ ನೀಡಿಲ್ಲ. ಅಷ್ಟೇ ವಿಸ್ತೀರ್ಣದ ಅಭಿವೃದ್ಧಿಪಡಿಸದ ಜಮೀನು ನೀಡುವುದಕ್ಕೂ ಹಿಂದೇಟು ಹಾಕುತ್ತಿದೆ’ ಎಂದು ದೂರಿದರು.

ಉತ್ತರ ನೀಡಿದ ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ, ‘ಶೀಘ್ರದಲ್ಲೇ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಸಭೆ ನಡೆಸಲಾಗುವುದು. ಅನಧಿಕೃತವಾಗಿ ಬಳಸಿಕೊಂಡಿರುವ ಜಮೀನುಗಳಿಗೆ ಪರಿಹಾರ ವಿತರಣೆಗೆ ತ್ವರಿತ ಕ್ರಮ ಕೈಗೊಳ್ಳಲಾಗುವುದು’ ಎಂದರು.

ಉತ್ತರದಿಂದ ತೃಪ್ತರಾಗದ ಮರಿತಿಬ್ಬೇಗೌಡ ಸಭಾಪತಿ ಪೀಠದ ಎದುರು ಧರಣಿ ಆರಂಭಿಸಿದರು. ಕೆಲಕಾಲ ವಾಗ್ವಾದ ನಡೆಯಿತು. ಮರಿತಿಬ್ಬೇಗೌಡ ಸಿಟ್ಟಿನಿಂದ ಸಭಾಪತಿ ಪೀಠದ ಎದುರು ನಿಂತು ಏರು ಧ್ವನಿಯಲ್ಲಿ ಸರ್ಕಾರದ ವಿರುದ್ಧ ಮಾತನಾಡತೊಡಗಿದರು. ಕಾಂಗ್ರೆಸ್ ಮತ್ತು ಜೆಡಿಎಸ್ ಸದಸ್ಯರು ಅವರನ್ನು ಸಮಾಧಾನಪಡಿಸಲು ನಡೆಸಿದ ಪ್ರಯತ್ನಗಳೂ ಫಲ ನೀಡಲಿಲ್ಲ.


ಸಚಿವರೂ ಸೇರಿದಂತೆ ಬಿಜೆಪಿಯ ಹಲವು ಸದಸ್ಯರು ಮರಿತಿಬ್ಬೇಗೌಡರ ಜತೆ ವಾಗ್ವಾದಕ್ಕೆ ಇಳಿದರು. ಸಭಾಪತಿಯವರ ಸೂಚನೆಗಳನ್ನು ಲೆಕ್ಕಿಸದೇ ವಾಗ್ವಾದ ಮುಂದುವರಿಯಿತು. ಬೇಸರಗೊಂಡ ಹೊರಟ್ಟಿ, ‘ಪೀಠ ಮಾತನ್ನೂ ಕೇಳದೆ ಅಗೌರವ ತೋರುತ್ತಿದ್ದೀರಿ. ಇಂತಹ ಸ್ಥಿತಿಯಲ್ಲಿ ಸದನ ನಡೆಸಲು ಸಾಧ್ಯವಿಲ್ಲ’ ಎಂದು ಕಲಾಪವನ್ನು ಬುಧವಾರ ಬೆಳಿಗ್ಗೆ 10.30ಕ್ಕೆ ಮುಂದೂಡಿದರು.

ಕೆ.ಗೊಲ್ಲಹಳ್ಳಿ ಗ್ರಾ.ಪಂ : ಸರ್ಕಾರಿ ಹಣದಲ್ಲಿ ಗುತ್ತಿಗೆದಾರನ ಸ್ವಂತ ಕಾಮಗಾರಿ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಗೇರಿ ಹೋಬಳಿ ಕೆ. ಗೊಲ್ಲಹಳ್ಳಿ ಗ್ರಾಮ ಪಂಚಾಯಿತಿಯ ಕೋಟ್ಯಂತರ ರೂಪಾಯಿ ಅನುದಾನ ಬಳಸಿಕೊಂಡು ಗುತ್ತಿಗೆದಾರರೊಬ್ಬರ ಖಾಸಗಿ ಜಮೀನಿನಲ್ಲಿ ಸಮುದಾಯ ಭವನ, ಮನೆಗೆ ಕಾಂಪೌಂಡ್ ನಿರ್ಮಾಣ ಮತ್ತು ಕಾಂಕ್ರೀಟ್ ಮಿಕ್ಸರ್ ಘಟಕಕ್ಕೆ ಹೈಮಾಸ್ಟ್ ದೀಪ ಅಳವಡಿಸಿರುವ ಆರೋಪಗಳ ಕುರಿತು ರಾಜ್ಯಮಟ್ಟದ ಅಧಿಕಾರಿಗಳಿಂದ ತನಿಖೆ ನಡೆಸುವುದಾಗಿ ರಾಜ್ಯ ಸರ್ಕಾರ ಭರವಸೆ ನೀಡಿದೆ.

ವಿಧಾನ ಪರಿಷತ್‌ನಲ್ಲಿ ಮಂಗಳವಾರ ಗಮನ ಸೆಳೆಯುವ ಸೂಚನೆ ಮಂಡಿಸಿದ ವಿರೋಧ ಪಕ್ಷದ ಮುಖ್ಯ ಸಚೇತಕ ಎಂ. ನಾರಾಯಣಸ್ವಾಮಿ, ‘ಲಕ್ಷ್ಮಯ್ಯ ಎಂಬ ಗುತ್ತಿಗೆದಾರನ ಸ್ವಂತ ಕೆಲಸಗಳಿಗೆ ಸರ್ಕಾರದ ಅನುದಾನ ಬಳಕೆ ಮಾಡಲಾಗಿದೆ. ಈ ವ್ಯಕ್ತಿಯ ಹೆಸರಿನಲ್ಲಿರುವ ಖಾಸಗಿ ಆಸ್ತಿಯಲ್ಲಿ ₹ 4 ಕೋಟಿ ವೆಚ್ಚ ಮಾಡಿ ಬಸವೇಶ್ವರ ಸಮುದಾಯ ಭವನ ಎಂಬ ಕಟ್ಟಡ ನಿರ್ಮಿಸಲಾಗುತ್ತಿದೆ. ಇನ್ನೂ ₹ 4 ಕೋಟಿ ಅನುದಾನ ಕೋರಿ ಪ್ರಸ್ತಾವ ಸಲ್ಲಿಸಲಾಗಿದೆ’ ಎಂದು ಆರೋಪಿಸಿದರು.



ವಿಧಾನ ಪರಿಷತ್‌ನಲ್ಲಿ ದಾಖಲೆಗಳನ್ನು ಪ್ರದರ್ಶಿಸಿದ ವಿರೋಧ ಪಕ್ಷದ ಮುಖ್ಯ ಸಚೇತಕ ಎಂ. ನಾರಾಯಣಸ್ವಾಮಿ

‘₹ 1,500 ಕೋಟಿ ಮೊತ್ತದ ಅಕ್ರಮ’

‘ಬೆಂಗಳೂರು ನಗರ ಜಿಲ್ಲೆಯ ವ್ಯಾಪ್ತಿಯಲ್ಲಿ ಕೆಆರ್‌ಐಡಿಎಲ್ ಅಧಿಕಾರಿಗಳು ಶಾಮೀಲಾಗಿ ₹ 1,500 ಕೋಟಿಗೂ ಹೆಚ್ಚು ಅಕ್ರಮ ನಡೆಸಿದ್ದಾರೆ. ಪಂಚಾಯಿತಿಗಳಿಗೆ ನೀಡಿದ್ದ ಅನುದಾನ ದುರ್ಬಳಕೆಯಾಗಿದೆ. ಸರ್ಕಾರಿ ಅನುದಾನ ಬಳಸಿಕೊಂಡು ಖಾಸಗಿ ಬಡಾವಣೆಗಳಿಗೂ ರಸ್ತೆ ನಿರ್ಮಿಸಿದ್ದಾರೆ’ ಎಂದು ಎಂ. ನಾರಾಯಣಸ್ವಾಮಿ ಆರೋಪಿಸಿದರು.

ಸಮುದಾಯ ಭವನ ನಿರ್ಮಾಣಕ್ಕೆ ಎಂಟು ಕಂತುಗಳಲ್ಲಿ ತಲಾ ₹ 50 ಲಕ್ಷ ನೀಡಲಾಗಿದೆ. ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮದ (ಕೆಆರ್‌ಐಡಿಎಲ್) ಅಧಿಕಾರಿಗಳು ಈ ಅಕ್ರಮದಲ್ಲಿ ಶಾಮೀಲಾಗಿದ್ದಾರೆ. ಶಿರಡಿ ಸಾಯಿಬಾಬಾ ಸೇವಾ ಸಮಿತಿ ಎಂಬ ಟ್ರಸ್ಟ್ ಹೆಸರಿನಲ್ಲಿ ಕಟ್ಟಡ ನಿರ್ಮಾಣಕ್ಕೆ ಅನುದಾನ ನೀಡಲಾಗಿದೆ. ಗುತ್ತಿಗೆದಾರ ಲಕ್ಷ್ಮಯ್ಯ ಟ್ರಸ್ಟ್‌ನ ಸಂಚಾಲಕರಾದರೆ, ಅವರ ಪತ್ನಿ ಪಾರ್ವತಿ ಅಧ್ಯಕ್ಷೆ. ಅವರ ಮಗ ಅನಿಲ್ ಕುಮಾರ್ ಕಾರ್ಯದರ್ಶಿ. ಕುಟುಂಬದ ಆಸ್ತಿಗೆ ಸರ್ಕಾರದ ಅನುದಾನ ನೀಡಲು ಹೇಗೆ ಸಾಧ್ಯ ಎಂದು ಪ್ರಶ್ನಿಸಿದರು.

‘ಸಮುದಾಯ ಭವನ ನಿರ್ಮಿಸುತ್ತಿರುವ ಆಸ್ತಿಯನ್ನು ಕೆ. ಗೊಲ್ಲಹಳ್ಳಿ ಗ್ರಾಮ ಪಂಚಾಯಿತಿಗೆ ಹಸ್ತಾಂತರ ಮಾಡಲಾಗಿದೆ ಎಂದು ಅಧಿಕಾರಿಗಳು ಸುಳ್ಳು ಹೇಳುತ್ತಿದ್ದಾರೆ. ಸದರಿ ಆಸ್ತಿ ಈಗಲೂ ಲಕ್ಷ್ಮಯ್ಯ ಹೆಸರಿನಲ್ಲಿದೆ. ಅದನ್ನು ಆಧಾರವಾಗಿಟ್ಟು ಪಿಕಾರ್ಡ್ ಬ್ಯಾಂಕ್‌ನಲ್ಲಿ ₹ 6.70 ಲಕ್ಷ ಸಾಲ ಪಡೆದಿದ್ದಾರೆ. ಆದರೆ, ಆಸ್ತಿಯನ್ನು ಟ್ರಸ್ಟ್‌ನಿಂದ ಗ್ರಾಮ ಪಂಚಾಯಿತಿಗೆ ಹಸ್ತಾಂತರಿಸಿದಂತೆ ದಾಖಲೆ ನೋಂದಣಿ ಮಾಡಲಾಗಿದೆ. ಇದು ಕೂಡ ಅಕ್ರಮ’ ಎಂದು ಅವರು ದೂರಿದರು.

ಇದೇ ವ್ಯಕ್ತಿಯ ಮನೆಗೆ ಕಾಂಪೌಂಡ್ ನಿರ್ಮಾಣಕ್ಕೆ ಸರ್ಕಾರದ ₹ 50 ಲಕ್ಷ ಅನುದಾನ ಬಳಸಲಾಗಿದೆ. ಈ ಕುರಿತು ಮಾಹಿತಿ ಕೋರಲಾಗಿತ್ತು. ಮನೆಯ ಒಳಭಾಗದಿಂದ ಫೋಟೊ ತೆಗೆದು ಅದನ್ನೇ ನೀಡಿದ್ದಾರೆ ಎಂದು ನಾರಾಯಣಸ್ವಾಮಿ ಹೇಳಿದರು.

ದೀಪದಲ್ಲೂ ಅಕ್ರಮ: ಕೆ. ಗೊಲ್ಲಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಶ್ರೀನಿವಾಸಪುರ ಗ್ರಾಮಕ್ಕೆ ₹ 50 ಲಕ್ಷ ವೆಚ್ಚದಲ್ಲಿ ಮೂರು ಹೈಮಾಸ್ಟ್ ದೀಪಗಳನ್ನು ಅಳವಡಿಸಲಾಗಿದೆ ಎಂದು ಬಿಲ್ ಮಾಡಲಾಗಿದೆ. ವಾಸ್ತವದಲ್ಲಿ ಒಂದೇ ದೀಪವನ್ನು ಗ್ರಾಮದಲ್ಲಿ ಅಳವಡಿಸಲಾಗಿದೆ. ಉಳಿದ ಎರಡನ್ನು ಗುತ್ತಿಗೆದಾರ ಲಕ್ಷ್ಮಯ್ಯ ಒಡೆತನದ ಶ್ರೀರಂಗ ಕಾಂಕ್ರೀಟ್ ಮಿಕ್ಸರ್ ಕಾರ್ಖಾನೆಗೆ ಹಾಕಲಾಗಿದೆ. ವಿದ್ಯುತ್ ಬಿಲ್ ಅನ್ನು ಈಗಲೂ ಪಂಚಾಯಿತಿಯೇ ಭರಿಸುತ್ತಿದೆ ಎಂದು ದಾಖಲೆಗಳನ್ನು ಪ್ರದರ್ಶಿಸಿದರು.

ಬಿಜೆಪಿಯ ತೇಜಸ್ವಿನಿ ಗೌಡ ಮಾತನಾಡಿ, ‘ವಿಪಕ್ಷ ಸದಸ್ಯರು ಮಾಡಿರುವ ಆರೋಪಗಳಲ್ಲಿ ಹುರುಳಿರುವಂತೆ ಕಾಣುತ್ತಿದೆ. ಇಂತಹ ಪ್ರಕರಣಗಳಲ್ಲಿ ಸರಿಯಾದ ತನಿಖೆ ನಡೆಸಬೇಕು’ ಎಂದು ಆಗ್ರಹಿಸಿದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ ಉತ್ತರಿಸಿದ ಸಭಾ ನಾಯಕ ಕೋಟ ಶ್ರೀನಿವಾಸ ಪೂಜಾರಿ, ‘ಕೆ. ಗೊಲ್ಲಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ನಡೆದಿವೆ ಎನ್ನಲಾದ ಅಕ್ರಮಗಳ ಕುರಿತು ರಾಜ್ಯಮಟ್ಟದ ಅಧಿಕಾರಿಗಳ ತಂಡದಿಂದ ತನಿಖೆ ನಡೆಸಲಾಗುವುದು’ ಎಂದು ಪ್ರಕಟಿಸಿದರು.

‘ಹಣ್ಣು ತರಕಾರಿ ಕೊಡುವ ನಮಗೆ ಕಸ ಕೊಡ್ತಾರೆ’


‘ನಾವು ಬೆಂಗಳೂರು ನಗರಕ್ಕೆ ಹಾಲು, ಹಣ್ಣು–ತರಕಾರಿ ಕೊಡ್ತೇವೆ. ಅದಕ್ಕೆ ಬದಲು ನಮ್ಮ ಕ್ಷೇತ್ರಕ್ಕೆ ನಗರದ ಕಸ ತಂದು ಸುರಿಯುತ್ತಾರೆ’ ಎಂದು ಜೆಡಿಎಸ್‌ನ ಮಾಗಡಿ ಶಾಸಕ ಮಂಜುನಾಥ್ ಆಕ್ರೋಶ ವ್ಯಕ್ತಪಡಿಸಿದರು.

‘ಘನ ತ್ಯಾಜ್ಯ ವಿಲೇವಾರಿಗೆಂದು ₹30 ಕೋಟಿ ನಿಗದಿ ಮಾಡಲಾಗಿತ್ತು. ಆದರೆ, ಅದನ್ನು ತಡೆ ಹಿಡಿದು ಬಿಬಿಎಂಪಿಗೆ ನೀಡಲಾಯಿತು’ ಎಂದರು.


‘ಕಬ್ಬು ಕಡಿದು ಎಸೆಯುತ್ತಿದ್ದಾರೆ’

‘ಮಂಡ್ಯ ಜಿಲ್ಲೆಯಲ್ಲಿ ಸಕ್ಕರೆ ಕಾರ್ಖಾನೆಗಳು ಕಬ್ಬು ತೆಗೆದುಕೊಳ್ಳದ ಪರಿಣಾಮ ರೈತರು ಕಬ್ಬನ್ನು ಕಡಿದು ರಸ್ತೆಗೆ ಎಸೆಯುತ್ತಿದ್ದಾರೆ’ ಎಂದು ಜೆಡಿಎಸ್‌ನ ರವೀಂದ್ರ ಶ್ರೀಕಂಠಯ್ಯ ಗಮನ ಸೆಳೆದರು.

‘ಬೆಳೆದ ಕಬ್ಬನ್ನು ಎಲ್ಲಿಗೆ ಸಾಗಿಸಬೇಕು ಎಂಬುದು ಗೊತ್ತಾಗದೇ ರೈತರು ಕಂಗಾಲಾಗಿದ್ದಾರೆ. ಪಾಂಡವಪುರ ಸಕ್ಕರೆ ಕಾರ್ಖಾನೆಯವರು ನಮ್ಮ ಕಬ್ಬು ತೆಗೆದುಕೊಳ್ಳುತ್ತಿಲ್ಲ. ಮಂಡ್ಯ ಸಕ್ಕರೆ ಕಾರ್ಖಾನೆ ಬಗ್ಗೆ ಸರ್ಕಾರ ಇನ್ನೂ ಯಾವುದೇ ನಿರ್ಣಯ ತೆಗೆದುಕೊಂಡಿಲ್ಲ. ಈ ಸಮಸ್ಯೆಯ ಪರಿಹಾರ ಒದಗಿಸಬೇಕಾದ ಅಧಿಕಾರಿಗಳು ಝೂಮ್ ಮೀಟಿಂಗ್‌ನಲ್ಲೇ ಮುಳುಗಿರುತ್ತಾರೆ’ ಎಂದು ತರಾಟೆಗೆ ತೆಗೆದುಕೊಂಡರು.







ರೇಟು ಬೇಕಾದರೆ ಡೇಟಾ ಬೇಕು!

ಕೃಷ್ಣ ಭಟ್

ಡೇಟಾ ತೀರಾ ಇತ್ತೀಚಿನವರೆಗೂ ತಂತ್ರಜ್ಞಾನವನ್ನು ಆಧರಿಸಿದ ಎಲ್ಲ ಕ್ಷೇತ್ರಗಳನ್ನೂ ಆವರಿಸಿಕೊಂಡಿತ್ತು. ನಗರದಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯ ಡೇಟಾ, ಆತನನ್ನು ವಿವಿಧ ಕಂಪನಿಗಳ ಕೈಯಲ್ಲಿ ವಿವಿಧ ಸೇವೆ, ಉತ್ಪನ್ನಗಳಿಗೆ ಸಂಭಾವ್ಯ ಗಿರಾಕಿಯನ್ನಾಗಿಸಿದೆ. ವ್ಯಕ್ತಿಯೊಬ್ಬನ ಹಣಕಾಸು ಸ್ಥಿತಿಗತಿಯ ಡೇಟಾಗೆ ಕಾಳಮಾರುಕಟ್ಟೆಯಲ್ಲಿ ₹0.5 ಪೈಸೆಯಿಂದ ₹2 ವರೆಗೆ ಮಾರಾಟವಾಗುತ್ತದೆ. ಒಂದೊಂದು ಕಂಪನಿಗಳೂ ಹತ್ತಾರು ಕೋಟಿ ಜನರ ನಂಬರುಗಳನ್ನು ಇಟ್ಟುಕೊಂಡು ಕೂತಿವೆ. ಅವುಗಳನ್ನು ಡೇಟಾ ಸೈಂಟಿಸ್ಟ್‌ಗಳು ಕುಳಿತು ವಿಶ್ಲೇಷಿಸಿ ತಮ್ಮ ತಮ್ಮ ಉತ್ಪನ್ನಗಳನ್ನು ಯಾರಿಗೆಲ್ಲ ತಲುಪಿಸಬಹುದು ಎಂದು ಹೊಂಚುಹಾಕುತ್ತಿರುತ್ತಾರೆ. ಇವೆಲ್ಲದರ ಜೊತೆಗೆ, ಈ ಡೇಟಾದಿಂದ ಆದ ಅನುಕೂಲವೆಂದರೆ ಹೊಸ ಹೊಸ ಉತ್ಪನ್ನಗಳು, ಸೇವೆಗಳು ಮಾರುಕಟ್ಟೆಗೆ ಬಂದಿವೆ. ಇವೆಲ್ಲವೂ ಗ್ರಾಹಕನಾಗಿ ಸಾಮಾನ್ಯ ವ್ಯಕ್ತಿಯ ಜೀವನವನ್ನು ಸುಧಾರಿಸಿವೆ ಎಂಬುದರಲ್ಲಿ ಎರಡು ಮಾತಿಲ್ಲ.

ಆದರೆ ಈ ಇಡೀ ಪ್ರಕ್ರಿಯೆಯಲ್ಲಿ ತಲೆತಪ್ಪಿಸಿಕೊಂಡಿದ್ದವರು ಎಂದರೆ ಕೃಷಿಕರು. ಯಾಕೆಂದರೆ, ಕೃಷಿಕರ ಆದಾಯ ಕಡಿಮೆ. ಇತ್ತೀಚಿನ ಅಧ್ಯಯನದ ಪ್ರಕಾರ ಸಾಮನ್ಯ ಕೃಷಿಕನೊಬ್ಬ ದಿನಕ್ಕೆ ಗಳಿಸುವ ಆದಾಯ ₹27. ಅಂಥ ಒಬ್ಬ ಸಾಮಾನ್ಯ ಕೃಷಿಕನಿಗೆ ಏನನ್ನು ತಾನೆ ಮಾರಾಟ ಮಾಡಲು ಸಾಧ್ಯ? ಹೀಗಾಗಿ, ಬಹುತೇಕ ಖಾಸಗಿ ಕಂಪನಿಗಳು ಈ ವಲಯಕ್ಕೆ ಕಾಲಿಟ್ಟಿರಲಿಲ್ಲ. ಅಷ್ಟೇ ಅಲ್ಲ, ಇಲ್ಲಿ ಡೇಟಾ ಸಂಗ್ರಹ ಕೂಡ ಸರ್ಕಾರದ ಇಲಾಖೆಗಳನ್ನು ಹೊರತುಪಡಿಸಿ, ಖಾಸಗಿ ಸಂಸ್ಥೆಗಳೂ ಮಾಡಿಲ್ಲವೆಂದೇ ಹೇಳಬಹುದು. ಅಪವಾದವೆಂಬಂತೆ, ಕೆಲವು ಸಣ್ಣ ಪುಟ್ಟ ಕಂಪನಿಗಳು ಮಾಡಿರಬಹುದಾದರೂ, ದೇಶದಾದ್ಯಂತ ಈ ಕಾರ್ಯ ನಡೆದಿಲ್ಲ. ರೈತರ ಆದಾಯವನ್ನು ಹೆಚ್ಚಿಸಬೇಕು ಎಂದು ಸರ್ಕಾರಗಳು ಪ್ರಯತ್ನಿಸುತ್ತಿರುವ ಈ ಹೊತ್ತಿನಲ್ಲಿ ರೈತರ ಡೇಟಾ ಇಟ್ಟುಕೊಂಡು ಅದನ್ನು ವಿಶ್ಲೇಷಿಸಿ, ಅವರ ದಕ್ಷತೆಯನ್ನು ಹೆಚ್ಚಿಸಲು ಹೇಗೆ ಸಹಾಯ ಮಾಡಬಹುದು ಎಂಬುದನ್ನು ನೋಡುವುದು ಸದ್ಯದ ಅಗತ್ಯವಾಗಿತ್ತು.

> ರೈತರ ಡೇಟಾಗಳನ್ನು ವಿಶ್ಲೇಷಿಸಿ, ಹಲವು ಕಂಪನಿಗಳು ಅವರಿಗೆ ಅಗತ್ಯವಾದ ಮಾಹಿತಿಗಳನ್ನು ಕೊಡಲಿವೆ. ಯಾವಾಗ ಬೆಳೆ ಬೆಳೆಯಬೇಕು, ಹವಾಮಾನದ ಪರಿಸ್ಥಿತಿ ಮತ್ತು ಯಾವ ಸಮಯದಲ್ಲಿ ಯಾವ ಔಷಧ ಸಿಂಪಡಿಸಬೇಕು ಎಂಬ ಮಾಹಿತಿಗಳು ಸುಲಭವಾಗಿ ಸಿಗಲಿವೆ.

ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಇತ್ತೀಚೆಗೆ ಅಮೆಜಾನ್, ಮೈಕ್ರೊಸಾಫ್ಟ್, ಸಿಸ್ಕೋ, ರಿಲಾಯನ್ಸ್‌ನಂತಹ ದೊಡ್ಡ ದೊಡ್ಡ ಕಂಪನಿಗಳ ಜೊತೆಗೆ ಒಪ್ಪಂದ ಮಾಡಿಕೊಂಡಿದ್ದು, ಸರ್ಕಾರ ಸಂಗ್ರಹಿಸಿದ ಡೇಟಾಗಳನ್ನು ಈ ಖಾಸಗಿ ಕಂಪನಿಗಳಿಗೂ ಒದಗಿಸಲಿದೆ.

ಕೃಷಿಕರಿಗೆ ಡೇಟಾದ ಉಪಯೋಗವೇನು?

ಈ ಕಂಪನಿಗಳು ಇಂತಹ ಡೇಟಾ ಇಟ್ಟುಕೊಂಡು ರೈತರಿಗೆ ಅಗತ್ಯದ ಮಾಹಿತಿ ಕೊಡಲಿವೆ. ಯಾವಾಗ ಬೆಳೆ ಬೆಳೆಯಬೇಕು, ಹವಾಮಾನದ ಪರಿಸ್ಥಿತಿ, ಯಾವ ಸಮಯದಲ್ಲಿ ಯಾವ ಔಷಧ ಸಿಂಪಡಿಸಬೇಕು ಎಂಬ ಎಲ್ಲ ಮಾಹಿತಿಯನ್ನು ರೈತರಿಗೆ ನೀಡುತ್ತವೆ. ಅಲ್ಲದೆ, ಈ ಡೇಟಾ ಇಟ್ಟುಕೊಂಡು ಈ ಕಂಪನಿಗಳು ರೈತರ ಜೀವನ ಸುಧಾರಿಸಲು ಹಲವು ಸೇವೆಗಳನ್ನೂ ಉತ್ಪನ್ನಗಳನ್ನೂ ಸಿದ್ಧಪಡಿಸಬಹುದು.

ಈ ಡೇಟಾ ಹಂಚಿಕೊಳ್ಳುವ ಮೂಲ ಉದ್ದೇಶವೇ, ಬೆಳೆಯ ವಿಧ, ಮಣ್ಣಿನ ಆರೋಗ್ಯ, ವಿಮೆ, ಸಾಲ ಮತ್ತು ಹವಾಮಾನ ಪರಿಸ್ಥಿತಿಗಳನ್ನೆಲ್ಲ ಒಂದೇ ಡೇಟಾಬೇಸ್‌ಗೆ ಸೇರಿಸಿ, ಅದನ್ನು ಆರ್ಟಿಫಿಶಿಯಲ್ ಇಂಟಲಿಜೆನ್ಸ್ ಮತ್ತು ಡೇಟಾ ಅನಾಲಿಟಿಕ್ಸ್ ಬಳಸಿ ವಿಶ್ಲೇಷಣೆ ಮಾಡುವುದಾಗಿದೆ. ಈ ಕಂಪನಿಗಳು ಆರ್ಟಿಫಿಶಿಯಲ್ ಇಂಟಲಿಜೆನ್ಸ್ ಮತ್ತು ಡೇಟಾ ಅನಾಲಿಟಿಕ್ಸ್‌ನಲ್ಲಿ ಪರಿಣತಿ ಹೊಂದಿರುವುದರಿಂದ ಡೇಟಾ ವಿಶ್ಲೇಷಣೆ ಅತ್ಯಂತ ದಕ್ಷವಾಗಿ ನಡೆಯುತ್ತದೆ. ಇದರಿಂದ ರೈತರಿಗೆ ತಮ್ಮ ಬೆಳೆ ಕುರಿತ ನಿರ್ಧಾರ ಮಾಡಲು ಸಹಾಯವಾಗುತ್ತದೆ.

ಜಾರಿಯಲ್ಲಿದೆ ಪ್ರಯೋಗ

ಸದ್ಯ ಸುಮಾರು ಐದು ಕೋಟಿ ರೈತರ ಡೇಟಾವನ್ನು ಸರ್ಕಾರ ಕೆಲವು ಸಂಸ್ಥೆಗಳ ಜೊತೆಗೆ ಹಂಚಿಕೊಳ್ಳುತ್ತಿದೆ. ಈಗಾಗಲೇ ಸಾರ್ವಜನಿಕವಾಗಿ ಲಭ್ಯವಿರುವ ಡೇಟಾವನ್ನೇ ಸರ್ಕಾರ ಈ ಸಂಸ್ಥೆಗಳ ಜೊತೆಗೆ ಹಂಚಿಕೊಳ್ಳುತ್ತಿದೆ. ಸ್ಟಾರ್ ಅಗ್ರಿಬಝಾರ್ ಟೆಕ್ನಾಲಜಿ, ಇಎಸ್‌ಆರ್‌ಐ ಇಂಡಿಯಾ ಟೆಕ್ನಾಲಜೀಸ್, ಪತಂಜಲಿ ಆರ್ಗ್ಯಾನಿಕ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಮತ್ತು ನಿಂಜಾಕಾರ್ಟ್ ಜೊತೆಗೆ ಹಂಚಿಕೊಳ್ಳುತ್ತಿದೆ. ಆದರೆ, ಈ ಬಾರಿ ಸರ್ಕಾರ ತನ್ನ ವ್ಯಾಪ್ತಿಯನ್ನು ಇನ್ನಷ್ಟು ವಿಸ್ತರಿಸಿಕೊಂಡು ಅಮೆಜಾನ್, ಮೈಕ್ರೊಸಾಫ್ಟ್‌ನಂತಹ ವಿದೇಶಿ ಮೂಲದ ಕಂಪನಿಗಳಿಗೂ ಈ ಡೇಟಾಗಳನ್ನು ಒದಗಿಸಲು ನಿರ್ಧರಿಸಿದೆ.

ಇನ್ನೊಂದೆಡೆ, ಒಂದು ಪ್ರಾಯೋಗಿಕ ಯೋಜನೆ ಕೂಡ ಜಾರಿಯಲ್ಲಿದ್ದು, 100 ಹಳ್ಳಿಗಳನ್ನು ಮೈಕ್ರೊಸಾಫ್ಟ್ ಆಯ್ಕೆ ಮಾಡಿಕೊಂಡು, ಅಲ್ಲಿ ಎಐ, ಮಶಿನ್ ಲರ್ನಿಂಗ್ ಅನ್ನು ಬಳಸಿ ಪ್ಲಾಟ್‌ಫಾರಂ ರೂಪಿಸುವ ಯೋಜನೆಯನ್ನು ನಡೆಸುತ್ತಿದೆ. ಇನ್ನು ಅಮೆಜಾನ್ ಕೂಡ ತನ್ನ ಮೊಬೈಲ್ ಆ್ಯಪ್ ಮೂಲಕ ಸಲಹೆ ಮತ್ತು ಮಾಹಿತಿಯನ್ನು ರೈತರಿಗೆ ಒದಗಿಸುತ್ತಿದೆ. ಅಲ್ಲದೆ, ತನ್ನ ಕ್ಲೌಡ್ ಸೇವೆಯನ್ನೂ ರೈತರಿಗೆ ಒದಗಿಸುತ್ತಿದೆ.

ಅಪಾಯವೂ ಇದೆ!

ಖಾಸಗಿ ಕಂಪನಿಗಳಿಗೆ ಡೇಟಾ ನೀಡುವಲ್ಲಿ ಕೆಲವು ಅಪಾಯವೂ ಇದೆ. ಖಾಸಗಿ ಕಂಪನಿಗಳು ತಮ್ಮ ಉತ್ಪನ್ನಗಳನ್ನು ರೈತರಿಗೆ ಮಾರಿ, ಲಾಭ ಮಾಡಿಕೊಳ್ಳುವ ದೃಷ್ಟಿಯಿಂದ ಮಾತ್ರವೇ ಯೋಚಿಸಬಹುದು. ಅಲ್ಲದೆ, ಈ ಯೋಜನೆ ಅಡಿಯಲ್ಲಿ ಪ್ರತಿ ರೈತರಿಗೂ ಒಂದು ಐಡಿ ಒದಗಿಸುವ ಚಿಂತನೆ ಇದ್ದು, ಇದರಿಂದ ರೈತರ ಮಾಹಿತಿ ಗೌಪ್ಯತೆಯ ಆತಂಕವೂ ಉಂಟಾದೀತು. ಆದರೆ, ಇದರಲ್ಲಿರುವ ಲಾಭ, ಅನುಕೂಲದ ಅಂಶಗಳನ್ನು ಗಮನಿಸಿದರೆ, ಅಪಾಯ ಕಡಿಮೆಯೆಂದೇ ಹೇಳಬಹುದು.



ಕಲಿಕೆಯ ನಲಿವಿಗೆ ಆ್ಯಪ್‌ಗಳು

> ಯಾವುದೇ ಸಸ್ಯದ ನಿರ್ದಿಷ್ಟ ಭಾಗಗಳಾದ ಎಲೆ, ಹೂವು, ಪುಷ್ಪಮಂಜರಿ ಅಥವಾ ಹಣ್ಣು – ಇವುಗಳ ಭಾವಚಿತ್ರಗಳನ್ನು ಕಳಿಸಿದರೂ ಸಾಕು, ಆ ಸಸ್ಯದ ಎಲ್ಲ ವಿವರಗಳನ್ನು ಆ್ಯಪ್‌ನಿಂದ ಪಡೆಯಬಹುದು.

ಟಿ. ಎ. ಬಾಲಕೃಷ್ಣ ಅಡಿಗ

ಈ ಲೇಖನದಲ್ಲಿ ಕೆಲವು ಉಪಯುಕ್ತ ಶೈಕ್ಷಣಿಕ ಆ್ಯಪ್‌ಗಳ ಬಗ್ಗೆ ತಿಳಿದುಕೊಳ್ಳೋಣ:

ಖಾನ್ ಅಕಾಡೆಮಿ (Khan Academy): ಒಂದರಿಂದ ಹನ್ನೆರಡನೆಯ ತರಗತಿಯ ವಿದ್ಯಾರ್ಥಿಗಳಿಗೆಂದೇ ಅಮೆರಿಕಾದ ಸಲ್ಮಾನ್ ಖಾನ್ ಎಂಬುವರು ರೂಪಿಸಿದ ಈ ಉಚಿತ ಆ್ಯಪ್ ಈಗ ಅತ್ಯಂತ ಜನಪ್ರಿಯ. ಭಾರತಕ್ಕೆ ಸಂಬಂಧಿಸಿದಂತೆ ಕೇಂದ್ರದ ಎನ್‌ಸಿಇಆರ್‌ಟಿ ಮತ್ತು ಸಿಬಿಎಸ್‌ಇ ಪಠ್ಯಕ್ರಮವನ್ನು ಅನುಸರಿಸಲಾಗಿದೆ. ಇದು ಉಚಿತ ಆ್ಯಪ್. ವಿಜ್ಞಾನ, ಗಣಿತ ಹಾಗೂ ಇತರ ಪ್ರಮುಖ ವಿಷಯಗಳಲ್ಲಿ ಪ್ರತಿಯೊಂದು ತರಗತಿಗೆ ನಿಗದಿತವಾಗಿರುವ ಪಠ್ಯಕ್ರಮಕ್ಕೆ ಅನುಗುಣವಾಗಿ ಅವಶ್ಯಕ ಮಾಹಿತಿಗಳನ್ನು ಇದರಲ್ಲಿ ನೀಡಲಾಗಿದೆ. ಪ್ರಮುಖ ಸಿದ್ಧಾಂತಗಳ ಬಗ್ಗೆ ವಿವರವಾದ ವಿಶ್ಲೇಷಣೆಯನ್ನು ನೀಡಲಾಗಿದೆ. ಹಂತಹಂತವಾಗಿ ಕಲಿಯಲು ಅನುಕೂಲವಾಗುವಂತೆ ವಿಷಯಗಳನ್ನು ವಿವರಿಸಲಾಗಿದೆ. ಪ್ರತಿ ವಿಷಯದಲ್ಲಿಯೂ ಸಾಕಷ್ಟು ವಿಡಿಯೊಗಳು, ಅಭ್ಯಾಸಗಳು ಹಾಗೂ ಘಟಕ ಪರೀಕ್ಷೆಗಳನ್ನು ಅಳವಡಿಸಲಾಗಿದೆ. ಅಭ್ಯಾಸಗಳು 'ಅಂತರ್ ಕ್ರಿಯಾತ್ಮಕ' (interactive) ರೀತಿಯಲ್ಲಿರುವುದರಿಂದ ವಿದ್ಯಾರ್ಥಿಗಳು ಆಸಕ್ತಿಯಿಂದ, ಖುಷಿಯಿಂದ ಕಲಿಯುವುದು ಸಾಧ್ಯವಿದೆ. ಈ ಆ್ಯಪ್‌ನ ಮೂಲಕ ಶಿಕ್ಷಕರು ತರಗತಿಯ ಪ್ರತಿ ವಿದ್ಯಾರ್ಥಿಯ ಪ್ರಗತಿಯ ಬಗ್ಗೆ ಮಾಹಿತಿ ಪಡೆಯಬಹುದು; ಅಗತ್ಯವಾದ ಮಾಹಿತಿ-ಸಲಹೆಗಳನ್ನು ನೀಡಬಹುದು. ಐ.ಐ.ಟಿ., ಜೆ.ಇ.ಇ. ಮತ್ತು ಜಿಮ್ಯಾಟ್ (GMAT)ನಂಥ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬರೆಯಲಿಚ್ಛಿಸುವವರಿಗೂ ಈ ಆ್ಯಪ್ ಉಪಯುಕ್ತ. ಇಂಗ್ಲಿಷ್ ಮಾತ್ರವಲ್ಲದೆ, ಹಿಂದಿ, ಕನ್ನಡ ಮುಂತಾದ ಅನೇಕ ಭಾರತೀಯ ಭಾಷೆಗಳಲ್ಲಿಯೂ ಲಭ್ಯ.

ಖಾನ್ ಅಕಾಡೆಮಿ ಕಿಡ್ಸ್ (Khan Academy Kids): ಎರಡರಿಂದ ಎಂಟು ವರ್ಷದವರೆಗಿನ ಮಕ್ಕಳಿಗಾಗಿಯೇ ರೂಪಿಸಲಾದ ವಿಶಿಷ್ಟ ಆ್ಯಪ್ ಇದು; ಉಚಿತ. ಮಕ್ಕಳು ನಲಿಯುತ್ತಾ ಕಲಿಯಲು ಅನುಕೂಲವಾಗುವಂತೆ ಈ ಆ್ಯಪ್‌ನಲ್ಲಿ ಸೃಜನಾತ್ಮಕ ಪಾಠಗಳು, ಪೂರಕವಾಗಿ ಅನಿಮೇಷನ್ ಮಾಡಲಾದ ವಿಡಿಯೊಗಳು, ಜೊತೆಗೆ ಗೇಮ್‌ಗಳನ್ನೂ ಅಳವಡಿಸಲಾಗಿದೆ. ರಂಜನೀಯ ಹಾಗೂ ನೀತಿಬೋಧಕ ಕಥೆಗಳನ್ನೂ ಅಳವಡಿಸಲಾಗಿದೆ. ಚಿಕ್ಕ ಮಕ್ಕಳು ಅಕ್ಷರಾಭ್ಯಾಸ ಮಾಡುವುದಕ್ಕೆ ಮುಂಚೆ ಕಲಿಯಬೇಕಾದ ಕೌಶಲಗಳಿಗೆ ಒತ್ತು ಕೊಡಲಾಗಿದೆ. ಭಾವನಾತ್ಮಕ ಹಾಗೂ ಸಾಮಾಜಿಕ ಕೌಶಲಗಳ ಬೆಳವಣಿಗೆಗೂ ಪೂರಕವಾದ ಅಂಶಗಳನ್ನು ಒಳಗೊಂಡಿದೆ. ರಜಾ ಅವಧಿಯಲ್ಲಿ ಮಕ್ಕಳ ಕಲಿಕೆಗೆ ಪೂರಕವಾಗಿ ಮಾಡಿಸಬಹುದಾದ ಚಟುವಟಿಕೆಗಳ ಬಗ್ಗೆಯೂ ಮಾಹಿತಿಯನ್ನು ಹೊಂದಿದೆ. ಪೋಷಕರಿಗೂ ಈ ಆ್ಯಪ್ ಉಪಯುಕ್ತ.

ಪ್ಲಾಂಟ್‌ನೆಟ್ (PlantNet): ಯಾವುದೇ ಅಪರಿಚಿತ ಸಸ್ಯದ ವೈಜ್ಞಾನಿಕ ಹೆಸರು ಮತ್ತಿತರ ವಿವರಗಳನ್ನು ತಿಳಿದುಕೊಳ್ಳುವ ಇಚ್ಛೆ ಇರುವವರಿಗೆ ಅತ್ಯಂತ ಉಪಯುಕ್ತವಾದ ಆ್ಯಪ್. ಜೀವವಿಜ್ಞಾನದ ವಿದ್ಯಾರ್ಥಿಗಳಿಗೆ ಹಾಗೂ ಅಧ್ಯಾಪಕರಿಗೆ ಈ ಆ್ಯಪ್ ಒಂದು ವರದಾನ. ಸಸ್ಯಗಳನ್ನು ವೈಜ್ಞಾನಿಕವಾಗಿ ಗುರುತಿಸಲು ಹಿಂದೆಲ್ಲ ಹಲವಾರು ಪುಸ್ತಕಗಳ ನೆರವು ಪಡೆಯಬೇಕಿತ್ತು; ವರ್ಗೀಕರಣತಜ್ಞರನ್ನು ಸಂಪರ್ಕಿಸಬೇಕಿತ್ತು. ಆದರೆ ಈಗ ಅದು ಬಹಳ ಸುಲಭ. ಸಸ್ಯದ ಫೋಟೊ ಒಂದನ್ನು ಕ್ಲಿಕ್ಕಿಸಿ ಈ ಆ್ಯಪ್‌ಗೆ ಅಪ್‌ಲೋಡ್ ಮಾಡಿದರೆ, ಕೆಲವೇ ಕ್ಷಣಗಳಲ್ಲಿ ಆ ಸಸ್ಯದ ರೂಢಿನಾಮ, ವೈಜ್ಞಾನಿಕ ಹೆಸರು ಮುಂತಾದ ವಿವರಗಳು ಒದಗುತ್ತವೆ! ಯಾವುದೇ ಸಸ್ಯದ ನಿರ್ದಿಷ್ಟ ಭಾಗಗಳಾದ ಎಲೆ, ಹೂವು, ಪುಷ್ಪಮಂಜರಿ ಅಥವಾ ಹಣ್ಣು – ಇವುಗಳ ಭಾವಚಿತ್ರಗಳನ್ನು ಕಳಿಸಿದರೂ ಸಾಕು, ಆ ಸಸ್ಯದ ಎಲ್ಲ ವಿವರಗಳನ್ನು ಪಡೆಯಬಹುದು. ತೋಟಗಾರಿಕೆ ಮತ್ತು ವ್ಯವಸಾಯ ಕ್ಷೇತ್ರಗಳಲ್ಲಿ ಕೆಲಸ ಮಾಡುವವರಿಗಷ್ಟೇ ಅಲ್ಲ, ಪರಿಸರಪ್ರೇಮಿಗಳಿಗೆ, ಕೈದೋಟ ಬೆಳೆಸಿದವರಿಗೆ, ಹಾಗೂ ಜನಸಾಮಾನ್ಯರಿಗೂ ಈ ಆ್ಯಪ್ ಬಹಳ ಉಪಯುಕ್ತ. ಈ ಆ್ಯಪ್ ಅನ್ನು ಅಭಿವೃದ್ಧಿ ಪಡಿಸಿದವರು ಸಸ್ಯ ಮತ್ತು ಕೃಷಿವಿಜ್ಞಾನಿಗಳು. ಹಾಗಾಗಿ, ಇದನ್ನು 'ಸಿಟಿಜೆನ್ ಪ್ರಾಜೆಕ್ಟ್ ಆನ್ ಬಯೋಡೈವರ್ಸಿಟಿ' (citizen project on biodiversity) ಎಂದು ಕರೆಯಲಾಗಿದೆ. ಈ ಆ್ಯಪ್ ಅನ್ನು ಉಚಿತವಾಗಿ ಡೌನ್‌ಲೋಡ್ ಮಾಡಿಕೊಂಡು ಸ್ಮಾರ್ಟ್‌ಫೋನ್, ಐ ಪ್ಯಾಡ್ ಅಥವಾ ಲ್ಯಾಪ್‌ಟಾಪ್‌ನಲ್ಲಿಯೂ ಬಳಸಬಹುದು.

ಐ ಕ್ಯಾನ್ (I Can): ಆಟಿಸಮ್, ಡಿಸ್ಲೆಕ್ಸಿಯಾ, ಮುಂತಾದ ಕಲಿಕಾ ನ್ಯೂನ್ಯತೆಗಳನ್ನು ಹೊಂದಿರುವ ಮಕ್ಕಳಿಗಾಗಿಯೇ ರೂಪಿಸಲಾಗಿರುವ ವಿಶಿಷ್ಟ ಆ್ಯಪ್ 'ಐ ಕ್ಯಾನ್'. ಕಲಿಕೆಯಲ್ಲಿ ಹಿಂದುಳಿದಿರುವ ಮಕ್ಕಳ ಕುಟುಂಬದವರಿಗೆ ಈ ಆ್ಯಪ್ ಅತ್ಯಂತ ಉಪಯುಕ್ತ. ಅಂಥ ಮಕ್ಕಳಿಗೆ ಮನೆಯಲ್ಲೇ ಸ್ವತಂತ್ರವಾಗಿ ಪೋಷಕರು ಕಲಿಸಲು ಇದನ್ನು ಬಳಸಬಹುದು. ವಯೋಸಹಜವಾದ ಸಾಮಾಜಿಕ ಮತ್ತು ಶೈಕ್ಷಣಿಕ ಕೌಶಲಗಳನ್ನು ನಲಿಯುತ್ತಾ ಕಲಿಯುವ ಪ್ರಕ್ರಿಯೆಗೆ ಇದು ಪೂರಕವಾಗಿದೆ. ಈ ಆ್ಯಪ್‌ನಲ್ಲಿ ವಿಡಿಯೊಗಳು, ಪುಸ್ತಕಗಳು, ಗೇಮ್‌ಗಳು ಹಾಗೂ ಅನಿಮೇಷನ್‌ಗಳನ್ನು ಅಳವಡಿಸಲಾಗಿರುವುದರಿಂದ ಮಕ್ಕಳು ಸ್ವಪ್ರಚೋದನೆಯಿಂದಲೇ ಯಾವ ಅಡೆತಡೆಯಿಲ್ಲದೇ ಖುಷಿಯಿಂದ ಕಲಿಯಬಹುದು.

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ- 63

856.ಸಂವಿಧಾನದ ಯಾವ ಅನುಚ್ಛೇದ ರಾಜ್ಯಗಳು ಗ್ರಾಮ ಪಂಚಾಯತ್ ವ್ಯವಸ್ಥೆಯನ್ನು ಸಂಘಟಿಸುವ ಬಗ್ಗೆ ವಿವರಿಸುತ್ತದೆ.
ಎ) ಅನುಚ್ಛೇದ 40 ಬಿ) ಅನುಚ್ಛೇದ 42
ಸಿ) ಅನುಚ್ಛೇದ 37 ಡಿ) ಅನುಚ್ಛೇದ 39

857. ಸಂವಿಧಾನದ ರಾಜ್ಯದ ನಿರ್ದೇಶಕ ತತ್ವಗಳಿಗೆ ಸಂಬಂಧಿಸಿದಂತೆ ತಪ್ಪಾದ ಹೇಳಿಕೆಯನ್ನು ಆಯ್ಕೆಮಾಡಿ.
ಎ) ಭಾರತದ ಸಂವಿಧಾನದ ಭಾಗ IV ರಲ್ಲಿವೆ
ಬಿ) ಐರ್ಲೆಂಡಿನ ಸಂವಿಧಾನದಿಂದ ಪ್ರೇರಣೆ ಪಡೆದಿದೆ
ಸಿ) ನ್ಯಾಯಾಂಗದ ಮೂಲಕ ಸಮರ್ಥಿಸಲಾಗದ ನಾಗರಿಕ ಹಕ್ಕುಗಳೆಂದು ತಿಳಿಯಲಾಗಿದೆ
ಡಿ) ಅವುಗಳನ್ನು ತಿದ್ದುಪಡಿ ಮಾಡಿಲ್ಲ

858. ರಾಜ್ಯಸಭೆಯ ಸದಸ್ಯರು ಇದಕ್ಕೆ ಸಂಬಂಧಿಸಿಲ್ಲ.
1. ಸಾರ್ವಜನಿಕ ಲೆಕ್ಕ ಸಮಿತಿ 2. ಅಂದಾಜು ಸಮಿತಿ
3. ಸಾರ್ವಜನಿಕ ಸ್ವಾಮ್ಯಗಳ ಮೇಲಿನ ಸಮಿತಿ
ಸರಿಯಾದ ಉತ್ತರ ಆಯ್ಕೆಮಾಡಿ
ಎ) 1 ಮತ್ತು 3 ಬಿ) 2 ಮಾತ್ರ
ಸಿ) 3 ಮಾತ್ರ ಡಿ) 1 ಮತ್ತು 2

859. ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ
1. ಲೋಕಸಭಾಧ್ಯಕ್ಷರ ಚುನಾವಣೆಗೆ ದಿನಾಂಕವನ್ನು ರಾಷ್ಟ್ರಪತಿಗಳು ನಿಗದಿಪಡಿಸುತ್ತಾರೆ
2. ಲೋಕಸಭಾಧ್ಯಕ್ಷರು ರಾಷ್ಟ್ರಪತಿಗಳಿಗೆ ರಾಜೀನಾಮೆ ಪತ್ರ ನೀಡುವುದರ ಮೂಲಕ ತಮ್ಮ ಅಧಿಕಾರ ತ್ಯಜಿಸಬಹುದು
ಸರಿಯಾದ ಉತ್ತರ ಆಯ್ಕೆಮಾಡಿ
ಎ) 1 ಮಾತ್ರ ಸರಿ ಬಿ) 2 ಮಾತ್ರ ಸರಿ
ಸಿ) 1 ಮತ್ತು 2 ಸರಿ ಡಿ) 1 ಮತ್ತು 2 ತಪ್ಪು

860. ರಾಜ್ಯ ಲೋಕಸೇವಾ ಆಯೋಗದ ಸದಸ್ಯರನ್ನು ಅನುಚಿತ ವರ್ತನೆ ಆಧಾರದ ಮೇಲೆ ತೆಗೆದು ಹಾಕುವುದು ಇವರಿಂದ ವಿಚಾರಣೆಯಾದ ನಂತರ
ಎ) ರಾಷ್ಟ್ರಪತಿಗಳು ನೇಮಕ ಮಾಡಿದ ಸಮಿತಿ
ಬಿ) ಭಾರತದ ಸರ್ವೋಚ್ಚ ನ್ಯಾಯಾಲಯ
ಸಿ) ಉಚ್ಚ ನ್ಯಾಯಾಲಯ
ಡಿ) ರಾಜ್ಯದ ರಾಜ್ಯಪಾಲರು ನೇಮಕ ಮಾಡಿದ ಸಮಿತಿ

861. ಸಂವಿಧಾನದ ಯಾವ ಭಾಗದಲ್ಲಿ ಗಾಂಧೀಜಿಯವರ ತತ್ವಗಳನ್ನು ಅಳವಡಿಸಲಾಗಿದೆ?
ಎ) ಮೂಲಭೂತ ಹಕ್ಕುಗಳು
ಬಿ) ಮೂಲಭೂತ ಕರ್ತವ್ಯಗಳು
ಸಿ) ಪೀಠಿಕೆ ಡಿ) ನಿರ್ದೇಶಕ ತತ್ವಗಳು

862. ಮೂಲಭೂತ ಹಕ್ಕುಗಳು ಉಲ್ಲಂಘನೆಯಾದಾಗ ಒಬ್ಬ ನಾಗರಿಕ ಯಾವ ನ್ಯಾಯಾಲಯದ ಮೊರೆ ಹೋಗಬಹುದು?
ಎ) ಮ್ಯಾಜಿಸ್ಟ್ರೇಟ್ ನ್ಯಾಯಾಲಯ
ಬಿ) ಜಿಲ್ಲಾ ಮ್ಯಾಜಿಸ್ಟ್ರೇಟ್ ಕಚೇರಿ
ಸಿ) ಸೆಷನ್ಸ್ ನ್ಯಾಯಾಲಯ
ಡಿ) ಉಚ್ಚ ನ್ಯಾಯಾಲಯ

863. ಈ ಕೆಳಗಿನ ಯಾವವು ಚುನಾವಣಾ ಆಯೋಗದ ಅಧಿಕಾರ ಮತ್ತು ಕಾರ್ಯಗಳಾಗಿವೆ?
1. ರಾಜಕೀಯ ಪಕ್ಷಗಳನ್ನು ನೊಂದಾಯಿಸಿಕೊಳ್ಳುವುದು
2. ರಾಜಕೀಯ ಪಕ್ಷಗಳಿಗೆ ಮಾನ್ಯತೆ ನೀಡುವುದು
3. ರಾಜಕೀಯ ಪಕ್ಷಗಳಿಗೆ ಚುನಾವಣಾ ಚಿಹ್ನೆಗಳನ್ನು ನೀಡುವುದು
4. ರಾಜಕೀಯ ಪಕ್ಷಗಳಿಗೆ ರಾಷ್ಟ್ರೀಯ ಅಥವಾ ಪ್ರಾದೇಶಿಕ ಪಕ್ಷಗಳ ಸ್ಥಾನಮಾನ ನೀಡುವುದು
ಸರಿಯಾದ ಉತ್ತರ ಆಯ್ಕೆಮಾಡಿ
ಎ) 1, 2 ಮತ್ತು 3 ಬಿ) 2, 3 ಮತ್ತು 4
ಸಿ) 1, 3 ಮತ್ತು 4 ಡಿ) 1, 2, 3 ಮತ್ತು 4

864. ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ.
1. ಭಾರತದ ಅಟಾರ್ನಿ ಜನರಲ್ ಅವರನ್ನು ರಾಷ್ಟ್ರಪತಿ ಮಂತ್ರಿಮಂಡಲದ ಸಲಹೆಯ ಮೇರೆಗೆ ನೇಮಿಸುತ್ತಾರೆ.
2. ಇವರ ಅಧಿಕಾರ ಅವಧಿ 6 ವರ್ಷ ಅಥವಾ 65 ವರ್ಷ ಪ್ರಾಯ ಯಾವುದು ಮುಂಚಿತವೋ ಅದು.
ಸರಿಯಾದ ಹೇಳಿಕೆ ಆಯ್ಕೆಮಾಡಿ
ಎ) 1 ಮಾತ್ರ ಸರಿ ಬಿ) 2 ಮಾತ್ರ ಸರಿ
ಸಿ) 1 ಮತ್ತು 2 ಸರಿ ಡಿ) 1 ಮತ್ತು 2 ತಪ್ಪು

865. ರಾಷ್ಟ್ರಪತಿಯು ತನ್ನ ರಾಜೀನಾಮೆ ಪತ್ರವನ್ನು ಈ ಕೆಳಗಿನ ಯಾರಿಗೆ ನೀಡುತ್ತಾರೆ?
ಎ) ಉಪರಾಷ್ಟ್ರಪತಿಗಳು
ಬಿ) ಸರ್ವೋಚ್ಚ ನ್ಯಾಯಾಲಯದ ಮುಖ್ಯನ್ಯಾಯಮೂರ್ತಿಗಳಿಗೆ
ಸಿ) ಪ್ರಧಾನಮಂತ್ರಿಗಳಿಗೆ
ಡಿ) ಇದಾವುದು ಅಲ್ಲ

866. ರಾಜ್ಯಸಭಾ ಸಭಾಪತಿಯವರನ್ನು ಈ ಕೆಳಗಿನವರು ಚುನಾಯಿಸುತ್ತಾರೆ.
ಎ) ರಾಜ್ಯಸಭೆಯ ಚುನಾಯಿತ ಸದಸ್ಯರಿಂದ
ಬಿ) ರಾಜ್ಯಸಭೆಯ ಎಲ್ಲಾ ಸದಸ್ಯರಿಂದ
ಸಿ) ಸಂಸತ್ತಿನ ಚುನಾಯಿತ ಸದಸ್ಯರಿಂದ
ಡಿ) ಸಂಸತ್ತಿನ ಎಲ್ಲ ಸದಸ್ಯರಿಂದ

867. ಭಾರತದಲ್ಲಿ 'ರಾಜಕೀಯದತ್ತ ಅಧಿಕಾರ'ದ ಮೂಲ
ಎ) ಸಂವಿಧಾನ ಬಿ) ಸಂಸತ್ತು
ಸಿ) ಶಾಸಕಾಂಗ ಡಿ) ಪ್ರಜೆಗಳು

868. ಭಾರತವನ್ನು ಒಂದು ಗಣರಾಜ್ಯ ಎಂದು ಕರೆಯಲಾಗುತ್ತದೆ ಏಕೆಂದರೆ
ಎ) ಮಂತ್ರಿಗಳು ರಾಷ್ಟ್ರಪತಿಯ ಇಷ್ಟದ ಮೇಲೆ ಅಧಿಕಾರ ಹೊಂದಿರುತ್ತಾರೆ
ಬಿ) ಮಂತ್ರಿಗಳು ಸಂಸತ್ತಿಗೆ ಉತ್ತರದಾಯಿಯಾಗಿರುತ್ತಾರೆ
ಸಿ) ಭಾರತದ ರಾಷ್ಟ್ರಪತಿ ಹುದ್ದೆಯು ಚುನಾಯಿತ ಹುದ್ದೆಯಾಗಿದೆ
ಡಿ) ಭಾರತದಲ್ಲಿ ಜನರು ರಾಜ್ಯಾಡಳಿತದ ಸಾರ್ವಭೌಮತ್ವವನ್ನು ಹೊಂದಿದ್ದಾರೆ

869. ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ.
1. ಸಂವಿಧಾನವು ಮೂಲಭೂತ ಹಕ್ಕುಗಳ ರಕ್ಷಣೆಯ ಜವಾಬ್ದಾರಿಯನ್ನು ಸರ್ವೋಚ್ಚ ನ್ಯಾಯಾಲಯಕ್ಕೆ ನೀಡಿದೆ
2. ರಾಷ್ಟ್ರಪತಿಗಳು ಮೂಲಭೂತ ಹಕ್ಕುಗಳನ್ನು ತಾತ್ಕಾಲಿಕವಾಗಿ ರದ್ದು ಮಾಡುವ ಅಧಿಕಾರ ಹೊಂದಿರುತ್ತಾರೆ
ಸರಿಯಾದ ಹೇಳಿಕೆ ಆಯ್ಕೆಮಾಡಿ
ಎ) 1 ಮಾತ್ರ ಸರಿ ಬಿ) 2 ಮಾತ್ರ ಸರಿ
ಸಿ) 1 ಮತ್ತು 2 ಸರಿ ಡಿ) 1 ಮತ್ತು 2 ತಪ್ಪು

870. ಸಂವಿಧಾನ ರಚನಾ ಸಭೆಯು ಈ ಕೆಳಗಿನಂತೆ ರಚನೆಯಾಗಿತ್ತು
ಎ) ಪರೋಕ್ಷವಾಗಿ ಚುನಾಯಿತಗೊಂಡ ಸದಸ್ಯರಿಂದ ಬಿ) ನಾಮಕರಣಗೊಂಡ ಸದಸ್ಯರಿಂದ
ಸಿ) ಎ ಮತ್ತು ಬಿ ಡಿ) ಕೇವಲ ಚುನಾಯಿತ ಸದಸ್ಯರಿಂದ

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಭಾಗ 62ರ ಉತ್ತರಗಳು: 841. ಸಿ, 842. ಬಿ, 843. ಎ, 844. ಬಿ, 845. ಡಿ, 846. ಡಿ, 847. ಬಿ, 848. ಬಿ, 849. ಎ, 840. ಎ, 851. ಎ, 852. ಬಿ, 853. ಡಿ, 854. ಡಿ, 855. ಸಿ

ಏನಿದು ಎಲ್‌ಇಡಿ, ಒಲೆಡ್, ಕ್ಯೂಲೆಡ್ ಸ್ಕ್ರೀನ್?

ಅವಿನಾಶ್ ಬಿ.

ಡೂಮ್ ಇರುವ ಅಂದರೆ ಕ್ಯಾಥೋಡ್ ರೇ ಟ್ಯೂಬ್ (ಸಿಆರ್‌ಟಿ) ಟಿವಿಗಳು ಹೆಚ್ಚು ಜಾಗ ಆಕ್ರಮಿಸಿಕೊಳ್ಳುತ್ತಿದ್ದವು ಮತ್ತು ಈಗಾಗಲೇ ಹೆಚ್ಚಿನವರ ಮನೆಗಳಿಂದ ಕಾಲ್ಕಿತ್ತಿವೆ. ಅವುಗಳ ಸ್ಥಾನದಲ್ಲಿ ನೋಡಲು ತೆಳ್ಳಗಿರುವ, ಗೋಡೆಯ ಮೇಲೆ ಅಂಟಿಸುವಂತೆ ಇರಿಸಬಹುದಾದ, ಸ್ಥಳಾವಕಾಶ ಕಡಿಮೆ ಬೇಕಿರುವ ಸ್ಲಿಮ್ ಟಿವಿಗಳು ಬಂದಿವೆ. ಕೆಲವು ಮನೆಗಳಲ್ಲಿ ಇಂಟರ್ನೆಟ್ ಸಂಪರ್ಕದ ಮೂಲಕ ಕೆಲಸ ಮಾಡುವ ಸಾಮರ್ಥ್ಯದ ಸ್ಮಾರ್ಟ್ ಟಿವಿಗಳಿವೆ. ಆದರೆ, ಇನ್ನೂ ಸ್ಲಿಮ್ ಇಲ್ಲವೇ ಸ್ಮಾರ್ಟ್ ಟಿವಿ ಖರೀದಿಸಲು ಯೋಚಿಸುತ್ತಿರುವವರಿಗೆ ಎಲ್‌ಇಡಿ, ಎಲ್‌ಸಿಡಿ, ಒಎಲ್‌ಇಡಿ (ಒಲೆಡ್), ಕ್ಯುಲೆಡ್ ಮುಂತಾದ ಪದಗಳು ಗೊಂದಲವುಂಟು ಮಾಡಬಹುದು. ಖರೀದಿ ಮಾಡುವ ಮುನ್ನ ಅವೇನೆಂದು ತಿಳಿದರೆ ಆಯ್ಕೆಗೆ ಅನುಕೂಲ. ಈ ಪದಗಳೆಲ್ಲವೂ ಟಿವಿ ಪರದೆಯ ಡಿಸ್‌ಪ್ಲೇ ತಂತ್ರಜ್ಞಾನಕ್ಕೆ ಸಂಬಂಧಿಸಿದ್ದಾಗಿದ್ದು, ಅವುಗಳ ಬಗ್ಗೆ ತಿಳಿಯೋಣ.

OLED

ಇದು ಆರ್ಗ್ಯಾನಿಕ್ ಲೈಟ್ ಎಮಿಟಿಂಗ್ ಡಯೋಡ್ ಎಂಬುದರ ಹ್ರಸ್ವರೂಪ. ಯಾವುದೇ ದೃಶ್ಯ ಮಾಧ್ಯಮ (ಚಿತ್ರ ಅಥವಾ ವಿಡಿಯೊ) ಗುಣಮಟ್ಟವನ್ನು ಪಿಕ್ಸೆಲ್ ಎಂಬ ಮೂಲಾಂಶದಿಂದ ಅಳೆಯಲಾಗುತ್ತದೆ. ವಿದ್ಯುತ್ ಪ್ರವಾಹಕ್ಕೆ ತಕ್ಕಂತೆ ಪ್ರತಿಯೊಂದು ಪಿಕ್ಸೆಲ್ ಕೂಡ ತನ್ನದೇ ರೀತಿಯಲ್ಲಿ ಬೆಳಕನ್ನು ಹೊರಸೂಸುತ್ತದೆ. ಸಂದರ್ಭಕ್ಕನುಗುಣವಾಗಿ ಒಂದೊಂದು ಪಿಕ್ಸೆಲ್ ಸಂಪೂರ್ಣವಾಗಿ ಆಫ್ ಕೂಡ ಆಗಬಹುದು. ಇದರ ಪರಿಣಾಮವಾಗಿ, ಕಡು ಕಪ್ಪು, ಗರಿಷ್ಠ ಕಾಂಟ್ರಾಸ್ಟ್ ಮತ್ತು ನೈಜ ಬಣ್ಣಗಳನ್ನು ನೋಡುವುದು ಸಾಧ್ಯವಾಗುತ್ತದೆ. ಇದಕ್ಕೆ ಹಿಂದಿನಿಂದ ಬೆಳಕು ಅಥವಾ ಹಿಂಬೆಳಕು (ಬ್ಯಾಕ್‌ಲೈಟ್) ಅಗತ್ಯವಿಲ್ಲದಿರುವುದರಿಂದ OLED (ಒಲೆಡ್) ಟಿವಿಗಳು ಹೆಚ್ಚು ತೆಳ್ಳಗಿರಬಲ್ಲವು. ಬೇರೆ ಬೇರೆ ಕೋನಗಳಲ್ಲಿಯೂ ಚಿತ್ರಗಳು ಸ್ಫುಟವಾಗಿ ಗೋಚರಿಸಬಲ್ಲವು. ಆದರೆ OLED ನಲ್ಲಿ ಒಂದು ದೌರ್ಬಲ್ಯವಿದೆ. ಅದೇನೆಂದರೆ, QLED ಅಥವಾ LED ಟಿವಿಗಳಿಗೆ ಹೋಲಿಸಿದರೆ, OLED ಟಿವಿಯಲ್ಲಿ, ವಿಶೇಷವಾಗಿ ಹೈ ಡೈನಮಿಕ್ ರೇಂಜ್ (HDR) ಇರುವ ದೃಶ್ಯಗಳ ಪ್ರಖರತೆ ಕೊಂಚ ಕಡಿಮೆ ಇರುತ್ತದೆ. ಇದು ಉಪೇಕ್ಷಿಸಬಹುದಾದ ವಿಷಯವಾದರೂ, ಒಟ್ಟಾರೆಯಾಗಿ ಚಿತ್ರ ಗೋಚರತೆಯ ಗುಣಮಟ್ಟಕ್ಕೆ OLED ಟಿವಿಯೇ ಅತ್ಯುತ್ತಮ. ಇದರ ಸ್ಫುಟತೆಗಾಗಿಯೇ ಬೆಲೆಯೂ ಹೆಚ್ಚು.



ಇಂಟರ್‌ನೆಟ್ ಸಂಪರ್ಕವಿರುವ ಸ್ಮಾರ್ಟ್ ಟಿವಿ ಸ್ಕ್ರೀನ್

LED

ಎಲ್‌ಇಡಿ ತಂತ್ರಜ್ಞಾನ ತೀರಾ ಹೊಸದೇನಲ್ಲ. ಚಪ್ಪಟೆ ಪರದೆಯ ಟಿವಿಗಳಲ್ಲಿ ಅಗ್ಗದ ತಂತ್ರಜ್ಞಾನದಲ್ಲಿ ಉತ್ತಮ ಗುಣಮಟ್ಟದ ದೃಶ್ಯಗಳನ್ನು ಮೂಡಿಸಬಲ್ಲ ಈ ತಂತ್ರಜ್ಞಾನದಲ್ಲಿ, ಎಲ್‌ಇಡಿ ಹಿಂಬೆಳಕಿರುವ ಟಿಎಫ್‌ಟಿ-ಎಲ್‌ಸಿಡಿ ಪ್ಯಾನೆಲ್‌ಗಳನ್ನೇ ಬಳಸಲಾಗುತ್ತದೆ. ಇಡೀ ಎಲ್‌ಸಿಡಿ ಪ್ಯಾನೆಲ್‌ಗೆ ಒಂದೇ ಬ್ಯಾಕ್‌ಲೈಟ್ ಇರುವ ಕಾರಣದಿಂದಾಗಿ ಕಡುಕಪ್ಪು ಹಿನ್ನೆಲೆಯ ಗುಣಮಟ್ಟವು LED ಯಷ್ಟು ತೀಕ್ಷ್ಣವಾಗಿರುವುದಿಲ್ಲ. ಉತ್ತಮ ಎನ್ನಿಸಬಹುದಾದ ಗುಣಮಟ್ಟದಲ್ಲಿ ಚಿತ್ರಗಳು ಮೂಡಿಬರುವುದರಿಂದ ಅಗ್ಗದ ಬಜೆಟ್‌ನಲ್ಲಿ ಇದನ್ನು ಪರಿಗಣಿಸಬಹುದು.

QLED

ಇವೆರಡರ ಮಧ್ಯದಲ್ಲಿರುವುದು QLED. ಎಂದರೆ, ಕ್ವಾಂಟಮ್ ಡಾಟ್ ಎಲ್‌ಇಡಿ. ಇದು ಕೂಡ ಮೂಲತಃ ಎಲ್‌ಇಡಿ ಸ್ಕ್ರೀನೇ ಆಗಿದ್ದರೂ, ಎಲ್‌ಇಡಿ ಹಿಂಬೆಳಕು ಮತ್ತು ಎಲ್‌ಸಿಡಿ ಪದರದ ಮಧ್ಯೆ ಒಂದು ಕ್ವಾಂಟಂ-ಡಾಟ್ ಫಿಲ್ಟರ್ ಇರುತ್ತದೆ. ಸ್ಕ್ರೀನ್‌ನಲ್ಲಿ ಉತ್ತಮವಾಗಿ ಬಣ್ಣಗಳನ್ನು ಮೂಡಿಸುವಲ್ಲಿ ಇದು ನೆರವು ನೀಡುತ್ತದೆ. ಹೀಗಾಗಿ, QLED ಪರದೆಯ ಟಿವಿಗಳಲ್ಲಿ ಎಲ್‌ಇಡಿಗಿಂತ ಚೆನ್ನಾಗಿರುವ ಬಣ್ಣಗಳು, ಪ್ರಖರತೆ ಇರುತ್ತದೆ. ಆದರೆ OLED ಗೆ ಹೋಲಿಸಿದರೆ ಕಾಂಟ್ರಾಸ್ಟ್ ಮಟ್ಟ ಹಾಗೂ ಕಡು ಕಪ್ಪು ಬಣ್ಣ, ವೀಕ್ಷಣೆಯ ಗುಣಮಟ್ಟ ಸ್ವಲ್ಪ ಕಡಿಮೆ. QLED ಪ್ಯಾನೆಲ್ ತಯಾರಿಗೆ ವೆಚ್ಚ ಹೆಚ್ಚು ಮತ್ತು ಸಾಮಾನ್ಯವಾಗಿ ಚಿಕ್ಕ ಪರದೆಯ ಟಿವಿಗಳಲ್ಲಿ ಇದನ್ನು ಬಳಸಲಾಗುವುದಿಲ್ಲ.

LCD

ಎಲ್ಲ LED ಟಿವಿಗಳು ಮೂಲತಃ ಲಿಕ್ವಿಡ್ ಕ್ರಿಸ್ಟಲ್ಸ್ ಡಿಸ್‌ಪ್ಲೇ (ಎಲ್‌ಸಿಡಿ) ಪ್ಯಾನೆಲ್ ಅನ್ನೇ ಹೊಂದಿರುತ್ತವೆ. ಪರದೆಯ ಮೇಲೆ ಬೆಳಕು ಪ್ರದರ್ಶಿತವಾಗುವುದನ್ನು ನಿಯಂತ್ರಿಸಲು ಎಲ್‌ಸಿಡಿ ಪ್ಯಾನೆಲ್ ಬಳಸಲಾಗುತ್ತದೆ. ಎರಡು ಪದರಗಳ ನಡುವೆ ದ್ರವೀಕೃತ ಸೂಕ್ಷ್ಮ ಸ್ಫಟಿಕಗಳ ಪದರ ಇರುತ್ತದೆ. ದ್ರವದ ಮೂಲಕ ವಿದ್ಯುತ್ ಪ್ರವಹಿಸಿದಾಗ, ಸೂಕ್ಷ್ಮ ಸ್ಫಟಿಕಗಳು ಹೊಂದಾಣಿಕೆ ಮಾಡಿಕೊಂಡು, ತಮ್ಮ ಮೂಲಕ ಬೆಳಕು ಹಾದುಹೋಗಲು ಅನುವು ಮಾಡಿಕೊಡುತ್ತದೆ.

ಹಾಗಿದ್ದರೆ ಎಲ್‌ಸಿಡಿ ಮತ್ತು ಎಲ್‌ಇಡಿ ಮಧ್ಯೆ ವ್ಯತ್ಯಾಸವೇನು? ವೈಜ್ಞಾನಿಕವಾಗಿ ಸಾಕಷ್ಟು ವ್ಯತ್ಯಾಸವಿದ್ದರೂ, ಎಲ್‌ಸಿಡಿಯಿಂದಲೇ ಎಲ್‌ಇಡಿ ಕೂಡ ಕೆಲಸ ಮಾಡುತ್ತದೆ. ಹಳೆಯ ಎಲ್‌ಸಿಡಿ ಟಿವಿಗಳಲ್ಲಿ ಪರದೆಯನ್ನು ಬೆಳಗುವುದಕ್ಕೆ 'ಕೋಲ್ಡ್ ಕ್ಯಾಥೋಡ್ ಫ್ಲೂರಸೆಂಟ್ ಲ್ಯಾಂಪ್' (CCFL) ಬಳಸುತ್ತಿದ್ದರೆ, ಎಲ್‌ಸಿಡಿ ಆಧಾರಿತ ಎಲ್‌ಇಡಿ ಟಿವಿಗಳಲ್ಲಿ ಮತ್ತಷ್ಟು ಕಿರಿದಾದ, ಹೆಚ್ಚು ಸಾಮರ್ಥ್ಯವುಳ್ಳ ಬೆಳಕು ಹೊರಸೂಸುವ (ಲೈಟ್ ಎಮಿಟಿಂಗ್) ಡಯೋಡ್‌ಗಳನ್ನು ಬಳಸಲಾಗುತ್ತಿದೆ. ತಂತ್ರಜ್ಞಾನ ಆಧುನಿಕ ಮತ್ತು ಗುಣಮಟ್ಟದ್ದಾಗಿರುವುದರಿಂದಾಗಿ ಎಲ್‌ಇಡಿ ಟಿವಿಗಳೇ ಹೆಚ್ಚು ಚಾಲ್ತಿಯಲ್ಲಿವೆ. ಅದರ ಉನ್ನತೀಕರಿಸಿದ ಭಾಗಗಳೇ QLED ಹಾಗೂ OLED.

ವಿಧಾನಸಭೆಯಲ್ಲಿ ಅಂಗೀಕಾರ • ಬಿಜೆಪಿ ಮತ್ತು ಕಾಂಗ್ರೆಸ್ ಸದಸ್ಯರ ನಡುವೆ ಮಾತಿನ ಸಮರ

ಧಾರ್ಮಿಕ ಕಟ್ಟಡಗಳ ಸಂರಕ್ಷಣಾ ಮಸೂದೆಗೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಸಾರ್ವಜನಿಕ ಸ್ಥಳಗಳಲ್ಲಿರುವ ಎಲ್ಲ 'ಅನಧಿಕೃತ ಧಾರ್ಮಿಕ ಕಟ್ಟಡ'ಗಳನ್ನು ರಕ್ಷಿಸುವ ಉದ್ದೇಶದಿಂದ ರೂಪಿಸಿರುವ 'ಕರ್ನಾಟಕ ಧಾರ್ಮಿಕ ಕಟ್ಟಡಗಳ ಸಂರಕ್ಷಣಾ ಮಸೂದೆ –2021'ಕ್ಕೆ ವಿಧಾನಸಭೆ ಮಂಗಳವಾರ ಅಂಗೀಕಾರ ನೀಡಿತು.

ನಂಜನಗೂಡು ತಾಲ್ಲೂಕಿನ ದೇವಸ್ಥಾನವೊಂದನ್ನು ತೆರವುಗೊಳಿಸಿದ ಘಟನೆಗೆ ತೀವ್ರ ವಿರೋಧ ವ್ಯಕ್ತವಾಗಿತ್ತು. ಉಳಿದಿರುವ 2,000ಕ್ಕೂ ಹೆಚ್ಚು ಅನಧಿಕೃತ ಧಾರ್ಮಿಕ ಕಟ್ಟಡಗಳಿಗೆ ರಕ್ಷಣೆ ನೀಡುವ ಉದ್ದೇಶದಿಂದ ಮಸೂದೆ ರೂಪಿಸಿದ್ದ ರಾಜ್ಯ ಸರ್ಕಾರ, ಸೋಮವಾರ ಅದನ್ನು ವಿಧಾನಸಭೆಯಲ್ಲಿ ಮಂಡಿಸಿತ್ತು. ಮಂಗಳವಾರ ಚರ್ಚೆಯ ಬಳಿಕ ಮಸೂದೆಗೆ ಸದನದ ಒಪ್ಪಿಗೆ ದೊರಕಿತು.

ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮಾತನಾಡಿ, 'ನಂಜನಗೂಡಿನಲ್ಲಿ ದೇವಸ್ಥಾನವನ್ನು ಧ್ವಂಸಗೊಳಿಸಿದ ಪ್ರಕರಣ ರಾಜ್ಯ ಸರ್ಕಾರದ ಗಮನಕ್ಕೆ ಬಾರದೇ ನಡೆದಿದೆ ಎಂಬುದನ್ನು ನಂಬಲಾಗದು. ಹಾಗೆ ಆಗಿದ್ದರೆ, ಸರ್ಕಾರ ಏಕೆ ಇದೆ? ಎಲ್ಲವೂ ಸರ್ಕಾರಕ್ಕೆ ತಿಳಿದಿತ್ತು. ಸುಪ್ರೀಂಕೋರ್ಟ್ ತೀರ್ಪು ಬಂದು 12 ವರ್ಷಗಳಾಗಿವೆ. ಹಿಂದೆ ತೆರವು ಮಾಡಿರುವ ಧಾರ್ಮಿಕ ಕಟ್ಟಡಗಳ ಕತೆ ಏನು' ಎಂದು ಪ್ರಶ್ನಿಸಿದರು.

'ಬಿಜೆಪಿ ಸರ್ಕಾರದವರೇ ದೇವಸ್ಥಾನ ಒಡೆದು ಹಾಕಿ, ಈಗ ರಕ್ಷಣೆಯ ಮಾತನ್ನಾಡುತ್ತಿದ್ದಾರೆ. ಹಿಂದೂ ಮಹಾಸಭಾ, ಹಿಂದೂ ಜಾಗರಣ ವೇದಿಕೆಯ ಒತ್ತಡಕ್ಕೆ ಮಣಿದು ತರಾತುರಿಯಲ್ಲಿ ಮಸೂದೆ ತಂದಿದ್ದಾರೆ. ಸದ್ಭಾವನೆಯಿಂದ ಧಾರ್ಮಿಕ ಕಟ್ಟಡ ಒಡೆಯುವ ಅಧಿಕಾರಿಗಳ ವಿರುದ್ಧ ಕ್ರಮ ಇಲ್ಲ ಎಂಬ ಅಂಶ ಮಸೂದೆಯಲ್ಲಿದೆ. ಇದು ಸರಿಯಲ್ಲ. ದೇವಸ್ಥಾನ ಒಡೆಯುವುದು ಸದ್ಭಾವನೆಯೆ? ಆ ಅಂಶವನ್ನು ಮಸೂದೆಯಿಂದ ಕೈಬಿಡಬೇಕು' ಎಂದು ಆಗ್ರಹಿಸಿದರು.

ಜೆಡಿಎಸ್‌ನ ಬಂಡೆಪ್ಪ ಕಾಶೆಂಪೂರ ಮಾತನಾಡಿ, 'ಸುಪ್ರೀಂಕೋರ್ಟ್ ನಿರ್ದೇಶನ ನೀಡಿ ಹಲವು ವರ್ಷಗಳು ಕಳೆದಿವೆ. ಬಿಜೆಪಿ ಸರ್ಕಾರ ಈಗ ಪ್ರಚಾರಕ್ಕಾಗಿ ಈ ರೀತಿ ಮಾಡುತ್ತಿದೆ. ಹಿಂದೆ ತೆರವು ಮಾಡಿರುವ ಎಲ್ಲ ಧಾರ್ಮಿಕ ಕಟ್ಟಡಗಳನ್ನೂ ಪುನರ್ ನಿರ್ಮಾಣ ಮಾಡಬೇಕು' ಎಂದು ಒತ್ತಾಯಿಸಿದರು.

'ವಿದೇಶಗಳಿಂದ ಬಂದವರು ಗುಡಿ, ಗುಂಡಾರಗಳನ್ನು ಒಡೆದರು ಎಂಬ ಮಾತನ್ನು ಹಿಂದೆ ಓದುತ್ತಿದ್ದೆವು. ಬಿಜೆಪಿ ಸರ್ಕಾರದವರು ದೇವಸ್ಥಾನ ಒಡೆದರು ಎಂಬುದು ಇತಿಹಾಸದ ಭಾಗವಾಗದಿರಲಿ' ಎಂದು ಕಾಂಗ್ರೆಸ್‌ನ ಯು.ಟಿ. ಖಾದರ್ ಹೇಳಿದರು. ಈ ಮಾತು ಬಿಜೆಪಿ ಮತ್ತು ಕಾಂಗ್ರೆಸ್ ಸದಸ್ಯರ ನಡುವೆ ಕೆಲಕಾಲ ಮಾತಿನ ಸಮರಕ್ಕೂ ಕಾರಣವಾಯಿತು.

ಲೋಪ ಸರಿಪಡಿಸಲು ಮಸೂದೆ: ಚರ್ಚೆಗೆ ಉತ್ತರ ನೀಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ. ಮಾಧುಸ್ವಾಮಿ, 'ಸುಪ್ರೀಂಕೋರ್ಟ್ ಆದೇಶವನ್ನು ಪಾಲಿಸುವ ಅಧಿಕಾರಿಗಳ ಅತ್ಯುತ್ಸಾಹದಿಂದ ಈ ಘಟನೆ ನಡೆದಿದೆ. ನಿಮ್ಮ ಕಾಲದಲ್ಲೂ ಹಲವು ದೇವಸ್ಥಾನಗಳ ತೆರವು ನಡೆದಿದೆ. ಅದಕ್ಕೆ ನಿಮ್ಮನ್ನು ಹೊಣೆ ಮಾಡಲಾದೀತೆ' ಎಂದು ಪ್ರಶ್ನಿಸಿದರು.

ಈ ಮಸೂದೆಯು ಕಾನೂನಿನ ವ್ಯಾಪ್ತಿಗೆ ಒಳಪಟ್ಟಿರುವ ಎಲ್ಲ ಅನಧಿಕೃತ ಧಾರ್ಮಿಕ ಕಟ್ಟಡಗಳಿಗೆ ರಕ್ಷಣೆ ನೀಡಲಿದೆ. ಇನ್ನು ಮುಂದೆ ಅನಧಿಕೃತ ಧಾರ್ಮಿಕ ಕಟ್ಟಡಗಳ ನಿರ್ಮಾಣಕ್ಕೆ ಅವಕಾಶ ಇರುವುದಿಲ್ಲ ಎಂದರು.

> **2009ರ ಸುಪ್ರೀಂಕೋರ್ಟ್ ತೀರ್ಪಿಗೆ ಪ್ರಮಾಣಪತ್ರ ಸಲ್ಲಿಸುವ ಕೆಲಸ ಆಗಿರಲಿಲ್ಲ. ಧಾರ್ಮಿಕ ಕಟ್ಟಡಗಳಿಗೆ ರಕ್ಷಣೆ ನೀಡುವ ವಿಚಾರದಲ್ಲಿ ಕಾನೂನಿನಲ್ಲಿ ಇದ್ದ ಕೊರತೆಗಳನ್ನು ಸರಿಪಡಿಸಲು ಈ ಮಸೂದೆ ಮಂಡಿಸಲಾಗಿದೆ**
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ


ವಿಧಾನಸಭೆಯಲ್ಲಿ ಮಂಗಳವಾರ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಮಾತನಾಡಿದರು

ಸಕ್ಷಮ ಪ್ರಾಧಿಕಾರ ರಚನೆಗೆ ಆಗ್ರಹ

'ಧಾರ್ಮಿಕ ಕಟ್ಟಡಗಳ ರಕ್ಷಣೆಗೆ ಪ್ರತಿ ವಿಧಾನಸಭಾ ಕ್ಷೇತ್ರದಲ್ಲೂ ಚುನಾಯಿತ ಪ್ರತಿನಿಧಿಗಳು ಮತ್ತು ಅಧಿಕಾರಿಗಳನ್ನು ಒಳಗೊಂಡ ಸಕ್ಷಮ ಪ್ರಾಧಿಕಾರ ರಚಿಸಬೇಕು' ಎಂಬ ಪ್ರಸ್ತಾವವುಳ್ಳ ಖಾಸಗಿ ಮಸೂದೆಯನ್ನು ಬಿಜೆಪಿಯ ಎಸ್.ಎ. ರಾಮದಾಸ್ ಇದೇ ಸಂದರ್ಭದಲ್ಲಿ ಮಂಡಿಸಿದರು.

ಎಲ್ಲ ಸಲಹೆ ಮತ್ತು ಬೇಡಿಕೆಗಳನ್ನು ನಿಯಮ ರಚನೆ ಸಂದರ್ಭದಲ್ಲಿ ಪರಿಗಣಿಸುವುದಾಗಿ ಮುಖ್ಯಮಂತ್ರಿ ಭರವಸೆ ನೀಡಿದರು.

ಸುದ್ದಿ 2 ನಿಮಿಷ

'27ಕ್ಕೆ 140 ಅಭ್ಯರ್ಥಿಗಳ ಘೋಷಣೆ'

ಶಿವಮೊಗ್ಗ: 'ಮುಂಬರುವ ವಿಧಾನಸಭಾ ಚುನಾವಣೆಗೆ ಜೆಡಿಎಸ್ ಸಿದ್ಧತೆ ಆರಂಭಿಸಿದೆ. ಸೆ.27ರಂದು ರಾಜ್ಯದ 140 ವಿಧಾನಸಭಾ ಕ್ಷೇತ್ರಗಳಿಗೆ ಅಭ್ಯರ್ಥಿಗಳ ಪಟ್ಟಿ ಘೋಷಿಸಲಾಗುವುದು' ಎಂದು ಜೆಡಿಎಸ್ ಮುಖಂಡ ಎಚ್.ಡಿ. ಕುಮಾರಸ್ವಾಮಿ ಹೇಳಿದರು.


ಭದ್ರಾವತಿ ಸಮೀಪದ ಗೋಣಿಬೀಡಿನಲ್ಲಿ ಮಂಗಳವಾರ ಮಾಜಿ ಶಾಸಕ ಎಂ.ಜೆ. ಅಪ್ಪಾಜಿ ಅವರ ಪುತ್ಥಳಿ ಅನಾವರಣಗೊಳಿ ಅವರು ಮಾತನಾಡಿದರು.

'27ರಂದು ಬೆಂಗಳೂರಿನಲ್ಲಿ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ. 140 ವಿಧಾನಸಭಾ ಕ್ಷೇತ್ರಗಳ ಆಕಾಂಕ್ಷಿಗಳು ಭಾಗವಹಿಸುವರು. ಅಲ್ಲಿ ಎಲ್ಲಾ ವಿಚಾರ ಚರ್ಚೆ ಮಾಡುತ್ತೇವೆ' ಎಂದು ವಿವರ ನೀಡಿದರು.

ದೇವಾಲಯ ಧ್ವಂಸ ಪ್ರಕರಣದಲ್ಲಿ ತನ್ನ ತಪ್ಪು ಮುಚ್ಚಿಕೊಳ್ಳಲು ಬಿಜೆಪಿ ದೇವಾಲಯದ ರಕ್ಷಣಾ ಕಾಯ್ದೆ ತರಲು ಹೊರಟಿದೆ. ಒಂದೆಡೆ ಹಿಂದುತ್ವದ ಹೆಸರು ಹೇಳುತ್ತಾ, ಮತ್ತೊಂದೆಡೆ ದೇವಸ್ಥಾನ ಒಡೆಯುತ್ತದೆ. ಮಸೂದೆ ಮಂಡಿಸುವ ಮೊದಲು ಎಚ್ಚೆತ್ತುಕೊಳ್ಳಬೇಕಿತ್ತು ಎಂದು ಕುಟುಕಿದರು.

ವಿಧಾನಸಭಾ ಚುನಾವಣೆಯಲ್ಲಿ ಮಾಜಿ ಶಾಸಕ ಅಪ್ಪಾಜಿ ಗೌಡ ಅವರ ಪತ್ನಿ ಶಾರದಾ ಅಪ್ಪಾಜಿ ಅವರನ್ನು ಜೆಡಿಎಸ್ ಅಭ್ಯರ್ಥಿಯಾಗಿ ಕಣಕ್ಕಿಳಿಸಲಾಗುವುದು. ಈಗಾಗಲೇ ಭದ್ರಾವತಿ ಕ್ಷೇತ್ರದ ಜನರು ನಿರ್ಧಾರ ಮಾಡಿದ್ದಾರೆ. ಜನರ ಭಾವನೆಗಳಿಗೆ ಪಕ್ಷ ಮನ್ನಣೆ ನೀಡುತ್ತದೆ ಎಂದರು.

ವಿಧಾನ ಪರಿಷತ್ ಸದಸ್ಯ ಸಿ.ಎಂ.ಇಬ್ರಾಹಿಂ, 'ದೇವೇಗೌಡರು ರಾಜಕಾರಣದಲ್ಲಿ ಹಲವು ನಾಯಕರನ್ನು ಬೆಳೆಸಿದ್ದಾರೆ. ಇಂದಿನ ಇಳಿವಯಸ್ಸಿನಲ್ಲಿ ಅವರಿಗೆ ನೋವಾಗದಂತೆ ನಡೆಯುವುದು ಎಲ್ಲರ ಕರ್ತವ್ಯ. ಡಿಸೆಂಬರ್ ನಂತರ ಅವರ ಗರಡಿಯಲ್ಲಿ ಬೆಳೆದ ಎಲ್ಲ ಮುಖಂಡರನ್ನೂ ಒಗ್ಗೂಡಿಸಲಾಗುವುದು. ಮುಂದಿನ ಚುನಾವಣೆಯ ನಂತರ ಕುಮಾರಸ್ವಾಮಿ ನೇತೃತ್ವದಲ್ಲಿ ರಾಜ್ಯದಲ್ಲಿ ಕನ್ನಡಿಗರ ಸ್ವಾಭಿಮಾನಿ ಸರ್ಕಾರ ಅಸ್ತಿತ್ವಕ್ಕೆ ಬರಲಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.



'ಅ.2ರೊಳಗೆ ನಾಡಗೀತೆ ಧಾಟಿ ತೀರ್ಮಾನ'

ಬೆಂಗಳೂರು: ಗಾಂಧಿ ಜಯಂತಿಯೊಳಗೆ (ಅ.2) ನಾಡಗೀತೆಯ ಸ್ವರ ಸಂಯೋಜನೆ ಹಾಗೂ ಧಾಟಿ ಬಗ್ಗೆ ತೀರ್ಮಾನ ಕೈಗೊಳ್ಳಲಾಗುವುದು ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನೀಲ್ ಕುಮಾರ್ ತಿಳಿಸಿದರು.


ವಿಧಾನಸಭೆಯಲ್ಲಿ ಮಂಗಳವಾರ ಶೂನ್ಯ ವೇಳೆಯಲ್ಲಿ ಬಿಜೆಪಿಯ ಎಂ.ಪಿ. ಕುಮಾರಸ್ವಾಮಿ ಪ್ರಶ್ನೆಗೆ ಉತ್ತರಿಸಿ, 'ಈ ಬಗ್ಗೆ ವರದಿ ನೀಡಲು ಮೈಸೂರು ಲೀಲಾವತಿ ಹಾಗೂ ದೊಡ್ಡರಂಗೇಗೌಡರ ನೇತೃತ್ವದಲ್ಲಿ 9 ತಜ್ಞರ ಸಮಿತಿಯನ್ನು ಸೆಪ್ಟೆಂಬರ್ 9ರಂದು ರಚಿಸಿ 15 ದಿನಗಳಲ್ಲಿ ವರದಿ ನೀಡಲು ಸೂಚಿಸಲಾಗಿದೆ. ಸಮಿತಿಯ ಮೊದಲ ಸಭೆ ಸೆಪ್ಟೆಂಬರ್ 16ರಂದು ನಡೆದಿದೆ. ಸಮಿತಿ ಕೆಲವೇ ದಿನಗಳಲ್ಲಿ ವರದಿ ನೀಡಲಿದೆ' ಎಂದು ತಿಳಿಸಿದರು.

'ಸಾಲದಲ್ಲಿ ಬಡ್ಡಿ ರಿಯಾಯಿತಿ: ಡಿಸಿಸಿ ಬ್ಯಾಂಕ್ ಜೊತೆ ಶೀಘ್ರ ಸಭೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರೈತರು ಪಹಣಿ ನೀಡಿದರೆ, ಅವರು ಚಿನ್ನಾಭರಣ ಅಡವಿಟ್ಟು ಪಡೆದ ಸಾಲದ ಬಡ್ಡಿಯಲ್ಲಿ ರಿಯಾಯಿತಿ ನೀಡುವ ಕುರಿತಂತೆ ಜಿಲ್ಲಾ ಸಹಕಾರ ಬ್ಯಾಂಕ್‌ಗಳ ಜೊತೆ ಶೀಘ್ರ ಸಭೆ ನಡೆಸಿ ತೀರ್ಮಾನಿಸಲಾಗುವುದು' ಎಂದು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ತಿಳಿಸಿದರು.

ಜೆಡಿಎಸ್‌ನ ಮರಿತಿಬ್ಬೇಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ಕೊಡಗು, ಚಿತ್ರದುರ್ಗ ಮತ್ತು ಬೀದರ್ ಜಿಲ್ಲಾ ಸಹಕಾರ ಬ್ಯಾಂಕ್‌ಗಳಲ್ಲಿ ಚಿನ್ನಾಭರಣದ ಸಾಲ ಪಡೆದ ರೈತರು ಪಹಣಿ ನೀಡಿದರೆ, ನಿಗದಿತ ಬಡ್ಡಿಗಿಂತ ಶೇ 1ರಷ್ಟು ರಿಯಾಯಿತಿ ನೀಡಲಾಗುತ್ತಿದೆ. ರಾಜ್ಯದಲ್ಲಿರುವ ಇತರ ಡಿಸಿಸಿ ಬ್ಯಾಂಕ್‌ಗಳಲ್ಲಿಯೂ ಬಡ್ಡಿ ರಿಯಾಯಿತಿ ಮತ್ತು ಏಕರೂಪದ ಬಡ್ಡಿ ದರ ನಿಗದಿಪಡಿಸುವ ಬಗ್ಗೆ ತೀರ್ಮಾನಿಸಲಾಗುವುದು' ಎಂದು ಭರವಸೆ ನೀಡಿದರು.


ಸೋಮಶೇಖರ್

'ಕೊಡಗು ಜಿಲ್ಲಾ ಸಹಕಾರ ಬ್ಯಾಂಕ್ ಚಿನ್ನಾಭರಣ ಸಾಲಗಳಿಗೆ ಶೇ 8.50 ಬಡ್ಡಿ ವಿಧಿಸುತ್ತಿದ್ದು, ಪಹಣಿ ನೀಡಿದ ರೈತರಿಂದ ಶೇ 7.50ರಷ್ಟು ಬಡ್ಡಿ ಪಡೆಯುತ್ತಿದೆ. ಬೀದರ್ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಬ್ಯಾಂಕ್‌ಗಳು ಚಿನ್ನಾಭರಣ ಸಾಲಗಳಿಗೆ ಶೇ 10 ಬಡ್ಡಿ ವಿಧಿಸುತ್ತಿದ್ದು, ಪಹಣಿ ನೀಡಿದ ರೈತರಿಂದ ಶೇ 9 ರಷ್ಟು ಬಡ್ಡಿ ಪಡೆಯುತ್ತಿವೆ' ಎಂದೂ ಸಚಿವರು ತಿಳಿಸಿದರು.

ಕಾಯ್ದೆ ತಿದ್ದುಪಡಿಗೆ ತೀವ್ರ ವಿರೋಧ: ಕಾಂಗ್ರೆಸ್, ಜೆಡಿಎಸ್ ಸಭಾತ್ಯಾಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮ ಪಂಚಾಯಿತಿ ಸೇರಿದಂತೆ ಸ್ಥಳೀಯ ಸಂಸ್ಥೆಗಳ ಆರ್ಥಿಕ ಪರಿಸ್ಥಿತಿಯ ಲೆಕ್ಕ ಪರಿಶೋಧನೆ ಹೊಣೆಗಾರಿಕೆಯನ್ನು ಆಯಾ ಇಲಾಖೆಗಳಿಗೆ ವಹಿಸಲು 'ಕರ್ನಾಟಕ ಸ್ಥಳೀಯ ನಿಧಿ ಪ್ರಾಧಿಕಾರಗಳ ಆರ್ಥಿಕ ಹೊಣೆಗಾರಿಕೆ ಕಾಯ್ದೆ' ತಿದ್ದುಪಡಿ ಮಸೂದೆ ವಿರೋಧಿಸಿ ಕಾಂಗ್ರೆಸ್ ಮತ್ತು ಜೆಡಿಎಸ್ ಸದಸ್ಯರು ವಿಧಾನ ಪರಿಷತ್ ಕಲಾಪ ಬಹಿಷ್ಕರಿಸಿದರು.

ವಿರೋಧ ಪಕ್ಷಗಳ ತೀವ್ರ ಆಕ್ಷೇಪದ ನಡುವೆಯೇ ಧ್ವನಿಮತದ ಮೂಲಕ ಮಸೂದೆ ಅಂಗೀಕಾರಗೊಂಡಿತು.

ಮುಖ್ಯಮಂತ್ರಿ ಪರವಾಗಿ ಮಸೂದೆ ಮಂಡಿಸಿದ ಸಭಾನಾಯಕ ಕೋಟ ಶ್ರೀನಿವಾಸ ಪೂಜಾರಿ, 'ಇದೊಂದು ಸಣ್ಣ ಪ್ರಮಾಣದ ತಿದ್ದುಪಡಿ ಅಂಗೀಕಾರ ನೀಡಬೇಕು' ಎಂದು ಮನವಿ ಮಾಡಿದರು.

'ಈ ತಿದ್ದುಪಡಿ ಸಣ್ಣದಾಗಿದ್ದರೂ ಪರಿಣಾಮ ಬಹಳ ದೊಡ್ಡದು. ಪಂಚಾಯತ್‌ರಾಜ್ ಸಂಸ್ಥೆಗಳ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಲೆಕ್ಕ ಪರಿಶೋಧನೆ ಜವಾಬ್ದಾರಿಯನ್ನು ರಾಜ್ಯ ಲೆಕ್ಕ ಪರಿಶೋಧನಾ ಇಲಾಖೆ ಮತ್ತು ಮಹಾಲೇಖಪಾಲರಿಂದ (ಸಿಎಜಿ) ತೆಗೆದು ಪಂಚಾಯತ್ ರಾಜ್ ಇಲಾಖೆಗೆ ನೀಡುತ್ತಿರುವುದು ಸರಿಯಲ್ಲ. ಮುಂದಿನ ದಿನಗಳಲ್ಲಿ ಈ ಅಧಿಕಾರ ದುರುಪಯೋಗವಾಗಲಿದೆ. ಸ್ಥಳೀಯ ಸಂಸ್ಥೆಗಳ ಆರ್ಥಿಕ ಪರಿಸ್ಥಿತಿ ಹದಗೆಡಲಿದೆ' ಎಂದು ಕಾಂಗ್ರೆಸ್ಸಿನ ಪಿ.ಆರ್.ರಮೇಶ್ ಆತಂಕ ವ್ಯಕ್ತಪಡಿಸಿದರು. ಕಾಂಗ್ರೆಸ್ಸಿನ ಎ. ನಾರಾಯಣಸ್ವಾಮಿ, ಎಸ್. ಆರ್. ಪಾಟೀಲ, ತಿಪ್ಪೇಸ್ವಾಮಿ, ಮರಿತಿಬ್ಬೇಗೌಡ ಕೂಡಾ ಮಸೂದೆಯನ್ನು ವಿರೋಧಿಸಿದರು.

ಆದರೆ, ಆಡಳಿತ ಪಕ್ಷದ ಮಹಾಂತೇಶ ಕವಟಗಿಮಠ, ತೇಜಸ್ವಿನಿಗೌಡ, ಎನ್. ರವಿಕುಮಾರ್, ಮಸೂದೆಯನ್ನು ಸಮರ್ಥಿಸಿದರು. ಆಡಳಿತ ವಿಕೇಂದ್ರೀಕರಣದ ಜೊತೆಗೆ, ಸ್ಥಳೀಯ ಸಂಸ್ಥೆಗಳ ಸುಧಾರಣೆಗೆ ಮಹತ್ವದ ಹೆಜ್ಜೆ' ಎಂದೂ ಬಣ್ಣಿಸಿದರು.

'ಸಿಎಜಿ ತನ್ನ ಪಾಲಿನ ಕೆಲಸಮಾಡಲಿದೆ. ಇಲಾಖೆ ಆಂತರಿಕವಾಗಿ ಲೆಕ್ಕ ಪರಿಶೋಧನೆ ನಡೆಸಲು ಕೂಡಾ ಮಸೂದೆಯಲ್ಲಿ ಅವಕಾಶ ನೀಡಲಾಗಿದೆ' ಎಂದು ಕೋಟ ಶ್ರೀನಿವಾಸ ಪೂಜಾರಿ ಸಮರ್ಥಿಸಿದರು. ಆದರೆ, ಸಚಿವರ ಉತ್ತರದಿಂದ ಸಮಾಧಾನಗೊಳ್ಳದ ಕಾಂಗ್ರೆಸ್, ಜೆಡಿಎಸ್ ಸದಸ್ಯರು ಸಭಾತ್ಯಾಗ ಮಾಡಿದರು.

ಮಲೆ ಮಹದೇಶ್ವರ ವನ್ಯಧಾಮ ಹುಲಿ ಸಂರಕ್ಷಿತ ಪ್ರದೇಶ ?

ಬೆಂಗಳೂರು: ಗಡಿ ಜಿಲ್ಲೆ ಚಾಮರಾಜನಗರದ ಮಲೆ ಮಹದೇಶ್ವರ ವನ್ಯಧಾಮವನ್ನು ಹುಲಿ ಸಂರಕ್ಷಿತ ಪ್ರದೇಶ ಎಂದು ಘೋಷಿಸಿ ರಾಜ್ಯ ಸರ್ಕಾರ ಶೀಘ್ರದಲ್ಲಿ ಅಧಿಸೂಚನೆ ಹೊರಡಿಸಲಿದೆ ಎಂದು ಅರಣ್ಯ ಇಲಾಖೆ ಮೂಲಗಳು ತಿಳಿಸಿವೆ.

ಹುಲಿ ಸಂರಕ್ಷಿತ ಪ್ರದೇಶ ಎಂದು ಘೋಷಣೆಗೆ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರವು ಒಪ್ಪಿಗೆ ಸೂಚಿಸಿದ್ದು, ರಾಜ್ಯ ಸರ್ಕಾರ ಅಧಿಸೂಚನೆ ಹೊರಡಿಸುವುದಷ್ಟೇ ಬಾಕಿ ಇದೆ.

ಅರಣ್ಯ ಸಚಿವ ಉಮೇಶ ಕತ್ತಿ ಅವರು ಅಧಿಸೂಚನೆ ಹೊರಡಿಸುವ ಸಂಬಂಧ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಮುಖ್ಯಮಂತ್ರಿಗಳ ಗಮನಕ್ಕೆ ತಂದ ಬಳಿಕ, ವಾರದೊಳಗೆ ಅಧಿಸೂಚನೆ ಹೊರ ಬೀಳಲಿದೆ ಎಂದು ತಿಳಿದು ಬಂದಿದೆ.

ಮಲೆ ಮಹದೇಶ್ವರ ವನ್ಯಧಾಮದಲ್ಲಿ 18ರಿಂದ 24 ಹುಲಿಗಳು ಇರಬಹುದು ಎಂದು ಅಂದಾಜಿಸಲಾಗಿದೆ. ಈ ವನ್ಯಧಾಮವು ಹುಲಿ ಸಂರಕ್ಷಿತ ಪ್ರದೇಶ ಎಂದು ಘೋಷಣೆಯಾದರೆ, ಜಿಲ್ಲೆಯ ಮೂರನೇ ಹುಲಿ ಸಂರಕ್ಷಿತ ಪ್ರದೇಶವಾಗಲಿದೆ.

'ಮರಳು ಗಣಿಗಾರಿಕೆಗೆ ಗ್ರಾಮ ಪಂಚಾಯಿತಿ ಅನುಮತಿ'

ಬೆಂಗಳೂರು: 'ಹಳ್ಳ, ತೊರೆಗಳಲ್ಲಿ ಮರಳು ಗಣಿಗಾರಿಕೆ ನಡೆಸಲು ಗ್ರಾಮ ಪಂಚಾಯಿತಿ ಅನುಮತಿ ನೀಡಲು ಅನುಕೂಲವಾಗುವಂತೆ ಮರಳು ನೀತಿ ಸರಳೀಕರಿಸುವ ಕುರಿತಂತೆ ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಲಾಗುವುದು' ಎಂದು ಭೂ ವಿಜ್ಞಾನ ಮತ್ತು ಗಣಿ ಸಚಿವ ಹಾಲಪ್ಪ ಆಚಾರ್ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಜೆಡಿಎಸ್‌ನ ಎಸ್.ಎಲ್. ಭೋಜೇಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಅವರು, 'ಇದರಿಂದ ಗ್ರಾಮೀಣ ಭಾಗದಲ್ಲಿ ಮರಳು ಸಮಸ್ಯೆ ನಿವಾರಣೆಯ ಜೊತೆಗೆ, ಹಲವು ಗೊಂದಲಗಳಿಗೆ ಪರಿಹಾರ ಸಿಗಲಿದೆ' ಎಂದರು.

'ರಾಜ್ಯದಲ್ಲಿ 4.50 ಕೋಟಿ ಟನ್ ಮರಳಿನ ಬೇಡಿಕೆ ಇದೆ. 3.50 ಕೋಟಿ ಟನ್ ಮಾತ್ರ ಉತ್ಪಾದನೆಯಾಗುತ್ತಿದೆ. ಕೊರತೆ ಇರುವ 1 ಕೋಟಿ ಟನ್ ಮರಳು ಉತ್ಪಾದನೆಗೆ ಕಲ್ಲು ಪುಡಿ ಗಣಿಗಾರಿಕೆ ಮತ್ತು ಹಳ್ಳ ತೊರೆಗಳಲ್ಲಿ ಗಣಿಗಾರಿಕೆ ಮಾಡಲು ಅನುಮತಿ ನೀಡಲಾಗಿದೆ. ಕಲ್ಲು ಗಣಿಕಾರಿಕೆಗೆ ಅನುಮತಿ ನೀಡಲು ಜಿಲ್ಲಾಧಿಕಾರಿ ನೇತೃತ್ವದಲ್ಲಿ ಸಮಿತಿ ರಚಿಸಲಾಗಿದೆ' ಎಂದರು.

'ಕಟ್ಟಡ ಕಲ್ಲು ಗಣಿಗಾರಿಕೆಗೆ 4,500, ಅಲಂಕಾರಿಕ ಶಿಲೆಗಣಿ ಗುತ್ತಿಗೆಗೆ 1,714 ಅರ್ಜಿಗಳು ಬಂದಿದ್ದವು. ಅರಣ್ಯ ಹಾಗೂ ಕಂದಾಯ ಇಲಾಖೆಯ ಅನುಮತಿ ಪಡೆಯದ ಕಾರಣಕ್ಕೆ ಅವುಗಳನ್ನು ರದ್ದುಗೊಳಿಸಲಾಗಿತ್ತು. ಹೈಕೋರ್ಟ್ ಆದೇಶದ ಪ್ರಕಾರ 800 ಅರ್ಜಿಗಳಿಗೆ ಅನುಮತಿ ನೀಡಲಾಗಿದೆ' ಎಂದು ವಿವರಿಸಿದರು.

ಕೊಡಗಿನಲ್ಲಿ ಮರಳು ಕೊರತೆ: ಕಾಂಗ್ರೆಸ್ಸಿನ ವೀಣಾ ಅಚ್ಚಯ್ಯ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ಕೊಡಗು ಜಿಲ್ಲೆಯಲ್ಲಿ ನಾಲ್ಕು ಕ್ರಷರ್ ಮಾತ್ರ ಇವೆ. ಅವುಗಳಲ್ಲಿ ಎರಡು ಸಕ್ರಿಯವಾಗಿವೆ. ಮೂರು ಹೊಸ ಕ್ರಷರ್‌ಗೆ ಅವಕಾಶ ನೀಡುವಂತೆ ಮನವಿ ಬಂದಿದೆ. ಮರಳು ತೆಗೆಯಲು 17 ನದಿಗಳ ಬ್ಲಾಕ್‌ಗಳನ್ನು ಗುರುತಿಸಲಾಗಿದೆ. ಅಲ್ಲಿ 68 ಸಾವಿರ ಟನ್ ಮರಳು ತೆಗೆಯಲು ಅನುಮತಿ ನೀಡಲಾಗಿದೆ. ಕೊಡಗಿಗೆ ಬೇರೆ ಬೇರೆ ಜಿಲ್ಲೆಗಳಿಂದ ಎಂ– ಸ್ಯಾಂಡ್ ರವಾನಿಸಲಾಗುತ್ತಿದೆ' ಎಂದು ಸಚಿವರು ಮಾಹಿತಿ ನೀಡಿದರು.

ಮತಾಂತರ ನಿಷೇಧಕ್ಕೆ ಕಾಯ್ದೆ

ಒಂದನೇ ಪುಟದಿಂದ

'ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರು, ಹಿಂದುಳಿದವರು ಮಾತ್ರವಲ್ಲದೆ ಮುಸ್ಲಿಮರನ್ನು ಸಹ ಮತಾಂತರ ಮಾಡಲಾಗುತ್ತಿದೆ. ಈ ಬಗ್ಗೆ ಪ್ರಶ್ನಿಸಿದರೆ ಅತ್ಯಾಚಾರ ಹಾಗೂ ದೌರ್ಜನ್ಯ ಪ್ರಕರಣಗಳನ್ನು ದಾಖಲಿಸುವುದಾಗಿ ಚರ್ಚ್‌ನವರು ಬೆದರಿಕೆ ಒಡ್ಡುತ್ತಿದ್ದಾರೆ. ಇದಕ್ಕೆ ಕಡಿವಾಣ ಹಾಕಬೇಕು' ಎಂದು ಆಗ್ರಹಿಸಿದರು.

ಬಿಜೆಪಿಯ ಕೆ.ಜಿ.ಬೋಪಯ್ಯ, 'ರಾಜ್ಯದಲ್ಲಿ ಮತಾಂತರ ಪಿಡುಗು ವ್ಯಾಪಕವಾಗಿದೆ. ಇದರ ನಿಯಂತ್ರಣಕ್ಕೆ ಕಠಿಣ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದರು.

ಕಾಂಗ್ರೆಸ್‌ನ ಕೆ.ಜೆ.ಜಾರ್ಜ್, 'ಅತ್ಯಾಚಾರ ಪ್ರಕರಣ ದಾಖಲಿಸುತ್ತೇವೆ ಎಂದು ಚರ್ಚ್‌ನವರು ಬೆದರಿಕೆ ಒಡ್ಡುತ್ತಿದ್ದಾರೆ ಎಂಬ ಆರೋಪ ಸರಿಯಲ್ಲ. ಯಾವ ಚರ್ಚ್‌ನವರು ಬೆದರಿಕೆ ಹಾಕಿದ್ದಾರೆ ಎಂಬುದನ್ನು ಬಹಿರಂಗಪಡಿಸಲಿ' ಎಂದು ಆಗ್ರಹಿಸಿದರು.

ಜೆಡಿಎಸ್‌ನ ದೇವಾನಂದ ಚವ್ಹಾಣ್, 'ವಿಜಯಪುರ ಜಿಲ್ಲೆಯ ಬಂಜಾರ ಕಾಲೊನಿಗಳಲ್ಲಿ ಚರ್ಚ್‌ಗಳನ್ನು ನಿರ್ಮಿಸಿ ಜನರ ನೆಮ್ಮದಿ ಹಾಳು ಮಾಡುತ್ತಿದ್ದಾರೆ. ಈ ಬಗ್ಗೆ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದರು.

ಶಾಸಕ ಸಾ.ರಾ.ಮಹೇಶ್ ಹಕ್ಕುಚ್ಯುತಿ ಪ್ರಸ್ತಾವಕ್ಕೆ ಸಚಿವ ಮಾಧುಸ್ವಾಮಿ ಉತ್ತರ

ಶಿಷ್ಟಾಚಾರ ಉಲ್ಲಂಘಿಸಿದ ಅಧಿಕಾರಿ ವಿರುದ್ಧ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸ್ವಚ್ಛ ಮೈಸೂರು ಯೋಜನೆಯ ಬ್ಯಾಗ್ ಖರೀದಿ ಪ್ರಕರಣದ ಬಗ್ಗೆ ತನಿಖೆ ನಡೆಸಲಾಗುವುದು. ಶಿಷ್ಟಾಚಾರ ಉಲ್ಲಂಘಿಸಿದ ಅಧಿಕಾರಿಯ ವಿರುದ್ಧ ಕ್ರಮ ಕೈಗೊಳ್ಳಲಾಗುವುದು' ಎಂದು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ.ಮಾಧುಸ್ವಾಮಿ ಹೇಳಿದರು.

ವಿಧಾನಸಭೆಯಲ್ಲಿ ಮಂಗಳವಾರ ಜೆಡಿಎಸ್‌ನ ಸಾ.ರಾ.ಮಹೇಶ್ ಅವರ ಹಕ್ಕುಚ್ಯುತಿ ಪ್ರಸ್ತಾವಕ್ಕೆ ಉತ್ತರಿಸಿದ ಅವರು, 'ಈ ಪ್ರಕರಣದಲ್ಲಿ ಹಕ್ಕುಚ್ಯುತಿ ಆಗಿಲ್ಲ. ಶಿಷ್ಟಾಚಾರ ಉಲ್ಲಂಘನೆ ಆಗಿದೆ ಅಷ್ಟೇ' ಎಂದು ಸ್ಪಷ್ಟಪಡಿಸಿದರು.

ಕಾಂಗ್ರೆಸ್‌ನ ಕೆ.ಆರ್.ರಮೇಶ್ ಕುಮಾರ್, 'ಮಹೇಶ್ ಅವರ ಪ್ರಾಸ್ತಾವಿಕ ಮಂಡನೆ ಹಕ್ಕುಚ್ಯುತಿ ವ್ಯಾಪ್ತಿಗೆ ಬರುವುದಿಲ್ಲ' ಎಂದರು.


ಮಾಧುಸ್ವಾಮಿ


ಮಹೇಶ್

ಜೆಡಿಎಸ್‌ನ ಎ.ಟಿ.ರಾಮಸ್ವಾಮಿ, 'ನನ್ನನ್ನು ವರ್ಗಾವಣೆ ಮಾಡಿಸಿದ್ದು ಸಾ.ರಾ.ಮಹೇಶ್ ಎಂದು ಹಿಂದಿನ ಜಿಲ್ಲಾಧಿಕಾರಿ ಆರೋಪ ಮಾಡಿದ್ದರು. ಇದು ಹಕ್ಕುಚ್ಯುತಿಯ ಉಲ್ಲಂಘನೆ. ಜತೆಗೆ, 15ನೇ ಹಣಕಾಸು ಆಯೋಗದ ಅನುದಾನವನ್ನು ಮಾರ್ಪಾಡು ಮಾಡಿದ್ದಾರೆ. ಇದಕ್ಕೆ ನಿಯಮಾವಳಿಯಲ್ಲಿ ಅವಕಾಶ ಇಲ್ಲ' ಎಂದರು.

ಸಾ.ರಾ.ಮಹೇಶ್, 'ಸ್ವಚ್ಛ ಮೈಸೂರು ಯೋಜನೆಯಡಿ 14.5 ಲಕ್ಷ ಬ್ಯಾಗ್ ಖರೀದಿ ಮಾಡಲಾಗಿದೆ. ₹4 ಮೊತ್ತದ ಬ್ಯಾಗ್‌ಗೆ ₹69 ಪಾವತಿ ಮಾಡಲಾಗಿದೆ. ಪುರಸಭೆಯ ಯೋಜನೆಗೆ ತಡೆಹಿಡಿದು ಹಿಂದಿನ ಜಿಲ್ಲಾಧಿಕಾರಿಯವರೇ ಈ ಖರೀದಿ ಪ್ರಕ್ರಿಯೆ ನಡೆಸಿದ್ದಾರೆ. ಈ ಮೂಲಕ ನನ್ನ ಹಕ್ಕುಚ್ಯುತಿ ಮಾಡಿದ್ದಾರೆ' ಎಂದು ಆರೋಪಿಸಿದರು.

ಗೂಳಿಹಟ್ಟಿ ಹಕ್ಕುಚ್ಯುತಿ: 'ಆಪರೇಷನ್ ಹಸ್ತ ಹೆಸರಿನಲ್ಲಿ ಸುದ್ದಿ ಪ್ರಕಟಿಸಿರುವ ಕನ್ನಡದ ಪತ್ರಿಕೆಯೊಂದು, ನಾನು ಕಾಂಗ್ರೆಸ್ ಸೇರುತ್ತೇನೆ ಎಂದು ವರದಿ ಮಾಡಿದೆ. ನಾನು ಮಾರಾಟಕ್ಕೆ ಇದ್ದೇನೆ ಎಂದು ಬಿಂಬಿಸುವ ಮೂಲಕ ನನ್ನ ಹಕ್ಕುಚ್ಯುತಿ ಮಾಡಿದೆ' ಎಂದು ಬಿಜೆಪಿಯ ಗೂಳಿಹಟ್ಟಿ ಶೇಖರ್ ಹಕ್ಕುಚ್ಯುತಿ ಪ್ರಸ್ತಾವ ಮಂಡಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, 'ಸುದ್ದಿಯ ಕೊನೆಗೆ ಪ್ರಶ್ನಾರ್ಥಕ ಚಿಹ್ನೆ ಬಳಸುವ ಮೂಲಕ ಹಾಗೂ ಬಲ್ಲ ಮೂಲಗಳಿಂದ ತಿಳಿದುಬಂದಿದೆ ಎಂದು ಹೇಳಿ ವರದಿ ಪ್ರಕಟಿಸುವ ಪರಿಪಾಟ ಹೆಚ್ಚುತ್ತಿದೆ. ಇದರಿಂದ ಶಾಸಕರ ಘನತೆಗೆ ಧಕ್ಕೆ ಆಗುತ್ತದೆ. ಖಚಿತ ಮೂಲಗಳಿದ್ದರೆ ಹೆಸರು ಹಾಕಿ ಮಾಧ್ಯಮಗಳು ವರದಿ ಪ್ರಕಟಿಸಿದರೆ ನಮ್ಮ ಅಭ್ಯಂತರ ಇಲ್ಲ' ಎಂದರು.

ಚುನಾವಣೆಗಳಿಗೆ ಹಸಿರು ನಿಶಾನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಬಾಕಿ ಇರುವ ನಗರ, ಗ್ರಾಮೀಣ ಸ್ಥಳೀಯ ಸಂಸ್ಥೆಗಳು ಹಾಗೂ ಸಹಕಾರ ಸಂಸ್ಥೆಗಳ ಪದಾಧಿಕಾರಿಗಳು, ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಆಯ್ಕೆಗೆ ಚುನಾವಣೆಗಳನ್ನು ನಡೆಸಲು ಮಂಗಳವಾರ ನಡೆದ ಸಂಪುಟ ಸಭೆ ತೀರ್ಮಾನಿಸಿದೆ.

ಸಹಕಾರ ಸಂಘಗಳ ಕಾಯ್ದೆಯಡಿ ನೋಂದಣಿಯಾಗಿರುವ ಸಹಕಾರ ಸಂಘಗಳು, ಸೊಸೈಟಿಗಳು ಮತ್ತು ಸಂಘ, ಸಂಸ್ಥೆಗಳ ಸಾರ್ವತ್ರಿಕ ಚುನಾವಣೆಯನ್ನು ಕೋವಿಡ್ ಕಾರಣದಿಂದ ಡಿಸೆಂಬರ್ ಅಂತ್ಯದವರೆಗೂ ಮುಂದೂಡಲು ಜುಲೈನಲ್ಲಿ ನಿರ್ಧರಿಸಲಾಗಿತ್ತು. ಹಲವು ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆದಿದ್ದರೂ, ಮೇಯರ್ ಹಾಗೂ ಉಪ ಮೇಯರ್, ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಆಯ್ಕೆ ಬಾಕಿ ಇತ್ತು.

'ಗ್ರಾಮ ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ಪಟ್ಟಣ ಪಂಚಾಯಿತಿ, ಪುರಸಭೆ, ನಗರಸಭೆ ಮತ್ತು ಮಹಾನಗರ ಪಾಲಿಕೆಗಳ ಅಧ್ಯಕ್ಷ, ಉಪಾಧ್ಯಕ್ಷ, ಮೇಯರ್ ಮತ್ತು ಉಪ ಮೇಯರ್ ಹಾಗೂ ಇತರ ಪದಾಧಿಕಾರಿಗಳ ಆಯ್ಕೆಗೆ ಬಾಕಿ ಇರುವ ಚುನಾವಣೆಗಳನ್ನು ನಡೆಸಲು ಮಂಗಳವಾರದ ಸಂಪುಟ ಸಭೆಯಲ್ಲಿ ನಿರ್ಧರಿಸಲಾಗಿದೆ' ಎಂದು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಹಕಾರ ಸಂಘಗಳು, ನೋಂದಾಯಿತ ಸೊಸೈಟಿಗಳು, ಸಂಘ, ಸಂಸ್ಥೆಗಳ ಪದಾಧಿಕಾರಿಗಳನ್ನು ಒಳಗೊಂಡಂತೆ ಅಧ್ಯಕ್ಷ, ಉಪಾಧ್ಯಕ್ಷ ಚುನಾವಣೆಗಳನ್ನೂ ನಡೆಸಲು ಸಂಪುಟ ತೀರ್ಮಾನಿಸಿದೆ ಎಂದು ಮಾಹಿತಿ ನೀಡಿದ್ದಾರೆ.

ಕಾಯಿ ಕಟ್ಟುವ ಹಂತದಲ್ಲೇ ಬಾಡಿ ನಿಂತ ಶೇಂಗಾ

ಕೈಕೊಟ್ಟ ಮಳೆ, ಒಣಗುತ್ತಿದೆ ಬೆಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಮುಂಗಾರು ಆರಂಭದಲ್ಲಿ ಚುರುಕಾಗಿ, ಹದವಾಗಿ ಮಳೆಯಾಗಿ ಕೃಷಿಗೆ ಅನುಕೂಲವಾಗಿತ್ತು. ಆದರೆ, ಬಿತ್ತನೆ ನಂತರ ಮಳೆ ಕೈಕೊಟ್ಟಿದ್ದು, ಮಳೆಯಾಶ್ರಿತ ಬೆಳೆಗಳು ಒಣಗುತ್ತಿವೆ. ಇನ್ನು ಮುಂದೆ ಮಳೆ ಬಂದರೂ ಕೆಲವು ಬೆಳೆಗಳು ಚಿಗುರುವುದಿಲ್ಲ ಎಂಬ ಹಂತ ತಲುಪಿವೆ.

ತುಮಕೂರು ಜಿಲ್ಲೆಯಲ್ಲಿ ಪ್ರಮುಖ ವಾಣಿಜ್ಯ ಬೆಳೆ ಶೇಂಗಾ ಬೆಳೆ ನೆಲ ಕಚ್ಚುವ ಹಂತಕ್ಕೆ ತಲುಪಿದೆ. ಪ್ರಮುಖವಾಗಿ ಕಡಲೆ ಕಾಯಿ ಬೆಳೆಯುವ ಪಾವಗಡ, ಶಿರಾ, ಮಧುಗಿರಿ, ಕೊರಟಗೆರೆ ತಾಲ್ಲೂಕು ಬರದ ಛಾಯೆಗೆ ಸಿಲುಕಿದೆ. ಈ ನಾಲ್ಕು ತಾಲ್ಲೂಕುಗಳಲ್ಲಿ ಆಗಸ್ಟ್ ಕೊನೆ ವಾರದಿಂದಲೂ ಮಳೆಯಾಗಿಲ್ಲ.

ಬಿತ್ತನೆಯಾಗಿದ್ದ ಶೇಂಗಾ ಕಾಯಿ ಕಟ್ಟುವ ಹಂತದಲ್ಲೇ ಬಾಡಿ ನಿಂತಿದೆ. ಭೂಮಿಯಲ್ಲಿ ತೇವಾಂಶ ಇಲ್ಲದೆ ಕಾಯಿ ಕಟ್ಟಿಲ್ಲ. ಜಿಲ್ಲೆಯಲ್ಲಿ ಸುಮಾರು ಒಂದು ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಶೇಂಗಾ ಬಿತ್ತನೆಯಾಗಿದ್ದು, ಈ ಬಾರಿ ಬೆಳೆ ರೈತರ ಕೈಸೇರುವುದು ಅನುಮಾನ. ಈಗ ಗಿಡ ಬಾಡಿದ್ದು, ಈ ಹಂತದಲ್ಲಿ ಮಳೆಯಾದರೂ ಕಾಯಿ ಕಟ್ಟುವುದಿಲ್ಲ. ಬಹುತೇಕ ಬೆಳೆಗೆ ಹಾನಿಯಾಗಿದ್ದು, ರೈತರು ತಲೆಮೇಲೆ ಕೈಹೊತ್ತು ಕುಳಿತಿದ್ದಾರೆ.

ಜಿಲ್ಲೆಯ ಕುಣಿಗಲ್, ತುರುವೇಕೆರೆ, ತಿಪಟೂರು, ಚಿಕ್ಕನಾಯಕನಹಳ್ಳಿ, ಗುಬ್ಬಿ ಭಾಗದಲ್ಲಿ ರಾಗಿ ಬೆಳೆ ಒಣಗುತ್ತಿದೆ. ತಕ್ಷಣಕ್ಕೆ ಮಳೆಯಾದರೆ ಅಲ್ಪ ಸ್ವಲ್ಪವಾದರೂ ರಾಗಿ ಕಾಳು ನೋಡಬಹುದು. ಇಲ್ಲವಾದರೆ ಅದೂ ಇಲ್ಲ ಎಂಬ ಆತಂಕವನ್ನು ರೈತರು ವ್ಯಕ್ತಪಡಿಸುತ್ತಿದ್ದಾರೆ.


ತುಮಕೂರಿನ ಪಾವಗಡದಲ್ಲಿ ಕಡಲೆ ಬಳ್ಳಿ ಒಣಗಿರುವುದು

ರಾಮನಗರ ಜಿಲ್ಲೆಯಲ್ಲಿ 70 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ರಾಗಿ ಬಿತ್ತನೆಯಾಗಿದೆ. 15 ದಿನಗಳಿಂದಲೂ ಬಿಸಿಲು ಹೆಚ್ಚಿದ್ದು, ಬೆಳೆ ಒಣಗುತ್ತಿದೆ. ಈಗಾಗಲೇ ಶೇ 15–20ರಷ್ಟು ಬೆಳೆಗೆ ಭಾಗಶಃ ಹಾನಿಯಾಗಿರುವುದಾಗಿ ಕೃಷಿ ಇಲಾಖೆಯ ಅಧಿಕಾರಿಗಳು ಹೇಳುತ್ತಾರೆ. ರಾಮನಗರ ಜಿಲ್ಲೆಯಲ್ಲಿ ಈ ಮುಂಗಾರಿನಲ್ಲಿ ಈವರೆಗೆ 356 ಮಿ.ಮೀ.ಗೆ ಪ್ರತಿಯಾಗಿ 376 ಮಿ.ಮೀ. ಮಳೆ ಸುರಿದಿದೆ. ಇದು ವಾಡಿಕೆಗಿಂತ ಹೆಚ್ಚು ಮಳೆ. ಆದರೆ, ಸೆಪ್ಟೆಂಬರ್‌ನಲ್ಲಿ ಮಳೆಯಾಗಿಲ್ಲ.

ಹತ್ತಿ ಇಳುವರಿಗೆ ಹಾನಿ: ಧಾರವಾಡ, ಗದಗ, ವಿಜಯನಗರ ಹಾಗೂ ಬೆಳಗಾವಿಯ ಹಲವು ಗ್ರಾಮಗಳಲ್ಲಿ ಮಳೆ ಇಲ್ಲದೆ ಮೆಕ್ಕೆಜೋಳ, ಜೋಳದ ತೆನೆಗಳು ಬಾಡುತ್ತಿವೆ. ಹತ್ತಿಯ ಬೆಳವಣಿಗೆ ಮಂದವಾಗಿದೆ. ಧಾರವಾಡ ಜಿಲ್ಲೆಯ ನವಲಗುಂದ ತಾಲ್ಲೂಕಿನಲ್ಲಿ 23 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಹತ್ತಿ ಬಿತ್ತನೆ ಮಾಡಲಾಗಿದೆ. ಈಗ ಮಳೆಯ ಪ್ರಮಾಣ ಕ್ಷೀಣಿಸಿದ್ದರಿಂದ ಹತ್ತಿಯ ಇಳುವರಿಗೆ ಹೊಡೆತ ಬೀಳುವ ಸಾಧ್ಯತೆ ಇದೆ.

ಬೆಳಗಾವಿ ಜಿಲ್ಲೆಯ ತೆಲಸಂಗ ಹೋಬಳಿಯಲ್ಲಿ 5 ಸಾವಿರ ಎಕರೆಯಲ್ಲಿ ಬೆಳೆದಿರುವ ಗೋವಿನ ಜೋಳ ಮಳೆ ಕೊರತೆಯಿಂದ ಒಣಗುತ್ತಿದೆ. ವಿಜಯನಗರ ಜಿಲ್ಲೆಯ ವಿವಿಧ ಗ್ರಾಮಗಳಲ್ಲೂ ಮೆಕ್ಕೆಜೋಳ ಬೆಳೆಯು ಬಾಡುತ್ತಿವೆ. ಗದಗ ಜಿಲ್ಲೆಯಲ್ಲಿ ರೋಗದ ಹಾವಳಿಯಿಂದ ಚೇತರಿಸಿಕೊಂಡ ಶೇಂಗಾ, ಹತ್ತಿಗೆ ಮಳೆ ಕೊರತೆ ಕಾಡಲಾರಂಭಿಸಿದೆ.



> **ಮಳೆ ಇಲ್ಲದೆ ರಾಗಿ ಬೆಳೆಯೆಲ್ಲ ಒಣಗಿಹೋಗಿದೆ. ಜೀವನ ಮಾಡುವುದೇ ಕಷ್ಟ ಆಗಿದೆ. ದನ ಕರುಗಳಿಗೆ ಮೇವಿಲ್ಲ ಎಂಬಂತಾಗಿದೆ**
> **ಸಾಮ್ಯನಾಯ್ಕ,** ಸೋಮನಹಳ್ಳಿ, ತುಮಕೂರು



> **ಒಂದು ವಾರದಲ್ಲಿ ಮಳೆಯಾದ್ರೆ ಪರವಾಗಿಲ್ಲ. ರಾಗಿ, ಜೋಳ ಹಾಕಿದವರು ಬಚಾವ್ ಆಗ್ತೇವೆ. ಇಲ್ಲ ಅಂದ್ರೆ, ಎಲ್ಲ ಸಂಪೂರ್ಣ ಒಣಗಿಹೋಗುತ್ತೆ.**
> **ರಾಜಣ್ಣ,** ಹಿರೀಸಾವೆ, ಹಾಸನ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

https://bit.ly/3lJHzzA

ಮಂಡ್ಯ ಜಿಲ್ಲೆಯ ನಾಗಮಂಗಲ, ಕೆ.ಆರ್.ಪೇಟೆ ತಾಲ್ಲೂಕುಗಳಲ್ಲಿ ಮಳೆ ಕೊರತೆ ಕಾಡುತ್ತಿದ್ದು ಅಪಾರ ಪ್ರಮಾಣದ ರಾಗಿ ಬೆಳೆ ನಾಶವಾಗಿದೆ. ಕೆ.ಆರ್. ಪೇಟೆ ತಾಲ್ಲೂಕಿನಲ್ಲಿ ಶೇ 53.3ರಷ್ಟು, ನಾಗಮಂಗಲ ತಾಲ್ಲೂಕಿನಲ್ಲಿ ಶೇ 55ರಷ್ಟು ಮಳೆ ಕೊರತೆಯಾಗಿದೆ. ಕೆಲವೆಡೆ ಕಾಯಿ ಕಟ್ಟುವ ಹಂತದಲ್ಲಿ ಮಳೆ ಕೊರತೆಯಾಗಿ ಬೆಳೆ ನಾಶವಾಗಿದೆ. ಇನ್ನೂ ಕೆಲವೆಡೆ ನಾಟಿ ಮಾಡಿದ ಆರಂಭದಿಂದಲೇ ಮಳೆ ಬೀಳದ ಕಾರಣ ಸಸಿ ನೆಲದಲ್ಲೇ ಒಣಗಿ ಹೋಗಿದೆ.

ಬಾಡುತ್ತಿರುವ ಜೋಳ: ಹಾಸನ ಜಿಲ್ಲೆಯಲ್ಲಿ ವಾಡಿಕೆ ಮಳೆ ಕಡಿಮೆಯಾದ ಪರಿಣಾಮ ತೇವಾಂಶ ಕೊರತೆಯಿಂದ ಚನ್ನರಾಯಪಟ್ಟಣ, ಅರಸೀಕೆರೆ, ಜಾವಗಲ್ ಭಾಗದಲ್ಲಿ ಮೆಕ್ಕೆಜೋಳ, ರಾಗಿ ಬಾಡಲು ಆರಂಭಿಸಿದೆ.

ಚಿಕ್ಕಮಗಳೂರು ಉಪ ವಿಭಾಗ ಮುಂಚೂಣಿ: 63 ಮಾತ್ರ ಬಾಕಿ

ದಾಖಲೆಯ 3,077 ಪ್ರಕರಣ ವಿಲೇವಾರಿ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಜಿಲ್ಲೆಯ ಚಿಕ್ಕಮಗಳೂರು ಉಪ ವಿಭಾಗಾಧಿಕಾರಿ ಕೋರ್ಟ್ ಅರೆ ನ್ಯಾಯಿಕ ಪ್ರಕರಣಗಳ ವಿಲೇವಾರಿ ನಿಟ್ಟಿನಲ್ಲಿ ರಾಜ್ಯದಲ್ಲಿ ಮುಂಚೂಣಿಯಲ್ಲಿದೆ. ದಾಖಲಾಗಿದ್ದ 3,186 ಪ್ರಕರಣಗಳ ಪೈಕಿ ಈವರೆಗೆ 3,077 ವಿಲೇವಾರಿಯಾಗಿವೆ.

ಪ್ರಕರಣಗಳ ತ್ವರಿತ ವಿಲೇವಾರಿಗೆ ಉಪ ವಿಭಾಗಾಧಿಕಾರಿ ಡಾ.ಎಚ್.ಎಲ್. ನಾಗರಾಜ್ ಅವರು ಆದ್ಯ ಗಮನ ಹರಿಸಿದ್ದಾರೆ. ಸುಧಾರಣೆಗೆ ಒತ್ತು ನೀಡಿದ್ದಾರೆ. ಕಂದಾಯ ನ್ಯಾಯಾಲಯ ಪ್ರಕರಣ ಮಾನಿಟರಿಂಗ್ ವ್ಯವಸ್ಥೆ (ಆರ್‌ಸಿಸಿಎಂಎಸ್) ತಂತ್ರಾಂಶದಲ್ಲಿ 3,077 ಪ್ರಕರಣಗಳ ವಿಲೇವಾರಿ ವಿವರ ಅಪ್‌ಲೋಡ್ ಆಗಿದೆ. 46 ಪ್ರಕರಣಗಳು ತಿರಸ್ಕೃತವಾಗಿವೆ. 63 ಮಾತ್ರ ಬಾಕಿ ಇವೆ.

'ಮ್ಯುಟೇಷನ್', 'ತಹಶೀಲ್ದಾರ್ ಆದೇಶ', 'ಬಗರ್ ಹುಕುಂ ಸಮಿತಿ ನಿರ್ಣಯ', ಪಿಟಿಸಿಎಲ್ (ಪರಿಶಿಷ್ಟ ಜಾತಿ – ಪಂಗಡಗಳ ಭೂ ಪರಭಾರೆ ನಿಷೇಧ) ಕಾಯ್ದೆ ಇತ್ಯಾದಿಗೆ ಸಂಬಂಧಿಸಿದಂತೆ ಪ್ರಕರಣಗಳು ದಾಖಲಾಗಿದ್ದವು. ಪ್ರಕರಣ ನಿಟ್ಟಿನಲ್ಲಿ ಹಲವು ವರ್ಷಗಳಿಂದ ಅಲೆದಾಡಿ ಬೇಸತ್ತಿದ್ದವರು ಈಗ ಪ್ರಕರಣ ವೇಗವಾಗಿ ವಿಲೇವಾರಿಯಾಗಿದ್ದರಿಂದ ನಿಟ್ಟುಸಿರು ಬಿಟ್ಟಿದ್ದಾರೆ.

'3,186 ಪ್ರಕರಣಗಳಲ್ಲಿ ಮ್ಯುಟೇಷನ್‌ಗೆ ಸಂಬಂಧಿಸಿದವು 1,600ಕ್ಕೂ ಹೆಚ್ಚು, ಬಗರ್‌ಹುಕುಂಗೆ ಸಂಬಂಧಿಸಿದವು 600ಕ್ಕೂ ಹೆಚ್ಚು, ತಹಶೀಲ್ದಾರ್ ಆದೇಶಕ್ಕೆ ಸಂಬಂಧಿಸಿದವು 400ಕ್ಕೂ ಹೆಚ್ಚು, ಪಿಟಿಸಿಎಲ್– 50ಕ್ಕೂ ಹೆಚ್ಚು ಇದ್ದವು. ಇದೇ 22, 24 ಮತ್ತು 27ರಂದು ಬಾಕಿ ಪ್ರಕರಣಗಳ ವಿಚಾರಣೆ ಇದೆ' ಎಂದು ಉಪ ವಿಭಾಗಾಧಿಕಾರಿ ಡಾ. ಎಚ್. ಎಲ್. ನಾಗರಾಜ್ 'ಪ್ರಜಾವಾಣಿ'ಗೆ ತಿಳಿಸಿದರು.

ಆನ್‌ಲೈನ್ ಪೋರ್ಟಲ್‌ನಲ್ಲಿ ಪ್ರಕರಣಗಳ ವಿವರ ದಾಖಲು, ಪ್ರಕರಣದ ವಿಚಾರಣೆ ನಿಗದಿಯಾಗಿರುವ ದಿನದ ಮಾಹಿತಿ ಸಂದೇಶವನ್ನು ಸಂಬಂಧ ಪಟ್ಟವರ ಮೊಬೈಲ್ ಫೋನ್‌ಗೆ ರವಾನಿಸುವುದು, ಕಾಲಕಾಲಕ್ಕೆ ಪ್ರಕರಣದ ವಿವರ ಅಪ್‌ಡೇಟ್ ವ್ಯವಸ್ಥೆ ಮೊದಲಾದವನ್ನು ಕಟ್ಟುನಿಟ್ಟಾಗಿ ಕಾರ್ಯಗತ ಗೊಳಿಸಿರುವುದು, ಪಾರದರ್ಶಕತೆಗೆ ಒತ್ತು ನೀಡಿರುವುದು, ಇವೆಲ್ಲವೂ ಪ್ರಕರಣಗಳ ಶೀಘ್ರ ವಿಲೇವಾರಿಗೆ ಅನುಕೂಲವಾಗಿದೆ.

ಪ್ರಜಾವಾಣಿ ವಿಶೇಷ

'ಕಕ್ಷಿದಾರರು, ವಕೀಲರಿಗೆ ಅನುಕೂಲ'

ಎಷ್ಟೋ ವರ್ಷಗಳಿಂದ ಬಾಕಿ ಇದ್ದ ಹಳೆಯ ಪ್ರಕರಣಗಳನ್ನು ಉಪವಿಭಾಗಾಧಿಕಾರಿ ನಾಗರಾಜ್ ಅವರು ವಿಲೇವಾರಿ ಮಾಡಿದ್ದಾರೆ. ಕಕ್ಷಿದಾರರು, ವಕೀಲರು ಎಲ್ಲರಿಗೂ ಒಳಿತಾಗಿದೆ ಎಂದು ವಕೀಲರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ವಿ.ಟಿ. ಥಾಮಸ್ ತಿಳಿಸಿದರು.

'ಖಾತೆ, ಪಹಣಿ ಮೊದಲಾದ ದಾಖಲೆಗಳನ್ನು ಸರಿಪಡಿಸಿದ್ದಾರೆ. ಪ್ರಕರಣಗಳನ್ನು ಕರಾರುವಕ್ಕಾಗಿ ವಿಲೇವಾರಿ ಮಾಡುತ್ತಾರೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.


ವಿ.ಟಿ. ಥಾಮಸ್

'ವಿಳಂಬಕ್ಕೆ ಅವಕಾಶ ನೀಡಲ್ಲ'

'ರೈತರಿಂದ ಅಂಚೆಚೀಟಿ ಶುಲ್ಕ ವಸೂಲಿ ಮಾಡವುದಕ್ಕೆ ಕಡಿವಾಣ ಹಾಕಲಾಗಿದೆ. ನೋಟಿಸ್ ಪತ್ರ ಮುದ್ದಾಂ ತಲುಪಿಸಲು ವ್ಯವಸ್ಥೆ ಮಾಡಲಾಗಿದೆ. ಪ್ರಕರಣ ಪರಿಶೀಲಿಸಿ ಎರಡು ಅಥವಾ ಮೂರು ಬಾರಿ ವಿಚಾರಣೆ ನಡೆಸಲಾಗುವುದು. ಯಾವುದೇ ಪ್ರಕರಣದ ವಿಲೇವಾರಿಗೆ ಗರಿಷ್ಠ 5 ವಾರ ಸಾಕು. ವಿಳಂಬಕ್ಕೆ ಅವಕಾಶ ನೀಡಲ್ಲ' ಎಂದು ಚಿಕ್ಕಮಗಳೂರು ಉಪವಿಭಾಗದ ಉಪ ವಿಭಾಗಾಧಿಕಾರಿ ಡಾ.ಎಚ್.ಎಲ್.ನಾಗರಾಜ್ ಹೇಳಿದರು.


ಡಾ.ಎಚ್.ಎಲ್. ನಾಗರಾಜ್

ದೇಶದಲ್ಲಿ ನೂರು ಕೋಟಿ ಡೋಸ್ ಉತ್ಪಾದನೆ : ಶೃಂಗಸಭೆಯಲ್ಲಿ ಮೋದಿ ಪ್ರಸ್ತಾಪ ಸಂಭವ

ಲಸಿಕೆ ಉತ್ಪಾದನೆ: 'ಕ್ವಾಡ್' ಚರ್ಚೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್ ಲಸಿಕೆಗಳನ್ನು ರಫ್ತು ಮಾಡಲು ಭಾರತ ಸಿದ್ಧತೆ ನಡೆಸಿರುವಂತೆಯೇ, ಭಾರತದ 'ಬಯಾಲಾಜಿಕಲ್ ಇ ಲಿಮಿಟೆಡ್'ನಿಂದ 100 ಕೋಟಿ ಡೋಸ್ ಲಸಿಕೆ ಉತ್ಪಾದನೆ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರು ಕ್ವಾಡ್ ಸದಸ್ಯ ರಾಷ್ಟ್ರಗಳಾದ ಅಮೆರಿಕ, ಆಸ್ಟ್ರೇಲಿಯಾ ಮತ್ತು ಜಪಾನ್‌ನ ಮುಖ್ಯಸ್ಥರ ಜೊತೆಗೆ ಚರ್ಚಿಸುವ ಸಂಭವವಿದೆ.

ಅಮೆರಿಕ ಪ್ರವಾಸದ ವೇಳೆ, ವಾಷಿಂಗ್ಟನ್ ಡಿ.ಸಿ.ಯಲ್ಲಿ 24ರಂದು ನಡೆಯಲಿರುವ ಕ್ವಾಡ್ ಸದಸ್ಯ ರಾಷ್ಟ್ರಗಳ ಸಭೆಯಲ್ಲಿ ಪ್ರಧಾನಿ, ಅಮೆರಿಕ ಅಧ್ಯಕ್ಷ ಜೋ ಬೈಡನ್, ಆಸ್ಟ್ರೇಲಿಯಾದ ಪ್ರಧಾನಿ ಸ್ಕಾಟ್ ಮಾರಿಸನ್, ಜಪಾನ್‌ನ ಯೋಷಿಹಿಡೆ ಸುಗಾ ಜೊತೆ ಚರ್ಚಿಸಲಿದ್ದಾರೆ.

ಈ ವರ್ಷದ ಮಾರ್ಚ್ 12ರಂದು ನಡೆದಿದ್ದ ವರ್ಚುವಲ್ ಸಭೆಯಲ್ಲಿ ಈ ಮುಖಂಡರು, ಭಾರತದ ಬಯಾಲಾಜಿಕಲ್ ಇ ಲಿಮಿಟೆಡ್ ಸಂಸ್ಥೆಯ ಉತ್ಪಾದನಾ ಸಾಮರ್ಥ್ಯ ಹೆಚ್ಚಿಸಲು ಅಮೆರಿಕ ಅಭಿವೃದ್ಧಿ ಹಣಕಾಸು ಸಂಸ್ಥೆ ನೆರವು ನೀಡಲಿದೆ ಎಂದು ಸಮ್ಮತಿಸಿದ್ದರು. 'ಜಾನ್ಸನ್ ಅಂಡ್ ಜಾನ್ಸನ್' ಅಭಿವೃದ್ಧಿಪಡಿಸಿರುವ ಲಸಿಕೆಯ 100 ಕೋಟಿ ಡೋಸ್ ಅನ್ನು 2022ರ ಅಂತ್ಯದ ವೇಳೆಗೆ ಉತ್ಪಾದಿಸಬೇಕು. ಇವುಗಳನ್ನು ಇಂಡೊ ಫೆಸಿಫಿಕ್ ವಲಯದ ರಾಷ್ಟ್ರಗಳಿಗೆ ಪೂರೈಸುವುದು ಗುರಿಯಾಗಿದೆ.

ಲಸಿಕೆ ಉತ್ಪಾದನೆ, ಕೋವಿಡ್ ನೆರವು ಸೇರಿದಂತೆ ವಿವಿಧ ವಿಷಯಗಳನ್ನು ಸಭೆ ಬಳಿಕ ಪ್ರಕಟಿಸುವ ಸಂಭವವಿದೆ ಎಂದು ಬೈಡನ್ ಆಡಳಿತದ ಹಿರಿಯ ಅಧಿಕಾರಿಯೊಬ್ಬರು ವಾಷಿಂಗ್ಟನ್ ಡಿ.ಸಿ.ಯಲ್ಲಿ ಪತ್ರಕರ್ತರಿಗೆ ತಿಳಿಸಿದರು.

ಕೋವಿಡ್ -19 ವಿರುದ್ಧ ತಾನು ಅಭಿವೃದ್ಧಿಪಡಿಸಿರುವ ಲಸಿಕೆಯನ್ನು ಪೂರೈಸಲು ಚೀನಾ ಮಾಡುತ್ತಿದ್ದ ಪ್ರಯತ್ನವನ್ನು ತಡೆಯಲು ಕ್ವಾಡ್ ಸದಸ್ಯ ರಾಷ್ಟ್ರಗಳು ಒಗ್ಗೂಡಿವೆ.

ದೇಶಿಯವಾಗಿ ತಯಾರಿಸಲಾದ 107.15 ಲಕ್ಷ ಡೋಸ್ ಲಸಿಕೆಯನ್ನು ಮೋದಿ ನೇತೃತ್ವದ ಸರ್ಕಾರ ಈ ವರ್ಷದ ಏಪ್ರಿಲ್ 22ರವರೆಗೆ ವಿವಿಧ ದೇಶಗಳಿಗೆ ಪೂರೈಸಿದೆ. ಹೆಚ್ಚುವರಿಯಾಗಿ 357.92 ಲಕ್ಷ ಡೋಸ್ ಲಸಿಕೆಯನ್ನು ವಾಣಿಜ್ಯವಾಗಿ ರಫ್ತು ಮಾಡಿದ್ದು, 198.628 ಲಕ್ಷ ಡೋಸ್ ಲಸಿಕೆಯನ್ನು ಕೋವ್ಯಾಕ್ಸ್ ಒಪ್ಪಂದದ ಅನುಸಾರ ನೆರವು ನೀಡಲಾಗಿದೆ.

'ಮಕ್ಕಳ ಕೋವಾಕ್ಸಿನ್ ಪ್ರಯೋಗ ಪೂರ್ಣ'

ಹೈದರಾಬಾದ್ (ಪಿಟಿಐ): ಭಾರತ್ ಬಯೋಟೆಕ್ ಕೋವಿಡ್ -19 ಲಸಿಕೆಯ 2/3 ಹಂತದ ಪ್ರಯೋಗಗಳನ್ನು ಪೂರ್ಣಗೊಳಿಸಿದ್ದು, 18 ವರ್ಷದೊಳಗಿನ ಮಕ್ಕಳಿಗೆ ಕೋವಾಕ್ಸಿನ್ ನೀಡಲು ಮುಂದಿನ ವಾರದೊಳಗೆ ಡಿಸಿಜಿಐಗೆ ದತ್ತಾಂಶ ಸಲ್ಲಿಸುವ ನಿರೀಕ್ಷೆಯಿದೆ ಎಂದು ಭಾರತ್ ಬಯೋಟೆಕ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಕೃಷ್ಣ ಎಲ್ಲ ಮಂಗಳವಾರ ಇಲ್ಲಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಕ್ಕಳ ಕೋವಾಕ್ಸಿನ್ 2/3 ಹಂತದ ಪ್ರಯೋಗಗಳನ್ನು ಪೂರ್ಣಗೊಳಿಸಿದೆ. ದತ್ತಾಂಶದ ವಿಶ್ಲೇಷಣೆ ನಡೆಯುತ್ತಿದೆ. ಮುಂದಿನ ವಾರದೊಳಗೆ ನಾವು ದತ್ತಾಂಶವನ್ನು ನಿಯಂತ್ರಕರಿಗೆ ಸಲ್ಲಿಸುತ್ತೇವೆ ಎಂದರು.

ಕೋವಿಶೀಲ್ಡ್ ಅಮಾನ್ಯ: ಎಚ್ಚರಿಕೆ

ಒಂದನೇ ಪುಟದಿಂದ

ಕೋವಿಶೀಲ್ಡ್ ಲಸಿಕೆಯು ಬ್ರಿಟನ್ ಪರವಾನಗಿ ನೀಡಿ, ಭಾರತದಲ್ಲಿ ತಯಾರಾಗುತ್ತಿರುವ ಉತ್ಪನ್ನವಾಗಿದೆ. ಬ್ರಿಟನ್ ಸರ್ಕಾರದ ವಿನಂತಿ ಮೇರೆಗೆ ಆ ದೇಶಕ್ಕೆ ಲಸಿಕೆಯ 50 ಲಕ್ಷ ಡೋಸ್‌ಗಳನ್ನು ಕಳುಹಿಸಲಾಗಿದೆ. ಈ ಲಸಿಕೆಯನ್ನು ಅಲ್ಲಿನ ರಾಷ್ಟ್ರೀಯ ಆರೋಗ್ಯ ವ್ಯವಸ್ಥೆಯ ಅಡಿಯಲ್ಲಿ ಜನರಿಗೆ ಹಾಕಲಾಗುತ್ತಿದೆ. ಹಾಗಿರುವಾಗ, ಭಾರತೀಯರು ಕೋವಿಶೀಲ್ಡ್ ಲಸಿಕೆ ಹಾಕಿಕೊಂಡಿರುವುದಕ್ಕೆ ಮಾನ್ಯತೆ ಇಲ್ಲ ಎಂಬುದು ತಾರತಮ್ಯವಾಗುತ್ತದೆ. ಭಾರತದಿಂದ ಬ್ರಿಟನ್‌ಗೆ ಹೋಗುವ ಪ್ರವಾಸಿಗರ ಮೇಲೆ ಅದು ಪರಿಣಾಮ ಉಂಟು ಮಾಡುತ್ತದೆ ಎಂದು ಶೃಂಗ್ಲಾ ವಿವರಿಸಿದ್ದಾರೆ.

ಬ್ರಿಟನ್ ಅನುಮೋದನೆ ನೀಡಿರುವ ಲಸಿಕೆಗಳ ಪಟ್ಟಿಯಲ್ಲಿ ಭಾರತದಲ್ಲಿ ತಯಾರಾದ ಲಸಿಕೆಗಳು ಸೇರಿಲ್ಲ.

24ಕ್ಕೆ ಮೋದಿ–ಬೈಡನ್ ಚರ್ಚೆ



ಜೋ ಬೈಡನ್



ಮೋದಿ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಮತ್ತು ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರು ಸೆ. 24ರಂದು ವಾಷಿಂಗ್ಟನ್‌ನಲ್ಲಿ ಮುಖಾಮುಖಿಯಾಗಲಿದ್ದು, ಉಭಯ ದೇಶಗಳ ನಡುವೆ ದ್ವಿಪಕ್ಷೀಯ ಬಾಂಧವ್ಯವೃದ್ಧಿ ಕುರಿತು ಚರ್ಚಿಸಲಿದ್ದಾರೆ.

ವಾಣಿಜ್ಯ ವಹಿವಾಟು, ಬಂಡವಾಳ ಹೂಡಿಕೆ, ರಕ್ಷಣಾ ಕ್ಷೇತ್ರ ಮತ್ತು ಭದ್ರತೆ ಕುರಿತ ವಿಷಯಗಳೂ ಭೇಟಿ ಸಂದರ್ಭದಲ್ಲಿ ಚರ್ಚೆ ಆಗುವ ಸಾಧ್ಯತೆ ಇದೆ ಎಂದು ವಿದೇಶಾಂಗ ಸಚಿವಾಲಯದ ಕಾರ್ಯದರ್ಶಿ ವರ್ಧನ್ ಶ್ರೀಂಗ್ಲಾ ಮಂಗಳವಾರ ತಿಳಿಸಿದರು.

ಪ್ರಧಾನಿ ಮೋದಿ ಅವರು ಅಮೆರಿಕ ಪ್ರವಾಸಕ್ಕಾಗಿ ಬುಧವಾರ ತೆರಳಲಿದ್ದು, ಭಾನುವಾರ ವಾಪಸಾಗುವರು. ಪ್ರಧಾನಿ ನೇತೃತ್ವದ ಈ ನಿಯೋಗದಲ್ಲಿ ವಿದೇಶಾಂಗ ಸಚಿವ ಎಸ್.ಜೈಶಂಕರ್, ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋಭಾಲ್, ವಿದೇಶಾಂಗ ಕಾರ್ಯದರ್ಶಿ ಶ್ರೀಂಗ್ಲಾ ಅವರೂ ಇರುವರು.

ಸುದ್ದಿಗೋಷ್ಠಿಯಲ್ಲಿ ಈ ಮಾಹಿತಿ ನೀಡಿದ ಶ್ರೀಂಗ್ಲಾ ಅವರು, ಪ್ರಾದೇಶಿಕ ಮಟ್ಟದ ಬೆಳವಣಿಗೆಗಳ ಜೊತೆಗೆ ಅಫ್ಗಾನಿಸ್ತಾನ ಬೆಳವಣಿಗೆ, ಉಗ್ರ ಚಟುವಟಿಕೆಗಳ ನಿಗ್ರಹ ಕ್ರಮಗಳನ್ನು ಉಭಯ ನಾಯಕರು ಚರ್ಚಿಸುವ ಸಂಭವವಿದೆ.

ಇದೇ ಸಂದರ್ಭದಲ್ಲಿ ಪ್ರಧಾನಿ ಮೋದಿ ಅವರು ಅಮೆರಿಕದ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಅವರನ್ನೂ ಭೇಟಿಯಾಗುವರು.

ಕೋಶಿಯಾರಿ–ಠಾಕ್ರೆ ಪತ್ರ ಸಮರ

ಮುಂಬೈ (ಪಿಟಿಐ): ಸಾಕಿನಾಕ ಅತ್ಯಾಚಾರ ಮತ್ತು ಕೊಲೆ ಪ್ರಕರಣ ಸಂಬಂಧ ರಾಜ್ಯ ವಿಧಾನಸಭೆಯ ವಿಶೇಷ ಅಧಿವೇಶನ ಕರೆಯಲು ಮಹಾರಾಷ್ಟ್ರ ರಾಜ್ಯಪಾಲ ಬಿ.ಎಸ್. ಕೋಶಿಯಾರಿ ಅವರು ತಮಗೆ ಬರೆದಿರುವ ಪತ್ರಕ್ಕೆ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಕಿಡಿಕಾರಿದ್ದಾರೆ. ಪತ್ರಕ್ಕೆ ಖಾರವಾಗಿ ಪ್ರತಿಕ್ರಿಯಿಸಿರುವ ಅವರು, ದೇಶದಲ್ಲಿ ಮಹಿಳೆಯರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯಗಳ ವಿರುದ್ಧ ಚರ್ಚಿಸಲು ಸಂಸತ್ ಅಧಿವೇಶನ ಕರೆಯುವಂತೆ ಕೋಶಿಯಾರಿ ಕೇಂದ್ರಕ್ಕೆ ಪತ್ರ ಬರೆಯಬೇಕು ಎಂದು ಸಲಹೆ ನೀಡಿದ್ದಾರೆ.

ಕೋಶಿಯಾರಿ ಅವರ ತವರು ರಾಜ್ಯವಾದ ಉತ್ತರಾಖಂಡ ಸೇರಿದಂತೆ ಬಿಜೆಪಿ ಆಡಳಿತವಿರುವ ರಾಜ್ಯಗಳಲ್ಲಿ ಮಹಿಳೆಯರ ಮೇಲೆ ನಡೆದ ಅಪರಾಧ ಪ್ರಕರಣಗಳನ್ನು ಅಂಕಿ–ಅಂಶ ಸಮೇತ ರಾಜ್ಯಪಾಲರಿಗೆ ಬರೆದ ಪತ್ರದಲ್ಲಿ ಠಾಕ್ರೆ ಉಲ್ಲೇಖಿಸಿದ್ದಾರೆ. 'ರಾಜ್ಯಪಾಲರ ಇಂತಹ 'ಸೂಚನೆಗಳು' ಹೊಸ ವಿವಾದವನ್ನು ಉಂಟುಮಾಡಬಹುದು. ಇದು ಸಂಸದೀಯ ಪ್ರಜಾಪ್ರಭುತ್ವದ ಕಾರ್ಯವಿಧಾನಗಳಿಗೆ ಹಾನಿಕಾರಕ' ಎಂದುಉದ್ಧವ್ ಅಭಿಪ್ರಾಯಪಟ್ಟಿದ್ದಾರೆ.

'ಸಾಕಿನಾಕ ಪ್ರಕರಣದ ಹಿನ್ನೆಲೆಯಲ್ಲಿ ಮಹಿಳೆಯರ ಸುರಕ್ಷತೆಯ ಬಗ್ಗೆ ಕೋಶಿಯಾರಿ ಅವರು ಹೊಂದಿರುವ ಕಾಳಜಿಯ ಅರಿವಿದೆ. ಆದರೆ ನಿಮ್ಮ ಮನಸ್ಸು ರಾಜಕೀಯ ಕಾರ್ಯಕರ್ತನ ಹಾಗೆ ವರ್ತಿಸುತ್ತಿದೆ. ಹೀಗಾಗಿ ನೀವು ನೀಡಿದ ನಿರ್ದೇಶನವು ವಿವಾದ ಹುಟ್ಟುಹಾಕುತ್ತದೆ' ಎಂದು ಠಾಕ್ರೆ ಉಲ್ಲೇಖಿಸಿದ್ದಾರೆ.

'ರಾಜ್ಯ ಸರ್ಕಾರವನ್ನು ವಿರೋಧಿಸುವವರು ಇಟ್ಟಿರುವ ಬೇಡಿಕೆಯನ್ನೇ ರಾಜ್ಯಪಾಲರು ಇರಿಸುವುದರಿಂದ ಪ್ರಜಾಪ್ರಭುತ್ವ ಕಾರ್ಯವಿಧಾನಗಳಿಗೆ ಹಾನಿಯಾಗುತ್ತದೆ. ಇಂತಹ ಘಟನೆಗಳನ್ನು ನಿಗ್ರಹಿಸಲು ಸರ್ಕಾರ ಕಠಿಣ ಕ್ರಮಗಳನ್ನು ತೆಗೆದುಕೊಂಡಿದೆ' ಎಂದಿದ್ದಾರೆ.

'ಪಕ್ಕದ ಗುಜರಾತಿನಲ್ಲಿ ಎರಡು ವರ್ಷಗಳಲ್ಲಿ 14,229 ಮಹಿಳೆಯರು ನಾಪತ್ತೆಯಾಗಿದ್ದಾರೆ. ನಿತ್ಯ 14 ಮಹಿಳೆಯರು ಅತ್ಯಾಚಾರ ಮತ್ತು ಲೈಂಗಿಕ ಕಿರುಕುಳ ಎದುರಿಸುತ್ತಿದ್ದಾರೆ ಎಂದು ಗುಜರಾತ್ ಪೊಲೀಸರು ಹೇಳಿದ್ದಾರೆ. ಇಷ್ಟು ದೊಡ್ಡ ಸಂಖ್ಯೆಯ ಪ್ರಕರಣಗಳು ವರದಿಯಾಗುತ್ತಿದ್ದರೂ, ಗುಜರಾತ್ ವಿಧಾನಸಭೆಯಲ್ಲಿ ಒಂದು ತಿಂಗಳು ಚರ್ಚೆ ನಡೆಸಬೇಕಿತ್ತು. ಉತ್ತರ ಪ್ರದೇಶದಲ್ಲಿ ಇಂತಹ ಎಷ್ಟೋ ಘಟನೆಗಳು ನಡೆದಿದ್ದರೂ, ಅಲ್ಲಿ ವಿಶೇಷ ಅಧಿವೇಶನಕ್ಕೆ ಬಿಜೆಪಿ ಏಕೆ ಒತ್ತಾಯಿಸಿಲ್ಲ' ಎಂದು ಠಾಕ್ರೆ ಪ್ರಶ್ನಿಸಿದ್ದಾರೆ.

ಈ ತಿಂಗಳ ಆರಂಭದಲ್ಲಿ ಮುಂಬೈನ ಸಾಕಿನಾಕಾ ಪ್ರದೇಶದಲ್ಲಿ ರಸ್ತೆಬದಿಯಲ್ಲಿ ನಿಂತಿದ್ದ ಟೆಂಪೋದಲ್ಲಿ 34 ವರ್ಷದ ಮಹಿಳೆ ಮೇಲೆ ಅತ್ಯಾಚಾರ ಎಸಗಲಾಗಿತ್ತು. ಸಂತ್ರಸ್ತೆಯ ದೇಹದ ಗುಪ್ತ ಭಾಗದ ಮೇಲೆ ಕಬ್ಬಿಣದ ಸಲಾಕೆಯಿದ ಹಲ್ಲೆ ನಡೆಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಮಹಿಳೆ ಮೃತಪಟ್ಟಿದ್ದರು.

ಹಳಸಿದ ಸಂಬಂಧ

ರಾಜಭವನ ಮತ್ತು ಶಿವಸೇನಾ ನೇತೃತ್ವದ ಮಹಾವಿಕಾಸ ಅಘಾಡಿ ಮೈತ್ರಿಕೂಟ ಸರ್ಕಾರದ ನಡುವಿನ ಸಂಬಂಧ ಅಷ್ಟೇನೂ ಉತ್ತಮವಾಗಿಲ್ಲ. ಪರಿಷತ್ ಸದಸ್ಯರಾಗಿ ನಾಮನಿರ್ದೇಶನ ಮಾಡುವಂತೆ ರಾಜ್ಯ ಸರ್ಕಾರ ಕಳುಹಿಸಿದ್ದ 12 ಜನರ ಪಟ್ಟಿಯನ್ನು ರಾಜ್ಯಪಾಲರು ಇನ್ನೂ ಅನುಮೋದಿಸಿಲ್ಲ.

ದೇವಸ್ಥಾನಗಳಿಗೆ ಜನರ ಪ್ರವೇಶಕ್ಕೆ ಅವಕಾಶ ನೀಡುವಂತೆ ಸೂಚಿಸಿ ಹಿಂದಿನ ವರ್ಷ ರಾಜ್ಯಪಾಲರು ಠಾಕ್ರೆ ಅವರಿಗೆ ಪತ್ರ ಬರೆದಿದ್ದರು. 'ಠಾಕ್ರೆ ಅವರು ಜಾತ್ಯತೀತರಾಗಿ ಬದಲಾಗಿದ್ದಾರೆಯೇ' ಎಂದು ಕೋಶಿಯಾರಿ ಪ್ರಶ್ನಿಸಿದ್ದರು. ಇದಕ್ಕೆ ತಿರುಗೇಟು ನೀಡಿದ್ದ ಠಾಕ್ರೆ, 'ಜಾತ್ಯತೀತತೆಯು ಸಂವಿಧಾನದ ಒಂದು ಪ್ರಮುಖ ಅಂಶ. ನೀವು ರಾಜ್ಯಪಾಲರಾಗಿ ಪ್ರಮಾಣವಚನ ಸ್ವೀಕರಿಸುವಾಗ ಸಂವಿಧಾನದ ಮೇಲೆ ಆಣೆ ಮಾಡಿಲ್ಲವೇ' ಎಂದು ಕೇಳಿದ್ದರು.



ಕೋಶಿಯಾರಿ



ಉದ್ಧವ್ ಠಾಕ್ರೆ

ನಿಮ್ಮ (ಕೋಶಿಯಾರಿ) ರಾಜ್ಯ ಉತ್ತರಾಖಂಡದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ ಶೇ 150ರಷ್ಟು ಹೆಚ್ಚು. ಅಲ್ಲಿ ವಿಶೇಷ ಅಧಿವೇಶನ ಕರೆಯಲಾಗಿದೆಯೇ?

ಉದ್ಧವ್ ಠಾಕ್ರೆ, ಮಹಾರಾಷ್ಟ್ರ ಮುಖ್ಯಮಂತ್ರಿ

ಅಫ್ಗನ್: ಮಹಿಳೆಗೆ ಉಪಸಚಿವ ಸ್ಥಾನವೂ ಇಲ್ಲ

ಕಾಬೂಲ್ (ಎಪಿ): ಅಫ್ಗಾನಿಸ್ತಾನದ ಮಧ್ಯಂತರ ಸಚಿವ ಸಂಪುಟಕ್ಕೆ ಉಪ ಸಚಿವರನ್ನು ಮಂಗಳವಾರ ಸೇರ್ಪಡೆ ಮಾಡಲಾಗಿದೆ. ಆದರೆ, ಈ ಬಾರಿಯೂ ಮಹಿಳೆಯರಿಗೆ ಸ್ಥಾನ ನೀಡಲಾಗಿಲ್ಲ. ಈ ತಿಂಗಳ ಆರಂಭದಲ್ಲಿ ಸಚಿವ ಸಂಪುಟ ರಚನೆಯಾದಾಗಲೂ ಮಹಿಳೆಯರಿಗೆ ಅವಕಾಶ ಕೊಟ್ಟಿರಲಿಲ್ಲ.

ತಾಲಿಬಾನ್ ನೇತೃತ್ವದ ಸರ್ಕಾರದ ಕೃತ್ಯಗಳ ಆಧಾರದಲ್ಲಿ ಸಂಘಟನೆಯ ಬಗ್ಗೆ ನಿರ್ಧಾರಕ್ಕೆ ಬರಲಾಗುವುದು ಎಂದು ಅಂತರರಾಷ್ಟ್ರೀಯ ಸಮುದಾಯ ಹೇಳಿತ್ತು. ತಾಲಿಬಾನ್ ನೇತೃತ್ವದ ಸರ್ಕಾರಕ್ಕೆ ಮಾನ್ಯತೆ ನೀಡುವ ವಿಚಾರವು ಮಹಿಳೆಯರು ಮತ್ತು ಅಲ್ಪಸಂಖ್ಯಾತರನ್ನು ಹೇಗೆ ನೋಡಿಕೊಳ್ಳಲಾಗುತ್ತಿದೆ ಎಂಬುದರ ಮೇಲೆ ಅವಲಂಬಿತ ಎಂದು ಹಲವು ದೇಶಗಳು ಹೇಳಿದ್ದವು.

1990ರ ದಶಕದಲ್ಲಿ ತಾಲಿಬಾನ್ ಆಳ್ವಿಕೆ ಇದ್ದಾಗಲೂ ಮಹಿಳೆಯರು ಮತ್ತು ಹೆಣ್ಣು ಮಕ್ಕಳಿಗೆ ಶಾಲೆ, ಕೆಲಸ ಮತ್ತು ಸಾರ್ವಜನಿಕ ಜೀವನದಲ್ಲಿ ಅವಕಾಶ ಇರಲಿಲ್ಲ. ಈ ಬಾರಿ ಹಜಾರಾದಂತಹ ಅಲ್ಪಸಂಖ್ಯಾತ ಸಮುದಾಯಕ್ಕೆ ಪ್ರಾತಿನಿಧ್ಯ ನೀಡಲಾಗಿದೆ. ಮಹಿಳೆಯರಿಗೆ ಮುಂದೆ ಅವಕಾಶ ದೊರೆಯಲಿದೆ ಎಂದು ತಾಲಿಬಾನ್ ಸರ್ಕಾರದ ವಕ್ತಾರ ಝುಬೀವುಲ್ಲಾ ಮುಜಾಹಿದ್ ಹೇಳಿದ್ದಾರೆ.

ಕಮಾಂಡರ್‌ಗಳಿಗೆ ಹುದ್ದೆ

ತಾಲಿಬಾನ್ ಸೇನೆಯ ಕಮಾಂಡರ್‌ಗಳಲ್ಲಿ ಕೆಲವರಿಗೆ ಮಹತ್ವದ ಸ್ಥಾನಗಳನ್ನು ನೀಡಲಾಗಿದೆ. ಮುಲ್ಲಾ ಅಬ್ದುಲ್ ಕಯ್ಯೂಂ ಜಾಕಿರ್ ಅವರನ್ನು ರಕ್ಷಣಾ ಉಪಸಚಿವರಾಗಿ ನೇಮಿಸಲಾಗಿದೆ. ಇನ್ನೊಬ್ಬ ಪ್ರಭಾವಿ ಕಮಾಂಡರ್ ಸದರ್ ಇಬ್ರಾಹಿಂ ಅವರನ್ನು ಗೃಹ ಸಚಿವಾಲಯದ ಉಪಸಚಿವನಾಗಿ ನೇಮಿಸಲಾಗಿದೆ.

ಅಮೆರಿಕ ಬೆಂಬಲಿತ ಅಫ್ಗಾನಿಸ್ತಾನ ಸರ್ಕಾರದ ವಿರುದ್ಧ ಯುದ್ಧ ಸಾರುವಂತೆ ತಾಲಿಬಾನ್ ಮನವೊಲಿಸಿದವರೇ ಇವರು ಎನ್ನಲಾಗುತ್ತಿದೆ.

ಇವರ ನೇಮಕದೊಂದಿಗೆ ಸರ್ಕಾರದಲ್ಲಿ ತೀವ್ರವಾದಿಗಳ ಸಂಖ್ಯೆ ಹೆಚ್ಚಳವಾಗಿದೆ. ಹಖ್ಖಾನಿ ಗುಂಪಿನ ನಾಯಕ ಸಿರಾಜುದ್ದೀನ್ ಹಖ್ಖಾನಿಯನ್ನು ಸಚಿವನಾಗಿ ಈಗಾಗಲೇ ನೇಮಿಸಲಾಗಿದೆ. ಈತನ ಹಖ್ಖಾನಿ ಗುಂಪು ನಾಗರಿಕರ ಮೇಲೆ ಹಲವು ದಾಳಿ ನಡೆಸಿದ ಕುಖ್ಯಾತಿ ಹೊಂದಿದೆ.

'ಅಫ್ಗನ್: ಐಎಸ್, ಅಲ್ ಕೈದಾ ಇಲ್ಲ'

ಕಾಬೂಲ್ (ರಾಯಿಟರ್ಸ್): ಇಸ್ಲಾಮಿಕ್ ಸ್ಟೇಟ್ (ಐ.ಎಸ್) ಮತ್ತು ಅಲ್ ಕೈದಾ ಉಗ್ರರು ಅಫ್ಗಾನಿಸ್ತಾನದಲ್ಲಿ ಇದ್ದಾರೆ ಎಂಬುದಕ್ಕೆ ಯಾವುದೇ ಪುರಾವೆ ಇಲ್ಲ ಎಂದು ತಾಲಿಬಾನ್ ಹೇಳಿದೆ. ಆದರೆ, ಜಲಾಲಾಬಾದ್ ನಗರದಲ್ಲಿ ಇತ್ತೀಚೆಗೆ ನಡೆದ ಬಾಂಬ್ ದಾಳಿಯ ಹೊಣೆಯನ್ನು ಐ.ಎಸ್ ಹೊತ್ತುಕೊಂಡಿತ್ತು.

ಅಲ್‌ಕೈದಾ ಜತೆಗಿನ ನಂಟು ಕಡಿದುಕೊಳ್ಳಬೇಕು ಎಂದು ತಾಲಿಬಾನ್‌ನ ಮೇಲೆ ಅಂತರರಾಷ್ಟ್ರೀಯ ಒತ್ತಡ ಇದೆ. ಅಮೆರಿಕದ ಮೇಲೆ 2001ರ ಸೆಪ್ಟೆಂಬರ್ 11ರಂದು ಅಲ್ ಕೈದಾ ದಾಳಿ ನಡೆಸಿತ್ತು.

ತಾಲಿಬಾನ್ ಮತ್ತು ಐ.ಎಸ್ ನಡುವೆ ಆರ್ಥಿಕ ಮತ್ತು ಸೈದ್ಧಾಂತಿಕವಾದ ಭಿನ್ನಾಭಿಪ್ರಾಯಗಳಿವೆ. ಎರಡೂ ಸಂಘಟನೆಗಳ ನಡುವೆ ಬದ್ಧ ವೈರತ್ವ ಇದೆ. ಹಾಗಾಗಿ, ತಾಲಿಬಾನ್ ವಿರುದ್ಧ ಸರಣಿ ದಾಳಿಗಳನ್ನು ಐ.ಎಸ್ ನಡೆಸಿದೆ.

'ಅಲ್ ಕೈದಾಕ್ಕೆ ಸಂಬಂಧಿಸಿದ ಯಾರು ಕೂಡ ಅಫ್ಗಾನಿಸ್ತಾನದಲ್ಲಿ ಇಲ್ಲ. ಅಫ್ಗಾನಿಸ್ತಾನದಿಂದ ಬೇರೆ ಯಾವುದೇ ದೇಶಕ್ಕೆ ಯಾವುದೇ ರೀತಿಯ ಹಾನಿ ಆಗದು. ಇದಕ್ಕೆ ನಾವು ಬದ್ಧ' ಎಂದು ತಾಲಿಬಾನ್ ವಕ್ತಾರ ಝುಬೀವುಲ್ಲಾ ಮುಜಾಹಿದ್ ಹೇಳಿದ್ದಾರೆ.



ವಾಹನ ದಟ್ಟಣೆ ಮುಂಬೈ ನಾಸಿಕ್ ಬೈಪಾಸ್ ಹೆದ್ದಾರಿಯಲ್ಲಿ ಇರುವ ಗುಂಡಿಗಳಿಂದಾಗಿ ವಾಹನಗಳ ಸಂಚಾರ ವಿಳಂಬವಾಗಿದ್ದು, ಮಂಗಳವಾರ ರಸ್ತೆಯಲ್ಲಿ ವಾಹನಗಳ ದಟ್ಟಣೆ ಕಂಡುಬಂದುದು ಹೀಗೆ –ಪಿಟಿಐ ಚಿತ್ರ

ಸೇವೆಯ ಆರಂಭದಲ್ಲಿ ಮಾತ್ರ ಅನುಮತಿ: 'ಸುಪ್ರೀಂ'

'ಜನ್ಮ ದಿನಾಂಕ ಬದಲಾವಣೆಗೆ ಅವಕಾಶ ಇಲ್ಲ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ನಿವೃತ್ತಿಯ ಅಂಚಿನಲ್ಲಿರುವ ಉದ್ಯೋಗಿಯು, ತನ್ನ ಜನ್ಮ ದಿನಾಂಕವನ್ನು ಬದಲಿಸುವಂತೆ ಸಲ್ಲಿಸಿದ ಮನವಿಯನ್ನು ಪುರಸ್ಕರಿಸುವುದು ಅಸಾಧ್ಯ' ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಹೇಳಿದೆ.

ತನ್ನ ನೌಕರರೊಬ್ಬರ ಜನ್ಮ ದಿನಾಂಕ ತಿದ್ದುಪಡಿಗೆ ಅನುಮತಿ ನೀಡಿ ರಾಜ್ಯ ಹೈಕೋರ್ಟ್ ಹೊರಡಿಸಿದ್ದ ಆದೇಶವನ್ನು ಪ್ರಶ್ನಿಸಿ ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮ ಸಲ್ಲಿಸಿದ್ದ ಮೇಲ್ಮನವಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ಆರ್. ಶಾ ಹಾಗೂ ಎ.ಎಸ್. ಬೋಪಣ್ಣ ಅವರಿದ್ದ ಪೀಠ ಈ ತೀರ್ಪು ನೀಡಿದೆ.

ರಾಜ್ಯ ಸರ್ಕಾರಿ ನೌಕರರ ವಯಸ್ಸನ್ನು ನಿರ್ಧರಿಸಲು ಜಾರಿಗೆ ತರಲಾದ ಕರ್ನಾಟಕ ರಾಜ್ಯ ನೌಕರರ (ವಯಸ್ಸಿನ ನಿರ್ಣಯ) ಕಾಯ್ದೆ–1974 ಅನ್ನು ಅವಲೋಕಿಸಿದ ಪೀಠ, ಯಾವುದೇ ನೌಕರ ಸೇವಾ ಪುಸ್ತಕದಲ್ಲಿ ಅಗತ್ಯ ವಿವರಗಳನ್ನು ನಮೂದಿಸಿದ ಮೂರು ವರ್ಷಗಳೊಳಗೆ ಅಥವಾ ಕಾಯ್ದೆ ಜಾರಿಯಾದ ಒಂದು ವರ್ಷದೊಳಗೆ ಜನ್ಮ ದಿನಾಂಕದಲ್ಲಿ ಬದಲಾವಣೆಗಾಗಿ ಮನವಿ ಸಲ್ಲಿಸಬಹುದು ಎಂದು ಪೀಠ ಅಭಿಪ್ರಾಯಪಟ್ಟಿದೆ.

ಮನವಿ ಸಲ್ಲಿಸಲು ಅನುಸರಿಸಿದ ವಿಳಂಬದ ಆಧಾರದ ಮೇಲೆ ಉದ್ಯೋಗಿಯ ಜನ್ಮ ದಿನಾಂಕದ ಬದಲಾವಣೆಗೆ ಅಥವಾ ತಿದ್ದುಪಡಿಗೆ ಅನುಮತಿ ನೀಡಲಾಗದು. ಸೇವೆಗೆ ಸೇರಿದ 24 ವರ್ಷಗಳ ನಂತರ ಹಾಗೂ ಕಾಯ್ದೆ ಜಾರಿಗೊಂಡು 16 ವರ್ಷಗಳ ನಂತರ ಸಲ್ಲಿಸಲಾದ ಮನವಿಯನ್ನು ಪುರಸ್ಕರಿಸುವುದು ಅಸಾಧ್ಯ ಎಂದು ಪೀಠ ತಿಳಿಸಿದೆ.

ನೌಕರ ತಾನು ಸೇವೆ ಸಲ್ಲಿಸುವ ಸಂಸ್ಥೆಯ ಉದ್ಯೋಗಿಗಳಿಗೆ ಅನ್ವಯವಾಗುವ ಎಲ್ಲ ನಿಯಮಗಳು ಮತ್ತು ನಿಬಂಧನೆಗಳನ್ನು ಅರಿತಿರಬೇಕು. ಕಾನೂನಿನ ತಿಳಿವಳಿಕೆ ಕೊರತೆಯ ಸಬೂಬು ಹೇಳುವ ಮೂಲಕ ಶಾಸನಬದ್ಧ ನಿಬಂಧನೆಗಳಿಂದ ವಿನಾಯಿತಿ ಪಡೆಯಲು ಸಾಧ್ಯವಿಲ್ಲ ಎಂದೂ ಪೀಠ ಹೇಳಿದೆ.

ಇಂತಹ ಮನವಿಯನ್ನು ವಿಳಂಬದ ಆಧಾರದಲ್ಲೇ ತಿರಸ್ಕರಿಸಬಹುದಾಗಿದೆ. ಮೇಲಾಗಿ ನಿವೃತ್ತಿಯ ಅಂಚಿನಲ್ಲಿ ಇರುವವರ ಮನವಿಯನ್ನು ಪರಿಗಣಿಸುವುದು ಅಸಾಧ್ಯ ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

ವಕೀಲರಾದ ಗುರುದಾಸ್ ಕಣ್ಣೂರ, ಚಿನ್ಮಯ್ ದೇಶಪಾಂಡೆ ಹಾಗೂ ಅನಿರುದ್ಧ್ ಸಂಗನೇರಿಯಾ ಅವರು ನಿಗಮದ ಪರ ವಾದ ಮಂಡಿಸಿದರು.



ಗಾಯಗೊಂಡಿದ್ದ ಪೈಲಟ್‌ಗಳಿಗೆ ವೈದ್ಯರು ಪ್ರಾಥಮಿಕ ಚಿಕಿತ್ಸೆ ನೀಡಿದ ಕ್ಷಣ

ಸೇನಾ ಹೆಲಿಕಾಪ್ಟರ್ ಪತನ: ಇಬ್ಬರು ಪೈಲಟ್ ಸಾವು

ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಉಧಂಪುರ್ ಜಿಲ್ಲೆಯ ಪಟ್ನಿಟಾಪ್ ಬಳಿಯ ದಟ್ಟ ಅರಣ್ಯ ಪ್ರದೇಶದಲ್ಲಿ ಸೇನೆಯ ಹೆಲಿಕಾಪ್ಟರ್ ಪತನಗೊಂಡಿದ್ದು ಇಬ್ಬರು ಪೈಲಟ್‌ಗಳು ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.

ಪಟ್ನಿಟಾಪ್ ಪ್ರದೇಶದಲ್ಲಿ ತರಬೇತಿ ನಿರತವಾಗಿದ್ದ ಭಾರತೀಯ ಸೇನೆಯ ಚೀತಾ ಹೆಲಿಕಾಪ್ಟರ್ ಶಿವ್ ಗರ್ ಧರ್ ಪ್ರದೇಶದಲ್ಲಿ ಅಪಘಾತಕ್ಕೀಡಾಯಿತು ಎಂದು ಜಮ್ಮು ಮೂಲದ ರಕ್ಷಣಾ ವಕ್ತಾರರು ತಿಳಿಸಿದ್ದಾರೆ. ಈ ಘಟನೆಯಲ್ಲಿ ಪೈಲಟ್‌ಗಳಾದ ಮೇಜರ್ ರೋಹಿತ್ ಕುಮಾರ್ ಮತ್ತು ಮೇಜರ್ ಅನುಜ್ ರಜಪೂತ್ ಗಾಯಗೊಂಡಿದ್ದರು. ಆದರೆ, ಅವರು ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟರು ಎಂದು ಹೇಳಿದರು.

ಸುಪ್ರೀಂ ಕೋರ್ಟ್‌ಗೆ ರಕ್ಷಣಾ ಸಚಿವಾಲಯ ಮಾಹಿತಿ

ಎನ್‌ಡಿಎ: ಮಹಿಳೆಯರ ಪ್ರವೇಶಕ್ಕೆ ಮೇನಲ್ಲಿ ಅಧಿಸೂಚನೆ

ನವದೆಹಲಿ (ಪಿಟಿಐ): ರಾಷ್ಟ್ರೀಯ ರಕ್ಷಣಾ ಅಕಾಡೆಮಿಗೆ (ಎನ್‌ಡಿಎ) ಮಹಿಳಾ ಅಭ್ಯರ್ಥಿಗಳ ಪ್ರವೇಶ ಪರೀಕ್ಷೆಯ ಅಧಿಸೂಚನೆಯನ್ನು ಮುಂದಿನ ಮೇ ತಿಂಗಳಿನಲ್ಲಿ ಹೊರಡಿಸಲಾಗುತ್ತದೆ. ಮಹಿಳಾ ಅಭ್ಯರ್ಥಿಗಳ ಪ್ರವೇಶಕ್ಕೂ ಮುನ್ನ ಹಲವು ಪೂರ್ವಭಾವಿ ಸಿದ್ಧತೆಗಳನ್ನು ಮಾಡಿಕೊಳ್ಳಬೇಕಿದೆ. ಇದಕ್ಕಾಗಿ ಸಮಯಾವಕಾಶ ಬೇಕು ಎಂದು ರಕ್ಷಣಾ ಸಚಿವಾಲಯವು ಸುಪ್ರೀಂ ಕೋರ್ಟ್‌ಗೆ ಮಾಹಿತಿ ನೀಡಿದೆ.

ಎನ್‌ಡಿಎ ಪ್ರವೇಶ ಮತ್ತು ತರಬೇತಿಯಿಂದ ಮಹಿಳೆಯರನ್ನು ಹೊರಗಿಟ್ಟಿರುವುದು ಲಿಂಗ ತಾರತಮ್ಯ ಮತ್ತು ಸಂವಿಧಾನದ ಉಲ್ಲಂಘನೆ ಎಂದು ವಕೀಲೆ ಖುಷ್ ಕಾಲ್ರಾ ಅವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ವೇಳೆ ಸಚಿವಾಲಯವು ಸುಪ್ರೀಂ ಕೋರ್ಟ್‌ಗೆ ಈ ಮಾಹಿತಿ ನೀಡಿದೆ. ಎನ್‌ಡಿಎಯಲ್ಲಿ ಮಹಿಳಾ ಅಭ್ಯರ್ಥಿಗಳಿಗೆ ತರಬೇತಿ ನೀಡುವುದಾಗಿ ಸರ್ಕಾರ ಈಚೆಗಷ್ಟೇ ಹೇಳಿತ್ತು.

ಎನ್‌ಡಿಎ ಮುಖಾಂತರ ಸೇನೆಯ ಮೂರೂ ಪಡೆಗಳಿಗೆ ಮಹಿಳಾ ಅಭ್ಯರ್ಥಿಗಳನ್ನು ನೇಮಕ ಮಾಡುವ ಮಾತಿಗೆ ಸರ್ಕಾರವು ಬದ್ಧವಾಗಿದೆ. ಮಹಿಳೆಯರಿಗೆ ಎನ್‌ಡಿಎಯಲ್ಲಿ ಪ್ರವೇಶ ನೀಡುವುದಕ್ಕೂ ಮುನ್ನ ಪಠ್ಯಕ್ರಮ, ತರಬೇತಿ ವಿಧಾನ, ಅಗತ್ಯ ಮೂಲಸೌಕರ್ಯಗಳನ್ನು ಸಿದ್ಧಪಡಿಸಿಕೊಳ್ಳಬೇಕಿದೆ ಎಂದು ಸಚಿವಾಲಯವು ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ಪ್ರವೇಶ ಪರೀಕ್ಷೆಗೆ ಹಾಜರಾಗಲು ಮಹಿಳಾ ಅಭ್ಯರ್ಥಿಗಳು ಅಗತ್ಯ ಅರ್ಹತೆಗಳನ್ನು ಹೊಂದಿರಬೇಕಾಗುತ್ತದೆ. ಎತ್ತರ ಮತ್ತು ತೂಕಕ್ಕೆ ಸಂಬಂಧಿಸಿದಂತೆ ಪುರುಷ ಅಭ್ಯರ್ಥಿಗಳಿಗೆ ಈಗಾಗಲೇ ಅರ್ಹತೆಯನ್ನು ಗುರುತಿಸಲಾಗಿದೆ. ಮಹಿಳಾ ಅಭ್ಯರ್ಥಿಗಳಿಗೆ ಇದನ್ನು ಇನ್ನಷ್ಟೇ ನಿಗದಿ ಮಾಡಬೇಕಿದೆ. ಸಶಸ್ತ್ರ ಪಡೆಗಳ ವೈದ್ಯಕೀಯ ಸೇವಾ ನಿರ್ದೇಶನಾಲಯವು ಇದಕ್ಕೆ ಸಂಬಂಧಿಸಿದ ಪ್ರಕ್ರಿಯೆಗೆ ಚಾಲನೆ ನೀಡಿದೆ. ಈ ಅರ್ಹತೆಯನ್ನು ನಿಗದಿ ಮಾಡಿದ ನಂತರವಷ್ಟೇ ಪ್ರವೇಶ ನೀಡಲು ಸಾಧ್ಯ ಎಂದು ಸಚಿವಾಲಯವು ವಿವರಿಸಿದೆ.

ಐಇಡಿ ಬಳಸಿ ಸ್ಫೋಟ ಪ್ರಕರಣ ಏಳು ಕಡೆ ಎನ್‌ಐಎ ದಾಳಿ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದಲ್ಲಿ ಸುಧಾರಿತ ಸ್ಫೋಟಕ ಸಾಧನ (ಐಇಡಿ) ಪತ್ತೆಯಾದ ಹಿಂದೆಯೇ ರಾಷ್ಟ್ರೀಯ ತನಿಖಾ ಸಂಸ್ಥೆಯ (ಎನ್‌ಐಎ) ಅಧಿಕಾರಿಗಳು ಮಂಗಳವಾರ ಏಳು ಕಡೆ ದಾಳಿ ನಡೆಸಿದರು.

ಐಇಡಿ ಪತ್ತೆ ಜೊತೆಗೆ ಲಷ್ಕ್ ಎ ಮುಸ್ತಾಫಾ ಸಂಘಟನೆಯ ಕಮಾಂಡರ್ ಹಿದಾಯತ್ ಉಲ್ಲಾ ಮಲಿಕ್‌ನನ್ನು ಬಂಧಿಸಲಾಗಿತ್ತು.

ವರದಿಗಳ ಪ್ರಕಾರ, ಎನ್‌ಐಎ ಸಿಬ್ಬಂದಿ ಅನಂತನಾಗ್, ಶ್ರೀನಗರ, ಬಾರಾಮುಲ್ಲಾ, ದೊಡಾ, ಕಿಶ್ತ್‌ವಾರ್ ಜಿಲ್ಲೆಗಳಲ್ಲಿ ದಾಳಿ ನಡೆಸಿದ್ದು, ಚುನಾಯಿತ ಪಂಚ್ ಸೇರಿದಂತೆ ಕೆಲವರನ್ನು ಮತ್ತು ವಿದ್ಯುನ್ಮಾನ ಪರಿಕರಗಳನ್ನು ವಶಕ್ಕೆ ಪಡೆದುಕೊಂಡಿದ್ದಾರೆ.


ಉಡುಗೊರೆ ಉಳಿಸಿಕೊಳ್ಳಲು ಅವಕಾಶ

ನವದೆಹಲಿ (ಪಿಟಿಐ): ಐಎಎಸ್, ಐಪಿಎಸ್ ಮತ್ತು ಐಎಫ್‌ಎಸ್ ಅಧಿಕಾರಿಗಳು ಇನ್ನು ಮುಂದೆ ವಿದೇಶಿ ಗಣ್ಯರಿಂದ ಸ್ವೀಕರಿಸಿದ ಉಡುಗೊರೆಗಳನ್ನು ತಮ್ಮ ಬಳಿಯೇ ಇರಿಸಿಕೊಳ್ಳಬಹುದು. ಇದಕ್ಕೆ ಅವಕಾಶ ಕಲ್ಪಿಸುವ ಸಂಬಂಧ 50 ವರ್ಷಗಳ ಹಳೆಯ ನಿಯಮಕ್ಕೆ ತಿದ್ದುಪಡಿ ಮಾಡಿ ಕೇಂದ್ರವು ಅಧಿಕೃತ ಆದೇಶ ಹೊರಡಿಸಿದೆ.

ಸಂಕ್ಷಿಪ್ತ ಸುದ್ದಿ

ಟ್ರಕ್ ಚಾಲಕರಿಗೂ ಚಾಲನಾ ಸಮಯ ನಿಗದಿ ಅಗತ್ಯ: ಗಡ್ಕರಿ


ನವದೆಹಲಿ: 'ರಸ್ತೆ ಅಪಘಾತಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ವಾಣಿಜ್ಯ ಟ್ರಕ್‌ಗಳ ಚಾಲಕರಿಗೂ ಪೈಲಟ್‌ಗಳ ಮಾದರಿಯಲ್ಲಿ ಚಾಲನಾ ಸಮಯವನ್ನು ನಿಗದಿಗೊಳಿಸಬೇಕು ಹಾಗೂ ಟ್ರಕ್‌ಗಳಲ್ಲಿ ನಿದ್ದೆ ಪತ್ತೆ ಹಚ್ಚುವ ಸಂವೇದಕಗಳನ್ನು ಅಳವಡಿಸಬೇಕು' ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಮಂಗಳವಾರ ಹೇಳಿದ್ದಾರೆ.



ನಿತಿನ್ ಗಡ್ಕರಿ

ಈ ಬಗ್ಗೆ ಸರಣಿ ಟ್ವೀಟ್ ಮಾಡಿರುವ ಅವರು, ಚಾಲಕರು ಆಯಾಸರಹಿತವಾಗಿ ವಾಹನ ಚಲಾಯಿಸಲು ಅನುಕೂಲವಾಗುವಂತೆ ವಿಮಾನದ ಪೈಲಟ್‌ಗಳಂತೆಯೇ ಅವರಿಗೂ ನಿರ್ದಿಷ್ಟ ಚಾಲನಾ ಸಮಯವನ್ನು ನಿಗದಿಗೊಳಿಸಬೇಕು. ಇದರಿಂದ ರಸ್ತೆ ಅಪಘಾತಗಳನ್ನು ತಪ್ಪಿಸಬಹುದು. ಈ ನಿಟ್ಟಿನಲ್ಲಿ ಯುರೋಪಿಯನ್ ಮಾನದಂಡಗಳಿಗೆ ಸಮನಾದ ವಾಣಿಜ್ಯಸೇವೆಗಳಿಗೆ ಬಳಸುವ ವಾಹನಗಳಲ್ಲಿ ಆನ್‌ಬೋರ್ಡ್ ಸ್ಲೀಪ್ ಡಿಟೆಕ್ಷನ್ ಸೆನ್ಸರ್‌ಗಳನ್ನು ಅಳವಡಿಸುವ ಕುರಿತು ಕಾರ್ಯ ನಿರ್ವಹಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ' ಎಂದಿದ್ದಾರೆ.

ರಾಜ್‌ಕುಂದ್ರಾ ಬಿಡುಗಡೆ



ಮುಂಬೈ: ಅಶ್ಲೀಲ ಚಿತ್ರ ನಿರ್ಮಾಣ ಪ್ರಕರಣದಲ್ಲಿ ಬಂಧನಕ್ಕೊಳಗಾಗಿದ್ದ ಉದ್ಯಮಿ, ಬಾಲಿವುಡ್ ನಟಿ ಶಿಲ್ಪಾ ಶೆಟ್ಟಿ ಅವರ ಪತಿ ರಾಜ್ ಕುಂದ್ರಾ ಮಂಗಳವಾರ ಬೆಳಿಗ್ಗೆ ಮುಂಬೈ ಜೈಲಿನಿಂದ ಹೊರ ಬಂದರು.

ಇಲ್ಲಿನ ಮ್ಯಾಜಿಸ್ಟ್ರೇಟ್ ನ್ಯಾಯಾಲಯವು ಸೋಮವಾರ ಅವರಿಗೆ ಷರತ್ತುಬದ್ಧ ಜಾಮೀನು ಮಂಜೂರು ಮಾಡಿತ್ತು. ಆರ್ಥರ್ ಜೈಲಿನಿಂದ ಬೆಳಿಗ್ಗೆ 11.30ರ ನಂತರ ಅವರನ್ನು ಬಿಡುಗಡೆ ಮಾಡಲಾಯಿತು ಎಂದು ಜೈಲಿನ ಅಧಿಕಾರಿಗಳು ಹೇಳಿದ್ದಾರೆ.

ಬರ್ಲಿನ್: ಮಾಸ್ಕ್ ಹಾಕಿಕೊಳ್ಳಲು ಹೇಳಿದ್ದಕ್ಕೆ ವಿದ್ಯಾರ್ಥಿ ಹತ್ಯೆ

ಬರ್ಲಿನ್: ಮಾಸ್ಕ್ ಹಾಕದ ಗ್ರಾಹಕರೊಬ್ಬರಿಗೆ ಬಿಯರ್ ಮಾರಾಟ ಮಾಡಲು ನಿರಾಕರಿಸಿದ 20 ವರ್ಷದ ವಿದ್ಯಾರ್ಥಿಯೊಬ್ಬನನ್ನು ಗುಂಡಿಕ್ಕಿ ಹತ್ಯೆ ಮಾಡಿರುವ ಘಟನೆ ನೈರುತ್ಯ ಜರ್ಮನಿಯ ಗ್ಯಾಸ್ ಸ್ಟೇಷನ್‌ವೊಂದರಲ್ಲಿ ನಡೆದಿದೆ ಎಂದು ಸ್ಥಳೀಯ ವಕೀಲರೊಬ್ಬರು ತಿಳಿಸಿದ್ದಾರೆ.

ಶನಿವಾರ ರಾತ್ರಿ ನೈರುತ್ಯ ಜರ್ಮನಿಯ ಗ್ಯಾಸ್ ಸ್ಟೇಷನ್‌ಗೆ ಬಂದಿದ್ದ ವ್ಯಕ್ತಿಯೊಬ್ಬರು ಆರು ಪ್ಯಾಕ್ ಬಿಯರ್ ನೀಡುವಂತೆ ಕೋರಿದರು. 2 ಪ್ಯಾಕ್ ಬಿಯರ್ ಕೌಂಟರ್‌ನಲ್ಲಿ ಇಡುವ ವೇಳೆ ಕ್ಯಾಷಿಯರ್ ಆಗಿ ಕೆಲಸ ಮಾಡುತ್ತಿದ್ದ ವಿದ್ಯಾರ್ಥಿ ಮಾಸ್ಕ್ ಹಾಕಲು ತಿಳಿಸಿದ್ದಾರೆ. ಅಲ್ಲಿಂದ ಹಿಂತಿರುಗಿದ್ದ ಗ್ರಾಹಕ ಒಂದು ತಾಸಿನ ಬಳಿಕ ಮರಳಿ ಸ್ಟೇಷನ್‌ಗೆ ಬಂದಿದ್ದಾನೆ. ಆಗಲೂ ಅವರಿಗೆ ಮಾಸ್ಕ್ ಧರಿಸುವಂತೆ ವಿದ್ಯಾರ್ಥಿ ಹೇಳಿದ್ದಾರೆ. ಇದರಿಂದ ಕೋಪಗೊಂಡ ಗ್ರಾಹಕ ವಿದ್ಯಾರ್ಥಿಯ ತಲೆಗೆ ಗುಂಡಿಕ್ಕಿ ಹತ್ಯೆ ಮಾಡಿದ್ದಾನೆ ಎನ್ನಲಾಗಿದೆ.

ಗೌರಿ ಲಂಕೇಶ್ ಹತ್ಯೆ ಪ್ರಕರಣದ ಆರೋಪ ರದ್ದತಿ

ಹೈಕೋರ್ಟ್ ಆದೇಶ: ತೀರ್ಪು ಕಾಯ್ದಿರಿಸಿದ 'ಸುಪ್ರೀಂ'

ಪ್ರಜಾವಾಣಿ ವಾರ್ತೆ

ನವದೆಹಲಿ: ಪತ್ರಕರ್ತೆ ಗೌರಿ ಲಂಕೇಶ್ ಹತ್ಯೆ ಪ್ರಕರಣದ ಆರೋಪಿ ವಿರುದ್ಧ ಆರೋಪ ರದ್ದುಪಡಿಸಿದ್ದ ಹೈಕೋರ್ಟ್ ಆದೇಶ ಪ್ರಶ್ನಿಸಲಾದ ಮೇಲ್ಮನವಿಯ ವಿಚಾರಣೆಯನ್ನು ಮಂಗಳವಾರ ನಡೆಸಿದ ಸುಪ್ರೀಂ ಕೋರ್ಟ್, ತೀರ್ಪನ್ನು ಕಾಯ್ದಿರಿಸಿದೆ.

ಆರೋಪಿ ಮೋಹನ್ ನಾಯಕ್ ವಿರುದ್ಧ ಕರ್ನಾಟಕ ಸಂಘಟಿತ ಅಪರಾಧ ನಿಯಂತ್ರಣ ಕಾಯ್ದೆ (ಕೋಕಾ) ಅಡಿ ದಾಖಲಿಸಲಾದ ಆರೋಪ ರದ್ದುಗೊಳಿಸಿದ್ದನ್ನು ಪ್ರಶ್ನಿಸಿ ಗೌರಿ ಅವರ ಸೋದರಿ ಕವಿತಾ ಲಂಕೇಶ್ ಸಲ್ಲಿಸಿದ್ದ ಮೇಲ್ಮನವಿಯ ವಿಚಾರಣೆಯನ್ನು ನ್ಯಾಯಮೂರ್ತಿ ಎ.ಎಂ. ಖಾನ್ವಿಲ್ಕರ್ ನೇತೃತ್ವದ ತ್ರಿಸದಸ್ಯ ಪೀಠ ಪೂರ್ಣಗೊಳಿಸಿತು.



ಅರ್ಜಿದಾರರ ಪರ ವಕೀಲ ಹುಝೆಫಾ ಅಹ್ಮದಿ ಹಾಗೂ ಆರೋಪಿ ಪರ ವಕೀಲ ಬಸವಪ್ರಭು ಪಾಟೀಲ ಅವರ ವಾದವನ್ನು ಪೀಠ ಆಲಿಸಿತು.

'ಆರೋಪಿಯು ಪ್ರಸ್ತುತ ಪ್ರಕರಣಕ್ಕಿಂತ ಮೊದಲು ನಡೆದಿರುವ ಅಪರಾಧ ಪ್ರಕರಣಗಳ ಭಾಗವಾಗಿರಲಿಲ್ಲ' ಎಂಬ ವಾದ ಅಪ್ರಸ್ತುತ. ಅಲ್ಲದೆ, ಘಟನೆ ನಡೆದು 4 ವರ್ಷ ಕಳೆದಿದ್ದರೂ ಪ್ರಕರಣ ಕುರಿತ ಆರೋಪಗಳನ್ನು ಅಂತಿಮಗೊಳಿಸಲಾಗಿಲ್ಲ ಎಂದು ಅಹ್ಮದಿ ಪ್ರತಿಪಾದಿಸಿದರು.

ಅಪರಾಧಕ್ಕೆ ಕುಮ್ಮಕ್ಕು ನೀಡಿದವರು ಮತ್ತು ನೇರವಾಗಿ ಭಾಗಿಯಾದವರ ನಡುವೆ ಕೋಕಾ ಕಾಯ್ದೆ ಅಡಿ ವ್ಯತ್ಯಾಸ ಗುರುತಿಸಲಾಗಿದೆ. ಪ್ರಕರಣಕ್ಕೆ ಕುಮ್ಮಕ್ಕು ನೀಡಿದವರನ್ನು ಅಪರಾಧದ ಗುಂಪಿನ ಸದಸ್ಯನಿಗೆ ಸಮ ಎಂದು ಪರಿಗಣಿಸಬಾರದು ಎಂದು ಆರೋಪಿ ಪರ ವಕೀಲ ಪಾಟೀಲ ಹೇಳಿದರು.

'ಒಬ್ಬ ವ್ಯಕ್ತಿಯನ್ನು ಸಂಘಟಿತ ಅಪರಾಧ ಗುಂಪಿನ ಸದಸ್ಯ ಎಂದು ಗುರುತಿಸುವುದು ಸರಿಯೇ?' ಎಂದು ಪ್ರಶ್ನಿಸಿದ ಅವರು, ಆರೋಪಿಯು ಅಪರಾಧದ ಗುಂಪು ನಡೆಸಿರುವ ಕಾನೂನುಬಾಹಿರ ಚಟುವಟಿಕೆಗಳಲ್ಲಿ ಭಾಗವಹಿಸಿದ್ದ ಎಂಬುದಕ್ಕೆ ಯಾವುದೇ ಪುರಾವೆ ಇಲ್ಲ ಎಂದರು.

ಇದಕ್ಕೆ ವಿರೋಧ ವ್ಯಕ್ತಪಡಿಸಿದ ಅಹ್ಮದಿ, ಆರೋಪಿಯು ಇತರ ಆರೋಪಿಗಳಿಗೆ ಆಶ್ರಯ ನೀಡಿದ್ದರಿಂದ, ಸಂಘಟಿತ ಅಪರಾಧದ ಭಾಗ ಎಂದೇ ಪರಿಗಣಿಸಬಹುದು ಎಂದರು.

2017ರ ಸೆಪ್ಟೆಂಬರ್ 5ರಂದು ಬೆಂಗಳೂರಿನ ರಾಜರಾಜೇಶ್ವರಿ ನಗರದ ತಮ್ಮ ನಿವಾಸದೆದುರು ಗೌರಿ ಲಂಕೇಶ್ ಹತ್ಯೆಗೊಳಗಾಗಿದ್ದರು. ಆರೋಪಿ ನಾಯಕ್ ವಿರುದ್ಧ ಪೊಲೀಸರು ಕೋಕಾ ಅಡಿ ಸಲ್ಲಿಸಿದ್ದ ಆರೋಪಗಳನ್ನು ರಾಜ್ಯ ಹೈಕೋರ್ಟ್ ಏಪ್ರಿಲ್ 22ರಂದು ರದ್ದುಗೊಳಿಸಿ ಆದೇಶಿಸಿತ್ತು.

ಮಹಂತ ನರೇಂದ್ರ ಗಿರಿ ಆತ್ಮಹತ್ಯೆ ಪ್ರಕರಣ

ಮೂವರು ಶಿಷ್ಯಂದಿರ ಬಂಧನ

ಲಖನೌ: ಅಖಿಲ ಭಾರತೀಯ ಅಖಾಡ ಪರಿಷತ್ ಅಧ್ಯಕ್ಷ ಮಹಂತ ನರೇಂದ್ರ ಗಿರಿ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಅವರ ಮೂವರು ಶಿಷ್ಯಂದಿರನ್ನು ಪೊಲೀಸರು ಬಂಧಿಸಿದ್ದಾರೆ.

ಬಂಧಿತರನ್ನು ಆನಂದ ಗಿರಿ, ಆದ್ಯ ತಿವಾರಿ ಮತ್ತು ಸಂದೀಪ್ ತಿವಾರಿ ಎಂದು ಗುರುತಿಸಲಾಗಿದೆ. ಆನಂದಗಿರಿಯನ್ನು ಹರಿದ್ವಾರದಲ್ಲಿ ಹಾಗೂ ಇನ್ನಿಬ್ಬರನ್ನು ಪ್ರಯಾಗ್‌ರಾಜ್‌ನಲ್ಲಿ ಪೊಲೀಸರು ಬಂಧಿಸಿದ್ದಾರೆ. ಬಂಧಿತರ ವಿರುದ್ಧ ಆತ್ಮಹತ್ಯೆಗೆ ಪ್ರಚೋದನೆ ನೀಡಿರುವ ಆರೋಪದ ಅಡಿ (ಐಪಿಸಿ ಸೆಕ್ಷನ್ 306ರ ಪ್ರಕಾರ) ಪ್ರಕರಣ ದಾಖಲಿಸಿದ್ದಾರೆ.



ಮಹಂತ ನರೇಂದ್ರ ಗಿರಿ

ಉತ್ತರ ಪ್ರದೇಶದ ಪ್ರಯಾಗ್ ರಾಜ್ ಪಟ್ಟಣದಲ್ಲಿ ಬಘಾಂಬರಿ ಮಠದಲ್ಲಿನ ಕೊಠಡಿಯೊಳಗೆ ನೇಣುಬಿಗಿದ ಸ್ಥಿತಿಯಲ್ಲಿ ನರೇಂದ್ರ ಗಿರಿ ಅವರ ದೇಹ ಪತ್ತೆಯಾಗಿತ್ತು. ಪೊಲೀಸ್ ಮೂಲಗಳ ಪ್ರಕಾರ ಗಿರಿ ಅವರ ಕೊಠಡಿಯಲ್ಲಿ 8 ಪುಟಗಳ ಮರಣ ಪತ್ರ ಪತ್ತೆಯಾಗಿದೆ.

ಈ ಪತ್ರದಲ್ಲಿ ಮಹಾಂತ ಅವರು 'ನನ್ನ ಮೂವರು ಶಿಷ್ಯಂದಿರು ನನಗೆ ಕಿರುಕುಳ ನೀಡುತ್ತಿದ್ದರು. ನಾನು ತುಂಬಾ ಘನತೆ ಮತ್ತು ಗೌರವದಿಂದ ಜೀವನ ನಡೆಸುತ್ತಿದ್ದೆ. ಆದರೆ, ಇತ್ತೀಚೆಗೆ ಶಿಷ್ಯಂದಿರ ಕಿರುಕುಳದಿಂದಾಗಿ ಅವಮಾನದಿಂದ ಬದುಕುವಂತಾಯಿತು' ಎಂದು ಬರೆದಿರುವುದಾಗಿ ಪ್ರಯಾಗ್‌ರಾಜ್‌ನ ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಈ ಪತ್ರದಲ್ಲಿ ತಮಗೆ ಕಿರುಕುಳ ನೀಡಿದ ಮೂವರು ಶಿಷ್ಯಂದಿರ ಹೆಸರನ್ನು ಬರೆದಿರುವುದಾಗಿ ಮೂಲಗಳು ತಿಳಿಸಿವೆ. ಈ ಪತ್ರದ ಆಧಾರದ ಮೇಲೆ ಪೊಲೀಸರು ಶಿಷ್ಯಂದಿರನ್ನು ಬಂಧಿಸಿದ್ದಾರೆ.

ಮಠಕ್ಕೆ ಸಂಬಂಧಿಸಿದ ವಿಚಾರದಲ್ಲಿ ಆನಂದಗಿರಿಯೊಂದಿಗೆ ಭಿನ್ನಾಭಿಪ್ರಾಯ ಹೊಂದಿದ್ದ ಮಹಂತ ನರೇಂದ್ರ ಗಿರಿ, ಇತ್ತೀಚೆಗೆ ಆನಂದಗಿರಿಯನ್ನು ಬಘಾಂಬರಿ ಮಠದಿಂದ ಹೊರ ಹಾಕಿದ್ದರು. ನಂತರ ಆನಂದಗಿರಿ ಅಖಾಡ ಪರಿಷದ್ ಅಧ್ಯಕ್ಷರ ಬಳಿ ಕ್ಷಮೆಯಾಚಿಸಿದ ನಂತರ, ಈ ವಿವಾದ ಇತ್ಯರ್ಥಗೊಂಡಿತ್ತು ಎಂದು ಮೂಲಗಳು ತಿಳಿಸಿವೆ.

ಮಹಾಂತ ನರೇಂದ್ರ ಗಿರಿ ಅವರು, ಮಠದ ಹಿರಿಯರು ಮತ್ತು ರಾಜಕಾರಣಿಗಳೊಂದಿಗೆ ಸಾಕಷ್ಟು ಒಡನಾಟ, ಪ್ರಭಾವವನ್ನು ಹೊಂದಿದ್ದರು. ಸಚಿವರು, ವಿಶೇಷವಾಗಿ ಬಿಜೆಪಿ ನಾಯಕರು ನರೇಂದ್ರ ಗಿರಿಯವರನ್ನು ಭೇಟಿ ಮಾಡಲು ಮತ್ತು ಅವರ ಆಶೀರ್ವಾದ ಪಡೆಯಲು ಮಠದ ಎದುರು ಸಾಲುಗಟ್ಟಿ ನಿಲ್ಲುತ್ತಿದ್ದರು ಎಂದು ಮೂಲಗಳು ತಿಳಿಸಿವೆ.

ತನಿಖೆಗೆ ಎಸ್‌ಐಟಿ ರಚನೆ

ಲಖನೌ: ಮಹಂತ ನರೇಂದ್ರ ಗಿರಿ ಅವರ ಆತ್ಮಹತ್ಯೆ ಪ್ರಕರಣದ ತನಿಖೆಗೆ ವಿಶೇಷ ತನಿಖಾ ದಳವನ್ನು (ಎಸ್‌ಐಟಿ) ರಚಿಸಲಾಗಿದೆ.

ಸಿಬಿಐ ತನಿಖೆಗೆ ಶಿವಸೇನಾ ಒತ್ತಾಯ: ನವದೆಹಲಿ: ಅಖಿಲ ಭಾರತ ಅಖಾಡ ಪರಿಷತ್‌ನ ಅಧ್ಯಕ್ಷ ಮಹಂತ ನರೇಂದ್ರ ಗಿರಿ ಅವರ ನಿಗೂಢ ಸಾವಿನ ಕುರಿತು ಸಿಬಿಐ ತನಿಖೆ ನಡೆಸುವಂತೆ ಶಿವಸೇನಾ ನಾಯಕ ಸಂಜಯ್ ರಾವುತ್ ಆಗ್ರಹಿಸಿದ್ದಾರೆ.

ಸಿಬಿಐಗೆ ವಹಿಸುವಂತೆ ಕೋರಿ ಅರ್ಜಿ: ಅಲಹಾಬಾದ್ (ಪಿಟಿಐ): ಸಾಧು ಮಹಂತ ನರೇಂದ್ರ ಗಿರಿ ಅವರ ಸಾವು ಪ್ರಕರಣವನ್ನು ಸಿಬಿಐಗೆ ವಹಿಸುವಂತೆ ಕೋರಿ ಅಲಹಾಬಾದ್ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಅವರಿಗೆ ಪತ್ರವೊಂದರ ಮುಖೇನ ಅರ್ಜಿಯೊಂದನ್ನು ಕಳುಹಿಸಲಾಗಿದೆ.


ಈ ಕುರಿತು ಮಧ್ಯರಾತ್ರಿಯಲ್ಲಿ ವಕೀಲ ಸುನೀಲ ಚೌಧರಿ ಅವರು ಮುಖ್ಯ ನ್ಯಾಯಮೂರ್ತಿಗಳಿಗೆ ಪತ್ರದ ಮೂಲಕ ಅರ್ಜಿಯನ್ನು ಇ-ಮೇಲ್ ಮಾಡಿದ್ದರು.



ಸುಭಾಷಿತ
ಹೇಡಿಗಳು ಮತ್ತು ಮೂರ್ಖರಷ್ಟೇ ಅದೃಷ್ಟವನ್ನು ಅವಲಂಬಿಸುತ್ತಾರೆ.
-ಸ್ವಾಮಿ ವಿವೇಕಾನಂದ

ಟೀಕಾಕಾರರ ದನಿ ಉಡುಗಿಸಲು ಕಾನೂನು ಜಾರಿ ಸಂಸ್ಥೆಗಳ ದುರ್ಬಳಕೆ

ಮಾಧ್ಯಮ ಸಂಸ್ಥೆಗಳು, ವ್ಯಕ್ತಿಗಳು ಮತ್ತು ಇತರ ಸಂಘಟನೆಗಳ ವಿರುದ್ಧ ಸರ್ಕಾರದ ಇಲಾಖೆಗಳು ಮತ್ತು ಕಾನೂನು ಜಾರಿ ಸಂಸ್ಥೆಗಳ ದಾಳಿ ಮುಂದುವರಿದಿದೆ. ತನ್ನ ಪರವಾಗಿ ಇಲ್ಲದ ಯಾವುದೇ ವ್ಯಕ್ತಿಯ ವಿರುದ್ಧ ಸರ್ಕಾರ ಅಧಿಕಾರ ಬಲವನ್ನು ತೋರಬಹುದು ಎಂಬುದರ ಈ ದಾಳಿಗಳು ಎಲ್ಲರಿಗೂ ನೀಡುವ ಎಚ್ಚರಿಕೆಯಾಗಿದೆ. ಮಾಜಿ ಐಎಎಸ್ ಅಧಿಕಾರಿ ಮತ್ತು ಮಾನವ ಹಕ್ಕುಗಳ ಕಾರ್ಯಕರ್ತ ಹರ್ಷ ಮಂದರ್ ಮತ್ತು ನಟ ಹಾಗೂ ಸಾಮಾಜಿಕ ಕಾರ್ಯಕರ್ತ ಸೋನು ಸೂದ್ ಅವರು ಇಂತಹ ದಾಳಿಗಳ ಇತ್ತೀಚಿನ ಗುರಿಯಾಗಿದ್ದಾರೆ. ಹರ್ಷ ಮಂದರ್ ಅವರಿಗೆ ಸೇರಿದ ಕೆಲವು ಸ್ಥಳಗಳ ಮೇಲೆ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಕಳೆದ ವಾರ ದಾಳಿ ಮಾಡಿ ಶೋಧ ನಡೆಸಿದ್ದಾರೆ. ಹಣ ಅಕ್ರಮ ವರ್ಗಾವಣೆಯ ಆರೋಪವನ್ನು ಅವರ ಮೇಲೆ ಹೊರಿಸಲಾಗಿದೆ. ಸೋನು ಸೂದ್ ಅವರ ಮುಂಬೈನ ಸ್ಥಳ ಮತ್ತು ಅವರ ಜತೆ ಸೇರಿ ಉದ್ಯಮ ನಡೆಸುತ್ತಿರುವ ಲಖನೌ ರಿಯಲ್ ಎಸ್ಟೇಟ್ ಕಂಪನಿಯ ಮೇಲೆ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ಹರ್ಷ ಮಂದರ್ ಅವರು ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಮತ್ತು ಆಡಳಿತ ಪಕ್ಷದ ಟೀಕಾಕಾರರು. ಸೋನು ಸೂದ್ ಅವರು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರನ್ನು ಭೇಟಿಯಾದ ಮರುದಿನವೇ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಶೋಧ ನಡೆಸಿದ್ದಾರೆ. ಸೋನು ಸೂದ್ ಅವರನ್ನು ಆಮ್ ಆದ್ಮಿ ಪಕ್ಷದ ರಾಯಭಾರಿಯಾಗಿ ಕೇಜ್ರಿವಾಲ್ ನೇಮಿಸಿದ್ದಾರೆ.



ಸರ್ಕಾರದ ಟೀಕಾಕಾರರು ಮತ್ತು ರಾಜಕೀಯ ಪ್ರತಿಸ್ಪರ್ಧಿಗಳಿಗೆ ಕಾನೂನು ಜಾರಿ ಸಂಸ್ಥೆಗಳ ಮೂಲಕ ಪಾಠ ಕಲಿಸಲಾಗುವುದು ಎಂಬ ಸಂದೇಶವನ್ನು ಈ ದಾಳಿಗಳು ರವಾನಿಸುತ್ತವೆ

ಆಡಳಿತ ವ್ಯವಸ್ಥೆ, ಅಧಿಕಾರ ಮತ್ತು ಕಾನೂನು ಜಾರಿ ಸಂಸ್ಥೆಗಳನ್ನು ಈ ಹಿಂದಿನ ಸರ್ಕಾರಗಳು ಕೂಡ ದುರ್ಬಳಕೆ ಮಾಡಿಕೊಂಡಿವೆ. ಆದರೆ, ಟೀಕಾಕಾರರು, ಭಿನ್ನಮತೀಯರು ಹಾಗೂ ರಾಜಕೀಯ ಪ್ರತಿಸ್ಪರ್ಧಿಗಳ ವಿರುದ್ಧ ಈ ಬಲವನ್ನು ಇಷ್ಟೊಂದು ವ್ಯವಸ್ಥಿತವಾಗಿ ಈ ಹಿಂದಿನ ಸರ್ಕಾರಗಳು ಬಳಸಿಕೊಂಡಿರಲಿಲ್ಲ. ಕಾನೂನು ಜಾರಿ ಸಂಸ್ಥೆಗಳನ್ನು ಈ ರೀತಿಯಲ್ಲಿ ದುರ್ಬಳಕೆ ಮಾಡಿಕೊಳ್ಳುತ್ತಿರುವುದನ್ನು ಖಂಡಿಸಿ ಸುಮಾರು 700 ಮಂದಿ ಚಿಂತಕರು ಮತ್ತು ಸಾಮಾಜಿಕ ಹೋರಾಟಗಾರರು ಜಂಟಿ ಹೇಳಿಕೆಯನ್ನು ಬಿಡುಗಡೆ ಮಾಡಿದ್ದಾರೆ. 'ಈಗಿನ ಸರ್ಕಾರದ ಟೀಕಾಕಾರರನ್ನು ಹೆದರಿಸುವುದು ಹಾಗೂ ಅವರ ಮೇಲೆ ಒತ್ತಡ ಹೇರುವುದಕ್ಕಾಗಿ ಮತ್ತು ಅವರನ್ನು ಸುಮ್ಮನಾಗಿಸುವುದಕ್ಕಾಗಿಯೇ ಇಂತಹ ದಾಳಿಗಳು ನಡೆಯುತ್ತಿವೆ ಎಂದು ಭಾವಿಸಬೇಕಾಗಿದೆ' ಎಂದು ಈ ಹೇಳಿಕೆಯಲ್ಲಿ ಅಭಿಪ್ರಾಯಪಡಲಾಗಿದೆ. ಸರ್ಕಾರದ ನಡವಳಿಕೆಯನ್ನು ವಿಮರ್ಶಾತ್ಮಕವಾಗಿ ನೋಡಿದ ಹಲವು ಮಾಧ್ಯಮ ಸಂಸ್ಥೆಗಳ ಮೇಲೆ ಕೂಡ ಇತ್ತೀಚಿನ ಕೆಲ ವಾರಗಳಲ್ಲಿ ದಾಳಿಗಳು ನಡೆದಿವೆ. ಮಾಧ್ಯಮ ಸಂಸ್ಥೆಗಳಿಗೆ ಸೇರಿದ ಸ್ಥಳಗಳಲ್ಲಿ ಕಾನೂನು ಜಾರಿ ಸಂಸ್ಥೆಗಳು ನಡೆಸಿದ ಶೋಧದ ಬಗ್ಗೆ ಭಾರತೀಯ ಸಂಪಾದಕರ ಕೂಟವು ಕಳವಳ ವ್ಯಕ್ತಪಡಿಸಿದೆ. ರಾಜಕೀಯ ಪ್ರತಿಸ್ಪರ್ಧಿಗಳು ಮತ್ತು ಅವರ ಸಂಬಂಧಿಕರು ಕೂಡ ಸರ್ಕಾರದ ಈ ನಡವಳಿಕೆಯ ಬಿಸಿ ಅನುಭವಿಸಿದ್ದಾರೆ. ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್, ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ಸಂಬಂಧಿಕರು ಮತ್ತು ಬೆಂಬಲಿಗರು ಕೂಡ ಇಂತಹ ದಾಳಿಗಳಿಗೆ ಒಳಗಾಗಿದ್ದಾರೆ. ಸರ್ಕಾರದ ಟೀಕಾಕಾರರು ಮತ್ತು ರಾಜಕೀಯ ಪ್ರತಿಸ್ಪರ್ಧಿಗಳಿಗೆ ಕಾನೂನು ಜಾರಿ ಸಂಸ್ಥೆಗಳ ಮೂಲಕ ಪಾಠ ಕಲಿಸಲಾಗುವುದು ಎಂಬ ಸಂದೇಶವನ್ನು ಈ ದಾಳಿಗಳು ರವಾನಿಸುತ್ತವೆ.

ಹೀಗೆ ನಡೆಸಲಾದ ದಾಳಿಗಳ ವಿರುದ್ಧ ವ್ಯಾಪಕ ಟೀಕೆಗಳು ವ್ಯಕ್ತವಾಗಿವೆ. ಹಾಗಿದ್ದರೂ ಸರ್ಕಾರ ಹಿಂದೆಯೂ ಹಾಕಿಲ್ಲ ಮತ್ತು ದಾಳಿಗಳು ಅಬಾಧಿತವಾಗಿ ನಡೆಯುತ್ತಲೇ ಇವೆ. ಯಾವುದೇ ರೀತಿಯ ಟೀಕೆ-ಟಿಪ್ಪಣಿಗಳು ಬಂದರೂ ದಾಳಿಗಳು ಮುಂದುವರಿಯಲಿವೆ ಎಂದಾದರೆ, 'ಇದು ಸರ್ಕಾರ ಅಳವಡಿಸಿಕೊಂಡ ನೀತಿಯ ಭಾಗವೇ ಆಗಿದೆ ಎಂದು ಭಾವಿಸಬೇಕಾಗುತ್ತದೆ. ಪ್ರತಿಭಟನಾಕಾರರನ್ನು ಮತ್ತು ವಿಮರ್ಶಕರನ್ನು ಬಂಧಿಸುವ ಪ್ರವೃತ್ತಿಯನ್ನೂ ಸರ್ಕಾರ ತೋರಿದೆ. ಹೀಗೆ ಬಂಧಿಸಲಾದವರ ಮೇಲೆ 'ದೇಶ ವಿರೋಧಿ' ಚಟುವಟಿಕೆಯ ಗಂಭೀರ ಆರೋಪಗಳನ್ನೂ ಹೊರಿಸಲಾಗಿದೆ. ಸರ್ಕಾರದ ಇಂತಹ ನಡವಳಿಕೆಗಳನ್ನು ನ್ಯಾಯಾಲಯಗಳು ಕೂಡ ಟೀಕಿಸಿವೆ. ಸರ್ಕಾರದ ಈ ರೀತಿಯ ವರ್ತನೆಯು ಪ್ರಜಾಸತ್ತಾತ್ಮಕ ಅವಕಾಶಗಳನ್ನು ಮೊಟಕು ಮಾಡುತ್ತದೆ ಮತ್ತು ಸರ್ಕಾರವು ಹೆಚ್ಚು ಹೆಚ್ಚು ನಿರಂಕುಶವೂ ಕಾನೂನಿನ ಬಗ್ಗೆ ಗೌರವ ಇಲ್ಲದ್ದೂ ಆಗಲು ಕಾರಣವಾಗುತ್ತದೆ. ಕಾನೂನನ್ನು ರಕ್ಷಿಸುವುದು ಮತ್ತು ಅದನ್ನು ಜಾರಿ ಮಾಡುವುದು ಸರ್ಕಾರದ್ದೇ ಕರ್ತವ್ಯವಾಗಿದೆ. ಆದರೆ, ಸರ್ಕಾರವೇ ಕಾನೂನು ಮೀರಿ ವರ್ತಿಸುತ್ತಿದೆ. ಸರ್ಕಾರದ ಸಂಸ್ಥೆಗಳನ್ನು ದುರ್ಬಳಕೆ ಮಾಡುವ ಮೂಲಕ, ತನ್ನ ಇಷ್ಟಾನಿಷ್ಟಗಳಿಗೆ ತಕ್ಕಂತೆ ಕುಣಿಸುವ ಮೂಲಕ, ರಾಜಕೀಯ ಅಗತ್ಯಗಳಿಗೆ ಬಳಸಿಕೊಳ್ಳುವ ಮೂಲಕ ಸರ್ಕಾರದ ಸಾಂಸ್ಥಿಕ ಚೌಕಟ್ಟನ್ನೇ ನಿರ್ನಾಮ ಮಾಡಲು ಸರ್ಕಾರ ಮುಂದಾಗಿದೆ. ಇದರಿಂದಾಗಿ, ಜನರ ಪ್ರಜಾಸತ್ತಾತ್ಮಕ, ಸಾಂವಿಧಾನಿಕ ಹಕ್ಕುಗಳು ಮೊಟಕಾಗುತ್ತವೆ.

ದಿನದ ಟ್ವೀಟ್

ಅಮಾನವೀಯ, ವಿಷಾದನೀಯ



ಕೊಪ್ಪಳ ಜಿಲ್ಲೆಯಲ್ಲಿ ಎರಡು ವರ್ಷದ ಮಗು ದೇವಸ್ಥಾನ 'ಪ್ರವೇಶಿಸಿದ ತಪ್ಪಿಗೆ' ಅದರ ದಲಿತ ತಂದೆತಾಯಿಗೆ ದಂಡ ವಿಧಿಸಲು ಮುಂದಾದದ್ದು ವರದಿಯಾಗಿದೆ. ಅಸ್ಪೃಶ್ಯತೆಯು ದೇಶದಾದ್ಯಂತ ವ್ಯಾಪಕವಾಗಿ ಅಸ್ತಿತ್ವದಲ್ಲಿದೆ. ಇನ್ನೂ ಪ್ರಪಂಚವೆಂದರೇನೆಂದೇ ಅರಿಯದ ಮಗುವಿನ ವಿಷಯದಲ್ಲೂ ಅದನ್ನು ಆಚರಿಸಿರುವುದು ವಿಷಾದನೀಯ.

ರಘೋತ್ತಮ ಹೊ.ಬ., ಲೇಖಕ

ಕಿಡಿನುಡಿ



ಕೃಷ್ಣಾ ಭಾಗ್ಯ ಜಲ ನಿಗಮಕ್ಕೆ ನೀಡಿರುವ ಅನುದಾನವನ್ನು ಕಾವೇರಿ ನೀರಾವರಿ ನಿಗಮದ ಸಾಲ ತೀರಿಸಲು ಮೂರು ವರ್ಷಗಳಿಂದ ಬಳಕೆ ಮಾಡಲಾಗುತ್ತಿದೆ. ಈ ಮೂಲಕ ಉತ್ತರ ಕರ್ನಾಟಕಕ್ಕೆ ಅನ್ಯಾಯ ಮಾಡಲಾಗಿದೆ. 2017ರಿಂದ 2020ರವರೆಗೆ ಅನುದಾನವನ್ನು ಸಾಲ ಮರುಪಾವತಿಗೆ ಬಳಸಲಾಗಿದೆ. ಇದರಿಂದಾಗಿ, ಕೃಷ್ಣಾ ಭಾಗ್ಯ ಜಲ ನಿಗಮದ ಯೋಜನೆಗಳಿಗೆ ಹಿನ್ನಡೆಯಾಗಿದೆ. ಇದರ ಬಗ್ಗೆ ಸಿಎಜಿ ವರದಿಯಲ್ಲೂ ಉಲ್ಲೇಖಿಸಲಾಗಿದೆ.

ಬಸನಗೌಡ ಪಾಟೀಲ ಯತ್ನಾಳ, ಬಿಜೆಪಿ ಶಾಸಕ

25 ವರ್ಷಗಳ ಹಿಂದೆ
ಭಾನುವಾರ, 22-9-1996

• ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ನರಸಿಂಹ ರಾವ್ ರಾಜೀನಾಮೆ

ನವದೆಹಲಿ, ಸೆ. 21 (ಯುಎನ್ಐ)– ಲಕ್ಕೂಭಾಯಿ ಪಾಠಕ್ ವಂಚನೆ ಪ್ರಕರಣದಲ್ಲಿ ತಮ್ಮನ್ನು ಸಹ ಆರೋಪಿಯನ್ನಾಗಿ ಮಾಡಬಾರದು ಎಂದು ಮಾಜಿ ಪ್ರಧಾನಿ ಹಾಗೂ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಪಿ.ವಿ. ನರಸಿಂಹ ರಾವ್ ಅವರು ಸಲ್ಲಿಸಿದ್ದ ಅರ್ಜಿಗಳನ್ನು ಸಿಬಿಐ ವಿಶೇಷ ನ್ಯಾಯಾಧೀಶ ಅಜಿತ್ ಭಾರಿಹೋಕ್ ಅವರು ಇಂದು ತಳ್ಳಿಹಾಕಿದ ಹಿನ್ನೆಲೆಯಲ್ಲಿ ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ರಾವ್ ರಾಜೀನಾಮೆ ಸಲ್ಲಿಸಿದ್ದಾರೆ.

'ನಾನು ಸಂಪೂರ್ಣ ಮುಗ್ಧ. ನನ್ನ ಘನತೆಗೆ ಕುಂದು ತರಲು ನನ್ನ ವಿರುದ್ಧ ಸುಳ್ಳು, ನಿರಾಧಾರ ಹಾಗೂ ಕುಚೇಷ್ಟೆಯ ಆರೋಪಗಳನ್ನು ಮಾಡಲಾಗಿದೆ' ಎಂದು ರಾವ್ ಹೇಳಿಕೆ ನೀಡಿದ್ದಾರೆ.

• ಮೈಸೂರು ಭೂಹಗರಣ: ಬೊಕ್ಕಸಕ್ಕೆ ₹ 60 ಕೋಟಿ ನಷ್ಟ

ಬೆಂಗಳೂರು, ಸೆ. 21– ಮೈಸೂರು ನಗರದ ಸುತ್ತಮುತ್ತಲಿನ ಜಮೀನನ್ನು ನಿವೇಶನಗಳನ್ನಾಗಿ ಮಾಡಿ ವಿವಿಧ ಹಂತಗಳಲ್ಲಿ ನಡೆಸಿರುವ ಅವ್ಯವಹಾರಗಳಿಂದಾಗಿ ಸರ್ಕಾರಕ್ಕೆ ಸುಮಾರು 60 ಕೋಟಿ ರೂಪಾಯಿಗಳಷ್ಟು ನಷ್ಟವಾಗಿದ್ದು ಇದರ ಬಗ್ಗೆ ತೀವ್ರ ತನಿಖೆ ನಡೆದಿದ್ದು, ಈಗಾಗಲೇ ಇಲಾಖೆಯ ಮೂವರು ಅಧಿಕಾರಿಗಳನ್ನು ಅಮಾನತಿನಲ್ಲಿ ಇಡಲಾಗಿದೆ ಎಂದು ಕಂದಾಯ ಸಚಿವ ರಮೇಶ್ ಸಿ. ಜಿಗಜಿಣಗಿ ಅವರು ಇಂದು ಇಲ್ಲಿ ತಿಳಿಸಿದರು.

50 ವರ್ಷಗಳ ಹಿಂದೆ
ಬುಧವಾರ, 22-9-1971

• ಹೇಮಾವತಿ, ಕಪಿಲಾ ಯೋಜನೆ ತಡೆಗೆ ಕೇರಳದ ಹೊಸ ದಾವಾ

ನವದೆಹಲಿ, ಸೆ. 21– ಕಾವೇರಿ ಜಲಾನಯನ ಪ್ರದೇಶದಲ್ಲಿ ಹೇಮಾವತಿ ಮತ್ತು ಕಪಿಲಾ ಯೋಜನೆಗಳ ಕೆಲಸವನ್ನು ಮೈಸೂರು ಸರ್ಕಾರ ಮುಂದುವರಿಸದಂತೆ ತಡೆಯಾಜ್ಞೆ ನೀಡಬೇಕೆಂದು ಕೋರಿ ಕೇರಳ ಸರ್ಕಾರವು ಇಂದು ಸುಪ್ರೀಂ ಕೋರ್ಟ್‌ನಲ್ಲಿ ಸಂವಿಧಾನದ 131ನೇ ವಿಧಿ ಪ್ರಕಾರ ಹೊಸ ದಾವಾ ಹೂಡಿದೆ.

ಈ ದಾವಾದಲ್ಲಿ ಕೇಂದ್ರ, ಮೈಸೂರು ಮತ್ತು ತಮಿಳುನಾಡು ಸರ್ಕಾರಗಳು ಪ್ರತಿವಾದಿಗಳು.


• ಮಾವೊ ಅಸ್ವಸ್ಥ ಅಥವಾ ಸಾವು

ಪ್ಯಾರಿಸ್, ಸೆ. 21– ಚೀನಿ ನಾಯಕ ಮಾವೊತ್ಸೆ-ತುಂಗ್ ಅವರು ಮರಣ ಹೊಂದಿರಬಹುದು ಅಥವಾ ಹೃದಯಾಘಾತದ ನಂತರ ತೀವ್ರ ಅಸ್ವಸ್ಥರಾಗಿರಬಹುದು ಎಂದು ಫ್ರೆಂಚ್ ನ್ಯಾಷನಲ್ ರೇಡಿಯೊ ಇಂದು ರಾತ್ರಿ ಪ್ರಸಾರ ಮಾಡಿತು.

ಚೀನಾದಲ್ಲಿನ ಇತ್ತೀಚಿನ ಸಮಸ್ಯಾತ್ಮಕ ಬೆಳವಣಿಗೆಗಳ ಹಿನ್ನೆಲೆಯಲ್ಲಿರಬಹುದಾದ ಸಂಗತಿಗಳನ್ನು ಈ ರೇಡಿಯೊ ವಿಶ್ಲೇಷಿಸಿತು.

ಹೊಸ ಔದ್ಯಮಿಕ ಸಾಹಸಕ್ಕೆ ಅಗತ್ಯವಿರುವ ಅನುಭವ, ತಾಕತ್ತು 'ಟಾಟಾ'ಗೆ ಇದೆ

ಏರ್ ಇಂಡಿಯಾ: ಮರಳಿ ಮಾತೃಸಂಸ್ಥೆಗೆ?



ವಿಶ್ಲೇಷಣೆ
ಕ್ಯಾಪ್ಟನ್ ಜಿ.ಆರ್.ಗೋಪಿನಾಥ್

ಟಾಟಾ ಸಮೂಹವು ಏರ್ ಇಂಡಿಯಾ ಕಂಪನಿಯ ಖರೀದಿಗೆ ಬಿಡ್ ಸಲ್ಲಿಸಿದೆ ಎಂಬ ಸುದ್ದಿಯು ಸಂತಸ ತರುವಂಥದ್ದು. ಜವಾಹರಲಾಲ್ ನೆಹರೂ ಅವರು ಟಾಟಾ ಸಮೂಹಕ್ಕೆ ನೋಟಿಸ್ ನೀಡದೆ, ಅವರ ಜೊತೆ ಮಾತುಕತೆಯನ್ನೂ ನಡೆಸದೆ, ಅವರ ಒಡೆತನದಲ್ಲಿದ್ದ ವಿಮಾನಯಾನ ಕಂಪನಿಯನ್ನು ರಾಷ್ಟ್ರೀಕರಣಗೊಳಿಸಿದರು. ಚೆನ್ನಾಗಿ ನಡೆಯುತ್ತಿದ್ದ ಖಾಸಗಿ ಕಂಪನಿಯೊಂದನ್ನು ಸರ್ಕಾರ ಸ್ವಾಧೀನಕ್ಕೆ ತೆಗೆದುಕೊಂಡು, ಅದನ್ನು ಹಳ್ಳಕ್ಕೆ ತಳ್ಳಿದ್ದು ಏಕೆ ಎಂಬುದು ಚಕಿತಗೊಳಿಸುವ ಪ್ರಶ್ನೆ.

ಉದ್ಯಮಿ ಜೆ.ಆರ್.ಡಿ. ಟಾಟಾ ಅವರಿಗೆ ಆ ಸಮಯದಲ್ಲಿ ಬಹಳ ನೋವಾಗಿತ್ತು. ಕೇಂದ್ರ ಸರ್ಕಾರವು ವಿಮಾನಯಾನ ಕಂಪನಿಯನ್ನು ಹಿಂಬಾಗಿಲ ಮೂಲಕ ತನ್ನ ಹಿಡಿತಕ್ಕೆ ತೆಗೆದುಕೊಂಡಿದೆ ಎಂದು ಜೆ.ಆರ್.ಡಿ. ಅವರು ತೀವ್ರ ವಿಷಾದದಿಂದ ಹೇಳಿದ್ದರು. ಸರ್ಕಾರವು ರಾಷ್ಟ್ರೀಕರಣಗೊಳಿಸಿದ್ದರೂ 1978ರವರೆಗೆ ಜೆ.ಆರ್.ಡಿ. ಅವರೇ ಏರ್ ಇಂಡಿಯಾದ ಅಧ್ಯಕ್ಷರಾಗಿದ್ದರು, ಆ ಕಂಪನಿಯನ್ನು ಜಾಗತಿಕ ಮಟ್ಟದಲ್ಲಿ ಜನಪ್ರಿಯಗೊಳಿಸಿದರು.

ಸಿಂಗಪುರ ಏರ್‌ಲೈನ್ಸ್ ಕಂಪನಿಯನ್ನು ಜಗತ್ತಿನ ಅತ್ಯುತ್ತಮ ವಿಮಾನಯಾನ ಕಂಪನಿ ಎಂದು ಪರಿಗಣಿಸಲಾಗಿದೆ. ಈ ಕಂಪನಿಯನ್ನು ಕಟ್ಟುವಲ್ಲಿ ಸಹಾಯ ಮಾಡಿದ್ದು ಏರ್ ಇಂಡಿಯಾ ಎಂದರೆ ನಂಬುತ್ತೀರಾ?! (ಸಹಾಯ ಬೇಕು ಎಂದು ಸಿಂಗಪುರ ಸರ್ಕಾರ ಮನವಿ ಮಾಡಿತ್ತು.) ಏರ್ ಇಂಡಿಯಾವನ್ನು ರಾಷ್ಟ್ರೀಕರಣಗೊಳಿಸಿ ನೆಹರೂ ತಪ್ಪು ಮಾಡಿದರೂ, ಅವರು ಮತ್ತು ಅವರ ಉತ್ತರಾಧಿಕಾರಿಗಳು ಜೆ.ಆರ್.ಡಿ. ಅವರಿಗೆ ಏರ್ ಇಂಡಿಯಾ ಮುನ್ನಡೆಸುವ ವಿಚಾರದಲ್ಲಿ ಸ್ವಾಯತ್ತೆ ನೀಡಿದ್ದರು. ಆದರೆ, ಜೆ.ಆರ್.ಡಿ. ನಂತರದಲ್ಲಿ ಏರ್ ಇಂಡಿಯಾದ ಕುಸಿತ ಶುರುವಾಯಿತು. ಸರ್ಕಾರಗಳು ಏರ್ ಇಂಡಿಯಾ ಕಂಪನಿಯನ್ನು ತಮ್ಮ ಖಾಸಗಿ ಪ್ರಯಾಣ ಸಂಸ್ಥೆಯಂತೆ ಕಂಡವು. ಉತ್ತರದಾಯಿತ್ವ ಇಲ್ಲದ ರಾಜಕೀಯ ಹಾಗೂ ಅಧಿಕಾರಶಾಹಿ ಹಸ್ತಕ್ಷೇಪಗಳು ಈ ಕಂಪನಿಯು ನಷ್ಟ ಅನುಭವಿಸುವಂತೆ ಮಾಡಿದವು. ಖಾಸಗಿ ವಲಯದ ಕಂಪನಿಗಳಿಂದ ಎದುರಾದ ಬಿರುಸಿನ ಸ್ಪರ್ಧೆಯು ಈ ಕಂಪನಿಯನ್ನು ಅಪ್ರಸ್ತುತಗೊಳಿಸಿತು.

ಈಗ ಕಂಪನಿಯ ಮೇಲಿರುವ ಸಾಲ ಹಾಗೂ ನಷ್ಟದ ಮೊತ್ತವು ₹ 1 ಲಕ್ಷ ಕೋಟಿ. ಇಲ್ಲಿ ಇನ್ನೊಂದು ಪ್ರಶ್ನೆ ಮೂಡುತ್ತದೆ. ಏರ್ ಇಂಡಿಯಾ ಕಂಪನಿಯನ್ನು ಉಳಿಸಬಹುದು ಎಂದಾದರೆ, ₹ 6 ಸಾವಿರ ಕೋಟಿ ಸಾಲ ಇದ್ದ ಕಿಂಗ್‌ಫಿಷರ್ ಏರ್‌ಲೈನ್ಸ್ ಹಾಗೂ ₹ 8 ಸಾವಿರ ಕೋಟಿ ಸಾಲ ಇದ್ದ ಜೆಟ್ ಏರ್‌ವೇಸ್ ಕಂಪನಿಯನ್ನು ಉಳಿಸದಿದ್ದುದು ಏಕೆ? ಈ ಎರಡು ಕಂಪನಿಗಳ ಸಾಲವು ಏರ್ ಇಂಡಿಯಾ ಸಾಲಕ್ಕೆ ಹೋಲಿಸಿದರೆ ತೀರಾ ಕಡಿಮೆ. ಈ ಕಂಪನಿಗಳ ಪ್ರವರ್ತಕರ ವಿರುದ್ಧ ಕಾನೂನು ಕ್ರಮ ಜರುಗಿಸಬಹುದಿತ್ತು. ಆದರೆ, ಪ್ರವರ್ತಕರ ತಪ್ಪಿಗೆ ವಿಮಾನಯಾನ ಕಂಪನಿ ಹಾಗೂ ಅವುಗಳಲ್ಲಿನ ಸಿಬ್ಬಂದಿಯನ್ನು ಶಿಕ್ಷಿಸಿದ್ದೇಕೆ? ಈ ಕಂಪನಿಗಳು ಖಾಸಗಿಯಾಗಿದ್ದರೂ, ಅವುಗಳ ಆಸ್ತಿಯು ರಾಷ್ಟ್ರದ ಆಸ್ತಿ. ಖಾಸಗಿ ಉದ್ಯಮಗಳಲ್ಲಿ ಕೆಲಸ ಮಾಡುವವರ ಮೈಯಲ್ಲಿ ಹರಿಯುವ ರಕ್ತವೇನೂ ಬೇರೆ ಅಲ್ಲ. ಸರ್ಕಾರಿ ಸ್ವಾಮ್ಯದ ಉದ್ದಿಮೆಗಳಲ್ಲಿ ಕೆಲಸ ಮಾಡುವ ನೌಕರರ ಮೈಯಲ್ಲಿ ಹರಿಯುವ ರಕ್ತದಂತೆಯೇ, ಇವರ ಮೈಯಲ್ಲಿ ಹರಿಯುವ ರಕ್ತದ ಬಣ್ಣ ಕೂಡ ಕೆಂಪು.

ಏರ್ ಇಂಡಿಯಾ ಕಂಪನಿಯು ತನಗೆ ಜನ್ಮ ನೀಡಿದ, ತನ್ನನ್ನು ಬೆಳೆಸಿದ ಸಮೂಹದ ತೆಕ್ಕೆಯನ್ನು ಮತ್ತೆ ಸೇರಿಕೊಳ್ಳುವುದು ಸೂಕ್ತ. ಹಾಗಂತ, ಸರ್ಕಾರವು ಏರ್ ಇಂಡಿಯಾವನ್ನು ಏಕಪಕ್ಷೀಯವಾಗಿ ಹಸ್ತಾಂತರ ಮಾಡಲು ಅವಕಾಶ ಇಲ್ಲ. ತಮ್ಮಿಂದ ಪಡೆದುಕೊಂಡಿದ್ದ ಕಂಪನಿಯನ್ನು ಮತ್ತೆ ತಾವೇ ಪಡೆದುಕೊಳ್ಳಲು ಟಾಟಾ ಸಮೂಹವು ಬಿಡ್ಡಿಂಗ್‌ನಲ್ಲಿ ಪಾಲ್ಗೊಳ್ಳಬೇಕು. ಇದೊಂದು ಕ್ರೂರ ವ್ಯಂಗ್ಯ.

ಜೆ.ಆರ್.ಡಿ ಅವರು ದೂರದೃಷ್ಟಿಯುಳ್ಳ ವ್ಯಕ್ತಿ ಎಂದು ಗೌರವ ಸಂಪಾದಿಸಿದ್ದರು. ಟಾಟಾ ಟ್ರಸ್ಟ್‌ಗಳ ಮೂಲಕ ಮಾಡುವ ಸಾಮಾಜಿಕ ಕೆಲಸಗಳ ಕಾರಣದಿಂದಾಗಿ ಅಪಾರ ಗೌರವ ಸಂಪಾದಿಸಿದ್ದರು. ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ದೊಡ್ಡ ಜಾಲವನ್ನು ಹೊಂದಿದ್ದ ಮಹಾನ್ ವಿಮಾನಯಾನ ಸಂಸ್ಥೆಯೊಂದನ್ನು ಸ್ಥಾಪಿಸಿದ ಹಿರಿಮೆಯೂ ಅವರಿಗಿದೆ. ಭಾರತದಲ್ಲಿನ ಮೊದಲ ಪರವಾನಗಿ ಹೊಂದಿದ ಪೈಲಟ್ ಟಾಟಾ ಅವರೇ. ದೇಶದಲ್ಲಿ ವಾಣಿಜ್ಯ ಉದ್ದೇಶದ ಮೊದಲ ವಿಮಾನವನ್ನು ಕರಾಚಿಯಿಂದ ಬಳ್ಳಾರಿ ಮಾರ್ಗವಾಗಿ ಮದ್ರಾಸ್‌ಗೆ 1932ರಲ್ಲಿ ಚಾಲನೆ ಮಾಡಿದವರೂ ಅವರೆ. ಇದು ಟಾಟಾ ಏರ್‌ಲೈನ್ಸ್‌ನ ಆರಂಭದ ದಿನಗಳಾಗಿದ್ದವು. 1946ರಲ್ಲಿ ಇದು ಏರ್ ಇಂಡಿಯಾ ಎಂಬ ಹೆಸರು ಪಡೆದುಕೊಂಡಿತು. ತುಸು ಮಾಸಿದ್ದರೂ ಏರ್ ಇಂಡಿಯಾ ಇಂದಿಗೂ ಒಂದು ರತ್ನವೇ ಸರಿ.

ಬೇರೆಯವರು ಅಸೂಯೆಪಟ್ಟುಕೊಳ್ಳಬಹುದಾದಂತಹ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ವಾಯುಮಾರ್ಗ ಜಾಲವು ಏರ್ ಇಂಡಿಯಾ ಬಳಿ ಇದೆ. ದೇಶದ ವಿಮಾನ ನಿಲ್ದಾಣಗಳಲ್ಲಿ ಅಗತ್ಯ ಮೂಲಸೌಕರ್ಯಗಳನ್ನು ಇದು ಹೊಂದಿದೆ. ಬೇರೆ ದೇಶಗಳ ರಾಜಧಾನಿಗಳು, ಪ್ರಪಂಚದ ಇತರ ಪ್ರಮುಖ ನಗರಗಳು, ವಾಣಿಜ್ಯ ನಗರಗಳಲ್ಲಿನ ವಿಮಾನ ನಿಲ್ದಾಣಗಳಲ್ಲಿಯೂ ಇದು ಮೂಲಸೌಕರ್ಯವನ್ನು ಹೊಂದಿದೆ. ಕೆಲಸ ಮಾಡದ ವ್ಯಕ್ತಿಗಳು ಹಲವರು ಏರ್ ಇಂಡಿಯಾದಲ್ಲಿ ಇದ್ದಾರಾದರೂ ಬಹಳ ಅನುಭವ, ಅರ್ಹತೆ ಹೊಂದಿರುವ ಪೈಲಟ್‌ಗಳು, ಎಂಜಿನಿಯರ್‌ಗಳು ಹಾಗೂ ಸಿಬ್ಬಂದಿ ಕೂಡ ಈ ಕಂಪನಿಯಲ್ಲಿದ್ದಾರೆ. ಕೆಲಸ ಮಾಡದ ಸಿಬ್ಬಂದಿಯ ಸಮಸ್ಯೆಯನ್ನು ಸರ್ಕಾರದ ನೆರವಿನೊಂದಿಗೆ ಪರಿಹರಿಸಬಹುದು.

ಏರ್ ಇಂಡಿಯಾ ಕಂಪನಿಯ ಸ್ವಾಧೀನವು ಹಲವು ಸವಾಲುಗಳನ್ನು ಕೂಡ ತರುತ್ತದೆ. ಟಾಟಾ ಸಮೂಹವು ಈಗಾಗಲೇ ಎರಡು ವಿಮಾನಯಾನ ಕಂಪನಿಗಳನ್ನು ಹೊಂದಿದೆ. ಏರ್ ಏಷ್ಯಾ ಮತ್ತು ವಿಸ್ತಾರಾ ಆ ಎರಡು ಕಂಪನಿಗಳು. ಇವು ಲಾಭ ಗಳಿಸುತ್ತಿಲ್ಲ. ಈ ಎರಡು ಕಂಪನಿಗಳ ಪಾಲುದಾರಿಕೆಯಲ್ಲಿ ಕೆಲವು ಸಮಸ್ಯೆಗಳು ಇವೆ. ಆದರೆ, ಮೂರೂ ವಿಮಾನಯಾನ ಕಂಪನಿಗಳನ್ನು ಒಂದೇ ಆಗಿಸಿದಲ್ಲಿ ಟಾಟಾ ಸಮೂಹವು ಯಶಸ್ಸು ಕಾಣಬಹುದು. ಮೂರನ್ನೂ ವಿಲೀನಗೊಳಿಸಿದ ನಂತರ ರಚನೆಯಾಗುವ ಕಂಪನಿಗೆ ಹೊಸ ನಾಯಕತ್ವ ಹಾಗೂ ಹೊಸ ದೃಷ್ಟಿಕೋನ ಬೇಕು. ಆಡಳಿತದ ಅನುಭವ, ಕೌಶಲ ಟಾಟಾ ಸಮೂಹಕ್ಕೆ ಇದೆ. ಅಲ್ಲದೆ, ಎಮಿರೇಟ್ಸ್, ಸಿಂಗಪುರ ಏರ್‌ಲೈನ್ಸ್, ಬ್ರಿಟಿಷ್ ಏರ್‌ವೇಸ್, ಏರ್ ಫ್ರಾನ್ಸ್, ಲುಫ್ತಾನ್ಸಾ ಮತ್ತು ಇತರ ಅಂತರರಾಷ್ಟ್ರೀಯ ವಿಮಾನಯಾನ ಕಂಪನಿಗಳ ಜೊತೆ ಸ್ಪರ್ಧಿಸಲು ಅಗತ್ಯವಿರುವ ಬಂಡವಾಳವನ್ನು ತರುವ ಶಕ್ತಿ ಕೂಡ ಟಾಟಾ ಸಮೂಹಕ್ಕೆ ಇದೆ.

ಈ ಒಂದು ಔದ್ಯಮಿಕ ಸಾಹಸಕ್ಕೆ ಅಗತ್ಯವಿರುವ ಜಾಗತಿಕ ಮಟ್ಟದ ಅನುಭವ ಮತ್ತು ತಾಕತ್ತು ಟಾಟಾ ಸಮೂಹದಲ್ಲಿ ಇದೆ. ರತನ್ ಟಾಟಾ ಅವರು ವಿಮಾನಯಾನದ ಬಗ್ಗೆ ಬಹಳ ಪ್ರೀತಿ ಹೊಂದಿರುವ ವ್ಯಕ್ತಿ. ಅವರು ಸಮೂಹದಲ್ಲಿ ಸಕ್ರಿಯರಾಗಿ ಇದ್ದಾರೆ. ಸಮೂಹದ ನೇತೃತ್ವವನ್ನೂ ವಹಿಸಿಕೊಂಡಿದ್ದಾರೆ. ಈ ಸಂದರ್ಭದಲ್ಲಿ ಏರ್ ಇಂಡಿಯಾ ಕಂಪನಿಯು ತನ್ನ ಕುಟುಂಬಕ್ಕೆ ಮರಳಲು ಕಾಲ ಕೂಡಿಬಂದಿದೆ ಎಂದು ಅನಿಸುತ್ತಿದೆ. ಈ ಸ್ವಾಧೀನವು ಬಹಳ ಸವಾಲಿನದ್ದಾಗಿರಲಿದೆ; ಆದರೆ, ಒಂದು ಒಳ್ಳೆಯ ಪ್ರಯತ್ನ ಕೂಡ ಆಗಿರಲಿದೆ. ಏರ್ ಇಂಡಿಯಾ ಕಂಪನಿಗೆ, ಅದರಲ್ಲಿನ ನೌಕರರಿಗೆ, ಈ ವಿಮಾನಯಾನ ಕಂಪನಿಯ ಗ್ರಾಹಕರಿಗೆ ಒಳ್ಳೆಯದಾಗುತ್ತದೆ. ಜೆ.ಆರ್.ಡಿ. ಅವರಿಗೆ ಸಲ್ಲಿಸುವ ಸೂಕ್ತ ಗೌರವ ಕೂಡ ಆಗುತ್ತದೆ ಅದು.

ಲೇಖಕ: ಏರ್ ಡೆಕ್ಕನ್ ಕಂಪನಿಯ ಸಂಸ್ಥಾಪಕ



ಚುರುಮುರಿ



ಇಡ್ಲಿ, ವಡೆ, ದೋಸೆ...

• ಮಣ್ಣೆರಾಜು

'ನಮ್ಮ ಶಾಸಕರು ಅಸೆಂಬ್ಲಿಯಲ್ಲಿ ಮಾತನಾಡಿದ ವಿಚಾರ ಪತ್ರಿಕೆ, ಟೀವಿಗಳಲ್ಲಿ ಸುದ್ದಿನೇ ಆಗಿಲ್ಲವಲ್ರೀ...' ಸುಮಿಗೆ ಬೇಸರ.

'ಶಾಸಕರು ಮಾತನಾಡಿದ್ರೆ ತಾನೇ ಸುದ್ದಿಯಾಗೋದು' ಅಂದ ಶಂಕ್ರಿ.

'ಸಾರ್ವಜನಿಕ ವೇದಿಕೆಗಳಲ್ಲಿ ಸ್ಟೇಜ್ ಫಿಯರ್ ಇಲ್ಲದೆ ಮಾತನಾಡುವ ಶಾಸಕರಿಗೆ ಅಸೆಂಬ್ಲಿ ಫಿಯರ್ ಇದೆಯೇನೋ...'

'ಇಲ್ಲ, ಅಸೆಂಬ್ಲಿಯಲ್ಲಿ ಸೀನಿಯರ್ ಶಾಸಕರೇ ಹೆಚ್ಚು ಮಾತನಾಡ್ತಾರಂತೆ, ನಮ್ಮ ಶಾಸಕರ ಮಾತಿಗೆ ಅವಕಾಶವೇ ಸಿಗುತ್ತಿಲ್ಲವಂತೆ'.

'ಟೋಲ್‌ಗಳಲ್ಲಿ ಶಾಸಕರ ಕಾರುಗಳಿಗೆ ಅಡ್ಡಹಾಕಿ ಅವಮಾನ ಮಾಡ್ತಾರಂತೆ, ಇದು ಸರಿಯಲ್ಲಾರೀ...'

'ಹೌದು, ಇದು ಶಾಸಕರಿಗೆ ಮಾತ್ರವಲ್ಲ, ಇಡೀ ಕ್ಷೇತ್ರದ ಜನರಿಗೆ ಮಾಡುವ ಅವಮಾನ. ಶಾಸಕರೇನು ಜೀರೊ ಟ್ರಾಫಿಕ್ ಬೇಕು ಅಂತ ಕೇಳಿಲ್ಲ. ಟೋಲ್‌ಗಳಲ್ಲಿ ಪ್ರತ್ಯೇಕ ಪಥದ ವ್ಯವಸ್ಥೆ ಮಾಡಿ ಸುಗಮ ಸಂಚಾರಕ್ಕೆ ಅನುವು ಮಾಡಿ ಶಾಸಕರ ಬೆಲೆ-ಗೌರವ ಕಾಪಾಡಬೇಕು'.

'ಹೌದೂರೀ. ದಿನಬಳಕೆ ಪದಾರ್ಥಗಳ ಬೆಲೆ ಏರಿಕೆ ಬಗ್ಗೆ ಅಷ್ಟೊಂದು ಮಾತನಾಡುವ ಸಿದ್ದರಾಮಯ್ಯರಿಗೆ ಹೋಟೆಲ್‌ಗಳ ಇಡ್ಲಿ, ವಡೆ, ಮಸಾಲೆದೋಸೆಗಳ ಬೆಲೆ ಗೊತ್ತಿಲ್ಲವಂತೆ'.

'ಸಿದ್ದರಾಮಯ್ಯ ಹೋಟೆಲ್‌ಗೆ ಹೋಗೋದೇ ಅಪರೂಪವಂತೆ, ಹೋದ್ರೂ ಸ್ನೇಹಿತರು ಬಿಲ್ ಕೊಡ್ತಾರಂತೆ. ಅವರಿಗೆ ಬಿಲ್ ಬಿಸಿ ತಟ್ಟಿಲ್ಲ, ಹೋಟೆಲ್‌ಗಳಲ್ಲೂ ಇಂದಿರಾ ಕ್ಯಾಂಟೀನ್‌ನಂತೆ ರಿಯಾಯಿತಿ ದರದಲ್ಲಿ ಊಟ, ತಿಂಡಿ ಸಿಗುತ್ತದೆ ಅಂತ ಭಾವಿಸಿದ್ದರೇನೋ...'

'ತಿಂಡಿ ಬೆಲೆಗಿಂತ ನನಗೆ ಅನ್ನದ ಬೆಲೆ ಚೆನ್ನಾಗಿ ಗೊತ್ತು. ಬೆಲೆ ಏರಿಕೆ ಪರಿಣಾಮದ ಅರಿವಿಲ್ಲದಿದ್ದರೆ ಗೃಹಿಣಿಯರನ್ನು ಕೇಳಿ ತಿಳಿದುಕೊಳ್ಳಿ ಅಂತ ಶಾಸಕರಿಗೆ ಸಿದ್ದರಾಮಯ್ಯ ತಿಳಿವಳಿಕೆ ನೀಡಿದರಂತೆ... ಹೋಗ್ಲಿಬಿಡಿ, ಅಸೆಂಬ್ಲಿಯ ಅಷ್ಟೆಲ್ಲಾ ಚರ್ಚೆಯ ಫಲದಿಂದ ಪದಾರ್ಥಗಳ ಬೆಲೆ ಇಳಿಯಬಹುದೇ?'

'ಸದ್ಯದ ಸ್ಥಿತಿಯಲ್ಲಿ ಬೆಲೆ ಇಳಿಕೆ ಕಷ್ಟ ಆಗುವುದಂತೆ. ಇಳಿಸುವ ಬದಲು ಜನರ ಆದಾಯ ಮೂಲ ಹೆಚ್ಚಿಸಲು ಸರ್ಕಾರ ಪ್ರಯತ್ನ ಮಾಡಬಹುದೇನೊ, ಕಾದುನೋಡೋಣ ಬಿಡು...' ಶಂಕ್ರಿ ಸಮಾಧಾನ ಹೇಳಿದ.

ಸಂಗತ

ರೈನೊ ರಕ್ಷಣೆಗೆ ಪಣ ತೊಡೋಣ

ಜೀವಿವೈವಿಧ್ಯದ ಈ ಪ್ರಮುಖ ಕೊಂಡಿಗಳ ಬೇಟೆ ಅನಿಯಂತ್ರಿತವಾಗಿ ಸಾಗುತ್ತಿದೆ

• ಶ್ರೀಗುರು

ದಡೂತಿ ದೇಹ, ಕಂಬದಂಥ ಕಾಲು, ಭಾರಿ ತೂಕ ಮತ್ತು ಮೂಗಿನ ಮೇಲಿನ ಕೊಂಬುಗಳಿಂದ ವಿಶಿಷ್ಟವಾಗಿ ಕಾಣಿಸುವ ಘೇಂಡಾಮೃಗದ (ರೈನೊ) ಸಂತತಿಯು ಅದರ ಆವಾಸ ನಾಶ ಮತ್ತು ಮಾನವ ಬೇಟೆಯಿಂದಾಗಿ ವಿನಾಶದ ಭೀತಿಯಲ್ಲಿದೆ. ಆಫ್ರಿಕಾ ಮತ್ತು ಏಷ್ಯಾದ ಕಾಡುಗಳಲ್ಲಿ ಮಾತ್ರ ಇರುವ ರೈನೊಗಳು ಜೀವಿವೈವಿಧ್ಯದ ಪ್ರಮುಖ ಕೊಂಡಿಗಳೆನಿಸಿದ್ದರೂ ಅವುಗಳ ಕೊಂಬಿನಲ್ಲಿ ಮನುಷ್ಯನ ಕ್ಯಾನ್ಸರ್ ಮತ್ತು ನಿಮಿರು ದೌರ್ಬಲ್ಯ ಗುಣಪಡಿಸುವ ರಾಸಾಯನಿಕಗಳಿವೆ ಎಂಬ ತಪ್ಪುಗ್ರಹಿಕೆಯಿಂದಾಗಿ ಅವುಗಳ ಬೇಟೆ ಅನಿಯಂತ್ರಿತವಾಗಿ ನಡೆಯುತ್ತಿದೆ.

ಕಳೆದ ಶತಮಾನದ ಆರಂಭದಲ್ಲಿ ಐದು ಲಕ್ಷದಷ್ಟಿದ್ದ ಅವುಗಳ ಸಂಖ್ಯೆ ಈಗ ಬರೀ ಮೂವತ್ತು ಸಾವಿರಕ್ಕಿಳಿದಿದೆ. ನಮ್ಮಲ್ಲಿ ಸುಮಾರು 3,300 ಇರಬಹುದೆಂಬ ಅಂದಾಜಿದ್ದು, ಅಪಾಯದಲ್ಲಿರುವ ಪ್ರಾಣಿ ಎಂದು ಐಯುಸಿಎನ್ (ಇಂಟರ್‌ನ್ಯಾಷನಲ್ ಯೂನಿಯನ್ ಫಾರ್ ಕನ್ಸರ್ವೇಷನ್ ಆಫ್ ನೇಚರ್) ಕೆಂಪುಪಟ್ಟಿಗೆ ಸೇರಿಸಲಾಗಿದೆ.


ಆಫ್ರಿಕಾದ ಡೈಸೆರಾಸ್ ಬೈಕಾರ್ನಿಸ್ (ಕಪ್ಪು), ಸೆರಟೊತೀರಿಯಂ ಸೈಮಮ್ (ಬಿಳಿ), ಅಸ್ಸಾಂನ ರೈನಾಸರಾಸ್ ಯೂನಿಕಾರ್ನಿಸ್, ಜಾವಾದ ರೈನಾಸರಾಸ್ ಸೊಂಡೇಕಸ್ ಮತ್ತು ಸುಮಾತ್ರಾದ ಡಿಸೆರೊರೈನಸ್ ಸುಮಾತ್ರೆನ್ಸಿಸ್ ಎಂಬ ಐದು ಪ್ರಭೇದಗಳಿವೆ. ಆಫ್ರಿಕಾ ಮತ್ತು ಸುಮಾತ್ರಾದ ಘೇಂಡಾಮೃಗಗಳಿಗೆ ಮೂಗಿನ ಮೇಲೆ ಒಂದರ ಹಿಂದೊಂದು ಎರಡು ಕೊಂಬುಗಳಿರುತ್ತವೆ. ನಮ್ಮ ಮತ್ತು ಜಾವಾದ ಪ್ರಭೇದಗಳಲ್ಲಿ ಒಂದೇ ಕೊಂಬು ಇರುತ್ತದೆ. ಕೆಲವು ಬಗೆಯ ವಿಶೇಷ ಕೂದಲುಗಳು ಒತ್ತೊತ್ತಾಗಿ ಕೂಡಿಕೊಂಡು, ಬಿರುಸುಗೊಂಡು ರಚನೆಯಾದ ಈ ಕೊಂಬುಗಳ ಕಳ್ಳಮಾರಾಟದ ಬೃಹತ್ ಜಾಲ ಚೀನಾ, ವಿಯೆಟ್ನಾಂನಲ್ಲಿದೆ.

ನಮ್ಮಲ್ಲಿರುವ ಘೇಂಡಾಮೃಗಗಳ ಪೈಕಿ ಎರಡು ಸಾವಿರಕ್ಕೂ ಹೆಚ್ಚು 'ರೈನೊಗಳ ಸ್ವರ್ಗ' ಎಂದೇ ಕರೆಯಲಾಗುವ ಅಸ್ಸಾಂನ 'ಕಾಜಿರಂಗ' ರಾಷ್ಟ್ರೀಯ ಉದ್ಯಾನವನದಲ್ಲೇ ಇವೆ. ಅದಕ್ಕೆ ಕಾರಣ, ಜಾರಿಯಲ್ಲಿರುವ ಅತ್ಯಂತ ಕಠಿಣ ಹಾಗೂ ವಿಚಿತ್ರ ಕಾನೂನು. ಕಾಜಿರಂಗದಲ್ಲಿ ಅರಣ್ಯ ಇಲಾಖೆಯ ಅಧಿಕಾರಿ– ವಾಚರ್– ಗಾರ್ಡ್‌ಗಳನ್ನು ಹೊರತುಪಡಿಸಿ ಬೇರೆ ಯಾರೂ ಕಾಲ್ನಡಿಗೆಯಲ್ಲಿ ಸಂಚರಿಸುವಂತಿಲ್ಲ, ಅಂಥವರ ಮೇಲೆ ಕಂಡಲ್ಲಿ ಗುಂಡು ಹಾರಿಸುವ ಕಾನೂನು ಜಾರಿಯಲ್ಲಿದೆ ಎಂದು ಬಿಬಿಸಿ ಮತ್ತು ನಮ್ಮ ಹಲವು ಪತ್ರಿಕೆಗಳು ವರದಿ ಮಾಡಿದ್ದವು.

ಸಾಕ್ಷ್ಯಚಿತ್ರವೊಂದನ್ನು ನಿರ್ಮಿಸಿದ್ದ ಬಿಬಿಸಿ, 'ಇದು ಮಾನವ ಹಕ್ಕಿನ ಸ್ಪಷ್ಟ ಉಲ್ಲಂಘನೆ' ಎಂದಿತ್ತು. ಸ್ಥಳೀಯ ಸಂರಕ್ಷಣಾ ತಂಡದವರು, ಇದು ಅರಣ್ಯ ಹಕ್ಕು ಕಾಯ್ದೆಗೆ ವಿರುದ್ಧ ಎಂದಿದ್ದರು. 2013ರಲ್ಲಿ 27 ರೈನೊಗಳು ಬೇಟೆಗೆ ಬಲಿಯಾಗಿದ್ದವು. ಕಾಡಿಗೆ ಕಾಲ್ನಡಿಗೆಯಲ್ಲಿ ಅನಧಿಕೃತ ಪ್ರವೇಶ ಪಡೆಯುವವರ ವಿರುದ್ಧ ಅರಣ್ಯ ಇಲಾಖೆಯು ಗುಂಡು ಹಾರಿಸಲು ಶುರು ಮಾಡಿದಾಗ ರೈನೊ ಹತ್ಯೆಗೆ ಕಡಿವಾಣ ಬಿತ್ತು ಎಂದು ವರದಿಯಾಗಿತ್ತು.

ಇದು ಅಂತರರಾಷ್ಟ್ರೀಯ ವಲಯದಲ್ಲಿ ಭಾರಿ ವಿವಾದ ಸೃಷ್ಟಿಸಿತ್ತು. ರೈನೊಗಳ ಬೇಟೆಗಿಂತ ಅರಣ್ಯ ಇಲಾಖೆ ಹಾರಿಸಿದ ಗುಂಡುಗಳಿಗೆ ಸಿಕ್ಕಿ ಸತ್ತವರ ಸಂಖ್ಯೆ ಹೆಚ್ಚಾಗಿತ್ತು. 'ಕಾಡಿನ ಮಧ್ಯ ಯಾವುದೇ ಹಳ್ಳಿಯಾಗಲೀ ಜನವಸತಿಯಾಗಲೀ ಇಲ್ಲ. ಹಾಗಾಗಿ ಅರಣ್ಯ ಇಲಾಖೆ ಮತ್ತು ಸಂಶೋಧಕರನ್ನು ಹೊರತುಪಡಿಸಿದರೆ ಕಾಡಿನ ಒಳಗೆ ಓಡಾಡುವವರು ಯಾರೂ ಇಲ್ಲ. ಎದುರಿಗೆ ಬಂದವರನ್ನೆಲ್ಲ ಕೊಂದಿಲ್ಲ, ಅನುಮಾನ ಹುಟ್ಟಿಸುವ ಇಲ್ಲವೇ ಬೇಟೆಯಲ್ಲಿ ಭಾಗಿಯಾದವರ ಮೇಲಷ್ಟೇ ಗುಂಡು ಹಾರಿಸುತ್ತೇವೆ. ಅದಕ್ಕೆ ನಮಗೆ ಪರವಾನಗಿ ಇದೆ' ಎಂದು ಗಾರ್ಡ್‌ಗಳು ಬಿಬಿಸಿಗೆ ಹೇಳಿದ್ದರು.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕೊಂಬಿಗೆ ಮತ್ತು ಕೂದಲಿಗೆ ಭಾರಿ ಬೆಲೆ ಇರುವುದರಿಂದ ರೈನೊಗಳ ಹತ್ಯೆ ನಡೆಯುತ್ತಿದೆ. ಕಾಜಿರಂಗದ ಒಳಗೆ ಮತ್ತು ಸುತ್ತಮುತ್ತ ಉಗ್ರವಾದಿಗಳ ಉಪಟಳವಿದ್ದು, ಶಸ್ತ್ರಾಸ್ತ್ರ ಖರೀದಿಗೆ ಹಣ ಹೊಂದಿಸಲು ಪರದಾಡುವ ಉಗ್ರರು ಸ್ಥಳೀಯರ ಸಹಾಯದಿಂದ ರೈನೊದ ಬೇಟೆಯಾಡಿ ಅದರ ಭಾಗಗಳನ್ನೇ ಕರೆನ್ಸಿಯನ್ನಾಗಿ ಬಳಸುತ್ತಾರೆ ಎಂಬುದು ತಜ್ಞರ ಮಾತು.



ಈ ಬಾರಿಯ ರೈನೊ ದಿನಾಚರಣೆಯ ಧ್ಯೇಯವಾಕ್ಯ 'ಫೈವ್ ರೈನೊ ಸ್ಪೀಶೀಸ್ ಫಾರ್‌ಎವರ್'. ದೇಶದ ಒಟ್ಟು ರೈನೊಗಳ ಪೈಕಿ ಶೇ 95ರಷ್ಟು ಕಾಜಿರಂಗ, ಮರಿಗಾಂನ ಪೊಬಿಟೊರ ಮತ್ತು ಓರಾಂಗ್ ರಾಷ್ಟ್ರೀಯ ಉದ್ಯಾನವನಗಳಲ್ಲಿ ಇವೆ. 1966ರಲ್ಲಿ ಕೇವಲ 366ರಷ್ಟಿದ್ದ ರೈನೊಗಳ ಸಂಖ್ಯೆ ಈಗ 2,329ಕ್ಕೇರಿದೆ. ಪ್ರತೀ ಮೂರು ವರ್ಷಗಳಿಗೊಮ್ಮೆ ಗಣತಿ ನಡೆಯುತ್ತದೆ. ಬ್ರಹ್ಮಪುತ್ರಾ ನದಿಯ ಪ್ರವಾಹದಲ್ಲಿ ತಾಯಿಯಿಂದ ಬೇರ್ಪಡುವ ಮರಿ ರೈನೊಗಳನ್ನು ರಕ್ಷಿಸುವ ಕೆಲಸ ತಪ್ಪದೇ ನಡೆಯುತ್ತಿದೆ.

ಬೇಟೆಯಿಂದ ರೈನೊಗಳನ್ನು ಉಳಿಸಲು ಸ್ಥಳೀಯ ಸಮುದಾಯಗಳ ಸಹಭಾಗಿತ್ವ ಬೇಕೇ ಬೇಕು ಎನ್ನುವ ಕೊಯಮತ್ತೂರಿನ ಜೂ ಔಟ್‌ರೀಚ್ ಸಂಸ್ಥೆಯು ಹಲವು ಕ್ಷೇತ್ರ ತರಬೇತಿ ಕಾರ್ಯಕ್ರಮಗಳನ್ನು ನಿರಂತರವಾಗಿ ನಡೆಸುತ್ತಿದೆ. ಅಸ್ಸಾಂ ಸರ್ಕಾರ 2005ರಲ್ಲಿ ಇಂಡಿಯಾ ರೈನೊ ವಿಶನ್-2020 ಪ್ರಾರಂಭಿಸಿದ್ದು, ಕಠಿಣ ಸಂರಕ್ಷಣಾ ಕ್ರಮಗಳನ್ನು ಅನುಸರಿಸಿ ಘೇಂಡಾಮೃಗಗಳು ಮತ್ತು ಅವುಗಳ ಆವಾಸ ಎರಡನ್ನೂ ಉಳಿಸುವಲ್ಲಿ ಭಾಗಶಃ ಯಶಸ್ವಿಯಾಗಿದೆ. ರೈನೊಗಳ ಸಂರಕ್ಷಣೆಗೆ ಡಬ್ಲ್ಯುಡಬ್ಲ್ಯುಎಫ್ ಮತ್ತು ಟೆಕ್ಸಾಸ್ ಮೂಲದ ಇಂಟರ್‌ನ್ಯಾಷನಲ್ ರೈನೊ ಫೌಂಡೇಶನ್ ನಿರಂತರವಾಗಿ ಕೆಲಸ ಮಾಡುತ್ತಿವೆ.

ವಾಚಕರ ವಾಣಿ

ನಶಿಸುತ್ತಿದೆ ಮನುಷ್ಯ ಸಂಬಂಧ

ನಾಗರಿಕತೆಯ ನಾಗಾಲೋಟದಲ್ಲಿ ಇಂದು ಹೇಗೆ ಮಾನವೀಯತೆ ಮರೆಯಾಗಿ ಮನುಷ್ಯರ ನಡುವಿನ ಸಂಬಂಧಗಳು ಶಿಥಿಲವಾಗುತ್ತಿವೆ ಎಂಬುದನ್ನು ರಾಜಕುಮಾರ ಕುಲಕರ್ಣಿ ಅವರು ತುಂಬಾ ಚೆನ್ನಾಗಿ ವಿವರಿಸಿದ್ದಾರೆ (ಸಂಗತ, ಸೆ. 20). ಹಿಂದೆ ಮಲೆನಾಡಿನ ಹಳ್ಳಿಗಳಲ್ಲಿ ನೆಂಟರು ಬಂದರೆ ಹೆಂಗಸರು ಒಂದು ಬಿಂದಿಗೆಯಲ್ಲಿ ನೀರು ತಂದು ಅವರಿಗೆ ಕಾಲು ತೊಳೆದುಕೊಳ್ಳಲು ಜಗುಲಿಯಲ್ಲಿ ಇಟ್ಟು, ಅವರದೇ ಪರಿಭಾಷೆಯಲ್ಲಿ 'ಬಂದ್ರೇ' ಅಂತ ತುಂಬಾ ಅಕ್ಕರೆಯಿಂದ ಮಾತನಾಡಿಸಿ, ಅವರನ್ನು ಆದರದಿಂದ ಬರಮಾಡಿಕೊಳ್ಳುತ್ತಿದ್ದರು. ನೆಂಟರು ಅಂದು ಅಲ್ಲಿಯೇ ಉಳಿದು, ಮನೆ ಮಂದಿಯೆಲ್ಲಾ ಅವರೊಂದಿಗೆ ಹರಟೆ ಹೊಡೆದು ಸಂತೋಷಪಡುತ್ತಿದ್ದರು. ಆದರೆ ಈಗ ಯಾರಲ್ಲೂ ಆ ತಾಳ್ಮೆ ಉಳಿದಿಲ್ಲ. ಮನೆಗೆ ನೆಂಟರು ಬಂದರೆ ಆ ಮನೆಯವರು ಮೊಬೈಲ್ ನೋಡುತ್ತಲೋ ಟಿ.ವಿ. ನೋಡುವುದರಲ್ಲೋ ಮುಳುಗಿಹೋಗಿ 'ಇವನು ಯಾಕಾದರೂ ಬಂದನಪ್ಪಾ, ಎಷ್ಟೊತ್ತಿಗೆ ಹೋಗಿಯಾನೋ' ಎಂಬಂತೆ ಕುಳಿತಿರುತ್ತಾರೆ! ಅದನ್ನು ನೋಡಿ, ಬಂದವನು ಆದಷ್ಟು ಬೇಗ ಕಾಲಿಗೆ ಬುದ್ಧಿ ಹೇಳುತ್ತಾನೆ.

ಇನ್ನು ಮನುಷ್ಯ ಮನುಷ್ಯನ ನಡುವಿನ ಎಲ್ಲಾ ಸಂಬಂಧಸೂಚಕ ಪದಗಳನ್ನೂ ಆಂಟಿ, ಅಂಕಲ್ ಎಂಬ ಪದಗಳೇ ನುಂಗಿಹಾಕಿವೆ. ಹಾಗಾಗಿ ಮನುಷ್ಯರ ನಡುವಿನ ಸಂಬಂಧಗಳು ತುಂಬಾ ಶಿಥಿಲವಾಗುತ್ತಾ ಮನುಷ್ಯನು ರಾಕ್ಷಸನಾಗುವ ಪ್ರಕ್ರಿಯೆ ಭರದಿಂದ ಸಾಗುತ್ತಿದೆ ಎನ್ನದೇ ವಿಧಿಯಿಲ್ಲ.

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮತ್ತೂರು, ಕೊಪ್ಪ

ವೇಗತಡೆ ನಿಯಂತ್ರಕ: ವೈಜ್ಞಾನಿಕವಾಗಿ ಇರಲಿ

ರಸ್ತೆ ಅಪಘಾತಗಳನ್ನು ತಪ್ಪಿಸಲು ಸುಮಾರು ಒಂದೂವರೆ ಅಡಿ ಎತ್ತರದ ವೇಗ ನಿಯಂತ್ರಕ ರಸ್ತೆಯುಬ್ಬುಗಳನ್ನು ನಿರ್ಮಿಸಲಾಗಿರುತ್ತದೆ. ಅವೈಜ್ಞಾನಿಕವಾದ ಇಂತಹ ರಸ್ತೆಯುಬ್ಬುಗಳನ್ನು ದಾಟಲು ವಾಹನ ಚಾಲಕರು ಹರಸಾಹಸ ಪಡಬೇಕಿತ್ತು. ಹೀಗಾಗಿ, ಆರಿಂಚು ಎತ್ತರ ಹಾಗೂ ಮೂರಡಿ ಅಗಲದ ವೈಜ್ಞಾನಿಕ ರಸ್ತೆಯುಬ್ಬುಗಳನ್ನು ರಾಷ್ಟ್ರೀಯ ಹೆದ್ದಾರಿಗಳಲ್ಲಿ ನಿರ್ಮಿಸುವಂತೆ ಮನವಿ ಮಾಡಿಕೊಳ್ಳಲಾಗಿತ್ತು. ಅದೇ ಪ್ರಕಾರ ರಾಜ್ಯ ಹೆದ್ದಾರಿಗಳು, ನಗರಗಳಲ್ಲೂ ಇಂತಹುದೇ ಕ್ರಮ ಕೈಗೊಳ್ಳುವಂತೆ ರಾಜ್ಯ ಸರ್ಕಾರ ಹಾಗೂ ಮಹಾನಗರಪಾಲಿಕೆ ಅಧಿಕಾರಿಗಳಿಗೆ ಮನವಿ ಮಾಡಲಾಗಿತ್ತು. ವೈಜ್ಞಾನಿಕ ವೇಗತಡೆ ರಸ್ತೆಯುಬ್ಬು ನಿರ್ಮಿಸುವುದಾಗಿ ಕೇಂದ್ರ ಭೂಸಾರಿಗೆ ಸಚಿವರು ರಾಷ್ಟ್ರೀಯ ಹೆದ್ದಾರಿ ಅಗಲೀಕರಣದ ಸಂದರ್ಭದಲ್ಲಿ ಪ್ರಕಟಿಸಿದರು. ಮಹಾನಗರಪಾಲಿಕೆಗಳು ಕೆಲವನ್ನು ಮಾತ್ರ ಬದಲಿಸಿ ಉಳಿದವುಗಳನ್ನು ಬದಲಿಸಲಿಲ್ಲ. ರಾಜ್ಯ ಸರ್ಕಾರವು ರಾಜ್ಯ ಹೆದ್ದಾರಿಗಳ ಮೇಲಿನ ಅವೈಜ್ಞಾನಿಕ ವೇಗತಡೆಗಳನ್ನು ತೆಗೆಯಲಿಲ್ಲ.

ಈ ಕುರಿತು ವಿಧಾನಸಭೆಯಲ್ಲಿ ಈಗ ಚರ್ಚೆ ನಡೆದು, ವೈಜ್ಞಾನಿಕ ವೇಗನಿಯಂತ್ರಕ ರಸ್ತೆಯುಬ್ಬುಗಳನ್ನು ನಿರ್ಮಿಸಲು ಕ್ರಮ ಜರುಗಿಸುವುದಾಗಿ ಲೋಕೋಪಯೋಗಿ ಸಚಿವರು ತಿಳಿಸಿದ್ದಾರೆ. ಇದು ಸ್ವಾಗತಾರ್ಹ. ರಾಜ್ಯದ ಎಲ್ಲ ಹೆದ್ದಾರಿ, ಜಿಲ್ಲಾ ಮುಖ್ಯರಸ್ತೆ, ಎಲ್ಲ ನಗರಗಳ ರಸ್ತೆಗಳಲ್ಲಿ ಈಗಿರುವ ವೇಗ ನಿಯಂತ್ರಕಗಳನ್ನು ಬದಲಾವಣೆ ಮಾಡಿ, ವೈಜ್ಞಾನಿಕ ವೇಗತಡೆ ನಿಯಂತ್ರಕಗಳನ್ನು ತ್ವರಿತವಾಗಿ ನಿರ್ಮಿಸಬೇಕು. ವಾಹನ ಚಾಲಕರು, ಪ್ರಯಾಣಿಕರು ನಿರಾತಂಕವಾಗಿ ಸಂಚರಿಸಲು ಅನುಕೂಲ ಮಾಡಿಕೊಡಬೇಕು.

ಬಸವರಾಜ ಹುಡೇದಗಡ್ಡಿ, ಬೆಂಗಳೂರು

ಪಕ್ಷಗಳ ಹೇಳಿಕೆ

ಇದ್ದಾರೆ ನಮ್ಮ
ಸಂಪರ್ಕದಲ್ಲಿ ನಿಮ್ಮ
ಪಕ್ಷದವರು
ಎಂದು ಹೇಳುತ್ತಾರೆ
ಎಲ್ಲ ಪಕ್ಷದವರೂ
ವಿಪರ್ಯಾಸ,
ಯಾವ ಲೆಕ್ಕಕ್ಕೂ
ಇಲ್ಲ ಮತ ಹಾಕಿದ
ದೇವರು!

ಮಹಾಂತೇಶ ಮಾಗನೂರ
ಬೆಂಗಳೂರು

ಅಧಿಕಾರ ಕೇಂದ್ರೀಕರಣ: ವಿಮರ್ಶೆಗೆ ಸಕಾಲ

ಇದೇ 17ರಂದು 2.5 ಕೋಟಿ ಡೋಸ್ ಕೊರೊನಾ ವ್ಯಾಕ್ಸಿನ್ ನೀಡಿರುವುದು ಸ್ವಾಗತಾರ್ಹ. ಆದರೆ ವಿಡಿಯೊ ಕಾನ್ಫರೆನ್ಸ್ ಒಂದರಲ್ಲಿ ಪ್ರಧಾನಮಂತ್ರಿ 'ಅಷ್ಟು ಜನ ಚುಚ್ಚುಮದ್ದು ತೆಗೆದುಕೊಂಡರೂ ಏನೂ ತೊಂದರೆಯಾಗಲಿಲ್ಲ. ಆದರೆ ಒಂದು ಪಕ್ಷಕ್ಕೆ ರಾತ್ರಿ ಜ್ವರ ಬಂತು' ಎಂದು ವ್ಯಂಗ್ಯವಾಗಿ ಹೇಳುತ್ತಿದ್ದುದನ್ನು ಕೇಳಿದೆ. ನ.ಮೋ. 71- ಪಕ್ಷ ಆಚರಿಸುವುದರಲ್ಲಿ ತಪ್ಪಿಲ್ಲ (ಅವರು ಈಗಲೂ ಅದರ ಯಶಸ್ವಿ ಪ್ರಚಾರಕ). ಆದರೆ ಸರ್ಕಾರಗಳು ಮತ್ತು ಇಲಾಖೆಗಳು ಆ ದಿನಕ್ಕೆ ತಮ್ಮ ಕಾರ್ಯಕ್ರಮಗಳನ್ನು ಹೊಂದಿಸಿಕೊಂಡಿದ್ದು ಅಧಿಕಾರದ ದುರುಪಯೋಗ. ನೆಹರೂ ಹದಿನೇಳು ವರ್ಷ ಪ್ರಧಾನಿ ಆಗಿದ್ದರು. ಅವರ ಮಗಳು ಸುಮಾರು ಹದಿನಾರು ವರ್ಷಗಳ ಕಾಲ ಆ ಸ್ಥಾನದಲ್ಲಿ ಇದ್ದರು. ವ್ಯಕ್ತಿಪೂಜೆ ಆ ಅವಧಿಯ ನಕಾರಾತ್ಮಕ ಅಂಶ. ಮುಂದೆ ರಾಜೀವ್ ಗಾಂಧಿಯವರ ಆಡಳಿತಾವಧಿಯಲ್ಲೂ ಹಲವು ಯೋಜನೆಗಳಿಗೆ ನೆಹರೂ ಹೆಸರಿಡುವುದು ನಿಲ್ಲಲಿಲ್ಲ.

ಈಗ 'ಕಾಂಗ್ರೆಸ್‌ಗಿಂತ ಭಿನ್ನ' ಎಂದು ಹೇಳಿಕೊಂಡ ಪಕ್ಷ ಮಾಡುತ್ತಿರುವುದೇನು? ವಂಶಪಾರಂಪರ್ಯ ಇಲ್ಲ ನಿಜ, ಆದರೆ ಒಬ್ಬ ಅಧಿನಾಯಕನ ಪರಾಕು ಅವಿರತವಾಗಿ ನಡೆದಿದೆ. ಮೂರು ಮಂದಿ ಮತ್ತವರನ್ನು ಹೊಗಳುವವರ ಕೈಯಲ್ಲಿ ಶಕ್ತಿ ಕೇಂದ್ರಿತವಾಗಿದೆ. ಪಕ್ಷದಲ್ಲಿ ಹಾಗಾದರೆ ಹೆಚ್ಚು ತೊಂದರೆ ಇಲ್ಲ, ಆದರೆ ಸರ್ಕಾರದ ಮಟ್ಟದಲ್ಲಿ ಅದೇ ಪರಿ ಮುಂದುವರಿದರೆ ಪ್ರಜಾಪ್ರಭುತ್ವಕ್ಕೇ ಅಪಾಯ. ಎಪ್ಪತ್ತು ವರ್ಷ ದಾಟಿದವರನ್ನು ಅಧಿಕಾರಕ್ಕೆ ಪರಿಗಣಿಸಬಾರದು, ಅದರ ಗಡಿಯಲ್ಲಿ ಇರುವವರು ಆ ವಯಸ್ಸು ತಲುಪಿದಾಗ ನಿವೃತ್ತಿ ಮಾರ್ಗ ತೋರಿಸಬೇಕು ಎಂಬ ಧೋರಣೆಯನ್ನು ಎಲ್ಲರಿಗೂ ಅನ್ವಯಿಸುವುದಾದರೆ, ಪ್ರಧಾನಿ ತಮ್ಮ 2024ರ ನಂತರದ ಯೋಜನೆಯನ್ನು ಈಗ ಹೇಳಬಹುದಿತ್ತು. ಒಬ್ಬ ವ್ಯಕ್ತಿಗೆ ಹತ್ತಕ್ಕೂ ಹೆಚ್ಚು ವರ್ಷ ರಾಜ್ಯ ಹಾಗೂ ಹತ್ತು ವರ್ಷ ದೇಶದ ಚುಕ್ಕಾಣಿ ಹಿಡಿಯಲು ಅವಕಾಶ ಸಿಗುವುದು ಸಾಕಲ್ಲವೇ? ಪಕ್ಷ ಹಾಗೂ ಸಂಘ ಪರಿವಾರ ಈ ಬಗೆಗೆ ಯೋಚಿಸಲು ಇದು ಸಕಾಲ.

ಎಚ್.ಎಸ್.ಮಂಜುನಾಥ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.


ಕೋವಿಡ್ ಲಸಿಕೆ

ಕೆಲವು ರಾಜ್ಯಗಳಲ್ಲಿ ಹೆಚ್ಚು ಪ್ರಗತಿ

ದೇಶದ ಹಲವು ರಾಜ್ಯಗಳಲ್ಲಿ ಒಟ್ಟು ಜನಸಂಖ್ಯೆಯ ಶೇ 50ಕ್ಕಿಂತಲೂ ಹೆಚ್ಚು ಜನರಿಗೆ ಕೋವಿಡ್ ಲಸಿಕೆಯ ಮೊದಲ ಡೋಸ್ ಹಾಕಲಾಗಿದೆ. ಲಸಿಕೆಯ ಮೊದಲ ಡೋಸ್ ಪಡೆದವರ ಪ್ರಮಾಣ ಸಣ್ಣ ರಾಜ್ಯಗಳಲ್ಲಿ ಹೆಚ್ಚು. ಅಂತೆಯೇ ದೊಡ್ಡ ರಾಜ್ಯಗಳಲ್ಲಿ ಕಡಿಮೆ ಇದೆ. ತೀರಾ ದೊಡ್ಡದೂ ಅಲ್ಲದ, ಚಿಕ್ಕದೂ ಅಲ್ಲದ ರಾಜ್ಯಗಳಲ್ಲಿ ಲಸಿಕೆ ಪಡೆದವರ ಪ್ರಮಾಣ ಹೆಚ್ಚು ಇದೆ. ದೇಶದ ಎಲ್ಲಾ ರಾಜ್ಯಗಳಿಗೆ ಹೋಲಿಸಿದರೆ ಗೋವಾದಲ್ಲಿ ಹೆಚ್ಚಿನ ಪ್ರಮಾಣದ ಜನರಿಗೆ ಲಸಿಕೆ ನೀಡಲಾಗಿದೆ. ಹೆಚ್ಚು ಜನಸಂಖ್ಯೆ ಹೊಂದಿರುವ ಕೇರಳದಲ್ಲಿಯೂ ಹೆಚ್ಚಿನ ಪ್ರಮಾಣದ ಜನರಿಗೆ ಲಸಿಕೆ ಹಾಕಲಾಗಿದೆ.


* ಸೋಮವಾರ ರಾತ್ರಿ 9.30ರವರೆಗಿನ ಮಾಹಿತಿ


ಯಾವ ರಾಜ್ಯದಲ್ಲಿ ಎಷ್ಟು? (ಶೇಕಡಾವಾರು)



- ಹಲವು ರಾಜ್ಯಗಳು ಒಟ್ಟು ಜನಸಂಖ್ಯೆಯಲ್ಲಿ ಶೇ 50ರಷ್ಟು ಜನರಿಗೆ ಲಸಿಕೆಯ ಮೊದಲ ಡೋಸ್ ಹಾಕಿಸಿವೆ. ಕೆಲವು ರಾಜ್ಯಗಳಲ್ಲಿ ಈ ಪ್ರಮಾಣ ಶೇ 40-50ರ ನಡುವೆ ಇದೆ
- ಆದರೆ ಎರಡನೇ ಡೋಸ್ ಪಡೆದುಕೊಂಡವರ ಸಂಖ್ಯೆ ತೀರಾ ಕಡಿಮೆ ಇದೆ. ಹಲವು ರಾಜ್ಯಗಳಲ್ಲಿ ಶೇ 20ಕ್ಕಿಂತಲೂ ಕಡಿಮೆ ಜನರಿಗಷ್ಟೇ ಎರಡನೇ ಡೋಸ್ ನೀಡಲಾಗಿದೆ
- ಕೆಲವು ರಾಜ್ಯಗಳಲ್ಲಿ ಎರಡನೇ ಡೋಸ್ ಪಡೆದವರ ಪ್ರಮಾಣ ಶೇ 15ಕ್ಕಿಂತಲೂ ಕಡಿಮೆ ಇದೆ
- ಲಸಿಕೆ ಕಾರ್ಯಕ್ರಮ ಆರಂಭವಾಗಿ ಒಂಬತ್ತು ತಿಂಗಳು ಆಗಲಿದೆ. ಈ ಅವಧಿಯಲ್ಲಿ ಬಹುತೇಕ ರಾಜ್ಯಗಳು ಶೇ 25ಕ್ಕಿಂತಲೂ ಕಡಿಮೆ ಜನರಿಗಷ್ಟೇ ಎರಡೂ ಡೋಸ್‌ಗಳನ್ನು ನೀಡಿವೆ


ಶೇ 15ರಷ್ಟು ಜನರಿಗಷ್ಟೇ ಎರಡನೇ ಡೋಸ್





18 ವರ್ಷ ಮೇಲ್ಪಟ್ಟ 94 ಕೋಟಿ ಜನರಿಗೆ ಕೋವಿಡ್ ಲಸಿಕೆ ಹಾಕಲು ಸರ್ಕಾರ ಯೋಜನೆ ಹಾಕಿಕೊಂಡಿದೆ. 2021ರ ಡಿಸೆಂಬರ್ ಅಂತ್ಯದ ವೇಳೆಗೆ 94 ಕೋಟಿ ಜನರಿಗೆ ಎರಡೂ ಡೋಸ್ ಲಸಿಕೆ ನೀಡಲು ಸರ್ಕಾರ ಗುರಿ ನಿಗದಿ ಮಾಡಿದೆ. ಆದರೆ ಈವರೆಗೆ 81 ಕೋಟಿ ಡೋಸ್‌ಗಳನ್ನು ನೀಡಲಾಗಿದ್ದು, ಇನ್ನೂ 107 ಕೋಟಿ ಡೋಸ್ ಲಸಿಕೆ ನೀಡಬೇಕಿದೆ. ಇದೇ ವೇಗದಲ್ಲಿ ಲಸಿಕೆ ನೀಡಿದರೆ, 94 ಕೋಟಿ ಜನರಿಗೂ ಎರಡು ಡೋಸ್ ಲಸಿಕೆ ನೀಡಲು ಇನ್ನೂ 10 ತಿಂಗಳು ಬೇಕಾಗುತ್ತದೆ

ಲಸಿಕೆ ಪ್ರಮಾಣ



- 18-44 ವರ್ಷದೊಳಗಿನ ಯುವಜನರು ಕೋವಿಡ್ ಲಸಿಕೆ ಪಡೆದುಕೊಳ್ಳಲು ಉತ್ಸಾಹ ತೋರಿದ್ದಾರೆ. ಉಳಿದ ವಯೋಮಾನದವರಿಗೆ ಹೋಲಿಸಿದರೆ, ಲಸಿಕೆ ಪಡೆದವರಲ್ಲಿ ಈ ವಯೋಮಾನದವರೇ ಹೆಚ್ಚು
- 33 ಕೋಟಿ ಯುವಜನರು ಮೊದಲ ಡೋಸ್ ಪಡೆದುಕೊಂಡಿದ್ದರೆ, ಎರಡನೇ ಡೋಸ್ ಪಡೆದವರ ಪ್ರಮಾಣ ಕಾಲು ಭಾಗದಷ್ಟೂ ಇಲ್ಲ.

- 45-59 ವರ್ಷ ವಯೋಮಾನದವರು ಈವರೆಗೆ ಒಟ್ಟು 22 ಕೋಟಿ ಡೋಸ್ ಲಸಿಕೆ ಪಡೆದುಕೊಂಡಿದ್ದಾರೆ
- ಈ ಪೈಕಿ 15 ಕೋಟಿ ಮೊದಲ ಡೋಸ್ ಪಡೆದವರು. ಇದರ ಅರ್ಧದಷ್ಟು ಜನರು ಎರಡನೇ ಡೋಸ್ ಪಡೆದಿದ್ದಾರೆ

- 60ಕ್ಕಿಂತ ವರ್ಷ ಮೇಲ್ಪಟ್ಟ ಜನಸಮುದಾಯದಕ್ಕೆ 15 ಕೋಟಿ ಡೋಸ್ ಲಸಿಕೆ ನೀಡಲಾಗಿದೆ
- ಐದು ಕೋಟಿ ಜನರು ಮೊದಲ ಡೋಸ್ ಪಡೆದುಕೊಂಡಿದ್ದಾರೆ

(ಸೆ.21ರ ಮಂಗಳವಾರ ಸಂಜೆವರೆಗಿನ ಮಾಹಿತಿ)
ಆಧಾರ: ಪಿಐಬಿ, ಕೋವಿನ್, ಕೇಂದ್ರ ಆರೋಗ್ಯ ಸಚಿವಾಲಯ, ಕೋವಿಡ್19ಇಂಡಿಯಾ.ಒಆರ್‌ಜಿ

ಪುರುಷರಿಗೆ ಹೆಚ್ಚು ಡೋಸ್

ಪುರುಷರು 42.84 ಕೋಟಿ
ಮಹಿಳೆಯರು 39.18 ಕೋಟಿ

ಯಾವ ಲಸಿಕೆ



ಕೋವಿಶೀಲ್ಡ್ 72.51 ಕೋಟಿ
ಕೋವ್ಯಾಕ್ಸಿನ್ 9.43 ಕೋಟಿ

*ಸ್ಪುಟ್ನಿಕ್ ಲಸಿಕೆ ಎಷ್ಟು ಡೋಸ್ ನೀಡಲಾಗಿದೆ ಎಂಬ ಮಾಹಿತಿ ಲಭ್ಯವಿಲ್ಲ



ಲಾಕ್‌ಡೌನ್ ನಿರ್ವಹಣೆಗೆ ರೈತರ ಅತೃಪ್ತಿ: ಸಮೀಕ್ಷೆ

ಆದಾಯ ಭದ್ರತೆಗೆ ಲಾಕ್‌ಡೌನ್ ಹೊಡೆತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಳೆದ ವರ್ಷ ದೇಶದಾದ್ಯಂತ ಹೇರಿದ್ದ ಕೋವಿಡ್ ಲಾಕ್‌ಡೌನ್‌ನಿಂದಾಗಿ, ಕರ್ನಾಟಕದ ರೈತರ ಆರೋಗ್ಯಕ್ಕಿಂತ ಹೆಚ್ಚಾಗಿ ಆದಾಯ ಗಳಿಕೆ ಹಾಗೂ ಜೀವನ ಭದ್ರತೆಗೆ ಹೊಡೆತ ಬಿದ್ದಿದೆ ಎಂದು ರೈತ ಸಮೀಕ್ಷಾ ವರದಿಯೊಂದು ಹೇಳಿದೆ.

ಲಾಕ್‌ಡೌನ್ ಅವಧಿಯಲ್ಲಿ ಪ್ರಮುಖ ಕಾಯ್ದೆಗಳಿಗೆ ಸಂಬಂಧಿಸಿ ಸುಗ್ರೀವಾಜ್ಞೆ ಹೊರಡಿಸಿದ್ದಕ್ಕೆ ಬಹುತೇಕ ರೈತರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ರೈತರೊಂದಿಗೆ ಚರ್ಚೆ ನಡೆಸದೇ ಕೈಗೊಂಡ ಕ್ರಮಕ್ಕೆ ಜಾತಿ, ಪ್ರದೇಶ ಮೀರಿ ರಾಜ್ಯದ ಯುವ ರೈತರಲ್ಲಿ ಆಕ್ಷೇಪ ವ್ಯಕ್ತವಾಗಿದೆ ಎಂದು ಸಮೀಕ್ಷಾ ವರದಿ ಹೇಳಿದೆ.

ಲಾಕ್‌ಡೌನ್‌ನಿಂದ ರೈತರ ಬದುಕಿನ ಮೇಲೆ ಆದ ಪರಿಣಾಮಗಳ ಬಗ್ಗೆ ಕೃಷಿ ಆರ್ಥಿಕ ತಜ್ಞ, ಕರ್ನಾಟಕ ಕೃಷಿ ಬೆಲೆ ಆಯೋಗದ ಮಾಜಿ ಅಧ್ಯಕ್ಷ ಡಾ.ಟಿ.ಎನ್. ಪ್ರಕಾಶ್ ಕಮ್ಮರಡಿ ನೇತೃತ್ವದ ಅಧ್ಯಯನ ತಂಡವು ಕರ್ನಾಟಕದ ರೈತರ ಸ್ಥಿತಿಯ ಬಗ್ಗೆ ಸಮೀಕ್ಷೆ ನಡೆಸಿತ್ತು.

ಲಾಕ್‌ಡೌನ್ ಹೊಡೆತದಿಂದ ಶ್ರಮಿಕರು, ಬಡವರು, ರೈತರು ಹಾಗೂ ದುಡಿಯುವ ವರ್ಗದವರು ಇನ್ನೂ ಹೊರಬಂದಿಲ್ಲ. ವಿಶೇಷವಾಗಿ ರೈತ ಸಮುದಾಯದಲ್ಲಿ ಅವರ ಆರೋಗ್ಯಕ್ಕಿಂತ ಹೆಚ್ಚಾಗಿ ಅವರ ಆದಾಯ ಮತ್ತು ಜೀವನ ಭದ್ರತೆಗೆ ದೊಡ್ಡ ಹೊಡೆತ ಬಿದ್ದಿದೆ ಎಂದು ಅಧ್ಯಯನ ವರದಿ ಹೇಳಿದೆ.

ಲಾಕ್‌ಡೌನ್ ಹೊಡೆತದಿಂದ ನಲುಗಿದ ಕರ್ನಾಟಕದ ರೈತರ ಬವಣೆ ಅರಿಯಲು ಈ ತಂಡವು, 2020-21ರ ಮುಂಗಾರಿಗೆ ಮುನ್ನ ಸಮೀಕ್ಷೆ ನಡೆಸಿತ್ತು.

ರಾಜ್ಯದ 30 ಜಿಲ್ಲೆಗಳಲ್ಲಿನ 128 ತಾಲ್ಲೂಕುಗಳಿಂದ 1285 ರೈತರ ಅಭಿಪ್ರಾಯ ಸಂಗ್ರಹಿಸಲಾಗಿದೆ.

ಹಿಡುವಳಿ ಗಾತ್ರ, ನೀರಾವರಿ ಮೂಲ, ಪ್ರಾದೇಶಿಕ ಹಿನ್ನೆಲೆ, ವಯಸ್ಸು-ವಿದ್ಯಾರ್ಹತೆ ಹಾಗೂ ಜಾತಿ ಮತ್ತು ಧರ್ಮದ ಆಧಾರದಲ್ಲಿ ರೈತರನ್ನು ಸಮೀಕ್ಷೆಗೆ ಆಯ್ದುಕೊಳ್ಳಲಾಗಿದೆ. ರೈತರಿಂದ ದೂರವಾಣಿ ಮೂಲಕ ಮಾಹಿತಿ ಪಡೆಯಲಾಗಿದೆ ಎಂದು ಪ್ರಕಾಶ್ ಕಮ್ಮರಡಿ ತಿಳಿಸಿದ್ದಾರೆ.

ಕರ್ನಾಟಕದ ರೈತರ ಸಾಮಾಜಿಕ-ಆರ್ಥಿಕ ಸ್ಥಿತಿ, ಲಾಕ್‌ಡೌನ್ ಸಂದರ್ಭದಲ್ಲಿ ಸರ್ಕಾರದಿಂದ ಸಿಕ್ಕ ಬೆಂಬಲ ಮತ್ತು ಸಾಮಾಜಿಕ ಭದ್ರತೆ, ಕೋವಿಡ್ ಮತ್ತು ಲಾಕ್‌ಡೌನ್ ಬಗ್ಗೆ ರೈತರ ಗ್ರಹಿಕೆ, ಲಾಕ್‌ಡೌನ್ ಸಂದರ್ಭದಲ್ಲಿನ ಯೋಜನೆಗಳ ಬಗ್ಗೆ ರೈತರ ಪ್ರತಿಕ್ರಿಯೆ, ಕೃಷಿ ಮುಂದುವರಿಸುವ ಬಗ್ಗೆ ಸಿದ್ಧತೆ ಹಾಗೂ ಷರತ್ತುಗಳ ಬಗ್ಗೆ ಆಯ್ದ ಪ್ರಶ್ನೆಗಳಿಗೆ ರೈತರು ಉತ್ತರಿಸಿದ್ದಾರೆ.

ಕೋವಿಡ್ ಲಾಕ್‌ಡೌನ್‌ನಿಂದಾಗಿ ತಮ್ಮ ಆದಾಯ ಗಳಿಕೆಗೆ ಹೊಡೆತ ಬಿದ್ದಿದೆ ಎಂದು ಶೇ 84ರಷ್ಟು ರೈತರು ಹೇಳಿದರೆ, ಶೇ 4ರಷ್ಟು ರೈತರು ಮಾತ್ರ ತಮ್ಮ ಆರೋಗ್ಯದ ಮೇಲೆ ಪರಿಣಾಮ ಬೀರಿದೆ ಎಂದಿದ್ದಾರೆ.

ಆ ಸಂದರ್ಭದಲ್ಲಿ ಸರ್ಕಾರವು ಇತರ ದುಡಿಯುವ ವರ್ಗಕ್ಕೆ ನೀಡಿದಷ್ಟು ಗಮನವನ್ನು ತಮಗೆ ನೀಡಲಿಲ್ಲ ಎಂದು ಒಕ್ಕಲಿಗ ಸಮುದಾಯದ ಶೇ 60ರಷ್ಟು ರೈತರು ಹೇಳಿದರೆ, ಲಿಂಗಾಯತ ಹಾಗೂ ಬ್ರಾಹ್ಮಣ ಸಮುದಾಯ ರೈತರು (ಶೇ 54) ಹಾಗೂ ಮಲೆನಾಡು-ಕರಾವಳಿ ಭಾಗದ ರೈತರು (ಶೇ 57ರಷ್ಟು) ರಾಜ್ಯದಲ್ಲಿ ಕೋವಿಡ್ ಪರಿಸ್ಥಿತಿಯನ್ನು ನಿರ್ವಹಿಸಿದ ಬಗ್ಗೆ ಅತೃಪ್ತಿ ವ್ಯಕ್ತಪಡಿಸಿದ್ದಾರೆ.

ಶೇ 17ರಷ್ಟು ರೈತರು ಬೆಳೆ ಹಾನಿಗೆ ಪರಿಹಾರ ಪಡೆದಿದ್ದಾರೆ. ಮೊದಲ ಲಾಕ್‌ಡೌನ್ ಸಂದರ್ಭದಲ್ಲಿ ಶೇ 16ರಷ್ಟು ರೈತರಿಂದ ಮಾತ್ರ ಕೃಷಿ ಉತ್ಪನ್ನ ಖರೀದಿಸಲಾಗಿದೆ.

ಬೆಳೆವಿಮೆ ಸೌಲಭ್ಯ ಪಡೆದವರು ಶೇ 20ರಷ್ಟು ಇದ್ದರೆ, ಅಧ್ಯಯನಕ್ಕೆ ಆಯ್ದುಕೊಂಡ ರೈತರ ಪೈಕಿ ಶೇ 55 ರಷ್ಟು ರೈತರು ಪ್ರಧಾನಮಂತ್ರಿ-ಕಿಸಾನ್ ಯೋಜನೆಯ ಪ್ರಯೋಜನ ಪಡೆದಿದ್ದಾರೆ.

ಪ್ರದೇಶ	ಸಮೀಕ್ಷೆಗೆ ಆಯ್ದುಕೊಂಡ ರೈತರ ಪ್ರಮಾಣ
ಮಧ್ಯ ಕರ್ನಾಟಕ	ಶೇ 17.6
ಕಲ್ಯಾಣ ಕರ್ನಾಟಕ	ಶೇ 20.7
ಮಲೆನಾಡು ಮತ್ತು ಕರಾವಳಿ	ಶೇ 24.7
ಮುಂಬೈ ಕರ್ನಾಟಕ	ಶೇ 10.5
ಹಳೆ ಮೈಸೂರು	ಶೇ 26.5

ನರೇಗಾ ಅಡಿಯಲ್ಲಿ ಕೆಲಸ ಪಡೆದವರ ಸಂಖ್ಯೆ ಶೇ 23. ಇತರ ವರ್ಗದ ರೈತರಿಗೆ ಹೋಲಿಸಿದರೆ ಈ ಬಡ ರೈತರಿಗೆ ಇದರ ಸೌಲಭ್ಯ ಅಷ್ಟಾಗಿ ಸಿಕ್ಕಿಲ್ಲ.

ಸಾಮಾಜಿಕ ಭದ್ರತೆಯ ಇತರ ಯೋಜನೆಗಳಿಗಿಂತ ರೈತರಿಗೆ ಉಚಿತವಾಗಿ ಪಡಿತರ ವಿತರಿಸಿದ್ದು ನೆರವಾಗಿದೆ. ಶೇ 76ರಷ್ಟು ರೈತರು ಇದರ ಪ್ರಯೋಜನ ಪಡೆದಿದ್ದಾರೆ. ಪಿಎಂ-ಕಿಸಾನ್ ನಿಧಿ ನೆರವು ಹಾಗೂ ಪಡಿತರ ವಿತರಣೆ ಹೊರತುಪಡಿಸಿದರೆ ಉಳಿದಂತೆ ಸಾಮಾಜಿಕ ಭದ್ರತೆಗಾಗಿನ ಯಾವುದೇ ಕಾರ್ಯಕ್ರಮದ ಬಗ್ಗೆ ರೈತರು ಸಮಾಧಾನ ವ್ಯಕ್ತಪಡಿಸಿಲ್ಲ.


ಲಾಕ್‌ಡೌನ್ ಸಂದರ್ಭದಲ್ಲಿ ಹೊಸ ಕೃಷಿ ಕಾಯ್ದೆಗಳನ್ನು ರೂಪಿಸುವುದರೊಂದಿಗೆ ಎಪಿಎಂಸಿ, ಭೂಸುಧಾರಣೆ ಹಾಗೂ ವಿದ್ಯುತ್ ಕಾಯ್ದೆ ತಿದ್ದುಪಡಿಗಾಗಿ ಸುಗ್ರೀವಾಜ್ಞೆ ಹೊರಡಿಸಿದ್ದಕ್ಕೆ ಶೇ 60 ರೈತರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಸಮೀಕ್ಷೆಗೆ ಆಯ್ದುಕೊಂಡ ರೈತರ ಪೈಕಿ ಅರ್ಧದಷ್ಟು ಜನರು ಮಾತ್ರ ಕೃಷಿಯಲ್ಲಿ ಮುಂದುವರಿಯುವ ಇಚ್ಛೆ ವ್ಯಕ್ತಪಡಿಸಿದ್ದಾರೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ದೇಶದಲ್ಲಿ ಶಿಕ್ಷಕ ಸಮುದಾಯ ದೊಡ್ಡ ಸಂಖ್ಯೆಯಲ್ಲಿದೆ. ಇಂತಹ ಬೃಹತ್ ಸಮುದಾಯವನ್ನು ಗುರುತಿಸಲು ಒಂದು ಪ್ರತ್ಯೇಕ ಲಾಂಛನ ರಚಿಸಲಾಗಿದೆ. ಇದು ಶಿಕ್ಷಕ ವೃಂದದ ಪ್ರತಿಬಿಂಬದಂತಿದೆ. ಈ ಲಾಂಛನವನ್ನು ಶಿಕ್ಷಕರು ತಮ್ಮ ವಾಹನಗಳ ಮೇಲೆ ಅಂಟಿಸಿಕೊಳ್ಳಲು ಸುಪ್ರೀಂ ಕೋರ್ಟ್ ಅನುಮತಿ ನೀಡಿದೆ. ಹೀಗೊಂದು ಪೋಸ್ಟ್ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.



ಶಿಕ್ಷಕರಿಗೆ ಪ್ರತ್ಯೇಕ ಲಾಂಛನ ಬಿಡುಗಡೆಗೆ ಸುಪ್ರೀಂ ಕೋರ್ಟ್ ಒಪ್ಪಿಗೆ ನೀಡಿದೆ ಎಂಬುದು ಸುಳ್ಳು ಸುದ್ದಿ ಎಂದು ಪಿಐಬಿ ಫ್ಯಾಕ್ಟ್ ಚೆಕ್ ವೇದಿಕೆ ಖಚಿತಪಡಿಸಿದೆ. ಸುಪ್ರೀಂ ಕೋರ್ಟ್ ಇಂತಹ ಯಾವುದೇ ಆದೇಶವನ್ನು ಹೊರಡಿಸಿಲ್ಲ. ಇಂತಹ ಆಧಾರರಹಿತ ಸಂದೇಶಗಳನ್ನು ಇತರರಿಗೆ ಕಳುಹಿಸಬೇಡಿ ಎಂದು ಸೂಚಿಸಿದ್ದು, ಗೊಂದಲಕ್ಕೆ ಒಳಗಾಗದಂತೆ ಶಿಕ್ಷಕ ಸಮುದಾಯಕ್ಕೆ ತಿಳಿಸಿದೆ.

ಬೆರಗಿನ ಬೆಳಕು



ಗುರುರಾಜ ಕರಜಗಿ

ರಸ, ತರ್ಕಗಳ ಐಕ್ಯತೆ

ಹೃದಯಕೊಪ್ಪುವ ಭಾಷೆ ರಾಗಲಯ ವಿಸ್ತಾರ |
ಪದ ಚರ್ಚೆ ಮತವಿಚಾರಕೆ ತಕ್ಕ ಭಾಷೆ ||
ಹೃದಯ ಮತಿ ಸತಿಪತಿಗಳಂತಿರಲು ಯುಕ್ತವದು |
ಬದುಕು ರಸತರ್ಕೈಕ್ಯ - ಮಂಕುತಿಮ್ಮ || 463 ||

ಪದ-ಅರ್ಥ: ಹೃದಯಕೊಪ್ಪುವ = ಹೃದಯಕ್ಕೆ + ಒಪ್ಪುವ, ಮತಿ = ಅಭಿಪ್ರಾಯ, ಯುಕ್ತ = ಸರಿಯಾದದ್ದು, ಮತಿ = ಬುದ್ಧಿ, ರಸತರ್ಕೈಕ್ಯ = ರಸ + ತರ್ಕ + ಐಕ್ಯ.

ವಾಚ್ಯಾರ್ಥ: ಹೃದಯಕ್ಕೆ ಒಪ್ಪುವ ಭಾಷೆಗಳು ಸಂಗೀತ, ಕಲೆಗಳು. ಬುದ್ಧಿಗೆ ಅವಶ್ಯವಾಗಿರುವವು ತರ್ಕ ಮತ್ತು ಅದಕ್ಕೆ ಸಹಾಯಕವಾಗುವ ಭಾಷೆ. ಹೀಗೆ ಹೃದಯ ಮತ್ತು ಬುದ್ಧಿಗಳು ಹೊಂದಾಣಿಕೆಯಿರುವ ಸತಿ ಪತಿಗಳಂತಿದ್ದರೆ ಯುಕ್ತ. ಬದುಕು ರಸ ಮತ್ತು ತರ್ಕಗಳ ಏಕತೆಯಿಂದ ಸುಂದರವಾದದ್ದು.

ವಿವರಣೆ: ನಮ್ಮಲ್ಲಿ ಮೂಡುವ, ಮೂಡಿ ಮರೆಯಾಗುವ ಎಲ್ಲ ಭಾವಗಳಿಗೆ ತಾಳಬದ್ಧವಾಗಿ, ಲಯಬದ್ಧವಾಗಿ ತುಡಿಯುವ ಏಕೈಕ ಅಂಗ ಹೃದಯ. ಸಂತಸದ ಕ್ಷಣಗಳಲ್ಲಿ ತುಟಿಯ ಮೇಲೆ ನಸು ನಗು ತರಲು, ಬೇಸರವಾದಾಗ ಹಣೆಗೆ ನಿರಿಗೆ ತರಲು, ನಾಳಗಳಲ್ಲಿ ಹರಿಯುವ ರಕ್ತದ ವೇಗವನ್ನು ನಿಯಂತ್ರಿಸಲು, ಹೃದಯ ನಿರಂತರ ಮಿಡಿಯುತ್ತಲೇ ಇರುತ್ತದೆ. ಆ ಹೃದಯದೊಂದಿಗೆ ಸಂವಾದ ಮಾಡಲು ಭಾಷೆಯೊಂದು ಬೇಕು. ಆ ಭಾಷೆಯೇ ಕಲೆ. ತರ್ಕಕ್ಕೆ ಒಲಿಯದ ಹೃದಯ ಕಲೆಗೆ ಮಣಿಯುತ್ತದೆ. ಆ ಕಲೆ ಯಾವ ರೂಪದಲ್ಲೇ ಇರಬಹುದು. ಅದು ಕಾವ್ಯವಾಗಬಹುದು, ಸಂಗೀತವಾಗಬಹುದು, ನಾಟ್ಯವಾಗಬಹುದು, ಚಿತ್ರವಾಗಬಹುದು, ನಿಸರ್ಗದ ಅದ್ಭುತ ದೃಶ್ಯಗಳಾಗಬಹುದು. ಕೊನೆಗೆ ಮನುಷ್ಯರಲ್ಲಿ ಆಗಾಗ ಕಾಣುವ ಉದಾತ್ತ ನಡವಳಿಕೆಗಳಿರಬಹುದು. ಇವೆಲ್ಲಕ್ಕೂ ಹೃದಯ ಪ್ರತಿಸ್ಪಂದಿಸುತ್ತದೆ.

ಅತ್ಯಂತ ಸುಂದರವಾದ ಸಂಗೀತವನ್ನು ಕೇಳಿದಾಗ ಕಣ್ಣು ಮುಚ್ಚುತ್ತವೆ, ತಲೆ ತೊನೆಯುತ್ತದೆ, ಕಾಲು ತಾಳ ಹಾಕುತ್ತದೆ. ಅದು ಹೃದಯದ ಭಾಷೆ. ಅಂತೆಯೇ ಅತ್ಯಂತ ಮಹೋಹರವಾದ ಮೊನಾಲಿಸಾ ಚಿತ್ರವನ್ನೋ, ಬೇಲೂರಿನ ಶಿಲ್ಪಗಳನ್ನೋ, ಡಾ ಪದ್ಮಾ ಸುಬ್ರಹ್ಮಣ್ಯಂರವರ ಅಭಿನಯ ಪ್ರಧಾನ ನೃತ್ಯವನ್ನು ಕಂಡಾಗಲೋ, ಹಿಮಾಲಯದ ಶಿಖರಗಳನ್ನು ನೋಡಿದಾಗಲೋ, ಕಾವ್ಯಗಳಲ್ಲಿ, ಸಿನಿಮಾಗಳಲ್ಲಿ ತ್ಯಾಗದ, ಕರುಣೆಯ ಸನ್ನಿವೇಶಗಳನ್ನೋ ಆಸ್ವಾದಿಸಿದಾಗ ಹೃದಯ ತೃಪ್ತವಾಗುತ್ತದೆ. ಕಣ್ಣಂಚಿನಲ್ಲಿ ನೀರು ಒಸರುತ್ತದೆ. ಅದು ಹೃದಯ ಸ್ಪಂದಿಸಿದ ಹೆಗ್ಗುರುತು. ಹೃದಯ ಮನುಷ್ಯನ ಬದುಕಿನ ಒಂದು ನೆಲೆಯಾದರೆ, ಬುದ್ಧಿ ಮತ್ತೊಂದು ನೆಲೆ. ಅದೂ ಬದುಕಿಗೆ ಅವಶ್ಯಕ. ಅದರ ಭಾಷೆಯೇ ಬೇರೆ. ಅದು ತರ್ಕ. ತರ್ಕ ಯಾವಾಗಲೂ ರುಜುವಾತನ್ನು ಬೇಡುತ್ತದೆ. ಅದಕ್ಕಾಗಿ ವಾದಗಳನ್ನುಮಾಡುತ್ತದೆ. ಆ ವಾದವನ್ನು ಸಮರ್ಥವಾಗಿ ಮಂಡಿಸುವುದಕ್ಕೆ ಅಕ್ಷರದ ಭಾಷೆ ಬೇಕು. ಅದು ದೊರೆಯುವುದು ಶಾಸ್ತ್ರಗಳ ಅಭ್ಯಾಸದಿಂದ. ತರ್ಕಕ್ಕೆ ನಾಲ್ಕು ಅಂಗಗಳು. 1. ಆಲೋಚನೆ ಮಾಡುವವ, 2.ಆಲೋಚಿಸುವ ವಿಷಯ, 3.ಆಲೋಚಿಸುವ ರೀತಿ ಮತ್ತು 4. ಆಲೋಚನೆಯ ಸತ್ಯತೆ. ಈ ನಾಲ್ಕೂ ಅಂಗಗಳನ್ನು ಸಮನ್ವಯಿಸಲು ಶಾಸ್ತ್ರಾಧ್ಯಯನ ಮಾಡಬೇಕು, ಪ್ರತಿವಾದಿಗಳ ಚಿಂತನೆಗಳನ್ನು ಖಂಡಿಸಲು ಸಮರ್ಥವಾದ ಭಾಷೆ ಬೇಕು.

ಕಲೆ ಹೃದಯದ ಭಾಷೆಯಾದರೆ ಶಾಸ್ತ್ರ ಬುದ್ಧಿಯ ಭಾಷೆ. ನಮಗೆ ಎರಡೂ ಬೇಕು. ಕಗ್ಗ ಹೇಳುತ್ತದೆ, ಬುದ್ಧಿ ಹೃದಯಗಳೆರಡೂ ಅನ್ಯೋನ್ಯವಾದ ದಂಪತಿಗಳ ಹಾಗೆ ಪರಸ್ಪರ ಸಹಯೋಗ, ಸಹಕಾರಗಳಿಂದ ನಡೆಯಬೇಕು. ಸುಂದರವಾದ ಬದುಕಿಗೆ 'ರಸ' ಮತ್ತು 'ತರ್ಕ'ಗಳು ಒಂದಾಗಬೇಕು, ಐಕ್ಯವಾಗಬೇಕು. ❖

ಗುಂಡಣ್ಣ



ದಿನ ಭವಿಷ್ಯ

ಬುಧವಾರ ಸೆಪ್ಟೆಂಬರ್ 22, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ವರ್ಷ ಋತು ಭಾದ್ರಪದ ಮಾಸ ಕೃಷ್ಣಪಕ್ಷ ಮಳೆ ನಕ್ಷತ್ರ ಉತ್ತರ ಫಲ್ಗುಣಿ ದ್ವಿತೀಯಾ ಗಂ. 58-14 (ಬೆ.ಘ್ಹಾ. 5-32) ಬುಧವಾರ ನಿತ್ಯ ನಕ್ಷತ್ರ ರೇವತಿ ಗಂ. 60-00 (ದಿನಪೂರ್ತಿ) ವೃದ್ಧಿ ನಾಮ ಯೋಗ ಗಂ. 21-59 ತೈತಲ ಕರಣ ಗಂ. 27-18 ವಿಷ ಗಂ. 29-27 ಅಮೃತ ಗಂ 54-27 : ರಾಹುಕಾಲ: ಮ. ಗಂ. 12-00 ರಿಂದ 1-30 ಗುಳಿಕ ಕಾಲ ಬೆ. ಗಂ 10-30 ರಿಂದ 12-00 ಯಮಗಂಡ ಕಾಲ ಬೆ. ಗಂ 7-30 ರಿಂದ 9-00 : ಸೂರ್ಯೋದಯ: 6-12 ಸೂರ್ಯಾಸ್ತ: 6-16 ಅದೃಷ್ಟ ಸಂಖ್ಯೆ 2 5 8

ಮೇಷ: ಆತ್ಮಶೋಧನೆಯಿಂದ ತಲೆದೋರಿರುವ ಆಂತರಿಕ ಗೊಂದಲಗಳು ನಿವಾರಣೆಯಾಗುವವು. ನಿಷ್ಕಲ್ಮಷ ಭಾವನೆಯಿಂದ ಸಮಾಧಾನ. ಸ್ನೇಹಿತರಿಂದ ಪ್ರಶಂಸೆ.

ವೃಷಭ: ನಿಮ್ಮ ನಿಲುವಿನಲ್ಲಿ ಆಕಸ್ಮಿಕ ತಿರುವು ಕಂಡಬರುವುದು. ದೈಹಿಕ ಮತ್ತು ಮಾನಸಿಕ ಶ್ರಮ ಕಡಿಮೆಯಾಗಿ ನಿರಾಳ ಭಾವ. ಕಾರ್ಯನಿರ್ವಹಣೆಯಲ್ಲಿ ಯಶಸ್ಸನ್ನು ಕಾಣುವಿರಿ.

ಮಿಥುನ: ಬೇರೆಯವರ ವಿವಾದಗಳನ್ನು ಪರಿಹರಿಸುವಲ್ಲಿ ಮಧ್ಯಸ್ಥಿಕೆ ವಹಿಸಬೇಕಾದೀತು. ಅಡ್ಡಿ ಆತಂಕಗಳಿಲ್ಲದ ಜೀವನದಿಂದಾಗಿ ಉಲ್ಲಾಸ ಮೂಡುವುದು. ಸ್ನೇಹಿತರಿಂದಾಗಿ ಸಂತೋಷ.

ಕರ್ಕಾಟಕ: ಕೆಲಸ ಕಾರ್ಯಗಳಲ್ಲಿ ಉತ್ತಮ ಪ್ರಗತಿ. ನಿಕಟವರ್ತಿಗಳಿಂದ ಅನುಕೂಲಕರ ಸಹಾಯ. ಆತ್ಮಸ್ಥೈರ್ಯ ಮೂಡುವುದು. ವ್ಯಾಪಾರದಲ್ಲಿ ಹೆಚ್ಚಿನ ಲಾಭದ ನಿರೀಕ್ಷೆ.

ಸಿಂಹ: ಬಿಚ್ಚು ಮನಸ್ಸಿನ ಸ್ಪಷ್ಟ ಹೇಳಿಕೆಯಿಂದಾಗಿ ಸಹೋದ್ಯೋಗಿಗಳಿಗೆ ಇರುಸುಮುರುಸು. ಸತ್ಯ ದರ್ಶನದಿಂದ ಎಲ್ಲವೂ ನಿರಾಳ. ಸಂತೋಷದ ವಾತಾವರಣ ಮೂಡುವುದು.

ಕನ್ಯಾ: ಕುಟುಂಬದಲ್ಲಿ ಹೊಂದಾಣಿಕೆಯಿಂದ ಬೆಂಬಲ ಗಳಿಸುವಿರಿ. ವ್ಯಕ್ತಿಗಳ ಸಂಪರ್ಕದಿಂದಾಗಿ ಉತ್ತಮ ಲಾಭದ ನಿರೀಕ್ಷೆ. ಸಂಘರ್ಷದಿಂದ ದೂರ. ಗೆಳೆಯರಿಂದ ನೆಮ್ಮದಿ.

ತುಲಾ: ಗಂಡಾಂತರಕ್ಕೆ ಬಲಿಯಾಗದಂತೆ ಹಿರಿಯರಿಂದ ಸಕಾಲಿಕ ಸಲಹೆ. ವೈಮನಸ್ಯ ನಿವಾರಣೆಯಾಗಿ ದೃಢ ಸಂಕಲ್ಪ. ಆರೋಗ್ಯದಲ್ಲಿ ಪ್ರಗತಿ. ಬಂಧುಗಳ ಆಗಮನ ಸಾಧ್ಯತೆ.

ವೃಶ್ಚಿಕ: ಸಾಮಾಜಿಕ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಳ್ಳುವಿರಿ. ಅಚ್ಚರಿಯ ಸುದ್ದಿಯನ್ನು ಕೇಳುವ ಸಾಧ್ಯತೆ. ಸ್ವಪ್ರಯತ್ನದಿಂದ ಕಾರ್ಯಕ್ಷೇತ್ರಗಳಲ್ಲಿ ಉನ್ನತಿ. ಸಾಮಾಜಿಕ ಮನ್ನಣೆ ನಿಮ್ಮದಾಗಲಿದೆ.

ಧನು: ಆತ್ಮೀಯತೆಯಿಂದಾಗಿ ಶುಭ ಸಂದರ್ಭ ನಿರ್ಮಾಣ. ಹೊಣೆಗಾರಿಕೆಯ ವಿಷಯದಲ್ಲಿ ಸಮರ್ಥ ನಿರ್ವಹಣೆ. ವಿಷಯಗಳ ಸ್ಪಷ್ಟ ಅರಿವು ಉಂಟಾಗಿ ವಿಶ್ವಾಸ ಮೂಡುವುದು.

ಮಕರ: ಸ್ನೇಹಿತರೊಂದಿಗೆ ವಿಷಯಗಳ ವಿನಿಮಯದಿಂದಾಗಿ ವಾತಾವರಣ ತಿಳಿಗೊಂಡು ಮನಸ್ಸಿಗೆ ನೆಮ್ಮದಿ. ವಿಶೇಷ ಭೋಜನ ಕೂಟಗಳಲ್ಲಿ ಭಾಗವಹಿಸುವ ಸಾಧ್ಯತೆ. ಸಂಗಾತಿಯಿಂದ ಸಹಕಾರ.

ಕುಂಭ: ಭಿನ್ನಾಭಿಪ್ರಾಯದಿಂದಾಗಿ ನಿಂತುಹೋದ ಕಾರ್ಯಗಳು ಒಮ್ಮತದಿಂದ ಸಾಧಿಸಲ್ಪಡುವವು. ಮದುವೆ ಮುಂತಾದ ಮಂಗಲ ಕಾರ್ಯಗಳ ನಿಶ್ಚಯ ಸಾಧ್ಯತೆ. ಕೆಲಸ ಕಾರ್ಯಗಳಲ್ಲಿ ಹುಮ್ಮಸ್ಸು.


ಮೀನ: ಮುಕ್ತ ಭಾವನೆಯಿಂದಾಗಿ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಿರಿ. ಪ್ರಯಾಣದ ಸಾಧ್ಯತೆ ಕಂಡುಬರುವುದು. ಆಶ್ಚರ್ಯಕರ ರೀತಿಯಲ್ಲಿ ಕೆಲಸ ಕಾರ್ಯಗಳು ಕೂಡಿಬರುವವು.

ನಿಮ್ಮ ಜನ್ಮದಿನ 22-ಸೆಪ್ಟೆಂಬರ್ ಇಂದು ಅತ್ಯಂತ ಶುಭದಾಯಕವಾಗಿದ್ದು, ಯಾವಾಗಲೂ ಒಂದಿಲ್ಲೊಂದು ಕೆಲಸ ಕಾರ್ಯಗಳಲ್ಲಿ ತೊಡಗಿಕೊಂಡಿರುವಿರಿ. ಏಕಕಾಲದಲ್ಲಿ ಅನೇಕ ಕೆಲಸಗಳನ್ನು ಕಾರ್ಯನಿರ್ವಹಿಸಿ ಯಶಸ್ಸನ್ನು ಸಾಧಿಸುವ ಛಾತಿಯನ್ನು ಹೊಂದಿರುವಿರಿ. ದೂರದೃಷ್ಟಿಯನ್ನು ಹೊಂದಿದವರು.

ಪದಬಂಧ 4726 - ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಮೊದಲ ಸಲ ನೋಡಿದಕ್ಕೆ ಉಂಟಾಗುವ ಪ್ರೀತಿ (4)
3.ಅಡುಗೆಗೆ ಬೇಕಾದ ಸಾಮಗ್ರಿ (4)
5.ಹೆಂಡತಿಯನ್ನು ಕಳೆದು ಕೊಂಡವನು (3)
6.ಸರ್ಕಾರವು ರೈತರಿಗೆ ಕೊಡುವ ಸಾಲದ ಹಣ (3)
7.ಮನುಜನಿಗೆ ಕಾಣಿಸಿದ ರಾಕ್ಷಸ (3)
9.ಮನ ಕೊನೆಗಿದ್ದಾಗಿನ ಹತೋಟಿ (3)
11.ಕಲಹವಾಡುವ ಸ್ವಭಾವದವಳು (3)
12.ಆ ಪಾತ್ರವನ್ನು ಮಾಡುತ್ತಿರುವವ ಅಯೋಗ್ಯ! (3)
13.ಕೃಷ್ಣನ ಮೊಮ್ಮಗ (4)
15.ಅಂತರಂಗವಲ್ಲದ ಪ್ರಕಟನೆ! (4)

ಮೇಲಿಂದ ಕೆಳಕ್ಕೆ
1. ಚರ್ಮದ ಕೆಲಸಗಾರನಿವನು (3)
2.ತಿಕ್ಕಲ ಹಿಡಿದಿರುವ ಎಳ್ಳು (2)
4.ಈತ ಮಾತಿನಲ್ಲಿ ನಿಪುಣ (4)
5.ದುಃಖ ಈ ರೀತಿ ಬಂದಿದೆ (3)
8.ಲೋಕಕ್ಕೆಲ್ಲಾ ಪೂಜ್ಯನಾದವನು (4)
10.ಕ್ಷತ್ರಿಯನಿಗೆ ಕಾಣುತ್ತಿರುವ ತಾರೆ (3)
12.ಮನ್ಮಥನ ಇನ್ನೊಂದು ಹೆಸರು (3)
14.ನಿಯಮಕ್ಕೆ ಒಳಪಟ್ಟವ ತಿರುಗಿ ನಿಂತಿದ್ದಾನಲ್ಲಾ? (2)



4725ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ
3.ವಲಸೆ 4.ಕಮಠ 5.ಏಮಾರು
6.ಕದನ 8.ವ್ಯವಕಲನ
10.ಗುಲಾಬಿ 12.ಪಾಷಾಣ
13.ದಶಕ 15.ಹೊನಲು

ಮೇಲಿಂದ ಕೆಳಕ್ಕೆ
1.ಬಿಲ 2.ಭೀಮ
3.ವರ್ತಕ 4.ಕರು
5.ಏಕೀಕರಣ 7.ನವ್ಯ
9.ನಗು 11.ಬಿಸಿಲು
12.ಪಾಕ 14.ಶಬ್ದ
16.ನಳ್ಳಿ

ಸುಡೊಕು 5112

	4		1		3	5		7
		6	4				3	1
	3				7	4		
6	1				4			
			8	1	2	6		4
8	2						1	
		3		2		9		8
9					6		7	5
4		1		8			6	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5111 ಸುಡೊಕು

3	5	2	1	9	4	8	6	7
6	1	4	5	8	7	9	3	2
7	9	8	6	3	2	5	1	4
2	7	9	8	1	3	6	4	5
1	3	6	7	4	5	2	9	8
4	8	5	9	2	6	3	7	1
5	4	1	2	6	9	7	8	3
9	2	3	4	7	8	1	5	6
8	6	7	3	5	1	4	2	9

₹ 2 ಲಕ್ಷ ಲಂಚ ಪಡೆಯುತ್ತಿದ್ದಾಗ ಎಸಿಬಿ ದಾಳಿ

ಕೆಎಎಸ್ ಅಧಿಕಾರಿ ಸೇರಿ ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರದ ಯೋಜನೆಯೊಂದಕ್ಕೆ ಸ್ವಾಧೀನಪಡಿಸಿಕೊಂಡಿದ್ದ ಜಮೀನಿನ ಮಾಲೀಕರಿಗೆ ಪರಿಹಾರದ ಚೆಕ್ ವಿತರಿಸಲು ₹ 2 ಲಕ್ಷ ಲಂಚ ಪಡೆಯುತ್ತಿದ್ದ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ವಿಶೇಷ ಭೂಸ್ವಾಧೀನಾಧಿಕಾರಿ ಮತ್ತು ಅವರ ಕಚೇರಿಯ ವ್ಯವಸ್ಥಾಪಕನನ್ನು ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಮಂಗಳವಾರ ಬಂಧಿಸಿದೆ.

ಅರಮನೆ ರಸ್ತೆಯಲ್ಲಿರುವ ಕೆಐಎಡಿಬಿ ವಿಶೇಷ ಭೂಸ್ವಾಧೀನಾಧಿಕಾರಿ-1 ಎನ್. ತೇಜಸ್ ಕುಮಾರ್ ಮತ್ತು ಅವರ ಕಚೇರಿಯ ವ್ಯವಸ್ಥಾಪಕ ದಾಸೇಗೌಡ ಬಂಧಿತ ಅಧಿಕಾರಿಗಳು. ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನ ಮಲ್ಲಾಪುರ ಗ್ರಾಮದಲ್ಲಿ ಕೆಐಎಡಿಬಿ ಸ್ವಾಧೀನಪಡಿಸಿಕೊಂಡಿರುವ ಜಮೀನಿನ ಮಾಲೀಕರಿಂದ ಲಂಚ ಪಡೆಯುತ್ತಿದ್ದಾಗ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಎಸಿಬಿ ಅಧಿಕಾರಿಗಳು ತಿಳಿಸಿದ್ದಾರೆ.

ಲಂಚದ ಹಣ ಹಾಗೂ ಪರಿಹಾರ ವಿತರಣೆಗೆ ಸಂಬಂಧಿಸಿದ ಕಡತಗಳನ್ನು ಆರೋಪಿಗಳಿಂದ ವಶಪಡಿಸಿಕೊಳ್ಳಲಾಗಿದೆ. ಇಬ್ಬರನ್ನೂ ಎಸಿಬಿ ಅಧಿಕಾರಿಗಳು ವಿಚಾರಣೆ ನಡೆಸುತ್ತಿದ್ದು, ಪ್ರಾಥಮಿಕ ಹಂತದ ತನಿಖೆ ಪೂರ್ಣಗೊಂಡ ಬಳಿಕ ಅವರನ್ನು ನ್ಯಾಯಾಧೀಶರ ಎದುರು ಹಾಜರುಪಡಿಸಲಾಗುತ್ತದೆ ಎಂದು ಮೂಲಗಳು ತಿಳಿಸಿವೆ.

ಅಧಿಕಾರಿಯೂ ಆರೋಪಿ

‘ಸ್ವಾಧೀನಪಡಿಸಿಕೊಂಡಿರುವ ಜಮೀನಿಗೆ ಪರಿಹಾರ ನೀಡುವಂತೆ ಜಮೀನಿನ ಮಾಲೀಕರು ವಿಶೇಷ ಭೂಸ್ವಾಧೀನಾಧಿಕಾರಿ-1 ಹುದ್ದೆಯಲ್ಲಿರುವ ಕೆಎಎಸ್ ಅಧಿಕಾರಿ ತೇಜಸ್ ಕುಮಾರ್ ಅವರನ್ನು ಭೇಟಿಮಾಡಿದ್ದೆ. ಅವರು ₹ 13 ಲಕ್ಷ ಲಂಚ ನೀಡುವಂತೆ ಬೇಡಿಕೆ ಇಟ್ಟಿದ್ದರು. ₹ 10.50 ಲಕ್ಷವನ್ನು ಮೊದಲೇ ಪಡೆದುಕೊಂಡಿದ್ದರು. ಉಳಿದ ಮೊತ್ತ ನೀಡುವಂತೆ ಒತ್ತಾಯಿಸುತ್ತಿದ್ದಾರೆ’ ಎಂದು ಜಮೀನು ಮಾಲೀಕ ಎಸಿಬಿ ಬೆಂಗಳೂರು ನಗರ ಘಟಕಕ್ಕೆ ದೂರು ನೀಡಿದ್ದರು.

ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಲಾಗಿತ್ತು. ಮಂಗಳವಾರ ದೂರುದಾರರು ಕೆಐಎಡಿಬಿ ಕಚೇರಿಗೆ ಭೇಟಿನೀಡಿದಾಗ, ತೇಜಸ್ ಪರವಾಗಿ ದಾಸೇಗೌಡ ಲಂಚದ ಹಣ ಪಡೆದುಕೊಂಡರು. ತಕ್ಷಣ ದಾಳಿಮಾಡಿದ ಎಸಿಬಿ ಅಧಿಕಾರಿಗಳು ಇಬ್ಬರನ್ನೂ ಬಂಧಿಸಿದರು ಎಂದು ಎಸಿಬಿ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

‘ದಲಿತ’ ಪದ ಪ್ರಯೋಗ ಬಳಕೆ ತಡೆಗೆ ಸೂಚನೆ

ಚಂಡೀಗಡ: ಪಂಜಾಬಿನ ನೂತನ ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಅವರಿಗೆ ಸಂಬಂಧಿಸಿದ ಸುದ್ದಿಗಳಲ್ಲಿ ಮಾಧ್ಯಮಗಳು ‘ದಲಿತ’ ಪದ ಬಳಸಿರುವ ಕುರಿತು ಗಮನಿಸಿರುವ, ರಾಜ್ಯ ಪರಿಶಿಷ್ಟ ಜಾತಿ ಆಯೋಗವು ಪರಿಶಿಷ್ಟ ಸಮುದಾಯಕ್ಕೆ ಸೇರಿದ ವ್ಯಕ್ತಿಗಳಿಗೆ ಇಂಥ ಪದ ಬಳಸಬಾರದು ಎಂದು ಮಂಗಳವಾರ ಆದೇಶಿಸಿದೆ.

‘ದಲಿತ’ ಪದದ ಬಳಕೆಯನ್ನು ಸಂವಿಧಾನ ಅಥವಾ ಯಾವುದೇ ಶಾಸನದಲ್ಲಿ ಉಲ್ಲೇಖಿಸಿಲ್ಲ. ಅಲ್ಲದೆ, ಈ ಪದ ಬಳಸದಂತೆ ಈಗಾಗಲೇ ಭಾರತದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯವು ಈಗಾಗಲೇ ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಮುಖ್ಯ ಕಾರ್ಯದರ್ಶಿಗಳಿಗೆ ನಿರ್ದೇಶನ ನೀಡಿದೆ ಎಂದು ರಾಜ್ಯ ಪರಿಶಿಷ್ಟ ಜಾತಿ ಆಯೋಗದ ಅಧ್ಯಕ್ಷೆ ತೇಜಿಂದರ್ ಕೌರ್ ಅವರು ಹೇಳಿದ್ದಾರೆ.

ಈ ಸಂಬಂಧ ಮಧ್ಯಪ್ರದೇಶ ಹೈಕೋರ್ಟ್‌ನ 2018ರ ಆದೇಶವನ್ನೂ ಕೌರ್ ಉಲ್ಲೇಖಿಸಿದ್ದಾರೆ.

ಆದಾಯ ತೆರಿಗೆ ದಾಳಿ ರಾಜಕೀಯ ಪ್ರೇರಿತ? ಸಂವಾದದಲ್ಲಿ ಅಭಿಮತ

‘ವಿರೋಧಿಗಳಿಗೆ ಐ.ಟಿ. ಅಸ್ತ್ರ’

ಪ್ರಜಾವಾಣಿ ಸಂವಾದ

ಬೆಂಗಳೂರು: ಚುನಾವಣೆಗಳ ಸಂದರ್ಭದಲ್ಲಿಯೇ ಏಕೆ ಆದಾಯ ತೆರಿಗೆ ಇಲಾಖೆ ದಾಳಿ ಹೆಚ್ಚುತ್ತದೆ. ಮುಖ್ಯವಾಗಿ, ಆಡಳಿತಾರೂಢ ಬಿಜೆಪಿ ಟೀಕಾಕಾರರು, ವಿಪಕ್ಷಗಳ ಜೊತೆಗೆ ಗುರುತಿಸಿಕೊಂಡವರ ಮೇಲೆಯೇ ಏಕೆ ಮುಖ್ಯವಾಗಿ ದಾಳಿ ನಡೆಯುತ್ತದೆ?

‘ಆದಾಯ ತೆರಿಗೆ (ಐ.ಟಿ) ದಾಳಿ: ರಾಜಕೀಯ ಪ್ರೇರಿತವೇ?’ ವಿಷಯದ ಮೇಲೆ ಮಂಗಳವಾರ ‘ಪ್ರಜಾವಾಣಿ’ ಬಹುಮಾಧ್ಯಮ ವೇದಿಕೆಯಲ್ಲಿ ನಡೆದ ಸಂವಾದದಲ್ಲಿ ಕೇಳಿಬಂದ ಪ್ರಮುಖ ಪ್ರಶ್ನೆಗಳಿವು.

ಇನ್ನೊಂದೆಡೆ ‘ರಾಜಕೀಯ ಪ್ರೇರಿತ ಎಂಬುದು ಸರಿಯಲ್ಲ. ತೆರಿಗೆ ವಂಚನೆ ತಡೆಯುವುದು ಇದರ ಗುರಿ’ ಎಂಬ ಸಮರ್ಥನೆಯೂ ಕೇಳಿಬಂತು. ಸಂವಾದದಲ್ಲಿ ವ್ಯಕ್ತವಾದ ಅನಿಸಿಕೆಗಳು ಇಲ್ಲಿವೆ. ಸಂವಾದ ವೀಕ್ಷಣೆಗಾಗಿ ವೀಕ್ಷಿಸಬಹುದಾದ ಲಿಂಕ್:.....

‘ಚುನಾವಣೆ ವೇಳೆಯೇ ದಾಳಿ– ಉದ್ದೇಶವೇನು?’



ಐ.ಟಿ ದಾಳಿ ಪ್ರಕರಣಗಳು ಇಲಾಖೆಯ ಸಿಬ್ಬಂದಿಯ ದಕ್ಷತೆ ಕುರಿತೇ ಶಂಕೆ ಮೂಡಿಸುತ್ತಿದೆ. ಸದ್ಯ,ದೇಶದಲ್ಲಿ ಸರ್ವಾಧಿಕಾರದ ಮನಸ್ಥಿತಿ ಇದೆ. ಮೋದಿ ನೇತೃತ್ವದ ಸರ್ಕಾರ ಬಂದ ಬಳಿಕ ದಾಳಿಗಳು ಹೆಚ್ಚಿವೆ. ಆದರೆ, ಶಿಕ್ಷೆಯಾದ ಪ್ರಕರಣಗಳು ಕಡಿಮೆ. ಇದು, ಏನು ತೋರಿಸುತ್ತದೆ? ಚುನಾವಣೆ ಹೊರತುಪಡಿಸಿ ಬೇರೆ ಸಂದರ್ಭದಲ್ಲಿ ಏಕೆ ನಡೆಯುವುದಿಲ್ಲ?. ಡಿಎಂಕೆ, ಎನ್‌ಸಿಪಿ ಮುಖಂಡ ಅಜಿತ್ ಪವಾರ್, ತೃಣಮೂಲ ಕಾಂಗ್ರೆಸ್ ಪಕ್ಷದ ಮುಖಂಡರು, ಕಾಂಗ್ರೆಸ್ ಹೀಗೆ ಬಹುತೇಕ ಪ್ರತಿಪಕ್ಷಗಳ ಮುಖಂಡರೇ ದಾಳಿಗೆ ಗುರಿಯಾಗಿದ್ದಾರೆ. 2013–14ರ ಅವಧಿಯಲ್ಲಿ ಇಂಥ 342 ದಾಳಿ ನಡೆದಿದ್ದವು. ಆ ಬಳಿಕ ದಾಳಿ ಪ್ರಕರಣಗಳು ಗಣನೀಯವಾಗಿ ಏರಿದೆ. 2011ರಿಂದ 1569 ಪ್ರಕರಣಗಳಿಗೆ ಸಂಬಂಧಿಸಿ 1,700 ದಾಳಿ ನಡೆದಿವೆ. 11 ಪ್ರಕರಣಗಳಷ್ಟೇ ಸಾಬೀತಾಗಿವೆ. ಇದರರ್ಥ ಏನು? ಒಂದು ಐ.ಟಿ ಇಲಾಖೆ ಅದಕ್ಷವಾಗಿರಬೇಕು ಅಥವಾ ಅದರ ದುರ್ಬಳಕೆ ಆಗುತ್ತಿರಬೇಕು.

ಭವ್ಯ ನರಸಿಂಹಮೂರ್ತಿ, ಕಾಂಗ್ರೆಸ್ ವಕ್ತಾರೆ

‘ಶಂಕೆ ಬೇಡ, ಪಕ್ಷಾತೀತ ದಾಳಿ ನಡೆಯುತ್ತಿದೆ’



ತೆರಿಗೆ ವಂಚನೆ ತಡೆ, ಆದಾಯವನ್ನು ಮರೆಮಾಚುವುದು ಹೆಚ್ಚುತ್ತಿವೆ. ದೇಶದಲ್ಲಿ ಕೇವಲ ಶೇ 4.3ರಷ್ಟು ಜನರು ತೆರಿಗೆ ವ್ಯಾಪ್ತಿಯಲ್ಲಿದ್ದಾರೆ. ಉಳಿದವರಿಗೆ ತೆರಿಗೆ ಕಟ್ಟುವಷ್ಟು ಆದಾಯ ಇರುವುದಿಲ್ಲವೇ? ಇಲಾಖೆ ತನ್ನ ಮೂಲಗಳಿಂದ ಮಾಹಿತಿ ಆಧರಿಸಿ ಆಗಾಗ್ಗೆ ದಾಳಿ ನಡೆಸುತ್ತದೆ. ಬಿಜೆಪಿ ಮುಖಂಡರ ಮೇಲೂ ದಾಳಿಗಳಾಗಿವೆ. ಪಕ್ಷಾತೀತವಾಗಿ ದಾಳಿ ನಡೆಯುತ್ತಿದೆ. ಹಣದ ಚಲಾವಣೆ ಹೆಚ್ಚಿರಲಿದೆ, ಕ್ರೋಢೀಕರಣವಾಗಲಿದೆ ಎಂಬ ಕಾರಣಕ್ಕೆ ಚುನಾವಣೆ ವೇಳೆ ದಾಳಿಗಳು ನಡೆಯುತ್ತವೆ ಅಷ್ಟೆ. ತೆರಿಗೆಯನ್ನು ವಂಚಿಸುವ ಪರ್ಯಾಯ ಆರ್ಥಿಕ ವಹಿವಾಟು ತಡೆಯಲು ಇಂತಹ ದಾಳಿ ಅಗತ್ಯ. ದೇಶದಲ್ಲಿ ಕಪ್ಪುಹಣ ಎಂಬುದು ನೋಟಿನ ಸ್ವರೂಪದಲ್ಲಷ್ಟೇ ಇಲ್ಲ. ವಿದೇಶಿ ಕರೆನ್ಸಿಗಳು, ಭೂಮಿಯಲ್ಲಿ ಹೂಡಿಕೆ ಸ್ವರೂಪದಲ್ಲಿವೆ. ನೋಟು ರದ್ದತಿಯ ಉದ್ದೇಶ ನಕಲಿ ನೋಟು ಚಲಾವಣೆ ತಡೆಯುವುದೇ ಆಗಿತ್ತು ಎಂಬುದನ್ನು ಮರೆಯಬಾರದು. ರಾಷ್ಟ್ರೀಯ ಭದ್ರತೆ ಕಾರಣಕ್ಕೆ ನೋಟು ರದ್ದತಿ ಮಾಡಲಾಗಿತ್ತು ಎಂಬುದನ್ನು ಗಮನಿಸಬೇಕು.

ಸುರೇಶ್ ನೆಲಮಂಗಲ, ಬಿಜೆಪಿ ವಕ್ತಾರ

‘ರಾಜಕೀಯ ಪ್ರಭಾವ, ಉದ್ದೇಶ ಇರುವುದು ಸ್ಪಷ್ಟ’



ಐ.ಟಿ.ದಾಳಿ ಅನೇಕ ಪ್ರಕರಣಗಳು ರಾಜಕೀಯ ಉದ್ದೇಶದ್ದೇ ಆಗಿವೆ, ಸರ್ಕಾರವನ್ನು ಟೀಕಿಸುವವರೇ ದಾಳಿಗೆ ಒಳಗಾಗುತ್ತಿದ್ದಾರೆ ಎಂಬುದು ನಿಜ. ಬಿಜೆಪಿಗೆ ಭ್ರಷ್ಟಾಚಾರ ವಿರುದ್ಧ ಹೋರಾಡುವ ಬದ್ಧತೆ ಇಲ್ಲ. ಅದು ಒಂದು ಪಕ್ಷವಾಗಿ ಅಸಹಿಷ್ಣುತೆ ತೋರಿದೆ. ಪ್ರಬಲ ವಿಪಕ್ಷಗಳನ್ನು ಬಿಜೆಪಿ ಸಹಿಸಿಕೊಳ್ಳುವುದಿಲ್ಲ. ಬಹುತೇಕ ದಾಳಿಗೆ ಒಳಗಾದವರು ಅದನ್ನು ಕೋರ್ಟ್‌ನಲ್ಲಿ ಪ್ರಶ್ನಿಸುವುದಿಲ್ಲ. ಇಲ್ಲಿ ಸಮಸ್ಯೆಯ ಮೂಲವಿದೆ. ನಿಯಮದ ಪ್ರಕಾರ, ದಾಳಿ ವೇಳೆ ಬಾಧಿತ ವ್ಯಕ್ತಿ ಇರಬೇಕು. ಅಥವಾ ಆ ಭಾಗದ ಇಬ್ಬರು ಪ್ರಮುಖರ ಹಾಜರಿ ಇರಬೇಕು. ದಾಳಿ ವೇಳೆ ಮೌನವಾಗಿರುವ ಅವಕಾಶವೂ ಬಾಧಿತರಿಗೆ ಇದೆ. ಆದರೆ, ಬಳಿಕ ಈ ದಾಳಿಗೆ ಸಮರ್ಥನೆ ಇಲ್ಲ. ರಾಜಕೀಯ ದುರುದ್ದೇಶವಿದೆ ಎಂದು ನಿರೂಪಿಸಲು ಕೋರ್ಟ್‌ಗೆ ಹೋಗುತ್ತಿಲ್ಲ. ನ್ಯಾಯಾಲಯವನ್ನು ಒಳಪಡಿಸಿಕೊಳ್ಳದೇ ಈ ಹಕ್ಕಿನ ಉಲ್ಲಂಘನೆಯನ್ನು ಮಾಡಿಕೊಳ್ಳುತ್ತಿದ್ದಾರೆ ಎಂಬುದು ನನ್ನ ಅನಿಸಿಕೆ. ದಾಳಿ ಕುರಿತು ಅಧಿಕಾರಿಗಳೂ ಸಮರ್ಥನೆ ನೀಡಬೇಕಾಗಿದೆ. ಬೇನಾಮಿ ಮಾಹಿತಿ ಆಧರಿಸಿ ದಾಳಿ ನಡೆಸಬಹುದೇ? ಕಾಂಗ್ರೆಸ್ ಕೂಡ ಈ ವಿಷಯದಲ್ಲಿ ಮೌನವಹಿಸಿದೆ. ವಿರೋಧಪಕ್ಷಗಳು ಧ್ವನಿ ಎತ್ತಬೇಕು. ಸಂಸದೀಯ ಸಮಿತಿ ಮೂಲಕ ಅಧಿಕಾರಿಗಳಿಗೆ ಸಮನ್ಸ್ ನೀಡಿ ಪ್ರಶ್ನಿಸಲು ಅವಕಾಶವಿದೆ. ಅಲ್ಲಿ ದಾಳಿ ಫಲಶ್ರುತಿಯನ್ನು ಪ್ರಶ್ನಿಸಬೇಕು.

ಕೆ.ವಿ.ಧನಂಜಯ, ಹಿರಿಯ ವಕೀಲ

‘ರಾಜಕೀಯ ವಿರೋಧಿಗಳನ್ನು ಮಟ್ಟಹಾಕುವುದೇ ಗುರಿ’



ಐ.ಟಿ. ದಾಳಿಗಳ ಹಿಂದೆ ಆರ್ಥಿಕ ಪ್ರಗತಿ ಹಾಗೂ ತೆರಿಗೆ ವಂಚನೆ ತಡೆಯುವ ಉದ್ದೇಶ ಖಂಡಿತ ಇಲ್ಲ. ನೋಟು ರದ್ದತಿ ಮಾಡಿ ಜನಸಾಮಾನ್ಯರನ್ನು ಮಟ್ಟ ಹಾಕಿದರು. ಐ.ಟಿ ದಾಳಿ ಮೂಲಕ ರಾಜಕೀಯ ವಿರೋಧಿಗಳನ್ನು ಮಟ್ಟಹಾಕುತ್ತಿದ್ದಾರೆ. ಐ.ಟಿ. ದಾಳಿ ಕುರಿತು ನೋಟಿಸ್ ಕೊಡ್ತಾರೆ. ಬಳಿಕ ಅವರು ಬಿಜೆಪಿಗೆ ಸೇರಿದರೆ ಬಿಟ್ಟೇ ಬಿಡುತ್ತಾರೆ. ಎಎಪಿ ಮುಖಂಡರ ಮೇಲೆ ನಡೆದ ದಾಳಿ, ನೀಡಿರುವ ನೋಟಿಸ್ ಸಂದರ್ಭಗಳನ್ನೇ ಗಮನಿಸಿ. ಪಂಜಾಬ್‌ನಲ್ಲಿ ಎಎಪಿ ಪ್ರಬಲವಾಗುತ್ತಿದೆ ಎಂಬ ವರದಿ ಹಿಂದೆಯೇ ಪಕ್ಷದ ಮುಖಂಡರಿಗೆ ನೋಟಿಸ್, ದಾಳಿ ಹೆಚ್ಚುತ್ತದೆ. ಪಶ್ಚಿಮ ಬಂಗಾಳದಲ್ಲಿ ಮುಕುಲ್ ರಾಯ್, ಸುವೇಂದು ಅಧಿಕಾರಿ ವಿರುದ್ಧವೂ ಆರೋಪಗಳಿದ್ದವು. ನೋಟಿಸ್ ನೀಡಲಾಗಿತ್ತು. ನಂತರ ಬಿಜೆಪಿ ಸುವೇಂದು ಅವರನ್ನೇ ಸಿ.ಎಂ ಅಭ್ಯರ್ಥಿ ಎಂದು ಬಿಂಬಿಸಿತ್ತು. ಇವರ ವಿರುದ್ಧ ಏಕೆ ದಾಳಿ ನಡೆದಿಲ್ಲ. ಹಲವು ಸುಳ್ಳುಗಳನ್ನು ಹೇಳಿ ಇವರು ಅಧಿಕಾರಕ್ಕೆ ಬಂದರು. ಅವುಗಳನ್ನು ಮುಚ್ಚಿ, ಜನರ ಗಮನ ಬೇರೆಡೆ ಸೆಳೆಯಲು, ವಿರೋಧಿಗಳನ್ನು ಮಟ್ಟ ಹಾಕಲು ಈಗ ಐ.ಟಿ.ದಾಳಿ ಮಾಡಿಸಲಾಗುತ್ತಿದೆ.

ಬಿ.ಟಿ.ನಾಗಣ್ಣ, ಉಪಾಧ್ಯಕ್ಷ, ಆಮ್ ಆದ್ಮಿ ಪಕ್ಷ

ಸಂವಾದದ ಪೂರ್ಣ ವೀಕ್ಷಣೆಗೆ: https://bit.ly/3tWottM

ನೂತನ ಏರ್ ಚೀಫ್ ಮಾರ್ಷಲ್ ವಿ.ಆರ್.ಚೌಧರಿ ನೇಮಕ


ನವದೆಹಲಿ (ಪಿಟಿಐ): ಏರ್ ಮಾರ್ಷಲ್ ವಿ.ಆರ್.ಚೌಧರಿ ಅವರು ಭಾರತೀಯ ವಾಯುಪಡೆಯ ನೂತನ ಏರ್ ಚೀಫ್ ಮಾರ್ಷಲ್ ಆಗಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ. ಇವರು ಪ್ರಸ್ತುತ ವಾಯುಪಡೆಯ ವೈಸ್ ಚೀಫ್ ಆಗಿದ್ದಾರೆ. ಹಾಲಿ ಏರ್ ಚೀಫ್ ಮಾರ್ಷಲ್ ಆಗಿರುವ ಆರ್.ಕೆ.ಎಸ್. ಭದೌರಿಯ ಅವರು ಸೆ.30ರಂದು ನಿವೃತ್ತಿಯಾಗುತ್ತಿದ್ದಾರೆಎಂದುರಕ್ಷಣಾಸಚಿವಾಲಯವು ಮಂಗಳವಾರ ತಿಳಿಸಿದೆ. ವಾಯುಪಡೆಯ ಯುದ್ಧ ವಿಮಾನಗಳ ವಿಭಾಗದಲ್ಲಿ ಏರ್ ಮಾರ್ಷಲ್ ಚೌಧರಿ ಅವರು ಡಿಸೆಂಬರ್ 29, 1982ರಂದು ಸೇವೆ ಆರಂಭಿಸಿದ್ದರು. ವಾಯುಪಡೆಯ ವಿವಿಧ ಸ್ಥಾನಗಳಲ್ಲಿ ಸೇವೆ ಸಲ್ಲಿಸಿದ್ದಾರೆ.

₹21 ಸಾವಿರ ಕೋಟಿ ಮೌಲ್ಯದ ಹೆರಾಯಿನ್ ವಶ

ಒಂದನೇ ಪುಟದಿಂದ

ಇವುಗಳ ಜತೆ 2,000 ಕೆ.ಜಿಯಷ್ಟು ಟಾಲ್ಕ್ ಪೌಡರ್ ಸಹ ತರಲಾಗಿತ್ತು. ಅದನ್ನೂ ವಶಕ್ಕೆ ಪಡೆಯಲಾಗಿದೆ. ಇವೆಲ್ಲವುಗಳ ಮಹಜರಿಗೆ ಒಂದು ವಾರಕ್ಕೂ ಹೆಚ್ಚಿನ ಸಮಯ ಬೇಕಾಯಿತು. ಬಿಲ್‌ನಲ್ಲಿ ಇವುಗಳ ಮೌಲ್ಯ ₹7.50 ಕೋಟಿ ಎಂದು ನಮೂದಿಸಲಾಗಿದೆ. ಇಷ್ಟೊಂದು ಪ್ರಮಾಣದಲ್ಲಿ ಮಾದಕ ವಸ್ತು ಕಳ್ಳಸಾಗಣೆ ಮಾಡುತ್ತಿರುವುದು ಅತ್ಯಂತ ಅಪಾಯಕಾರಿ ವಿಚಾರ ಎಂದು ಅವರು ಹೇಳಿದ್ದಾರೆ.

ಚೆನ್ನೈನ ಎಂ.ಸುಧಾಕರ್ ಮತ್ತು ಆತನ ಪತ್ನಿ ವೈಶಾಲಿ ಒಡೆತನದ, ಆಶಿ ಟ್ರೇಡಿಂಗ್ ಕಂಪನಿಯ ಹೆಸರಿನಲ್ಲಿ ಈ ಕಂಟೇನರ್ ತರಲಾಗಿದೆ. ದಂಪತಿಯು ಈ ಮೊದಲು ಬೇರೆ ಬೇರೆ ವ್ಯವಹಾರ ಮಾಡಿ, ನಷ್ಟ ಅನುಭವಿಸಿದ್ದರು. ಅನಂತರ ಮಾದಕ ವಸ್ತು ಕಳ್ಳಸಾಗಣೆ ಆರಂಭಿಸಿದ್ದರು. ಅವರು ಮೊದಲ ಬಾರಿ ಜುಲೈನಲ್ಲಿ ಭಾರಿ ಪ್ರಮಾಣದಲ್ಲಿ ಮಾದಕವಸ್ತು ತರಿಸಿಕೊಂಡಿದ್ದರೂ, ಅದು ಪತ್ತೆಯಾಗಿಲ್ಲ. ಈಗ ದಂಪತಿಯನ್ನು ಬಂಧಿಸಿದ್ದು, ನ್ಯಾಯಾಲಯವು ಅವರನ್ನು ಸೆ.30ರ ವರೆಗೆ ನ್ಯಾಯಾಂಗ ಬಂಧನಕ್ಕೆ ನೀಡಿದೆ ಎಂದು ಅಧಿಕಾರಿ ಹೇಳಿದ್ದಾರೆ. ಅಫ್ಗಾನಿಸ್ತಾನದ ಕಂದಹಾರ್‌ನಲ್ಲಿರುವ ಹಸನ್ ಹುಸೇನ್ ಲಿಮಿಟೆಡ್ ಈ ಕಂಟೇನರ್‌ಗಳನ್ನು ಕಳುಹಿಸಿದೆ. ಇರಾನ್‌ನ ಬಂದಾರ್ ಅಬ್ಬಾಸ್ ಬಂದರಿನಿಂದ ಈ ಕಂಟೇನರ್‌ಗಳನ್ನು ತರಲಾಗಿದೆ. ಎಂದು ಅಧಿಕಾರಿ ಮಾಹಿತಿ ನೀಡಿದ್ದಾರೆ.





ಅಂತಿಮ ಓವರ್‌ನಲ್ಲಿ ತ್ಯಾಗಿ ಮ್ಯಾಜಿಕ್; ಪಂಜಾಬ್ ಕಿಂಗ್ಸ್‌ಗೆ ನಿರಾಸೆ

ರಾಯಲ್ಸ್‌ಗೆ ರೋಚಕ ಜಯ

ದುಬೈ (ಪಿಟಿಐ): ಅಂತಿಮ ಎಸೆತದ ವರೆಗೂ ರೋಚಕವಾಗಿದ್ದ ಪಂದ್ಯದಲ್ಲಿ ರಾಜಸ್ಥಾನ್ ರಾಯಲ್ಸ್ ಗೆಲುವಿನ ನಗೆ ಸೂಸಿತು.

ಮಂಗಳವಾರ ರಾತ್ರಿ ನಡೆದ ಪಂದ್ಯದಲ್ಲಿ ಸಂಜು ಸ್ಯಾಮ್ಸನ್ ನಾಯಕತ್ವದ ರಾಯಲ್ಸ್ ಎರಡು ರನ್‌ಗಳಿಂದ ಪಂಜಾಬ್ ಕಿಂಗ್ಸ್‌ಗೆ ಸೋಲುಣಿಸಿತು.

186 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಪಂಜಾಬ್ ತಂಡ ಕೆ.ಎಲ್. ರಾಹುಲ್ ಮತ್ತು ಮಯಂಕ್ ಅಗರವಾಲ್ ಅವರ 120 ರನ್‌ಗಳ ಮೊದಲ ವಿಕೆಟ್ ಜೊತೆಯಾಟದ ನೆರವಿನಿಂದ ಸುಲಭ ಗೆಲುವಿನತ್ತ ಹೆಜ್ಜೆ ಹಾಕಿತ್ತು. ಆದರೆ ಕೊನೆಯ ಹಂತದಲ್ಲಿ ಎರಡವಿತು.

ಮೊದಲು ಬ್ಯಾಟಿಂಗ್ ಮಾಡಿದ್ದ ರಾಜಸ್ಥಾನ್ ರಾಯಲ್ಸ್ ತಂಡಕ್ಕೆ ಯುವ ಪ್ರತಿಭೆ ಯಶಸ್ವಿ ಜೈಸ್ವಾಲ್ ಮತ್ತು ಮಹಿಪಾಲ್ ಲೊಮ್ರೊರ್ ಉತ್ತಮ ಆರಂಭ ನೀಡಿದರು. ಆದರೆ, ಅದರ ಬೃಹತ್ ಮೊತ್ತ ಪೇರಿಸುವ ಕನಸಿಗೆ ಪಂಜಾಬ್ ಕಿಂಗ್ಸ್‌ನ ಅರ್ಷದೀಪ್ ಸಿಂಗ್ ಅಡ್ಡಿಯಾದರು.

ಐದು ವಿಕೆಟ್ ಗೊಂಚಲು ಗಳಿಸಿದ ಅರ್ಷದೀಪ್ ದಾಳಿಯ ಮುಂದೆ ರಾಜಸ್ಥಾನ್ ತಂಡವು 20 ಓವರ್‌ಗಳಲ್ಲಿ 185 ರನ್ ಗಳಿಸಿತು.

ರಾಜಸ್ಥಾನ್ ತಂಡಕ್ಕೆ ಎವಿನ್ ಲೂಯಿಸ್ (36; 21ಎ) ಮತ್ತು ಯಶಸ್ವಿ ಜೈಸ್ವಾಲ್ (49 ರನ್) ಭರ್ಜರಿ ಆರಂಭ ನೀಡಿದರು.

ಇವರಿಬ್ಬರ ಬಿರುಸಿನ ಆಟದಿಂದಾಗಿ ತಂಡವು ಐದು ಓವರ್ ಗಳಲ್ಲಿಯೇ 50 ರನ್‌ಗಳ ಗಡಿ ದಾಟಿತು. ಆರನೇ ಓವರ್‌ನಲ್ಲಿ ಅರ್ಷದೀಪ್ ಎಸೆತದಲ್ಲಿ ಲೂಯಿಸ್ ಔಟಾಗುವುದರೊಂದಿಗೆ ಜೊತೆಯಾಟ ಮುರಿಯಿತು.

ಸಂಜು ಸ್ಯಾಮ್ಸನ್ ಮತ್ತೊಮ್ಮೆ ವೈಫಲ್ಯ ಅನುಭವಿಸಿದರು. ಲಿಯಾಮ್ ಲಿವಿಂಗ್‌ಸ್ಟೋನ್ (25) ಸ್ವಲ್ಪ ಹೊತ್ತು ಪ್ರತಿರೋಧವೊಡ್ಡಿದರು. ಅವರಿಗೂ ಅರ್ಷದೀಪ್ ಎಂಟನೇ ಓವರ್‌ನಲ್ಲಿ ಪೆವಿಲಿಯನ್ ಹಾದಿ ತೋರಿದರು.

ಈ ಸಂದರ್ಭದಲ್ಲಿ ಕ್ರೀಸ್‌ಗೆ ಬಂದ ಮಹಿಪಾಲ್ (43 ರನ್) ಎರಡು ಬೌಂಡರಿ ಮತ್ತು ನಾಲ್ಕು ಸಿಕ್ಸರ್ ಹೊಡೆಯುವ ಮೂಲಕ ಮಿಂಚು ಹರಿಸಿದರು. ಇತ್ತ ಅರ್ಧಶತಕದ ಸನಿಹದಲ್ಲಿದ್ದ ಯಶಸ್ವಿ ವಿಕೆಟ್ ಗಳಿಸಿದ ಹರ್‌ಪ್ರೀತ್ ಬ್ರಾರ್ ಸಂಭ್ರಮಿಸಿದರು.

ಸಿಕ್ಸರ್ ಹೊಡೆತಗಾರ ರಿಯಾನ್ ಪರಾಗ್ ಮತ್ತು ರಾಹುಲ್ ತೆವಾಟಿಯಾ ಅವರ ಆಟಕ್ಕೆ ಮೊಹಮ್ಮದ್ ಶಮಿ ಕಡಿವಾಣ ಹಾಕಿದರು. ಕ್ರಿಸ್ ಮೊರಿಸ್ ವಿಕೆಟ್ ಕೂಡ ಶಮಿ ಪಾಲಾಯಿತು. 18ನೇ ಓವರ್‌ನಲ್ಲಿ ಲೊಮ್ರೊರ್ ಅಬ್ಬರಕ್ಕೆ ತಡೆಯೊಡ್ಡಿದ ಅರ್ಷದೀಪ್, ಕೊನೆಯಲ್ಲಿ ಚೇತನ್ ಸಕಾರಿಯಾ ಮತ್ತು ಕಾರ್ತಿಕ್ ತ್ಯಾಗಿ ವಿಕೆಟ್‌ಗಳನ್ನೂ ತಮ್ಮ ಬುಟ್ಟಿಗೆ ಹಾಕಿಕೊಂಡರು. ಇದರಿಂದಾಗಿ ರಾಜಸ್ಥಾನ್ ತಂಡವು 200ಕ್ಕಿಂತ ಹೆಚ್ಚು ರನ್ ಗಳಿಸುವ ಅವಕಾಶ ಕೈತಪ್ಪಿತು.

ಸ್ಕೋರ್ ಕಾರ್ಡ್

ರಾಜಸ್ಥಾನ್ ರಾಯಲ್ಸ್
185 (20 ಓವರ್)

ಎವಿನ್ ಸಿ ಅಗರವಾಲ್ ಬಿ ಅರ್ಷದೀಪ್ 36 (21ಎ, 4x7, 6x1), ಯಶಸ್ವಿ ಸಿ ಅಗರವಾಲ್ ಬಿ ಹರಪ್ರೀತ್ 49 (36ಎ, 4x6, 6x2), ಸಂಜು ಸಿ ರಾಹುಲ್ ಬಿ ಪೊರೆಲ್ 4 (5 ಎ), ಲಿವಿಂಗ್‌ಸ್ಟನ್ ಸಿ ಅಲೆನ್ ಬಿ ಅರ್ಷದೀಪ್ 25 (17ಎ, 4x2, 6x1), ಲೊಮ್ರೊರ್ ಸಿ ಮರ್ಕರಮ್ ಬಿ ಅರ್ಷದೀಪ್ 43 (17ಎ, 4x2, 6x4), ಪರಾಗ್ ಸಿ ಮರ್ಕರಮ್ ಬಿ ಶಮಿ 4 (5ಎ), ತೆವಾಟಿಯಾ ಬಿ ಶಮಿ 2 (5ಎ), ಮೊರಿಸ್ ಸಿ ಮರ್ಕರಮ್ ಬಿ ಶಮಿ 5 (5 ಎ), ಸಕಾರಿಯ ಸಿ ಮತ್ತು ಬಿ ಅರ್ಷದೀಪ್ 7 (6ಎ, 4x1), ತ್ಯಾಗಿ ಬಿ ಅರ್ಷದೀಪ್ 1 (3ಎ), ರಹಮಾನ್ ಔಟಾಗದೆ 0 (0 ಎ)

ಇತರೆ (ಲೆಗ್ ಬೈ 4, ವೈಡ್ 5) 9

ವಿಕೆಟ್ ಪತನ: 1-54 (ಎವಿನ್ ಲೂವಿಸ್, 5.3), 2-68 (ಸಂಜು ಸ್ಯಾಮ್ಸನ್, 7.1), 3-116 (ಲಿಯಾಮ್ ಲಿವಿಂಗ್‌ಸ್ಟನ್, 11.5), 4-136 (ಯಶಸ್ವಿ ಜೈಸ್ವಾಲ್, 14.2), 5-166 (ರಿಯಾನ್ ಪರಾಗ್, 16.3), 6-169 (ಮಹಿಪಾಲ್ ಲೊಮ್ರೊರ್, 17.1), 7-175 (ರಾಹುಲ್ ತೇವಥಿಯಾ, 18.1), 8-178 (ಕ್ರಿಸ್ ಮೊರಿಸ್, 18.5), 9-185 (ಚೇತನ್ ಸಕಾರಿಯ, 19.5), 10-185 (ಕಾರ್ತಿಕ್ ತ್ಯಾಗಿ, 19.6)

ಬೌಲಿಂಗ್: ಮೊಹಮ್ಮದ್ ಶಮಿ 4-0-21-3, ಇಶಾನ್ ಪೊರೆಲ್ 4-0-39-1, ದೀಪಕ್ ಹೂಡಾ 2-0-37-0, ಅರ್ಷದೀಪ್ ಸಿಂಗ್ 4-0-32-5, ಆದಿಲ್ ರಶೀದ್ 3-0-35-0, ಹರಪ್ರೀತ್ ಬ್ರಾರ್ 3-0-17-1.

ಪಂಜಾಬ್ ಕಿಂಗ್ಸ್ 4ಕ್ಕೆ 183 (20 ಓವರ್)

ರಾಹುಲ್ ಸಿ ತ್ಯಾಗಿ ಬಿ ಸಕಾರಿಯ 49 (33 ಎ, 4x4, 6x2), ಅಗರವಾಲ್ ಸಿ ಲಿವಿಂಗ್‌ಸ್ಟನ್ ಬಿ ತೆವಾಟಿಯ 67 (43 ಎ, 4x7, 6x2), ಮರ್ಕರಮ್ ಔಟಾಗದೆ 26 (20 ಎ, 4x2, 6x1), ಪೂರನ್ ಸಿ ಸಂಜು ಬಿ ತ್ಯಾಗಿ 32 (22 ಎ, 4x1, 6x2), ದೀಪಕ್ ಸಿ ಸಂಜು ಬಿ ತ್ಯಾಗಿ 0 (2 ಎ), ಅಲೆನ್ ಔಟಾಗದೆ 0 (1 ಎ)

ಇತರೆ (ನೋಬಾಲ್ 1, ವೈಡ್ 8) 9

ವಿಕೆಟ್ ಪತನ: 1-120 (ಕೆ.ಎಲ್. ರಾಹುಲ್, 11.5), 2-126 (ಮಯಂಕ್ ಅಗರವಾಲ್, 12.6), 3-183 (ನಿಕೋಲಸ್ ಪೂರನ್, 19.3), 4-183 (ದೀಪಕ್ ಹೂಡಾ, 19.5)

ಬೌಲಿಂಗ್: ಮುಸ್ತಫಿಜುರ್ ರಹಿಮಾನ್ 4-0-30-0, ಚೇತನ್ ಸಕಾರಿಯ 3-0-31-1, ಕಾರ್ತಿಕ್ ತ್ಯಾಗಿ 4-0-29-2, ಕ್ರಿಸ್ ಮೊರಿಸ್ 4-0-47-0, ರಾಹುಲ್ ತೆವಾಟಿಯ 3-0-23-1, ಮಹಿಪಾಲ್ ಲೊಮ್ರೊರ್ 1-0-7-0, ರಿಯಾನ್ ಪರಾಗ್ 1-0-16-0

ಫಲಿತಾಂಶ: ರಾಜಸ್ಥಾನ್ ರಾಯಲ್ಸ್‌ಗೆ 2 ರನ್ ಜಯ

ಆರೆಂಜ್ ಕ್ಯಾಪ್ (ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಶಿಖರ್ ಧವನ್	ಡೆಲ್ಲಿ	380
ಕೆ.ಎಲ್.ರಾಹುಲ್	ಪಂಜಾಬ್	380
ಮಯಂಕ್	ಪಂಜಾಬ್	327

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಹರ್ಷಲ್	ಆರ್‌ಸಿಬಿ	17
ಆವೇಶ್ ಖಾನ್	ಡೆಲ್ಲಿ	14
ಕ್ರಿಸ್ ಮೊರಿಸ್	ರಾಜಸ್ತಾನ್	14



ಮಯಂಕ್ ಅಗರವಾಲ್ ಬ್ಯಾಟಿಂಗ್ ಶೈಲಿ –ಪಿಟಿಐ ಚಿತ್ರ

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ
ಚೆನ್ನೈ ಸೂಪರ್ ಕಿಂಗ್ಸ್	8	6	2	00	00	12
ಡೆಲ್ಲಿ ಕ್ಯಾಪಿಟಲ್ಸ್	8	6	2	00	00	12
ಬೆಂಗಳೂರು	8	5	3	00	00	10
ಮುಂಬೈ ಇಂಡಿಯನ್ಸ್	8	4	4	00	00	8
ರಾಜಸ್ಥಾನ್ ರಾಯಲ್ಸ್	8	4	4	00	00	8
ಕೋಲ್ಕತ್ತ ನೈಟ್‌ರೈಡರ್ಸ್	8	3	5	00	00	6
ಪಂಜಾಬ್	9	3	6	00	00	6
ಹೈದರಾಬಾದ್	7	1	6	00	00	2

* ಮಂಗಳವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ಸೋಲು ಎಚ್ಚರಿಕೆ ಗಂಟೆ: ಕೊಹ್ಲಿ

ಅಬುಧಾಬಿ(ಪಿಟಿಐ): ಸೋಮವಾರದ ಪಂದ್ಯದಲ್ಲಿ ಅನುಭವಿಸಿದ ಸೋಲು ತಮ್ಮ ತಂಡಕ್ಕೆ ಎಚ್ಚರಿಕೆಯ ಗಂಟೆಯಾಗಿದೆ. ಕೇವಲ 20 ರನ್‌ಗಳ ಅಂತರದಲ್ಲಿ ಐದು ವಿಕೆಟ್ ಕಳೆದುಕೊಂಡಿದ್ದು ಸೋಲಿಗೆ ಕಾರಣ ಎಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ನಾಯಕ ವಿರಾಟ್ ಕೊಹ್ಲಿ ಹೇಳಿದ್ದಾರೆ.

ಕೋಲ್ಕತ್ತ ನೈಟ್ ರೈಡರ್ಸ್ ಎದುರಿನ ಪಂದ್ಯದಲ್ಲಿ ವಿರಾಟ್ ಬಳಗವು 9 ವಿಕೆಟ್‌ಗಳಿಂದ ಸೋತಿತ್ತು. ಈ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ್ದ ಆರ್‌ಸಿಬಿಯು ಕೇವಲ 92 ರನ್‌ಗಳಿಗೆ ಆಲೌಟ್ ಆಗಿತ್ತು.

'ಈ ಸೋಲಿನಿಂದ ಮೇಲೆದ್ದು ಬರುವ ಬಗ್ಗೆ ನಮ್ಮ ಬಳಿ ಸ್ಪಷ್ಟ ಯೋಜನೆ ಇದೆ. ಇದನ್ನೊಂದು ಪಾಠವಾಗಿ ಸ್ವೀಕರಿಸಿ ಮುಂದಿನ ಪಂದ್ಯಗಳಲ್ಲಿ ಗೆಲುವಿನ ಸಾಧನೆ ಮಾಡುತ್ತೇವೆ'ಎಂದು ವಿರಾಟ್ ಹೇಳಿದ್ದಾರೆ.

'ನಾಯಕತ್ವ: ಸೋಲಿಗೆ ಸಂಬಂಧವಿಲ್ಲ'

ಅಬುಧಾಬಿ (ಪಿಟಿಐ): ಕೋಲ್ಕತ್ತ ನೈಟ್ ರೈಡರ್ಸ್ ಎದುರಿನ ಸೋಲಿಗೂ, ಈ ಐಪಿಎಲ್ ನಂತರ ವಿರಾಟ್ ಕೊಹ್ಲಿ ನಾಯಕತ್ವ ಬಿಡುವುದಾಗಿ ಹೇಳಿರುವುದಕ್ಕೂ ಯಾವುದೇ ಸಂಬಂಧವಿಲ್ಲ. ಅವರ ಹೇಳಿಕೆಯು ತಂಡದ ಆಟಗಾರರ ಮೇಲೆ ಪರಿಣಾಮ ಬೀರಿದೆ ಎಂಬುದು ಸರಿಯಲ್ಲ ಎಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಮುಖ್ಯ ಕೋಚ್ ಮೈಕ್ ಹೆಸನ್ ಸ್ಪಷ್ಟಪಡಿಸಿದ್ದಾರೆ.



ಮೈಕ್ ಹೆಸನ್

'ವಿರಾಟ್ ನೀಡಿರುವ ಹೇಳಿಕೆ ನೀಡುವುದಕ್ಕೂ ಮುನ್ನವೇ ತಂಡದ ಬಹುತೇಕ ಆಟಗಾರರಿಗೆ ವಿಷಯ ತಿಳಿದಿತ್ತು. ಈ ಕುರಿತು ಸಾಕಷ್ಟು ಚರ್ಚೆಗಳೂ ನಡೆದಿದ್ದವು. ಆದ್ದರಿಂದ ಅಂತಹ ಪರಿಣಾಮ ಬೀರುವ ಸಾಧ್ಯತೆ ಇಲ್ಲ. ಆದರೆ, ಪಂದ್ಯದಲ್ಲಿ ನಾವು ಸೋಲಲು ಕಾರಣ ಬ್ಯಾಟಿಂಗ್‌ನಲ್ಲಿ ಹಿಂದುಳಿದಿದ್ದು ಕಾರಣ' ಎಂದರು.

'ತಂಡದಲ್ಲಿ ಬಹಳ ಪ್ರತಿಭಾನ್ವಿತ ಆಟಗಾರರು ಇದ್ದಾರೆ. ತ್ವರಿತವಾಗಿ ಪುಟಿದೇಳುವ ಗುಣ ಅವರಲ್ಲಿದೆ. ಮುಂದಿನ ಹಂತದಲ್ಲಿ ಉತ್ತಮವಾಗಿ ಆಡಲಿದ್ದಾರೆ' ಎಂದರು.

ಅಫ್ಗಾನಿಸ್ತಾನದಲ್ಲಿ ಪ್ರಸಾರಕ್ಕೆ ನಿಷೇಧ

ನವದೆಹಲಿ (ಪಿಟಿಐ): ಅಫ್ಗಾನಿಸ್ತಾನದಲ್ಲಿ ಇಂಡಿಯನ್ ಪ್ರೀಮಿಯರ್ ಲೀಗ್ ಟಿ20 ಕ್ರಿಕೆಟ್ ಟೂರ್ನಿಯ ಪ್ರಸಾರವನ್ನು ತಾಲಿಬಾಲ್ ನಿಷೇಧಿಸಿದೆ.

ಹಲವು ವರ್ಷಗಳಿಂದ ಅಫ್ಗಾನಿಸ್ತಾನದಲ್ಲಿ ಐಪಿಎಲ್ ಅಪಾರ ಜನಪ್ರಿಯತೆ ಗಳಿಸಿದೆ. ಅಪಾರ ಸಂಖ್ಯೆಯಲ್ಲಿ ಜನರು ಟಿವಿಯಲ್ಲಿ ಪಂದ್ಯಗಳನ್ನು ವೀಕ್ಷಿಸುತ್ತಿದ್ದಾರೆ. ತಮ್ಮ ದೇಶದ ಕೆಲವು ಕ್ರಿಕೆಟಿಗರು ಐಪಿಎಲ್‌ನಲ್ಲಿ ಆಡುವುದನ್ನು ನೋಡಿ ಆನಂದಿಸಿದ್ದಾರೆ.

ಆದರೆ ಕಳೆದ ತಿಂಗಳು ದೇಶವನ್ನು ತಾಲಿಬಾನ್ ತನ್ನ ವಶಕ್ಕೆ ತೆಗೆದುಕೊಂಡ ನಂತರ ಮಹಿಳೆಯರು ಕ್ರೀಡೆಯಲ್ಲಿ ಭಾಗವಹಿಸುವುದನ್ನು ನಿರ್ಬಂಧಿಸಿತ್ತು.

'ಅಫ್ಗಾನಿಸ್ತಾನ ರಾಷ್ಟ್ರೀಯ ಟಿವಿಯು ಐಪಿಎಲ್ ಪ್ರಸಾರವನ್ನು ನಿಲ್ಲಿಸಿದೆ. ಪಂದ್ಯದ ವೇಳೆ ಪ್ರದರ್ಶಿತವಾಗಬಹುದಾದ ಇಸ್ಲಾಂ ವಿರೋಧಿ ಅಂಶಗಳು, ಹುಡುಗಿಯರು ನರ್ತಿಸುವುದು ಮತ್ತು ಮಹಿಳೆಯರು ಕ್ರೀಡಾಂಗಣದಲ್ಲಿ ಪಂದ್ಯಗಳನ್ನು ವೀಕ್ಷಿಸುವ ದೃಶ್ಯಾವಳಿಗಳು ಪ್ರಸಾರಗೊಳ್ಳುತ್ತವೆ. ಆದ್ದರಿಂದ ಪ್ರಸಾರವನ್ನು ಸ್ಥಗಿತಗೊಳಿಸಲು ಇಸ್ಲಾಮಿಕ್ ಎಮಿರೇಟ್ಸ್ ಆಫ್ ತಾಲಿಬಾನ್ ಆದೇಶ ನೀಡಿದೆ' ಎಂದು ಅಫ್ಗಾನಿಸ್ತಾನ ಕ್ರಿಕೆಟ್ ಮಂಡಳಿ (ಎಸಿಬಿ) ಮಾಧ್ಯಮ ವ್ಯವಸ್ಥಾಪಕ ಎಂ. ಇಬ್ರಾಹಿಮ್ ಮೊಮಾಂದ್ ಹೇಳಿದ್ದಾರೆ.

'ಇದೊಂದು ಹಾಸ್ಯಾಸ್ಪದ ಸಂಗತಿ. ಐಪಿಎಲ್ ಪ್ರಸಾರ ನಿಷೇಧ ಮಾಡಿರುವುದು ಸರಿಯಲ್ಲ' ಎಂದು ಅಫ್ಗಾನಿಸ್ತಾನದ ಪತ್ರಕರ್ತ ಮತ್ತು ಇಲ್ಲಿಯ ರಕ್ಷಣಾ ಇಲಾಖೆಯ ಮಾಜಿ ವಕ್ತಾರ ಫವಾದ್ ಅಮಾನ್ ಹೇಳಿದ್ದಾರೆ.

ಐಪಿಎಲ್‌ನಲ್ಲಿ ಅಫ್ಗನ್ ಆಟಗಾರರಾದ ರಶೀದ್ ಖಾನ್, ಮೊಹಮ್ಮದ್ ನಬಿ ಮತ್ತು ಮುಜೀಬ್ ಉರ್ ರೆಹಮಾನ್ ಆಡುತ್ತಿದ್ದಾರೆ.

ತಂಡಕ್ಕೆ ಮರಳಿದ ಶ್ರೇಯಸ್ ಅಯ್ಯರ್

ಸನ್‌ರೈಸರ್ಸ್‌ಗೆ ಡೆಲ್ಲಿ ಸವಾಲು

ದುಬೈ (ಪಿಟಿಐ):ಪ್ಲೇ ಆಫ್ ಪ್ರವೇಶದ್ವಾರದ ಸನಿಹದಲ್ಲಿರುವ ಡೆಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ ಶ್ರೇಯಸ್ ಅಯ್ಯರ್ ಮರಳಿ ಬಂದಿದ್ದಾರೆ. ಇದರಿಂದಾಗಿ ತಂಡದ ಬಲವು ಇಮ್ಮಡಿಸಿದೆ.

ಬುಧವಾರ ನಡೆಯಲಿರುವ ಸನ್‌ರೈಸರ್ಸ್ ಹೈದರಾಬಾದ್ ಎದುರಿನ ಪಂದ್ಯದಲ್ಲಿ ಜಯದ ವಿಶ್ವಾಸ ದ್ವಿಗುಣಗೊಂಡಿದೆ. ಟೂರ್ನಿಯ ಮೊದಲ ಹಂತದ ಸಂದರ್ಭದಲ್ಲಿ ಗಾಯಗೊಂಡಿದ್ದ ಶ್ರೇಯಸ್ ತಂಡದಲ್ಲಿರಲಿಲ್ಲ. ನಾಯಕತ್ವ ವಹಿಸಿಕೊಂಡಿದ್ದ ರಿಷಭ್ ಪಂತ್, ತಂಡವನ್ನು ಪಾಯಿಂಟ್ ಪಟ್ಟಿಯಲ್ಲಿ ಉನ್ನತ ಸ್ಥಾನ ಸಿಗುವಂತೆ ನೋಡಿಕೊಂಡಿದ್ದರು. ಇದೀಗ ತನ್ನ ಖಾತೆಯಲ್ಲಿ 12 ಅಂಕಗಳನ್ನು ಇಟ್ಟುಕೊಂಡಿರುವ ಡೆಲ್ಲಿ ತಂಡಕ್ಕೆ ಪ್ಲೇ ಆಫ್ ಹಂತ ಬಹಳ ಸನಿಹದಲ್ಲಿದೆ. ಎರಡು ಅಥವಾ ಮೂರು ಜಯ ಗಳಿಸಿದರೆ ಅರ್ಹತೆ ಗಿಟ್ಟಿಸುವುದು ಖಚಿತ. ಈಗಾಗಲೇ ಎಂಟು ಪಂದ್ಯಗಳನ್ನು ಆಡಿ ಆರರಲ್ಲಿ ಜಯಿಸಿದೆ.

ಬ್ಯಾಟಿಂಗ್‌ನಲ್ಲಿ ಶಿಖರ್ ಧವನ್, ಪೃಥ್ವಿ ಶಾ, ಅಯ್ಯರ್, ಶಿಮ್ರೊನ್ ಹೆಟ್ಮೆಯರ್ ಉತ್ತಮ ಲಯದಲ್ಲಿದ್ದಾರೆ. ಆಲ್‌ರೌಂಡರ್ ಮಾರ್ಕಸ್ ಸ್ಟೊಯಿನಿಸ್, ಅಕ್ಷರ್ ಪಟೇಲ್ ಪಂದ್ಯದ ಯಾವುದೇ ಹಂತದಲ್ಲಿಯೂ ತಮ್ಮ ತಂಡದತ್ತ ಜಯವನ್ನು ಎಳೆದು ತರಬಲ್ಲ ಸಮರ್ಥರು. ಕಗಿಸೊ ರಬಾಡ, ಉಮೇಶ್ ಯಾದವ್, ಎನ್ರಿಚ್ ನಾಕಿಯಾ ಅವರ ಸ್ವಿಂಗ್ ಅಸ್ತ್ರಗಳನ್ನು ಎದುರಿಸಲು ಹೈದರಾಬಾದ್ ವಿಶೇಷ ತಂತ್ರಗಾರಿಕೆ ರೂಪಿಸುವುದು ಅನಿವಾರ್ಯ.

ಏಕೆಂದರೆ, ಕೇನ್ ವಿಲಿಯಮ್ಸನ್ ನಾಯಕತ್ವದ ಸನ್‌ರೈಸರ್ಸ್ ತಂಡದ ಹಾದಿಸುಗಮವಾಗಿಲ್ಲ. ಆಡಿರುವ ಏಳು ಪಂದ್ಯಗಳಲ್ಲಿ ಗೆದ್ದಿರುವುದು ಒಂದರಲ್ಲಿ ಮಾತ್ರ. ಕೇವಲ ಎರಡು ಪಾಯಿಂಟ್‌ಗಳೊಂದಿಗೆ ಕೊನೆಯ ಸ್ಥಾನದಲ್ಲಿದೆ. ಹಾಗಾಗಿ ಈ ಹಂತದಲ್ಲಿ ಎಲ್ಲ ಆಡಬೇಕಿರುವ ಎಲ್ಲ ಪಂದ್ಯಗಳಲ್ಲೂ ಜಯಿಸುವುದು ಮಹತ್ವದ್ದಾಗಿದೆ.


ರಾಜಸ್ಥಾನ್ ರಾಯಲ್ಸ್ ವಿರುದ್ಧದ ಪಂದ್ಯದಲ್ಲಿ ಡೇವಿಡ್ ವಾರ್ನರ್ ಅವರನ್ನು ಆಡುವ ಹನ್ನೊಂದರಲ್ಲಿ ಆಯ್ಕೆ ಮಾಡಿರಲಿಲ್ಲ. ಈ ಪಂದ್ಯದಲ್ಲಿ ಅವರು ಕಣಕ್ಕಿಳಿಯುವರೇ ಎಂಬ ಕುತೂಹಲವೂ ಗರಿಗೆದರಿದೆ. ಅದೇ ಪಂದ್ಯದಲ್ಲಿ ಕರ್ನಾಟಕದ ಮನೀಷ್ ಪಾಂಡೆ ಇನಿಂಗ್ಸ್ ಆರಂಭಿಸಿದ್ದರು. ಭುವನೇಶ್ವರ್ ಕುಮಾರ್, ಟಿ. ನಟರಾಜನ್ ಅವರು ತಂಡಕ್ಕೆ ಮರಳಿರುವುದು ಬೌಲಿಂಗ್ ವಿಭಾಗಕ್ಕೆ ಬಲ ಬಂದಂತಾಗಿದೆ. ಅಫ್ಗನ್ ಸ್ಪಿನ್ನರ್ ರಶೀದ್ ಖಾನ್ ಸೇರಿದಂತೆ ಸನ್‌ರೈಸರ್ಸ್ ಬೌಲರ್‌ಗಳ ಮುಂದೆ ಆಸ್ಟ್ರೇಲಿಯಾದ ಮಾಜಿ ಕ್ರಿಕೆಟಿಗ ರಿಕಿ ಪಾಂಟಿಂಗ್ ಮಾರ್ಗದರ್ಶನದಲ್ಲಿ ಪಳಗಿರುವ ಡೆಲ್ಲಿ ಬ್ಯಾಟಿಂಗ್ ಪಡೆಯನ್ನು ಕಟ್ಟಿಹಾಕುವ ಸವಾಲು ಇದೆ.



ಕೇನ್ ವಿಲಿಯಮ್ಸನ್



ರಿಷಭ್ ಪಂತ್



ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಅಮೆಜಾನ್ ಪಾವತಿಸಿದ ಕಾನೂನು, ವೃತ್ತಿಪರ ಶುಲ್ಕ ₹ 8,546 ಕೋಟಿ!

ನವದೆಹಲಿ (ಪಿಟಿಐ): ಅಮೆಜಾನ್ ಕಂಪನಿಯು 2018ರಿಂದ 2020ರ ನಡುವಿನ ಅವಧಿಯಲ್ಲಿ ದೇಶದಲ್ಲಿ ಕಾನೂನು ಮತ್ತು ವೃತ್ತಿಪರ ಸೇವಾ ಶುಲ್ಕವಾಗಿ ₹ 8,546 ಕೋಟಿ ವಿನಿಯೋಗಿಸಿದೆ ಎಂದು ಮೂಲಗಳು ತಿಳಿಸಿವೆ.

ಅಮೆಜಾನ್ ಕಂಪನಿಯು 2018-19ರಲ್ಲಿ ₹ 3,420 ಕೋಟಿ ಹಾಗೂ 2019-20ರಲ್ಲಿ ₹ 5,126 ಕೋಟಿಯನ್ನು ಕಾನೂನು ಹಾಗೂ ವೃತ್ತಿಪರ ಸೇವಾ ಶುಲ್ಕದ ರೂಪದಲ್ಲಿ ಪಾವತಿ ಮಾಡಿದೆ ಎನ್ನಲಾಗಿದೆ. ಅಮೆಜಾನ್ ಕಂಪನಿಯ ಫ್ಯೂಚರ್ ಸಮೂಹದ ವಿಚಾರವಾಗಿ ಕಾನೂನು ಸಮರದಲ್ಲಿ ತೊಡಗಿಸಿಕೊಂಡಿದೆ. ಅಲ್ಲದೆ, ಭಾರತೀಯ ಸ್ಪರ್ಧಾ ಆಯೋಗದ (ಸಿಸಿಐ) ತನಿಖೆಯನ್ನು ಎದುರಿಸುತ್ತಿದೆ.

ಕಾನೂನು ಶುಲ್ಕದ ಬಗ್ಗೆ ಕಂಪನಿಯು ಷೇರುಪೇಟೆಗೆ ನೀಡಿರುವ ಮಾಹಿತಿಯನ್ನು ತಪ್ಪಾಗಿ ಅರ್ಥೈಸಲಾಗಿದೆ ಎಂದು ಕಂಪನಿಯ ವಕ್ತಾರರು ಹೇಳಿದ್ದಾರೆ. ಅಲ್ಲಿರುವುದು ಕಾನೂನು ಶುಲ್ಕದ ವಿವರ ಮಾತ್ರವೇ ಅಲ್ಲ; ಅಲ್ಲಿ ವೃತ್ತಿಪರ ಸೇವೆಗಳಾದ ಹೊರಗುತ್ತಿಗೆ, ತೆರಿಗೆ ಸಮಾಲೋಚನೆ, ಗ್ರಾಹಕ ಸಂಶೋಧನೆ, ಗ್ರಾಹಕ ಸೇವಾ ವೆಚ್ಚಗಳು ಕೂಡ ಸೇರಿವೆ ಎಂದು ವಕ್ತಾರರು ಹೇಳಿದ್ದಾರೆ.

ಪ್ರಶ್ನೋತ್ತರ



ಯು.ಪಿ.ಪುರಾಣಿಕ್
ಬ್ಯಾಂಕಿಂಗ್-ಹಣಕಾಸು ತಜ್ಞ
uppuranik@gmail.com
ಮೊ: 9448015300

ರಾಜ್ ದೇವಾಡಿಗ-ವಿವೇಕ್ ದೇವಾಡಿಗ, ಬಿಜೂರು, ಬೈಂದೂರು

- ಪ್ರಶ್ನೆ: ನಾವಿಬ್ಬರೂ ಅಣ್ಣ ತಮ್ಮಂದಿರು. ಹೈಸ್ಕೂಲ್‌ನಲ್ಲಿ ಓದುತ್ತಿದ್ದೇವೆ. ನೀವು ಪ್ರತಿ ಬುಧವಾರ ಬರೆಯುವ ಆರ್ಥಿಕ ಸಲಹೆ ಬಗ್ಗೆ ಹಾಗೂ ನಿಮ್ಮ ಬಗ್ಗೆ ನಮ್ಮ ತಂದೆ ರಾಮ ದೇವಾಡಿಗ ತಿಳಿಸುತ್ತಿರುತ್ತಾರೆ. ನಾವು ಹೆತ್ತವರು ಕೊಡುವ ಹಣ ಉಳಿಸಿ ಕೆನರಾ ಬ್ಯಾಂಕ್‌ನಲ್ಲಿ ಉಳಿತಾಯ ಖಾತೆ ತೆರೆದಿದ್ದೇವೆ. ಈಗ ಅದರಲ್ಲಿನ ಮೊತ್ತ ₹ 1,000 ಆಗಿದೆ. ವಿದ್ಯಾರ್ಥಿಗಳಿಗೂ ಹಣ ಉಳಿಸಲು ಸಲಹೆ ನೀಡಿ.

ಉತ್ತರ: ಉಳಿತಾಯದ ಬಗ್ಗೆ ನಿಮಗಿರುವ ಆಸಕ್ತಿ ನೋಡಿ ಸಂತೋಷ ಆಯಿತು. ದುಡ್ಡಿನ ಹಾಗೂ ದುಡಿಮೆಯ ಬೆಲೆ ತಿಳಿಯಬೇಕಾದರೆ ಹಣ ಉಳಿಸುವ ಅಭ್ಯಾಸವನ್ನು ಹೆತ್ತವರು ಮಕ್ಕಳಿಗೆ ಆರಂಭದಿಂದಲೇ ತಿಳಿಸಿ ಹೇಳಬೇಕು. ಹಣ ಉಳಿಸುವುದು ಒಂದು ಕಲೆ. ಪ್ರತಿ ವಿದ್ಯಾರ್ಥಿಯೂ ಮನೆಗೆ ಸಮೀಪದ ಬ್ಯಾಂಕ್‌ನಲ್ಲಿ ಉಳಿತಾಯ ಖಾತೆ ತೆರೆದು, ತನಗೆ ಖರ್ಚಿಗೆ ಕೊಟ್ಟ ಹಣದಲ್ಲಿ ಎಷ್ಟಾದರಷ್ಟನ್ನು ಉಳಿತಾಯ ಮಾಡುವ ಅಭ್ಯಾಸ ಬೆಳೆಸಿಕೊಳ್ಳಬೇಕು. ಹನಿ ಹನಿ ಕೂಡಿ ಹಳ್ಳ, ತೆನೆ ತೆನೆ ಕೂಡಿ ಬಳ್ಳ ಎನ್ನುವ ಗಾದೆ ಮಾತು ಇಲ್ಲಿ ಸ್ಮರಿಸಬಹುದು. ಮಕ್ಕಳು ಬೆಳೆದ ನಂತರ ಸ್ವಾಭಿಮಾನ ಹಾಗೂ ಸ್ವಾವಲಂಬನೆಯಿಂದ ಸುಖವಾಗಿ ಜೀವಿಸಲು ಉಳಿತಾಯ ಪ್ರವೃತ್ತಿಯು ನೆರವಿಗೆ ಬರುತ್ತದೆ.

ರಾಮಚಂದ್ರ ಭಂಡಾರಿ, ಊರುಬೇಡ

- ಪ್ರಶ್ನೆ: ನನ್ನ ವಯಸ್ಸು 52 ವರ್ಷ. ಒಂದು ಕಿರಾಣಿ ಅಂಗಡಿ ಇಟ್ಟುಕೊಂಡಿದ್ದೇನೆ. ಅಂಗಡಿಯಲ್ಲಿ ನಾನು, ನನ್ನ ಪತ್ನಿ ಇಬ್ಬರೂ ದುಡಿಯುತ್ತೇವೆ. ಮಕ್ಕಳು ಓದುತ್ತಿದ್ದಾರೆ. ನನ್ನ ತಿಂಗಳ ಆದಾಯ ₹ 25 ಸಾವಿರ. ಪ್ರಯತ್ನಪಟ್ಟರೆ ₹ 10,000 ಉಳಿಸಬಹುದು. ಆದರೆ ಏನು ಮಾಡಿದರೂ ಹಣ ಉಳಿಸಲು ಆಗುತ್ತಿಲ್ಲ. ನಮ್ಮ ಆದಾಯಕ್ಕೆ ತೆರಿಗೆ ಇದೆಯೇ? ನಮ್ಮ ಕುಟುಂಬಕ್ಕೆ ಉತ್ತಮ ಉಳಿತಾಯ ಯೋಜನೆ ತಿಳಿಸಿರಿ.

ಉತ್ತರ: ಹಣ ಗಳಿಸುವುದರಂತೆಯೇ ಉಳಿಸುವುದು ಕೂಡ ಒಂದು ಕಲೆ. ಉಳಿತಾಯ ಮಾಡಲು ದೃಢ ಸಂಕಲ್ಪ ಹಾಗೂ ತ್ವರಿತ ತೀರ್ಮಾನದ ಅಗತ್ಯ ಇದೆ. ನೀವು ಪ್ರತಿ ದಿನದ ವ್ಯಾಪಾರದಿಂದ ಬರುವ ಹಣವನ್ನು ಮಾರನೇ ದಿನವೇ ಬ್ಯಾಂಕ್‌ನಲ್ಲಿ ಜಮಾ ಮಾಡುವ ಅಭ್ಯಾಸ ಇಟ್ಟುಕೊಳ್ಳಿ. ತಿಂಗಳ ಅಂತ್ಯಕ್ಕೆ ಹಣ ಕೊಡಬೇಕಾದವರಿಗೆ ಕೊಟ್ಟು, ನಿಮ್ಮ ಖರ್ಚು ಕಳೆದು, ನೀವು ಪ್ರಶ್ನೆಯಲ್ಲಿ ತಿಳಿಸಿದಂತೆ ಉಳಿಸಬಹುದಾದ ₹ 10,000 ಹಣವನ್ನು ಐದು ವರ್ಷಗಳ ಅವಧಿಯ ಆರ್.ಡಿ. ಮಾಡಿ. ಐದು ವರ್ಷಗಳ ನಂತರ ಶೇಕಡ 5ರ ಬಡ್ಡಿದರದಲ್ಲಿ ₹ 6,82,460 ಪಡೆಯುವಿರಿ. ತೆರಿಗೆ ಉಳಿಸಲು ನಿಯಮಗಳ ಅನುಸಾರ ಹಲವು ದಾರಿಗಳಿವೆ. ತೆರಿಗೆ ಭಯದಿಂದ ಉಳಿತಾಯ ಮಾಡದಿರುವುದು ಜಾಣತನವಲ್ಲ. ನಿಮಗೆ ಉಳಿತಾಯ ಹಾಗೂ ತೆರಿಗೆ ವಿಚಾರದಲ್ಲಿ ಏನಾದರೂ ಸಂಶಯ ಬಂದಲ್ಲಿ ನನಗೆ ಕರೆ ಮಾಡಿ.

ಹರಿಪ್ರಸಾದ್, ಕೋಣನಕುಂಟೆ, ಬೆಂಗಳೂರು


- ಪ್ರಶ್ನೆ: ನಾನು ಕುಂದಾಪುರದವನು. 10 ವರ್ಷಗಳ ಹಿಂದೆ ಬೆಂಗಳೂರಿಗೆ ಬಂದು ಬೇಕರಿ ಪ್ರಾರಂಭಿಸಿದೆ. ನನ್ನ ವಯಸ್ಸು 46 ವರ್ಷ. ನನ್ನ ಹೆಂಡತಿ ನನಗೆ ವ್ಯವಹಾರದಲ್ಲಿ ಸಹಾಯ ಮಾಡುತ್ತಾಳೆ. ನಮಗೆ 18 ವರ್ಷ ವಯಸ್ಸಿನ ಮಗಳಿದ್ದಾಳೆ. ಬಹಳ ವರ್ಷಗಳಿಂದ ನಿಮ್ಮ ಅಂಕಣ ಓದುತ್ತಿದ್ದೇನೆ. ನಿಮ್ಮ ಸಲಹೆಯಂತೆ ಕಳೆದ 10 ವರ್ಷಗಳಿಂದ ಒಂದು ವರ್ಷದ ಆರ್.ಡಿ. ಮಾಡುತ್ತಾ ಮಗಳಿಗೆ ಬಂಗಾರದ ನಾಣ್ಯ ಪ್ರತಿ ವರ್ಷ ಕೊಂಡುಕೊಂಡಿದ್ದೇನೆ ಹಾಗೂ ಕಳೆದ ಐದು ವರ್ಷಗಳಿಂದ ₹10,000 ಆರ್.ಡಿ ಮಾಡಿ ಈ ಹಣದಿಂದ ಒಂದು ಮನೆ ಭೋಗ್ಯಕ್ಕೆ ಹಾಕಿಸಿಕೊಂಡಿದ್ದೇವೆ. ಇದರಿಂದಾಗಿ ಪ್ರತಿ ತಿಂಗಳೂ ಬಾಡಿಗೆ ಕಟ್ಟುವ ರಗಳೆ ಪರಿಹಾರ ಆಗಿದೆ. ನಮ್ಮ ಭವಿಷ್ಯಕ್ಕೆ ದಾರಿ ತೋರಿಸಿ.

ಉತ್ತರ: ನಿಮ್ಮ ಅಭಿಮಾನಕ್ಕೆ ಧನ್ಯವಾದ. ಬಂಗಾರದ ನಾಣ್ಯ ಕೊಳ್ಳುವುದನ್ನು ಮಗಳ ಮದುವೆ ತನಕವಾದರೂ ಮುಂದುವರಿಸಿ. ನಿಮಗೆ ಮನೆ ಬಾಡಿಗೆ ಇಲ್ಲದೇ ಇರುವುದರಿಂದ ₹ 15,000 ಆರ್.ಡಿ. ಐದು ವರ್ಷಗಳ ಅವಧಿಗೆ ಮಾಡಿ. ಶೇಕಡ 5ರ ಬಡ್ಡಿದರದಲ್ಲಿ ಈ ಆರ್.ಡಿ.ಯಿಂದ ₹ 10,23,690 ಪಡೆಯುವಿರಿ. ಈ ಹಣ ಬಳಸಿ ಹಾಗೂ ತುಸು ಸಾಲಮಾಡಿ ನಿವೇಶನ ಕೊಳ್ಳಿರಿ. ಕಾಲಕ್ರಮೇಣ ಮನೆ ಕಟ್ಟಿಸಿಕೊಳ್ಳಿ. ಹಣ ಉಳಿಸಲು ಸ್ವಲ್ಪ ಮಟ್ಟಿನ ತ್ಯಾಗದ ಮನೋಭಾವ ಬೇಕು. ನೀವು ಅನುಸರಿಸಿದ ಮಾರ್ಗವು ಉಳಿದವರೂ ಅನುಸರಿಸುವಂತಿದೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ. ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,397
ಇಂದಿನ ಅಂತ್ಯ	17,562
▲	165
ದಿನದ ಗರಿಷ್ಠ	17,578

ವಿನಿಮಯ ದರ

$ ಡಾಲರ್	73.61
£ ಪೌಂಡ್	100.78
€ ಯುರೊ	86.41
¥ ಯೆನ್ (100ಕ್ಕೆ)	67

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹465
12 ಮೊಟ್ಟೆಗೆ	₹62
ಮೈಸೂರು	
100 ಮೊಟ್ಟೆಗೆ	₹465

ಮುಂಬೈ ಧಾರಣೆ

ಶೇಂಗಾ 21-9-2021

ಜಾವಾ 70/80(ಹೊಸ)	11000-11050
ಜಾವಾ 80/90(ಹೊಸ)	10400-10450
ದಪ್ಪ ಮಧ್ಯಪ್ರದೇಶ(ಹೊಸ)	10800-10900
ದಪ್ಪ ಗುಜರಾತ್(ಹೊಸ)	9600-9700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1595 (1600)
ಒಂದು ವಾರದ ಡೆಲಿವರಿ	1590 (1595)
ಸೋಯಾ ಕಚ್ಚಾ	1285 (1292
ಪಾಮ್ ವಾರದ ಡೆಲಿವರಿ	1195 (1198)
ಸೂರ್ಯಕಾಂತಿ ಎಣ್ಣೆ ಕಚ್ಚಾ	1310 (1320)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ 46,550 (46,100)
ಬೆಳ್ಳಿ ಕೆ.ಜಿ 60,150 (59,750)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದ ನವೀಕರಿಸಬಲ್ಲ ಇಂಧನ ಕ್ಷೇತ್ರ

₹ 1.48 ಲಕ್ಷ ಕೋಟಿ ಹೂಡಿಕೆ ಮಾಡಲಿದೆ ಅದಾನಿ ಸಮೂಹ

ನವದೆಹಲಿ (ಪಿಟಿಐ): ಅದಾನಿ ಸಮೂಹವು ನವೀಕರಿಸಬಲ್ಲ ಇಂಧನ ಕ್ಷೇತ್ರದಲ್ಲಿ ಮುಂದಿನ 10 ವರ್ಷಗಳಲ್ಲಿ ₹ 1.48 ಲಕ್ಷ ಕೋಟಿ ಹೂಡಿಕೆ ಮಾಡಲಿದೆ ಎಂದು ಉದ್ಯಮಿ ಗೌತಮ್ ಅದಾನಿ ಅವರು ಮಂಗಳವಾರ ತಿಳಿಸಿದ್ದಾರೆ.

ಜೆಪಿ ಮಾರ್ಗನ್ ಇಂಡಿಯಾದ ಹೂಡಿಕೆ ಸಮಾವೇಶದಲ್ಲಿ ಮಾತನಾಡಿದ ಅದಾನಿ ಅವರು, 'ನವೀಕರಿಸಬಲ್ಲ ಇಂಧನ ಉತ್ಪಾದನೆ, ಬಿಡಿಭಾಗಗಳ ತಯಾರಿಕೆ, ಪ್ರಸರಣ ಮತ್ತು ವಿತರಣೆಯ ದೃಷ್ಟಿಯಿಂದ ಈ ಹೂಡಿಕೆ ಮಾಡಲಾಗುವುದು' ಎಂದು ಹೇಳಿದ್ದಾರೆ. ಜಗತ್ತಿನಲ್ಲಿಯೇ ಅತಿ ಕಡಿಮೆ ಬೆಲೆಯ ಪರಿಸರಪೂರಕ ಎಲೆಕ್ಟ್ರಾನ್ ಉತ್ಪಾದನೆ ಮಾಡುವುದಾಗಿಯೂ ಅವರು ತಿಳಿಸಿದ್ದಾರೆ.

ಮುಂದಿನ ನಾಲ್ಕು ವರ್ಷಗಳಲ್ಲಿ ಸಮೂಹವು ನವೀಕರಿಸಬಲ್ಲ ಇಂಧನ ಉತ್ಪಾದನೆ ಸಾಮರ್ಥ್ಯವನ್ನು ಮೂರು ಪಟ್ಟು ಹೆಚ್ಚಿಸುವ ಯೋಜನೆ ಹೊಂದಿದೆ. ಹೈಡ್ರೋಜನ್ ಉತ್ಪಾದನೆ, ನವೀಕರಿಸಬಲ್ಲ ಇಂಧನದ ಮೂಲಕ ಎಲ್ಲಾ ದತ್ತಾಂಶ ಕೇಂದ್ರಗಳಿಗೂ ವಿದ್ಯುತ್, ಸಮೂಹದ ಎಲ್ಲ ಬಂದರುಗಳು ಹೊರಸೂಸುವ ಇಂಗಾಲದ ಪ್ರಮಾಣವನ್ನು 2025ರ ಒಳಗಾಗಿ ಶೂನ್ಯಕ್ಕೆ ತರುವುದು ಹಾಗೂ 2025ರವರೆಗೆ ಒಟ್ಟು ಬಂಡವಾಳ ವೆಚ್ಚದ ಶೇಕಡ 75ಕ್ಕೂ ಹೆಚ್ಚಿನ ಮೊತ್ತವನ್ನು ಹಸಿರು ತಂತ್ರಜ್ಞಾನದ ಮೇಲೆ ವಿನಿಯೋಗಿಸುವ ಯೋಜನೆಯನ್ನೂ ಹೊಂದಲಾಗಿದೆ ಎಂದು ಅದಾನಿ ಅವರು ಮಾಹಿತಿ ನೀಡಿದ್ದಾರೆ.

ಶುದ್ಧ ಇಂಧನ ಮತ್ತು ಹೈಡ್ರೋಜನ್ ಇಂಧನ ಉತ್ಪಾದನೆಗಾಗಿ ಮೂರು ವರ್ಷಗಳಲ್ಲಿ ₹ 75 ಸಾವಿರ ಕೋಟಿ ಹೂಡಿಕೆ ಮಾಡುವುದಾಗಿ ದೇಶದ ಸಿರಿವಂತ ಉದ್ಯಮಿ ಮುಕೇಶ್ ಅಂಬಾನಿ ಅವರು ಈಚೆಗಷ್ಟೇ ಘೋಷಿಸಿದ ಬಳಿಕ ಅದಾನಿ ಅವರಿಂದ ಈ ಹೇಳಿಕೆ ಬಂದಿದೆ.

ದೇಶದ ಘನತೆಗೆ ಕುಂದುತರುವ ಟೀಕೆ ಬೇಡ: ಅದಾನಿ



ಭಾರತವು ಕೋವಿಡ್ ಪರಿಸ್ಥಿತಿ ನಿಭಾಯಿಸಿದ ಬಗೆಯನ್ನು ಸಮರ್ಥಿಸಿಕೊಂಡಿರುವ ಉದ್ಯಮಿ ಗೌತಮ್ ಅದಾನಿ, 'ಮಾಧ್ಯಮ ವರದಿಗಳು ಪತ್ರಿಕಾ ಸ್ವಾತಂತ್ರ್ಯದ ಹೆಸರಿನಲ್ಲಿ ಪಕ್ಷಪಾತಿಯಾಗಿ ಇರಬಾರದು, ದೇಶದ ಘನತೆಗೆ ಕುಂದುತರುವಂತೆಯೂ ಇರಬಾರದು' ಎಂದು ಹೇಳಿದ್ದಾರೆ.

ಯುರೋಪ್, ಉತ್ತರ ಅಮೆರಿಕಾ ಮತ್ತು ಓಷ್ಯಾನಿಯಾಗಿಂತ ಹೆಚ್ಚಿನ ಜನಸಂಖ್ಯೆ ಇರುವ ದೇಶವು ಕೋವಿಡ್ ಬಿಕ್ಕಟ್ಟನ್ನು ಎಷ್ಟು ಸಮರ್ಥವಾಗಿ ನಿಭಾಯಿಸಿತು ಎಂಬುದನ್ನು ತಪ್ಪು ಹುಡುಕುವ ಭರದಲ್ಲಿ ಅಲಕ್ಷಿಸಲಾಯಿತು ಎಂದು ಅವರು ಹೇಳಿದ್ದಾರೆ.

'ಕೆಲವು ವಿಚಾರಗಳಲ್ಲಿ ನಾವು ಇನ್ನಷ್ಟು ಉತ್ತಮವಾಗಿ ಕೆಲಸ ಮಾಡಬಹುದಿತ್ತೇನೋ. ಆದರೆ ಈ ದೇಶದ ಜನಸಂಖ್ಯೆ ಹೆಚ್ಚಿರುವ ಕಾರಣದಿಂದಾಗಿ, ಕೋವಿಡ್ ಸಾಂಕ್ರಾಮಿಕವು ಭಾರತಕ್ಕೆ ತಂದಿತ್ತ ಸವಾಲು ಇತರ ದೇಶಗಳಿಗೆ ಎದುರಾದ ಸವಾಲಿಗಿಂತ ದೊಡ್ಡದಾಗಿತ್ತು' ಎಂದು ಅದಾನಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಅದಾನಿ ಅವರು ತಮ್ಮ ಸಮೂಹದ ಮಾಧ್ಯಮ ಚಟುವಟಿಕೆಗಳನ್ನು ನಿಭಾಯಿಸಲು ಹಿರಿಯ ಪತ್ರಕರ್ತ ಸಂಜಯ್ ಪುಗಾಲಿಯಾ ಅವರನ್ನು ಈಚೆಗೆ ನೇಮಕ ಮಾಡಿಕೊಂಡಿದ್ದಾರೆ. ಅದಾನಿ ಸಮೂಹವು ಟಿ.ವಿ. ಹಾಗೂ ಡಿಜಿಟಲ್ ಮಾಧ್ಯಮ ಕ್ಷೇತ್ರವನ್ನು ಪ್ರವೇಶಿಸಬಹುದು ಎಂಬ ಊಹಾಪೋಹಗಳು ಇದರಿಂದಾಗಿ ಸೃಷ್ಟಿಯಾಗಿವೆ.

ಸೆನ್ಸೆಕ್ಸ್, ನಿಫ್ಟಿ ಚೇತರಿಕೆ

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳು ಮಂಗಳವಾರ ಚೇತರಿಕೆ ಹಾದಿಗೆ ಮರಳಿದವು. ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ 515 ಅಂಶ, ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 165 ಅಂಶ ಏರಿಕೆ ಕಂಡಿತು.

ಐ.ಟಿ., ಔಷಧ ಹಾಗೂ ಎಫ್‌ಎಂಸಿಜಿ ವಲಯಗಳ ಷೇರು ಮೌಲ್ಯ ಹೆಚ್ಚಳದಿಂದಾಗಿ ಷೇರುಪೇಟೆಗಳು ಉತ್ತಮ ಚೇತರಿಕೆ ಕಂಡವು ಎಂದು ರಿಲಯನ್ಸ್ ಸೆಕ್ಯುರಿಟೀಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ಮೋದಿ ತಿಳಿಸಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	600-650
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	390
ಅಡಿಕೆ	
ಬಂಟ್ವಾಳ	
ಕೋಕ	10000-25000
ಹೊಸತು	25000-50000
ಹಳತು	42500-51500
ಚಿತ್ರದುರ್ಗ	
ಆಪಿ	53119-53529
ಬೆಟ್ಟೆ	39829-40269
ಕೆಂಪುಗೋಟು	32500-32900
ರಾಶಿ	52639-53099
ಪುತ್ತೂರು	
ಕೋಕ	10500-26000
ಹೊಸತು	35500-50000
ಸಿದ್ದಾಪುರ	
ಬಿಳಿಗೋಟು	34999-42609
ಚಾಲಿ	44809-49099
ಕೋಕ	31899-38699
ಕೆಂಪುಗೋಟು	34699-37999
ರಾಶಿ	50029-52099
ತಟ್ಟಿಬೆಟ್ಟೆ	38599-50689
ಶಿರಸಿ	
ಬೆಟ್ಟೆ	34099-49999
ಬಿಳಿಗೋಟು	25899-44799
ಚಾಲಿ	44699-49611
ರಾಶಿ	36099-52489
ಯಲ್ಲಾಪುರ	
ಬಿಳಿಗೋಟು	36212-43529
ಚಾಲಿ	43612-49600
ಕೋಕ	24299-35012
ಕೆಂಪುಗೋಟು	31799-36899
ರಾಶಿ	49699-54099

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13725	12800	12900	182.60ಸೆಂಟ್ಸ್
ಎಸಿ	6300	4800	5125	
ಆರ್‌ಪಿ	6200	6100	6300	ಲಂಡನ್
ಆರ್‌ಸಿ	3590	3500	3675	2152 ಡಾಲರ್ಸ್

ಚಾಲಿ ಅಡಿಕೆಗೆ ₹ 50 ಸಾವಿರ

ಪ್ರಜಾವಾಣಿ ವಾರ್ತೆ

ಮಂಗಳೂರು: ಕ್ಯಾಂಪ್ಕೊದಲ್ಲಿ ಹೊಸ ಚಾಲಿ ಅಡಿಕೆ ದರ ಮಂಗಳವಾರ ಕ್ವಿಂಟಲ್‌ಗೆ ₹ 50 ಸಾವಿರ ಆಗಿದೆ. 'ಬೆಳೆಗಾರರ ಬಳಿ ಅಡಿಕೆ ಸಂಗ್ರಹ ಇದ್ದರೂ, ದರ ಇನ್ನಷ್ಟು ಏರಿಕೆ ಆಗಬಹುದು ಎಂಬ ನಿರೀಕ್ಷೆ ಇರುವುದರಿಂದ, ಅಡಿಕೆಯು ಪೂರ್ಣ ಪ್ರಮಾಣದಲ್ಲಿ ಮಾರುಕಟ್ಟೆಗೆ ಬರುತ್ತಿಲ್ಲ. ಹಾಗಾಗಿ ಹೊಸ ಚಾಲಿಗೆ ಹಳೆಯ ಚಾಲಿಯ ದರ ಸಿಗುತ್ತಿದೆ' ಎಂದು ಮಾರುಕಟ್ಟೆ ವಿಶ್ಲೇಷಕರು ಹೇಳಿದ್ದಾರೆ.

ಸುಳ್ಯ ತಾಲ್ಲೂಕು ಬೆಳ್ಳಾರೆಯ ಹೊರ ವ್ಯಾಪಾರಿ ಅಂಗಣದಲ್ಲಿ ಕಳೆದ ವಾರ ಚಾಲಿ ಅಡಿಕೆ ಕ್ವಿಂಟಲ್‌ಗೆ ಗರಿಷ್ಠ ₹ 51 ಸಾವಿರ ದರ ದೊರಕಿತ್ತು.

ಲಾಕ್‌ಡೌನ್ ತೆರವುಗೊಂಡ ನಂತರ, ಚಾಲಿ ಅಡಿಕೆಯ ದರ ಏರುಮುಖಿ ಆಗಿದೆ. ಅಡಿಕೆಯ ಪ್ರಮುಖ ಮಾರುಕಟ್ಟೆಯಾದ ಉತ್ತರ ಭಾರತದಲ್ಲಿ ಬೇಡಿಕೆ ಹೆಚ್ಚಾಗಿರುವುದು ಬೆಲೆ ಏರಿಕೆಯ ಕಾರಣಗಳಲ್ಲಿ ಒಂದಾಗಿದೆ ಎನ್ನಲಾಗಿದೆ. ಹಳೇ ಚಾಲಿ ಕ್ವಿಂಟಲ್‌ಗೆ ಗರಿಷ್ಠ ₹ 51,500ಕ್ಕೆ ಖರೀದಿಯಾಗಿದೆ.

ಟಾಟಾ ವಾಣಿಜ್ಯ ವಾಹನ ಬೆಲೆ ಏರಿಕೆ

ನವದೆಹಲಿ (ಪಿಟಿಐ): ಟಾಟಾ ಮೋಟರ್ಸ್ ಕಂಪನಿಯು ಅಕ್ಟೋಬರ್ 1ರಿಂದ ಜಾರಿಗೆ ಬರುವಂತೆ ತನ್ನ ಎಲ್ಲ ವಾಣಿಜ್ಯ ವಾಹನಗಳ ಬೆಲೆಯನ್ನು ಹೆಚ್ಚಿಸುವುದಾಗಿ ಮಂಗಳವಾರ ತಿಳಿಸಿದೆ.

ವಾಹನಗಳ ಮಾದರಿ ಮತ್ತು ಆವೃತ್ತಿಗಳಿಗೆ ಅನುಗುಣವಾಗಿ ಬೆಲೆ ಏರಿಕೆ ಪ್ರಮಾಣವು ಶೇಕಡ 2ರ ವ್ಯಾಪ್ತಿಯಲ್ಲಿ ಇರಲಿದೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಉದ್ಯೋಗ ವಾಣಿ

ರಾಷ್ಟ್ರೀಯ ಬಾಕ್ಸಿಂಗ್: ತಂಡ ಪ್ರಶಸ್ತಿ ಗೆದ್ದ ಸರ್ವಿಸಸ್; ಹಸಮುದ್ದೀನ್‌ಗೆ ಆಘಾತ ನೀಡಿದ ರೋಹಿತ್

ರಾಜ್ಯದ ನಿಶಾಂತ್ ದೇವ್‌ಗೆ ಚಿನ್ನ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಕರ್ನಾಟಕದ ನಿಶಾಂತ್ ದೇವ್ ಇಲ್ಲಿನ ಇನ್‌ಸ್ಪೈರ್ ಇನ್‌ಸ್ಟಿಟ್ಯೂಟ್ ಆಫ್ ಸ್ಪೋರ್ಟ್ಸ್‌ನಲ್ಲಿ ನಡೆದ ರಾಷ್ಟ್ರೀಯ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಗೆದ್ದುಕೊಂಡರು.

ಮಂಗಳವಾರ ನಡೆದ 71 ಕೆಜಿ ವಿಭಾಗದ ಫೈನಲ್‌ನಲ್ಲಿ ಅವರು ಅಮಿತ್ ಕುಮಾರ್ ಎದುರು ಜಯ ಗಳಿಸಿದರು.

ಸರ್ವಿಸಸ್‌ನ ಮೊಹಮ್ಮದ್ ಹಸಮುದ್ದೀನ್ ಅವರಿಗೆ ಆಘಾತ ನೀಡಿದ ದೆಹಲಿಯ ರೋಹಿತ್ ಮೋರ್ 57 ಕೆಜಿ ವಿಭಾಗದಲ್ಲಿ ಚಾಂಪಿಯನ್ ಆದರು.

ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಕಂಚಿನ ಪದಕ ಗೆದ್ದುಕೊಡಿದ್ದ ಹಸಮುದ್ದೀನ್ ಭರವಸೆಯಿಂದಲೇ ಕಣಕ್ಕೆ ಇಳಿದಿದ್ದರು. ಆದರೆ ಬಲಶಾಲಿ ಪಂಚ್‌ಗಳ ಮೂಲಕ ರೋಹಿತ್ ಮೇಲುಗೈ ಸಾಧಿಸಿದರು. 5–0ಯಿಂದ ಬೌಟ್ ಗೆದ್ದರು.

ಅಸ್ಸಾಂನ ಶಿವ ಥಾಪಾ ಸರ್ವಿಸಸ್‌ನ ದಲ್ವೀರ್ ಸಿಂಗ್ ತೋಮರ್ ವಿರುದ್ಧ 5–0ಯಿಂದ ಗೆದ್ದು 63.5 ಕೆಜಿ ವಿಭಾಗದ ಪ್ರಶಸ್ತಿ ಗೆದ್ದುಕೊಂಡರು.

92 ಕೆಜಿ ವಿಭಾಗದಲ್ಲಿ ಹಾಲಿ ಏಷ್ಯನ್ ಚಾಂಪಿಯನ್, ಸರ್ವಿಸಸ್‌ನ ಸಂಜೀತ್ ಹರಿಯಾಣದ ನವೀನ್ ಕುಮಾರ್ ಎದುರು ಜಯ ಗಳಿಸಿ ಪ್ರಶಸ್ತಿ ಗೆದ್ದುಕೊಂಡರು. ಸರ್ವಿಸಸ್‌ನ ದೀಪಕ್ (51 ಕೆಜಿ), ಆಕಾಶ್ (54 ಕೆಜಿ), ಆಕಾಶ್ (67 ಕೆಜಿ), ಸುಮಿತ್ (75 ಕೆಜಿ), ಸಚಿನ್ ಕುಮಾರ್ (80 ಕೆಜಿ), ಲಕ್ಷ್ಯ (86 ಕೆಜಿ), ನರೇಂದ್ರ (92 ಕೆಜಿ) ಅವರಿಗೂ ಚಿನ್ನದ ಪದಕ ಒಲಿಯಿತು. ದೀಪಕ್ ಅವರು ಚಾಂಪಿಯನ್‌ಷಿಪ್‌ನ ಶ್ರೇಷ್ಠ ಬಾಕ್ಸರ್ ಎನಿಸಿಕೊಂಡರು.

ಎಂಟು ಚಿನ್ನ, ಮೂರು ಬೆಳ್ಳಿ ಮತ್ತು ಒಂದು ಕಂಚಿನ ಪದಕ ಗೆದ್ದುಕೊಂಡ ಸರ್ವಿಸಸ್ ತಂಡ ಚಾಂಪಿಯನ್ ಪಟ್ಟ ತನ್ನಲ್ಲೇ ಉಳಿಸಿಕೊಂಡಿತು. ಎರಡು ಚಿನ್ನ, ಮೂರು ಬೆಳ್ಳಿ ಮತ್ತು ಎರಡು ಕಂಚಿನ ಪದಕ ಗೆದ್ದ ರೈಲ್ವೇಸ್ ಎರಡನೇ ಸ್ಥಾನ ಗಳಿಸಿದರೆ ಒಂದು ಚಿನ್ನ ಮತ್ತು ನಾಲ್ಕು ಕಂಚು ಗಳಿಸಿದ ದೆಹಲಿ ಮೂರನೇ ಸ್ಥಾನ ಗಳಿಸಿತು. 60 ಕೆಜಿ ವಿಭಾಗದಲ್ಲಿ ರೈಲ್ವೇಸ್‌ನ ವರಿಂದರ್ ಸಿಂಗ್ ಸರ್ವಿಸಸ್‌ನ ಎತಾಶ್ ಖಾನ್ ವಿರುದ್ಧ ಗೆದ್ದು ಚಿನ್ನ ಗಳಿಸಿದರೆ 48 ಕೆಜಿ ವಿಭಾಗದಲ್ಲಿ ರೈಲ್ವೇಸ್‌ನ ಗೋವಿಂದ್ ಸಹಾನಿ ಚಂಡೀಗಢದ ಕುಲದೀಪ್ ಅವರನ್ನು ಮಣಿಸಿ ಚಾಂಪಿ ಯನ್ ಆದರು. ಚಿನ್ನ ಗೆದ್ದ ಎಲ್ಲರೂ ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ಗೆ ಅರ್ಹತೆ ಗಳಿ ಸಿದರು. ಚಾಂಪಿಯನ್‌ಷಿಪ್ ಸರ್ಬಿಯಾದಲ್ಲಿ ನಡೆಯಲಿದೆ.



ಕರ್ನಾಟಕದ ನಿಶಾಂತ್ ದೇವ್ ಗೆಲುವಿನ ಸಂಭ್ರಮ



ರೋಹಿತ್

ಕಬಡ್ಡಿ ಆಟಗಾರ ಮನೋಜ ನಾಯ್ಕ ನಿಧನ

ಭಟ್ಕಳ (ಉತ್ತರ ಕನ್ನಡ): ರಾಷ್ಟ್ರಮಟ್ಟದ ಕಬಡ್ಡಿ ಆಟಗಾರ, ಪಟ್ಟಣದ ಮನೋಜ ನಾಯ್ಕ (34) ಮಂಗಳವಾರ ಹೃದಯಾಘಾತದಿಂದ ಕುಂದಾಪುರದಲ್ಲಿ ನಿಧನರಾದರು.

ಅವರಿಗೆ ತಾಯಿ, ಮೂವರು ಸಹೋದರಿಯರು ಮತ್ತು ಒಬ್ಬ ಸಹೋದರ ಇದ್ದಾರೆ.

ಭಟ್ಕಳದ ಪರಶುರಾಮ ಸ್ಪೋರ್ಟ್ಸ್ ಕ್ಲಬ್ ಸದಸ್ಯರಾಗಿದ್ದ ಅವರು, ಪಟ್ಟಣದ ಹೈಡಕಿಯಲ್ಲಿ ವಾಸವಿದ್ದರು. 2009 ಹಾಗೂ 2015ರಲ್ಲಿ ರಾಷ್ಟ್ರಮಟ್ಟದ ಕಬಡ್ಡಿ ಟೂರ್ನಿಯಲ್ಲಿ ರಾಜ್ಯ ತಂಡವನ್ನು ಪ್ರತಿನಿಧಿಸಿದ್ದರು. ಅನೇಕ ಟೂರ್ನಿಗಳಲ್ಲಿ ಕ್ಲಬ್‌ಗೆ ಪ್ರಶಸ್ತಿ ಗಳಿಸಿಕೊಟ್ಟಿದ್ದರು. ಅವರಿಗೆ ತಾಲ್ಲೂಕು ಗಣರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ಹಲವು ಪ್ರಶಸ್ತಿಗಳು ಸಂದಿವೆ.

ಕುಂದಾಪುರದ ಸರ್ಕಾರಿ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆದಿದ್ದು, ಮಂಗಳವಾರ ರಾತ್ರಿ ಭಟ್ಕಳದಲ್ಲಿ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಮನೋಜ ನಾಯ್ಕ

ಕಾರ್ಟಿಂಗ್: ರುಹಾನ್‌ಗೆ ಪ್ರಶಸ್ತಿ

ಬೆಂಗಳೂರು (ಪಿಟಿಐ): ನಗರದ ರೇಸರ್‌ಗಳಾದ ರುಹಾನ್ ಆಳ್ವ, ರೋಹನ್ ಮಾದೇಶ್ ಮತ್ತು ನಿಖಿಲೇಶ್ ರಾಜು ಅವರು ಈಚೆಗೆ ನಡೆದ ಮೆಕೊ ಎಫ್‌ಎಂಎಸ್‌ಸಿಐ ರಾಷ್ಟ್ರೀಯ ಕಾರ್ಟಿಂಗ್‌ನಲ್ಲಿ ವಿವಿಧ ವಿಭಾಗಗಳ ಪ್ರಶಸ್ತಿ ಗೆದ್ದುಕೊಂಡರು.

ಸೀನಿಯರ್ ವಿಭಾಗದಲ್ಲಿ ಅಮೋಘ ಸಾಮರ್ಥ್ಯ ತೋರಿದ ರುಹಾನ್ ಅವರು ಎನ್‌ಸಿ ರೇಸಿಂಗ್ ಎಂಸ್ಪೋರ್ಟ್ x30 ಇಂಡಿಯಾ ಕ್ಲಾಸ್ ಪ್ರಶಸ್ತಿ ತಮ್ಮದಾಗಿಸಿಕೊಂಡರು.

ಜೂನಿಯರ್ ವಿಭಾಗದ ಪ್ರಶಸ್ತಿ ರೋಹನ್ ಅವರ ಪಾಲಾದರೆ ನಿಖಿಲೇಶ್ ರಾಜು ಅವರು ಕೆಡೆಟ್ ವಿಭಾಗದ ಚಾಂಪಿಯನ್ ಆದರು.

ಕ್ರಿಕೆಟ್: ಬೌಲಿಂಗ್ ಸುಧಾರಣೆ; ಮಿಥಾಲಿ ರಾಜ್ ಆಶಯ

ಆಸ್ಟ್ರೇಲಿಯಾ ಮಹಿಳೆಯರ ದಾಖಲೆ

ಮಕಾಯ(ಪಿಟಿಐ): ಆಸ್ಟ್ರೇಲಿಯಾ ಮಹಿಳಾ ತಂಡದ ಎದುರು ಮೊದಲ ಏಕದಿನ ಪಂದ್ಯದಲ್ಲಿ ಸೋಲಿಗೆ ಭಾರತ ಮಹಿಳಾ ತಂಡದ ನಾಯಕಿ ಮಿಥಾಲಿ ರಾಜ್ ಬೌಲರ್‌ಗಳನ್ನು ದೂರಿದ್ದು ಈ ವಿಭಾಗದಲ್ಲಿ ಭಾರಿ ಸುಧಾರಣೆ ಆಗಬೇಕಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಮೊದಲ ಪಂದ್ಯದಲ್ಲಿ ಮಂಗಳವಾರ ಭಾರತ ಒಂಬತ್ತು ವಿಕೆಟ್‌ಗಳಿಂದ ಆತಿಥೇಯ ತಂಡಕ್ಕೆ ಮಣಿದಿತ್ತು. ಟಾಸ್ ಸೋತು ಬ್ಯಾಟಿಂಗ್ ಮಾಡಿದ ಮಿಥಾಲಿ ಬಳಗ ಎಂಟು ವಿಕೆಟ್‌ಗಳಿಗೆ 225 ರನ್ ಗಳಿಸಿತ್ತು. ಉತ್ತರವಾಗಿ ಆಸ್ಟ್ರೇಲಿಯಾ 41 ಓವರ್‌ಗಳಲ್ಲಿ ಒಂದು ವಿಕೆಟ್‌ಗೆ 227 ರನ್ ಗಳಿಸಿತು. ಇದು, ಏಕದಿನ ಕ್ರಿಕೆಟ್‌ನಲ್ಲಿ ತಂಡದ ದಾಖಲೆಯ ಸತತ 25ನೇ ಜಯವಾಗಿದೆ.

'ಸೂಕ್ತ ಯೋಜನೆಗಳೊಂದಿಗೆ ಕಣಕ್ಕೆ ಇಳಿದರೂ ಅವುಗಳನ್ನು ಅಳವಡಿಸುವಲ್ಲಿ ಲೋಪಗಳಾದರೆ ಎದುರಾಳಿ ತಂಡಕ್ಕೆ ತಲೆಬಾಗಬೇಕಾಗುತ್ತದೆ. ಕೆಲವೊಮ್ಮೆ ಬೌಲರ್‌ಗಳಿಗೆ ಲಯ ಕಂಡುಕೊಳ್ಳಲು ಸಾಧ್ಯವಾಗುವುದಿಲ್ಲ. ಹೀಗಾದರೆ ಯೋಜನೆಗಳು ಯಶಸ್ವಿಯಾಗುವುದು ಕಷ್ಟಕರ' ಎಂದು ಪಂದ್ಯದ ನಂತರ ಪತ್ರಿಕಾಗೋಷ್ಠಿಯಲ್ಲಿ ಮಿಥಾಲಿ ಹೇಳಿದರು.

ಶಫಾಲಿ ವರ್ಮಾ ಮತ್ತು ಸ್ಮೃತಿ ಮಂದಾನ ಮೊದಲ ವಿಕೆಟ್‌ಗೆ 21 ಎಸೆತಗಳಲ್ಲಿ 31 ರನ್ ಸೇರಿಸಿ ಭರವಸೆ ಮೂಡಿಸಿದ್ದರು. ಆದರೆ ಏಳು ರನ್‌ಗಳ ಅಂತರದಲ್ಲಿ ಇಬ್ಬರ ವಿಕೆಟ್‌ಗಳು ಉರುಳಿದವು. ಯಸ್ತಿಕ ಭಾಟಿಯಾ ಮತ್ತು ಮಿಥಾಲಿ ರಾಜ್ ಮೂರನೇ ವಿಕೆಟ್‌ಗೆ ಅಮೋಘ ಆಟವಾಡಿ 77 ರನ್ ಸೇರಿಸಿದರು. ಈ ಜೊತೆಯಾಟ ಮುರಿದ ನಂತರ ಆಸ್ಟ್ರೇಲಿಯಾ ಬೌಲರ್‌ಗಳು ಮೇಲುಗೈ ಸಾಧಿಸಿದರು.

ಮಿಥಾಲಿ ಏಕಾಂಗಿ ಹೋರಾಟ ನಡೆಸಿ ಅರ್ಧಶತಕ (63;107ಎ, 3ಬೌಂ) ಗಳಿಸಿದರು. ಏಳನೇ ಕ್ರಮಾಂಕದಲ್ಲಿ ಆಡಿದ ವಿಕೆಟ್ ಕೀಪರ್ ರಿಚಾ ಘೋಷ್ (32; 29ಎ, 3 ಬೌಂ, 1 ಸಿ) ಉತ್ತಮ ಕಾಣಿಕೆ ನೀಡಿ ಸ್ಕೋರ್ 200ರ ಗಡಿ ದಾಟಲು ನೆರವಾದರು.

ಸಂಕ್ಷಿಪ್ತ ಸ್ಕೋರು: ಭಾರತ: 50 ಓವರ್‌ಗಳಲ್ಲಿ 8ಕ್ಕೆ 225 (ಯಸ್ತಿಕಾ ಭಾಟಿಯಾ 35, ಮಿಥಾಲಿ ರಾಜ್ 63, ರಿಚಾ ಘೋಷ್ 32; ಡಾರ್ಸಿ ಬ್ರೌನ್ 33ಕ್ಕೆ4, ಸೋಫಿ ಮೋಲಿನೆಕ್ಸ್ 39ಕ್ಕೆ2, ಹನಾ ಡಾರ್ಲಿಂಗ್ಟನ್ 29ಕ್ಕೆ2); **ಆಸ್ಟ್ರೇಲಿಯಾ:** 41 ಓವರ್‌ಗಳಲ್ಲಿ 1 ವಿಕೆಟ್‌ಗೆ 227 (ರಚೆಲ್ ಹೇನ್ಸ್ ಔಟಾಗದೆ 93, ಅಲಿಸಾ ಹೀಲಿ 77, ಮೆಗ್ ಲ್ಯಾನಿಂಗ್ ಔಟಾಗದೆ 53; ಪೂನಂ ಯಾದವ್ 58ಕ್ಕೆ1). ಫಲಿತಾಂಶ: ಆಸ್ಟ್ರೇಲಿಯಾಗೆ 9 ವಿಕೆಟ್‌ಗಳ ಜಯ.



ರಚೆಲ್ ಹೇನ್ಸ್ –ಟ್ವಿಟರ್ ಚಿತ್ರ

ಅಗ್ರ ಸ್ಥಾನದಲ್ಲಿ ಮಿಥಾಲಿ

ದುಬೈ (ಪಿಟಿಐ): ಮಹಿಳೆಯರ ಏಕದಿನ ರ‍್ಯಾಂಕಿಂಗ್‌ನ ಬ್ಯಾಟರ್‌ಗಳ ಪಟ್ಟಿಯಲ್ಲಿ ಮಿಥಾಲಿ ರಾಜ್ ಅಗ್ರಸ್ಥಾನದಲ್ಲಿ ಮುಂದುವರಿದಿದ್ದಾರೆ. ಇಂಗ್ಲೆಂಡ್ ಎದುರಿನ ಮೊದಲ ಪಂದ್ಯದಲ್ಲಿ ಅಜೇಯ 79 ರನ್ ಗಳಿಸಿದ್ದ ನ್ಯೂಜಿಲೆಂಡ್‌ನ ಆ್ಯಮಿ ಸಟರ್ಥ್‌ವೇಟ್ ಅಗ್ರ ಐದರೊಳಗಿನ ಸ್ಥಾನಕ್ಕೆ ಮರಳಿದ್ದಾರೆ. ಐಸಿಸಿ ಮಂಗಳವಾರ ಬಿಡುಗಡೆ ಮಾಡಿರುವ ಪಟ್ಟಿಯಲ್ಲಿ ಮಿಥಾಲಿ 762 ರ‍್ಯಾಂಕಿಂಗ್ ಪಾಯಿಂಟ್ ಹೊಂದಿದ್ದಾರೆ. ಅವರ ಜೊತೆ ಮೊದಲ ಸ್ಥಾನ ಹಂಚಿಕೊಂಡಿದ್ದ ದಕ್ಷಿಣ ಆಫ್ರಿಕಾದ ಲಿಜೆಲಿ ಲೀ ಎರಡನೇ ಸ್ಥಾನಕ್ಕೆ ಕುಸಿದಿದ್ದಾರೆ. ಸ್ಮೃತಿ ಮಂದಾನ ಏಳನೇ ಸ್ಥಾನದಲ್ಲಿದ್ದಾರೆ. ನ್ಯೂಜಿಲೆಂಡ್ ಎದುರಿನ ಪಂದ್ಯದಲ್ಲಿ 89 ರನ್ ಕಲೆ ಹಾಕಿದ್ದ ಇಂಗ್ಲೆಂಡ್ ನಾಯಕಿ ಹೀಥರ್ ನೈಟ್ ಐದು ಸ್ಥಾನಗಳ ಏರಿಕೆ ಕಂಡಿದ್ದು ಒಂಬತ್ತನೇ ಸಂಖ್ಯೆಯಲ್ಲಿದ್ದಾರೆ. ನಥಾಲಿ ಶೀವರ್ ಮತ್ತು ಲಾರಾ ವೊಲ್ವಾರ್ಟ್ ಕೂಡ ಹೀಥರ್ ಜೊತೆ ಸ್ಥಾನ ಹಂಚಿಕೊಂಡಿದ್ದಾರೆ.

ಬೌಲಿಂಗ್ ವಿಭಾಗದಲ್ಲಿ ಭಾರತದ ಜೂಲನ್ ಗೋಸ್ವಾಮಿ ನಾಲ್ಕನೇ ಸ್ಥಾನ ಗಳಿಸಿದ್ದಾರೆ. ಸ್ಪಿನ್ನರ್ ಪೂನಂ ಯಾದವ್ ಒಂಬತ್ತನೇ ಸ್ಥಾನದಲ್ಲೇ ಉಳಿದಿದ್ದಾರೆ.

ಕೋಚ್ ಅಮಾನತು

ಬೆಂಗಳೂರು: ಕೊಡಗು ಜಿಲ್ಲೆ ಪೊನ್ನಂಪೇಟೆಯ ಕ್ರೀಡಾನಿಲಯದಲ್ಲಿ ಅಥ್ಲೀಟ್ ಮೇಲೆ ಹಲ್ಲೆ ನಡೆಸಿದ ಮಾಜಿ ಹಾಕಿ ಆಟಗಾರ ಮತ್ತು ಕೋಚ್ ಅಮಾನತುಗೊಳಿಸಲು ಡಿವೈಇಎಸ್ ನಿರ್ಧರಿಸಿದೆ. ಶನಿವಾರ ಘಟನೆ ನಡೆದಿದ್ದು ಬಾಲಕನ ಪಾಲಕರು ದೂರು ಕೊಟ್ಟ ನಂತರ ಬೆಳಕಿಗೆ ಬಂದಿತ್ತು.

ಪಂಕಜ್‌ಗೆ ಪ್ರಶಸ್ತಿ

ದೋಹಾ (ಪಿಟಿಐ): ಭಾರತದ ಸ್ನೂಕರ್ ಪಟು ಪಂಕಜ್ ಅಡ್ವಾನಿ ಅವರು ಮಂಗಳವಾರ 24ನೇ ವಿಶ್ವ ಕಪ್ ಗೆದ್ದುಕೊಂಡರು. ಇಲ್ಲಿ ನಡೆದ ಐಬಿಎಸ್‌ಎಫ್ 6–ರೆಡ್ ಟೂರ್ನಿಯ ಫೈನಲ್‌ನಲ್ಲಿ ಅವರು ಪಾಕಿಸ್ತಾನದ ಬಾಬರ್ ಮಸೀಹ್ ಎದುರು ಜಯ ಗಳಿಸಿದರು.

ಆಯುಷ್, ಪ್ರೇರಣಾ ಚಾಂಪಿಯನ್ಸ್

ಬೆಂಗಳೂರು: ಆಯುಷ್ ಆರ್ ಶೆಟ್ಟಿ ಮತ್ತು ಪ್ರೇರಣಾ ಶೇಟ್ ಮಂಗಳವಾರ ಕರ್ನಾಟಕ ಬ್ಯಾಡ್ಮಿಂಟನ್ ಸಂಸ್ಥೆ (ಕೆಬಿಎ)ಯಲ್ಲಿ ನಡೆದ 17 ವರ್ಷದೊಳಗಿನವರ ರಾಜ್ಯ ರ‍್ಯಾಂಕಿಂಗ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಕ್ರಮವಾಗಿ ಬಾಲಕ ಮತ್ತು ಬಾಲಕಿಯರ ವಿಭಾಗದ ಪ್ರಶಸ್ತಿ ಜಯಿಸಿದರು.

ಬಾಲಕರ ಫೈನಲ್‌ನಲ್ಲಿ ಆಯುಷ್ 21–11, 21–19ರಿಂದ ತುಷಾರ್ ಸುವೀರ್ ವಿರುದ್ಧ ಜಯಿಸಿದರು.

ಬಾಲಕಿಯರ ವಿಭಾಗದಲ್ಲಿ ಪ್ರೇರಣಾ 22–20, 21–14ರಿಂದ ಕರ್ಣಿಕಾಶ್ರೀ ವಿರುದ್ಧ ಗೆದ್ದರು.

ಡುರಾಂಡ್ ಕಪ್: ಎಂಟರ ಘಟ್ಟಕ್ಕೆ ಬೆಂಗಳೂರು

ಕೋಲ್ಕತ್ತ (ಪಿಟಿಐ): ಬೆಂಗಳೂರು ಫುಟ್‌ಬಾಲ್ ಕ್ಲಬ್ ಮತ್ತು ಡೆಲ್ಲಿ ಫುಟ್‌ಬಾಲ್ ಕ್ಲಬ್ ತಂಡಗಳು ಇಲ್ಲಿ ನಡೆಯುತ್ತಿರುವ 130ನೇ ಡುರಾಂಡ್ ಕಪ್ ಫುಟ್‌ಬಾಲ್ ಟೂರ್ನಿಯ ಎಂಟರ ಘಟ್ಟಕ್ಕೆ ಲಗ್ಗೆ ಇಟ್ಟವೆ.

ಯುವ ಭಾರತಿ ಕ್ರೀರಂಗನ್ ನಲ್ಲಿ ನಡೆದ ಪಂದ್ಯದಲ್ಲಿ ಬೆಂಗಳೂರು ತಂಡವು 5–3 ಗೋಲುಗಳಿಂದ ಭಾರತೀಯ ನೌಕಾಪಡೆ ತಂಡದ ವಿರುದ್ಧ ಜಯಿಸಿತು.

ಮೊದಲಾರ್ಧದಲ್ಲಿ 0–2ರಿಂದ ಹಿಂದಿದ್ದ ಬೆಂಗಳೂರು ನಂತರ ಪುಟಿದೆದ್ದು ಜಯಿಸಿದ್ದು ರೋಚಕವಾಗಿತ್ತು.

19ನೇ ನಿಮಿಷದಲ್ಲಿ ಜಿಜೊ ಮತ್ತು 30ನೇ ನಿಮಿಷದಲ್ಲಿ ಶ್ರೇಯಸ್ ಗೋಲು ಗಳಿಸಿ ನೌಕಾಪಡೆ ತಂಡಕ್ಕೆ 2–0 ಮುನ್ನಡೆ ಕೊಟ್ಟಿದ್ದರು. ಈ ಹಂತದಲ್ಲಿ ಬೆಂಗಳೂರು ತಂಡವು ಕೆಲವು ಉತ್ತಮ ಅವಕಾಶಗಳನ್ನು ಕೈಚೆಲ್ಲಿತ್ತು.

ಆದರೆ 53ನೇ ನಿಮಿಷದಲ್ಲಿ ಲಿಂಗ್ಡೊ ನೌಕಾಪಡೆ ತಂಡದ ರಕ್ಷಣಾ ಕೋಟೆಯನ್ನು ನುಚ್ಚುನೂರು ಮಾಡಿದರು. ಬಿಎಫ್‌ಸಿಗೆ ಮೊದಲ ಗೋಲಿನ ಕಾಣಿಕೆ ನೀಡಿದರು.

ಅದೇ ಹುರುಪಿನಲ್ಲಿ ಹರ್ಮನ್‌ಪ್ರೀತ್ ಸಿಂಗ್ 61ನೇ ನಿಮಿಷದಲ್ಲಿ ಗೋಲು ಹೊಡೆದು ತಂಡವನ್ನು ಸಮಬಲಕ್ಕೆ ತಂದು ನಿಲ್ಲಿಸಿದರು.

75ನೇ ನಿಮಿಷದಲ್ಲಿ ಲಭಿಸಿದ ಪೆನಾಲ್ಟಿಯಲ್ಲಿ ಬೆಂಗಳೂರು ತಂಡದ ಅಜಯ್ ಚೆಟ್ರಿ ಗೋಲು ಹೊಡೆದು ಗೆಲುವಿನ ಕನಸು ಗರಿಗೆದರಲು ಕಾರಣರಾದರು.

ಆರು ನಿಮಿಷಗಳ ನಂತರ ಹರ್ಮನ್‌ಪ್ರೀತ್ ಮತ್ತೊಂದು ಗೋಲು ಹೊಡೆದರು. ಅಷ್ಟಕ್ಕೇ ನಿಲ್ಲದ ಹರ್ಮನ್‌ಪ್ರೀತ್ ಕೊನೆಯ ಹಂತದಲ್ಲಿ ಮತ್ತೊಂದು ಗೋಲು ಹೊಡೆದರು.



ಕೀರ್ತನ್ ವಿಶ್ವಾಸ್ ಸೃಷ್ಟಿ ಕಿರಣ್

ಟೆನಿಸ್: ಕೀರ್ತನ್, ಸೃಷ್ಟಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೀರ್ತನ್ ವಿಶ್ವಾಸ್ ಮತ್ತು ಸೃಷ್ಟಿ ಕಿರಣ್ ಅವರು ರಾಜ್ಯ ಲಾನ್ ಟೆನಿಸ್ ಸಂಸ್ಥೆ ಅಮೋಘ ಸ್ಪೋರ್ಟ್ಸ್ ಅಕಾಡೆಮಿ ಸಹಯೋಗದಲ್ಲಿ ಆಯೋಜಿಸಿರುವ ಎಐಟಿಎ 10 ವರ್ಷದೊಳಗಿನವರ ಟೂರ್ನಿಯಲ್ಲಿ ಕ್ರಮವಾಗಿ ಬಾಲಕ ಮತ್ತು ಬಾಲಕಿಯರ ವಿಭಾಗದ ಪ್ರಶಸ್ತಿ ಗೆದ್ದುಕೊಂಡರು.

ಮಂಗಳವಾರ ನಡೆದ ಬಾಲಕರ ಫೈನಲ್‌ನಲ್ಲಿ ಕೀರ್ತನ್ 4-2, 5-4 (7-5)ರಲ್ಲಿ ಅಥರ್ವ ವೇದರಾಜ್ ಎದುರು ಜಯ ಗಳಿಸಿದರು. ಬಾಲಕಿಯರ ವಿಭಾಗದ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಸೃಷ್ಟಿ 4-1, 4-2ರಲ್ಲಿ ಉನ್ನತಿ ವಿ.ಮುರಳೀಧರ್ ಅವರನ್ನು ಮಣಿಸಿದರು.